ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ರಾಯಲ್ ಚಾಂಪಿಯನ್ಸ್ ಬೆಂಗಳೂರು!

ಸತತ 2ನೇ ಕಪ್ ಗೆದ್ದ ಆರ್‌ಸಿಬಿ

- 155 ರನ್‌ಗಳಿಗೆ ಟೈಟಾನ್ಸ್ ಕಟ್ಟಿಹಾಕಿದ ಚಾಲೆಂಜರ್ಸ್
- ಭುವನೇಶ್ವರ್ 2, ಹ್ಯಾಜಲ್‌ವುಡ್ 2, ರಸಿಕ್ 3 ವಿಕೆಟ್
- ಆಪದ್ಬಾಂಧವನಾಗಿ ಕ್ರೀಸ್ ಕಾಯ್ದುಕೊಂಡ ವಿರಾಟ್
- ಅಬ್ಬರದ ಆರಂಭ ನೀಡಿದ ವೆಂಕಟೇಶ್ ಅಯ್ಯರ್-ಕೊಹ್ಲಿ
- ಮೊದಲ ವಿಕೆಟ್‌ಗೆ ಅಯ್ಯರ್-ಕೊಹ್ಲಿ 62 ರನ್ ಜತೆಯಾಟ
- ಜಿಟಿ ಪರ ವಾಷಿಂಗ್ಟನ್ ಸುಂದರ್ ಅಜೇಯ 50 ರನ್

• ವಿವರ ಕ್ರೀಡಾಪುಟ



ಶಿವಮೊಗ್ಗ
ಸೋಮವಾರ, 1 ಜೂನ್ 2026
ಸಂಪುಟ 17, ಸಂಚಿಕೆ 38, ಪುಟಗಳು 12
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹4
RNI: KAR KAN 2010/64051
hosadigantha.com
epaper.hosadigantha.com
Hosadigantha Digital

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಅಧಿಕ ಜ್ಯೇಷ್ಠ ಮಾಸ, ಕೃಷ್ಣ ಪಕ್ಷ, ತಿಥಿ: ಪಾಡ್ಯ, ನಕ್ಷತ್ರ: ಜ್ಯೇಷ್ಠೆ

ದಿನದ ಮಾತು

ಒಬ್ಬನು ಪ್ರಿಯನಾಗಬೇಕಾದರೆ ಆತನ ಗುಣಗಳು ಅಧಿಕೃತವೇ ಹೊರತು ಹೊಗಳಿಕೆಯಲ್ಲ.

▲ ಶಿಶುಪಾಲ ವಧೆ

ಸಮರ್ಪಿತ ಬದುಕಿನ ಒಂದೇ ಬಳ್ಳಿಯ ಹೂಗಳು

ನೇರ ನೋಟ

• ದು.ಗು.ಲಕ್ಷ್ಮಣ

• ಪುಟ ೬

ಕಿರುಸುದ್ದಿ

ಉಷ್ಣ ಅಲೆಯಿಂದ ಜಾಗರೂಕರಾಗಿರಿ: ಮೋದಿ

• ಪುಟ ೭

ಬಾಗೇಪಲ್ಲಿ ಬಳಿ ಭೀಕರ ರಸ್ತೆ ಅಪಘಾತ: 6 ಮಂದಿ ಸಾವು

• ಪುಟ F

ಬಕ್ರೀದ್‌ಗೆ ಕರೆದು ಹಿಂದು ಹತ್ಯೆಗೈದ ಆರೋಪಿ ವಧೆ

• ಪುಟ ೭

ಇಂದು ಸಿದ್ದರಾಮಯ್ಯ, ಡಿಕೆಶಿ ದಿಲ್ಲಿಗೆ | ವರಿಷ್ಠರ ಜತೆ ಸರಣಿ ಸಭೆ

ಸಂಪುಟ ರಚನೆ ಕಸರತ್ತು



- ಉಪಮುಖ್ಯಮಂತ್ರಿ ಹುದ್ದೆ ಸೃಷ್ಟಿ ಬಗ್ಗೆ ಚರ್ಚೆ
- ಹೈಕಮಾಂಡ್ ತೀರ್ಮಾನವೇ ಅಂತಿಮ

ಸಚಿವ ಸಂಪುಟಕ್ಕೆ ಯಾರ್ಯಾರು?

ಸಚಿವ ಸಂಪುಟದಲ್ಲಿ ಯಾರಿಗೆ ಸ್ಥಾನ ನೀಡಬೇಕು ಎಂಬ ಬಗ್ಗೆ ಸಿದ್ದರಾಮಯ್ಯ ಮತ್ತು ನಿಯೋಜಿತ ಸಿಎಂ ಡಿ.ಕೆ. ಶಿವಕುಮಾರ್ ಈಗಾಗಲೇ ತಮ್ಮ ಬೆಂಬಲಿಗರ ಪ್ರತ್ಯೇಕ ಪಟ್ಟಿಯನ್ನು ಹೈಕಮಾಂಡ್ ಮುಂದಿಟ್ಟಿದ್ದಾರೆ. ಜಾತಿ ಮತ್ತು ಪ್ರಾದೇಶಿಕ ಸಮತೋಲನ ಕಾಯ್ದುಕೊಳ್ಳುವುದು ಹೈಕಮಾಂಡ್ ಮುಂದಿರುವ ದೊಡ್ಡ ಸವಾಲು. ಡಿ.ಕೆ. ಶಿವಕುಮಾರ್ ಅವರು ಹೊಸ ಮುಖಗಳಿಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಪ್ರತಿಪಾದಿಸುತ್ತಿದ್ದರೆ, ಸಿದ್ದರಾಮಯ್ಯ ಅವರು ಅನುಭವಿಗಳಿಗೆ ಸಂಪುಟದಲ್ಲಿ ಸ್ಥಾನ ನೀಡುವ ಪರವಾಗಿದ್ದಾರೆ ಎನ್ನಲಾಗಿದೆ.

• **ಬೆಂಗಳೂರು:** ರಾಜ್ಯದಲ್ಲಿ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕನ ಆಯ್ಕೆ ಪ್ರಕ್ರಿಯೆ ಬೆನ್ನಲ್ಲೇ ಈಗ ಸಚಿವ ಸಂಪುಟ ರಚನೆಯ ಕಸರತ್ತು ಆರಂಭವಾಗಿದೆ. ಈ ಹಿನ್ನೆಲೆಯಲ್ಲಿ ಹಂಗಾಮಿ ಸಿಎಂ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸೋಮವಾರ (ಜೂನ್ 1) ದೆಹಲಿಗೆ ಪ್ರಯಾಣ ಬೆಳೆಸಲಿದ್ದು, ಹೈಕಮಾಂಡ್ ನಾಯಕರೊಂದಿಗೆ ಸರಣಿ ಸಭೆಗಳನ್ನು ನಡೆಸಲಿದ್ದಾರೆ.

ಮುಂದಿನ ಎರಡು ವರ್ಷಗಳ ಅವಧಿಯನ್ನು ಗಮನದಲ್ಲಿಟ್ಟುಕೊಂಡು ಉಪಮುಖ್ಯಮಂತ್ರಿ ಹುದ್ದೆ ಗಳನ್ನು ಸೃಷ್ಟಿಸಬೇಕೇ ಅಥವಾ ಬೇಡವೇ ಎಂಬ ಚರ್ಚೆ ದೆಹಲಿಯಲ್ಲಿ ನಡೆಯಲಿದೆ. ಒಂದು ವೇಳೆ ಡಿಸಿಎಂ ಹುದ್ದೆ ಸೃಷ್ಟಿಸುವುದಾದರೆ ಎರಡು ಅಥವಾ ನಾಲ್ಕು ಸ್ಥಾನಗಳನ್ನು ನೀಡಬೇಕೇ ಎಂಬ ಬಗ್ಗೆಯೂ ಗೊಂದಲವಿದೆ. ಸದ್ಯ ಒಕ್ಕಲಿಗ ಸಮುದಾಯಕ್ಕೆ ಸಿಎಂ ಸ್ಥಾನ ಸಿಗುತ್ತಿರುವ ಹಿನ್ನೆಲೆಯಲ್ಲಿ ಉಳಿದ ಪ್ರಮುಖ ಸಮುದಾಯಗಳಿಗೆ ಡಿಸಿಎಂ ಸ್ಥಾನ ನೀಡುವ ಸಾಧ್ಯತೆ ಇದೆ.

ನಾಯಕತ್ವ ಬದಲಾವಣೆ ಪ್ರಕ್ರಿಯೆಯನ್ನು ಯಾವುದೇ ಗೊಂದಲವಿಲ್ಲದೆ ಪರಿಹರಿಸಿದ ಕಾಂಗ್ರೆಸ್ ಹೈಕಮಾಂಡ್, ಸಂಪುಟ ನೇಮಕದಲ್ಲೂ ಹಿರಿಯ- ಕಿರಿಯರಿಗೆ ಪ್ರಾತಿನಿಧ್ಯ ಕಲ್ಪಿಸುವ ಮೂಲಕ ಎಲ್ಲರನ್ನೂ ಸಮಾಧಾನಗೊಳಿಸಲು ನಿರ್ಧರಿಸಿದೆ. ಈಗಾಗಲೇ ಸಚಿವಾಕಾಂಕ್ಷಿಗಳು ದಿಲ್ಲಿಗೆ ತೆರಳಿದ್ದು, ರಾಜ್ಯದಿಂದ ಯಾವುದೇ ಹೆಸರು ದಿಲ್ಲಿಗೆ ಹೋದರೂ ಹೈಕಮಾಂಡ್ ತೀರ್ಮಾನವೇ ಅಂತಿಮವಾಗಿದೆ.

ಸಂಪುಟ ಚರ್ಚೆ ಮಾತ್ರ: ಸೋಮವಾರ ದಿಲ್ಲಿಯಲ್ಲಿ ನಡೆಯುವ ಸಭೆಯಲ್ಲಿ ಸಂಪುಟ ಸೇರ್ಪಡೆಯ ಬಗ್ಗೆ ಮಾತ್ರ ಚರ್ಚೆಯಾಗಲಿದೆ. ➡ಪುಟ ೮



15 ದಿನ ಬಳಿಕ ಸಂಪುಟ ವಿಸ್ತರಣೆ: ಖರ್ಗೆ

• **ಕಲಬುರಗಿ/ಬೆಂಗಳೂರು:** ಜೂನ್ 3ರಂದು ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಲಿರುವ ಡಿ.ಕೆ.ಶಿವಕುಮಾರ್



ಅವರೊಂದಿಗೆ ಮೊದಲ ಹಂತದಲ್ಲಿ ಕೆಲವೇ ಶಾಸಕರು ಸಚಿವರಾಗಲಿದ್ದಾರೆ. 15 ದಿನಗಳ ಬಳಿಕ ಸಚಿವ ಸಂಪುಟ ವಿಸ್ತರಣೆ ನಡೆಯಲಿದೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ತಿಳಿಸಿದ್ದಾರೆ.

ಕಲಬುರಗಿಯಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಹೊಸ ಸಚಿವ ಸಂಪುಟದಲ್ಲಿ ಎಷ್ಟು ಜನ ಡಿಸಿಎಂಗಳನ್ನು ಮಾಡಬೇಕು ಎಂಬುದರ ಬಗೆಗೆ ಇನ್ನೂ ಯಾವುದೇ ಪ್ರಸ್ತಾವಗಳು ಬಂದಿಲ್ಲ. ➡ಪುಟ ೮

> ಸಚಿವರಾಗಿ ಯಾರು ಪ್ರಮಾಣವಚನ ಸ್ವೀಕರಿಸುತ್ತಾರೆ ಎಂಬುದರ ಬಗ್ಗೆ ಗೊತ್ತಿಲ್ಲ. ಪಕ್ಷದ ಹೈಕಮಾಂಡ್ ತೀರ್ಮಾನ ಮಾಡಲಿದೆ. ಈ ಬಗ್ಗೆ ನಾನು ಪ್ರತಿಕ್ರಿಯೆ ನೀಡುವುದಿಲ್ಲ.
>
> ■ ಡಿ.ಕೆ.ಶಿವಕುಮಾರ್, ನಿಯೋಜಿತ ಮುಖ್ಯಮಂತ್ರಿ

> ಜೂನ್ 3ರಂದು ಯಾರೆಲ್ಲಾ ಸಂಪುಟ ಸೇರುತ್ತಾರೆ ಎಂಬ ಕುತೂಹಲ ಎಲ್ಲರಿಗೂ ಇದೆ. ಹೈಕಮಾಂಡ್ ಈ ಬಗ್ಗೆ ಸೂಕ್ತ ತೀರ್ಮಾನ ತೆಗೆದುಕೊಳ್ಳಲಿದೆ. ಸಿದ್ದರಾಮಯ್ಯ ಅವರು ಅಧಿಕಾರದಲ್ಲಿದ್ದಾಗ ಉತ್ತಮ ಕೆಲಸ ಮಾಡಿದ್ದಾರೆ. ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಸುಸೂತ್ರವಾಗಿ ಆಡಳಿತ ನಡೆಸಿದರು.
>
> ■ ಕೆ.ಎಚ್.ಮುನಿಯಪ್ಪ, ಮಾಜಿ ಸಚಿವ

ಸಿರಿ ಮಾತೃಶ್ರೀ ಪಾರ್ಕ್ ಉದ್ಘಾಟನೆ | ಶ್ರೀ ಕ್ಷೇತ್ರದ ಕೊಡುಗೆ ಕೊಂಡಾಡಿದ ಸಿಪಿಆರ್

ಮಹಿಳಾ ಸಬಲೀಕರಣ ಧರ್ಮಸ್ಥಳವೇ ಮಾದರಿ



• **ಮಂಗಳೂರು:** ಗ್ರಾಮೀಣ ಪ್ರದೇಶದ ಅಭಿವೃದ್ಧಿ ಮತ್ತು ಮಹಿಳಾ ಸಬಲೀಕರಣಕ್ಕಾಗಿ ಶ್ರೀ ಕ್ಷೇತ್ರ ಧರ್ಮಸ್ಥಳದ ಗ್ರಾಮಾಭಿವೃದ್ಧಿ ಯೋಜನೆಗಳು ನೀಡುತ್ತಿರುವ ಕೊಡುಗೆ ಮಹತ್ತರವಾದುದು ಎಂದು ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಹೇಳಿದರು.

ಶ್ರೀ ಕ್ಷೇತ್ರ ಧರ್ಮಸ್ಥಳದ ಅಮೃತ ವರ್ಷಿಣಿ ಸಭಾಂಗಣದಲ್ಲಿ ಭಾನುವಾರ ನಡೆದ ಬೆಳ್ತಂಗಡಿಯಲ್ಲಿ ನಿರ್ಮಾಣಗೊಂಡಿರುವ ಸುಸಜ್ಜಿತ ಸಿರಿ ಮಾತೃಶ್ರೀ ಪಾರ್ಕ್ ಉದ್ಘಾಟನೆ ನೆರವೇರಿಸಿ ಮಾತನಾಡಿದ ಅವರು, ಇದೇ ಮೊದಲ ಬಾರಿಗೆ ಧರ್ಮಸ್ಥಳಕ್ಕೆ ಆಗಮಿಸಿದ್ದೇನೆ. ಶ್ರೀ ಮಂಜುನಾಥ ಸ್ವಾಮಿಯ ದರ್ಶನ ಪಡೆದು ಕೃತಾರ್ಥನಾಗಿದ್ದೇನೆ ಎಂದರು.

ಧಾರ್ಮಿಕ, ಶಿಕ್ಷಣ, ಆರೋಗ್ಯ, ಕಲೆ-ಸಾಹಿತ್ಯ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಮಾಡಿರುವ ಕೆಲಸ ಅಪಾರವಾದುದು. ಕ್ಷೇತ್ರದಧರ್ಮಾಧಿಕಾರಿಡಾ.ಡಿ.ವೀರೇಂದ್ರ ಹೆಗ್ಗಡೆಯವರು ಮತ್ತು ಹೇಮಾವತಿ ವೀ. ಹೆಗ್ಗಡೆಯವರ ಸರ್ವಧರ್ಮೀಯರನ್ನೂ, ಎಲ್ಲಾ ಜಾತಿಯವರನ್ನೂ ಸಮಾನತೆ ಮತ್ತು ಗೌರವಭಾವದಿಂದ ಪರಿಗಣಿಸಿ ಸಾಮಾಜಿಕ ಸಾಮರಸ್ಯದೊಂದಿಗೆ ಅವರು ಮಾಡುತ್ತಿರುವ ಸೇವೆ ಆದರ್ಶ ಹಾಗೂ ಅನುಕರಣೀಯ ಎಂದರು. ➡ಪುಟ ೮

ಗ್ರಾಮಾಭಿವೃದ್ಧಿ ಯೋಜನೆಗಳು ಪ್ರಗತಿಗೆ ಪೂರಕ

ಧರ್ಮಾಧಿಕಾರಿ ದೂರದೃಷ್ಟಿ ಹಾಗೂ ನೇತೃತ್ವದಲ್ಲಿ ಪ್ರಾರಂಭಿಸಿದ ಗ್ರಾಮಾಭಿವೃದ್ಧಿ ಯೋಜನೆ, 'ಸಿರಿ' ಗ್ರಾಮೋದ್ಯೋಗ ಸಂಸ್ಥೆ, ರುಡ್‌ಸೆಟ್ ಮೊದಲಾದ ಯೋಜನೆಗಳು ನಿರುದ್ಯೋಗ ನಿವಾರಣೆಯೊಂದಿಗೆ ರಾಷ್ಟ್ರದ ಪ್ರಗತಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿವೆ ಎಂದು ಉಪ ರಾಷ್ಟ್ರಪತಿ ರಾಧಾಕೃಷ್ಣನ್ ಹೇಳಿದರು. ಸೇವಾ ಮನೋಭಾವದೊಂದಿಗೆ 'ಸಿರಿ'ಯ ಮೂಲಕ ಉತ್ತಮ ಗುಣಮಟ್ಟದ ಉತ್ಪನ್ನಗಳನ್ನು ಪೂರೈಸುತ್ತಿರುವುದು ಸ್ತುತ್ಯರ್ಹವಾಗಿದೆ ಎಂದರು.

ದೇಶದ ಪ್ರತಿಷ್ಠಿತ ಹುದ್ದೆಗೇರಿದ ಕನ್ನಡಿಗ

• **ಹೊಸದಿಲ್ಲಿ:** ಭಾರತೀಯ ಸಶಸ್ತ್ರ ಪಡೆಯಲ್ಲಿ ಕನ್ನಡಿಗರು ಮತ್ತೊಮ್ಮೆ




ಅತ್ಯುನ್ನತ ಸ್ಥಾನಕ್ಕೇರುವ ಮೂಲಕ ರಾಜ್ಯಕ್ಕೆ ಕೀರ್ತಿ ತಂದಿದ್ದಾರೆ. ಭಾರತೀಯ ನೌಕಾಪಡೆಯ ನೂತನ ಮುಖ್ಯಸ್ಥರಾಗಿ ವೈಸ್ ಅಡ್ಮಿರಲ್ ಕೃಷ್ಣ ಸ್ವಾಮಿನಾಥನ್ ಅವರು ಭಾನುವಾರ ಅಧಿಕಾರ ಸ್ವೀಕರಿಸಿದರು.

ಸಿಡಿಎಸ್ ಆಗಿ ಜನರಲ್ ಸುಬ್ರಮಣಿ ಅಧಿಕಾರ ಸ್ವೀಕಾರ • ಪುಟ ೭







ಕಿರುಸುದ್ದಿ



ಕೆರೆ ಗ್ರಾಪಂ ವ್ಯಾಪ್ತಿಯಲ್ಲಿ ಮತ್ತೆ ಕಾಡಾನೆ ಸಂಚಾರ

• **ಶೃಂಗೇರಿ:** ಕೆರೆ ಗ್ರಾಮ ಪಂಚಾಯಿತಿಯ ಕುದುರೆಮುಖ ರಾಷ್ಟ್ರೀಯ ಉದ್ಯಾನ ವ್ಯಾಪ್ತಿಯಲ್ಲಿ ಮತ್ತೆ ಕಾಡಾನೆ ಸಂಚಾರ ಕಾಣಿಸಿಕೊಂಡಿದ್ದು, ಗ್ರಾಮಸ್ಥರಲ್ಲಿ ಆತಂಕ ಮೂಡಿಸಿದೆ.

ಕಳೆದ ಒಂದು ವಾರದಿಂದ ಕೆರೆಕಟ್ಟೆ ಸಮೀಪದ ಮೆಣಸುಕೊಡಿಗೆ, ಶೀರ್ಲು ಸಮೀಪದಲ್ಲಿ ಆನೆ ಸಂಚರಿಸಿದೆ. ಕಾಡಾನೆ ಸಂಚಾರದಿಂದ ಹಲಸಿನ ಮರ, ಬೈನೆ ಮರ ಪುಡಿ ಮಾಡಿದ್ದು, ರೈತರ ಜಮೀನಿನಲ್ಲೂ ಸುತ್ತಾಡಿದೆ. ಗ್ರಾಮಸ್ಥರಿಗೆ ಕಾಣ ಸಿಗದಿದ್ದರೂ, ಆನೆ ಲದ್ದಿ ಮತ್ತು ಸುತ್ತಾಡಿರುವ ಬಗ್ಗೆ ಖಚಿತವಾಗಿದೆ. ಆನೆ ಸಂಚರಿಸುತ್ತಿರುವ ಬಗ್ಗೆ ಅರಣ್ಯ ಇಲಾಖೆಗೆ ಮಾಹಿತಿ ನೀಡಿದ್ದಾರೆ. ಸ್ಥಳಕ್ಕೆ ಅರಣ್ಯ ಇಲಾಖೆ ಸಿಬ್ಬಂದಿ ಆಗಮಿಸಿ ಪರಿಶೀಲನೆ ನಡೆಸಿದ್ದಾರೆ.

ವಳಲೆ ಶಾರದಮ್ಮ ನಿಧನ

• **ಶೃಂಗೇರಿ:** ರಾಷ್ಟ್ರೀಯ ಹೆದ್ದಾರಿ 169 ರ ದುರ್ಗಾ ದೇವಸ್ಥಾನ ಸಮೀಪದ ವಳಲೆ ಶಾರದಮ್ಮ ಶನಿವಾರ ರಾತ್ರಿ ಬೆಂಗಳೂರಿನಲ್ಲಿ ನಿಧನರಾದರು. ಇವರಿಗೆ ಇಬ್ಬರು ಪುತ್ರರು ಹಾಗೂ ಮೂವರು ಪುತ್ರಿಯರು ಇದ್ದಾರೆ.

ಪ್ರಬಂಧ ಸ್ಪರ್ಧೆ, ಚಿತ್ರಕಲಾ ಸ್ಪರ್ಧೆ ಹಾಗೂ ಕ್ವಿಜ್

• **ಚಿಕ್ಕಮಗಳೂರು:** ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಜಿಲ್ಲಾ ವಿಜ್ಞಾನ ಕೇಂದ್ರ, ಹಾಗೂ ಒನ್ ಅರ್ಥ್ ಟ್ರಸ್ಟ್ ವತಿಯಿಂದ ಪ್ರಾಥಮಿಕ ಹಾಗೂ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಪ್ರಬಂಧ ಸ್ಪರ್ಧೆ, ಚಿತ್ರಕಲಾ ಸ್ಪರ್ಧೆ ಹಾಗೂ ಕ್ವಿಜ್ ಏರ್ಪಡಿಸಲಾಗಿದೆ.

ಜೂನ್ 3 ರಂದು ಬೆಳಿಗ್ಗೆ 10.30ಕ್ಕೆ ಜ್ಯೋತಿನಗರದಲ್ಲಿರುವ ಮಲೆನಾಡು ವಿದ್ಯಾ ಸಂಸ್ಥೆಯ ಎಸ್.ಎಸ್.ಆರ್ ಪ್ರಾಯೋಗಿಕ ಪ್ರೌಢಶಾಲೆಯಲ್ಲಿ ಸ್ಪರ್ಧೆಗಳು ನಡೆಯಲಿವೆ.

5 ರಿಂದ 8ನೇ ತರಗತಿವರೆಗೆ 9 ಮತ್ತು 10 ನೇ ತರಗತಿವರೆಗೆ (ಒಂದು ಶಾಲೆಯಿಂದ ಇಬ್ಬರಿಗೆ ಮಾತ್ರ ಅವಕಾಶ) ಪ್ಲಾಸ್ಟಿಕ್, ಪರಿಸರ ಮತ್ತು ನಾವು ಕುರಿತು ಪ್ರಬಂಧ ಸ್ಪರ್ಧೆ ಏರ್ಪಡಿಸಲಾಗಿದೆ. 5 ರಿಂದ 8ನೇ ತರಗತಿವರೆಗೆ ನಮ್ಮ ಸುತ್ತಲಿನ ಪರಿಸರ ಕುರಿತು ಹಾಗೂ 9 ಮತ್ತು 10ನೇ ತರಗತಿಯ ವಿದ್ಯಾರ್ಥಿಗಳಿಗೆ ಉತ್ತಮ ನಾಳೆಗಾಗಿ ಹಸಿರು ಇಂಧನ ಕುರಿತು ಚಿತ್ರಕಲಾ ಸ್ಪರ್ಧೆಯನ್ನು ಆಯೋಜಿಸಲಾಗಿದೆ. 9 ಮತ್ತು 10ನೇ ತರಗತಿಯ ವಿದ್ಯಾರ್ಥಿಗಳಿಗೆ ಪರಿಸರ, ಅರಣ್ಯ ಮತ್ತು ವನ್ಯಜೀವಿ ವಿಚಾರದಲ್ಲಿ ಕ್ವಿಜ್ ಅನ್ನು ಏರ್ಪಡಿಸಲಾಗಿದೆ.

ವಿಜೇತ ವಿದ್ಯಾರ್ಥಿಗಳಿಗೆ ಜೂನ್ 5 ರಂದು ನಡೆಯುವ ವಿಶ್ವ ಪರಿಸರ ದಿನಾಚರಣೆಯ ಪ್ರಧಾನ ಸಮಾರಂಭದಲ್ಲಿ ಪ್ರಶಸ್ತಿ ಪತ್ರದೊಂದಿಗೆ ಬಹುಮಾನ ವಿತರಣೆ ಮಾಡಲಾಗುವುದು.

ಆಸಕ್ತ ಶಾಲೆಗಳು ಹೆಚ್ಚಿನ ವಿವರಕ್ಕೆ 08262–295792, 8660361852, 8660268530, ಸಂಖ್ಯೆಗಳನ್ನು ಸಂಪರ್ಕಿಸಬಹುದು.

ಅರಣ್ಯ ಸಿಬ್ಬಂದಿ ಸೋಗಿನಲ್ಲಿ ಮಾಂಗಲ್ಯ ಪಡೆದು ಮೋಸ

• **ಅಜ್ಜಂಪುರ:** ಅರಣ್ಯ ಸಿಬ್ಬಂದಿ ರೀತಿ ವೇಷ ಮರೆಸಿಕೊಂಡು ಬಂದಿದ್ದ ವ್ಯಕ್ತಿಯೋರ್ವ ಮಹಿಳೆಯೊಬ್ಬರ ಮಾಂಗಲ್ಯ ಸರ ಪಡೆದು ಮೋಸ ಮಾಡಿರುವ ಪ್ರಕರಣ ಬೀರನಹಳ್ಳಿ ಮಾರ್ಗವಾಗಿ ಹೊಸದುರ್ಗಕ್ಕೆ ಹೋಗುವಾಗ ಭೂತನಹಳ್ಳಿ ವೀರಭದ್ರೇಶ್ವರ ದೇವಸ್ಥಾನದ ಹತ್ತಿರ ನಡೆದಿದೆ.

ಈ ಸಂಬಂಧ ಮಹಿಳೆಯೊಬ್ಬರು ದೂರು ನೀಡಿದ್ದು, ಮಹೇಶ ಎಂಬುವವರ ಜೊತೆ ಬೈಕ್‌ನಲ್ಲಿ ಹೊಸದುರ್ಗಕ್ಕೆ ಪ್ರಯಾಣಿಸುವ ಮಾರ್ಗಮಧ್ಯೆ ಬೈಕ್ ನಿಲ್ಲಿಸಿ ಮರವೊಂದರ ಕೆಳಗೆ ಕುಳಿತು ಎಗ್‌ಪಫ್ಸ್ ತಿನ್ನುವಾಗ ಅಲ್ಲಿಗೆ ಬಂದ ಅಪರಿಚಿತನೋರ್ವ ತಾನು ಅರಣ್ಯ ಇಲಾಖೆಯವನೆಂದು ನಕಲಿ ಗುರುತಿನ ಚೀಟಿ ತೋರಿಸಿ ಇಲ್ಲಿ ಕುಳಿತರೆ ನಿಮ್ಮ ಸರವನ್ನು ಕಿತ್ತುಕೊಂಡು ಹೋಗುತ್ತಾರೆಂದು ಹೆದರಿಸಿ ಆಭರಣಗಳನ್ನು ಬಿಚ್ಚಿಕೊಂಡು ನೀವುಗಳು ಹೋಗುವಾಗ ನೀಡುವುದಾಗಿ ನಂಬಿಸಿದ್ದಾನೆ.

ಆತ ಮಹಿಳೆಯಿಂದ ಬಂಗಾರದ ಮಾಂಗಲ್ಯ ಸರ, 2 ಗುಂಡುಗಳು, ಒಂದು ಜೊತೆ ಓಲೆಗಳನ್ನು ಬಿಚ್ಚಿಸಿಕೊಂಡು ಹೋಗಿದ್ದಾನೆ. ಅದರ ಒಟ್ಟು ಮೌಲ್ಯ 70.000 ರೂ. ಗಳಾಗಿದೆ ಎಂದು ದೂರಿನಲ್ಲಿ ತಿಳಿಸಲಾಗಿದ್ದು, ಅಜ್ಜಂಪುರ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ನೀರು ಸರಬರಾಜಿನಲ್ಲಿ ವ್ಯತ್ಯಯ

• **ಚಿಕ್ಕಮಗಳೂರು:** ಮೇ 29 ರ ರಾತ್ರಿ ನಗರದಲ್ಲಿ ಗುಡುಗು, ಸಿಡಿಲು, ಗಾಳಿ ಮಳೆಯಿಂದಾಗಿ ನಗರಕ್ಕೆ ನೀರು ಸರಬರಾಜು ಮಾಡುವ ಬೇಲೂರು ಜಾಕ್ ವೆಲ್ನ ಮೋಟರ್ ಸುಟ್ಟು ಹೋಗಿದ್ದು, ದುರಸ್ಥಿಪಡಿಸುವ ಕಾರ್ಯ ಪ್ರಗತಿಯಲ್ಲಿರುವುದರಿಂದ ಜೂನ್ 1 ಮತ್ತು 2 ರಂದು ನಗರದಲ್ಲಿ ಕುಡಿಯುವ ನೀರಿನ ಸರಬರಾಜಿನಲ್ಲಿ ವ್ಯತ್ಯಯವಾಗಲಿದ್ದು, ನಗರದ ಜನತೆ ಸಹಕರಿಸುವಂತೆ ನಗರ ಸಭೆ ಪೌರಾಯುಕ್ತ ಬಿ. ಸಿ. ಬಸವರಾಜು ಮನವಿ ಮಾಡಿದ್ದಾರೆ.

ಶೃಂಗೇರಿ ತಾಲೂಕಿನ ಮೆಣಸೆ ಪಿಎಂಶ್ರೀ ಶಾಸಕರ ಮಾದರಿ ಹಿರಿಯ ಪ್ರಾಥಮಿಕ ಪಾಠಶಾಲೆ ಜೂ.1 ರಂದು ಆರಂಭಗೊಳ್ಳುವ ಹಿನ್ನಲೆಯಲ್ಲಿ ಶಾಲೆಯನ್ನು ಶೃಂಗರಿಸಲಾಗಿದೆ.



ವಿಶ್ವ ಹಿಂದೂ ಪರಿಷತ್, ಬಜರಂಗದಳದ ಕುದುರೆಗುಂಡಿ ಘಟಕದ ವತಿಯಿಂದ ಭಾನುವಾರ ಕುದುರೆಗುಂಡಿಯ ಬಸ್ ನಿಲ್ದಾಣವನ್ನು ಸ್ವಚ್ಛಗೊಳಿಸಲಾಯಿತು. ಈ ವೇಳೆ ಬಜರಂಗದಳದ ಪ್ರಮುಖರಾದ ನಾಗೇಶ್ ನಾಯಕ್, ವಿನಯ್ ಶಿವಪುರ, ಪ್ರಮೋದ್ ಕಾಮತ್, ನಿತೇಶ್ ನಾಯಕ್, ಪ್ರಜ್ವಲ್, ಕಿರಣ್, ಶಶಿ ವಿಠಲಮಕ್ಕಿ ಮುಂತಾದವರಿದ್ದರು.



ಚಿಕ್ಕಮಗಳೂರು–ಬೇಲೂರು ರೈಲ್ವೇ ಕಾಮಗಾರಿ ಅಂತಿಮ ಹಂತಕ್ಕೆ: ಸೋಮಣ್ಣ

ಸೆಪ್ಟೆಂಬರ್‌ಗೆ ಗಡುವು



• **ಅಜ್ಜಂಪುರ:** ಚಿಕ್ಕಮಗಳೂರು–ಬೇಲೂರು ಮಾರ್ಗದ ರೈಲ್ವೇ ಕಾಮಗಾರಿ ಅಂತಿಮ ಹಂತಕ್ಕೆ ಬಂದಿದ್ದು, ಸೆಪ್ಟೆಂಬರ್ ವೇಳೆಗೆ ಎಲ್ಲಾ ಕೆಲಸ ಪೂರ್ಣಗೊಳಿಸುವಂತೆ ಗಡುವು ನೀಡಲಾಗಿದೆ ಎಂದು ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ತಿಳಿಸಿದರು.

ಅಜ್ಜಂಪುರದ ರೈಲ್ವೆ ಲೆವೆಲ್ ಕ್ರಾಸಿಂಗ್ ಸಂಖ್ಯೆ 138 ರಲ್ಲಿ ನಿರ್ಮಾಣಗೊಳ್ಳಲಿರುವ 50.48 ಕೋಟಿ ರೂ. ವೆಚ್ಚದ ರಸ್ತೆ ಮೇಲ್ಸೇತುವೆ (ಆರ್.ಒ.ಬಿ) ಕಾಮಗಾರಿಗೆ ಭಾನುವಾರ ಶಿಲಾನ್ಯಾಸ ನೆರವೇರಿಸಿ ಅವರು ಮಾತನಾಡಿದರು.

ಕಡೂರು–ಚಿಕ್ಕಮಗಳೂರು–ಬೇಲೂರು ಮಾರ್ಗದ 68 ಕಿ.ಮೀ. ರೈಲು ಯೋಜನೆಗೆ 2012–13ರಲ್ಲೇ ಅನುಮೋದನೆ ಸಿಕ್ಕಿದ್ದರೂ, ಕಾಮಗಾರಿ ವೇಗ ಪಡೆದುಕೊಂಡಿದ್ದು ಮೋದಿ ಅವರು ಪ್ರಧಾನಿಯಾದ ಬಳಿಕವೇ. ಈಗಾಗಲೇ 535 ಕೋಟಿ ರೂ. ವೆಚ್ಚದಲ್ಲಿ ಕಾಮಗಾರಿ ಪೂರ್ಣಗೊಳ್ಳುವ ಹಂತಕ್ಕೆ ಬಂದಿದೆ. ಮುಂದಿನ 2–3 ತಿಂಗಳಲ್ಲಿ ಕಡೂರು–ಚಿಕ್ಕಮಗಳೂರು ಮಾರ್ಗದಲ್ಲಿ ರೈಲು ಸಂಚಾರ ಆರಂಭವಾಗಲಿದೆ ಎಂದರು.

ಅಜ್ಜಂಪುರ ಮತ್ತು ಸುತ್ತಮುತ್ತಲ ಗ್ರಾಮಗಳ ನಾಗರಿಕರು ಹಾಗೂ ಜನಪ್ರತಿನಿಧಿಗಳು ರೈಲ್ವೆ ಸೌಲಭ್ಯಗಳಿಗೆಸಂಬಂಧಿಸಿದಂತೆಹಲವು ಬೇಡಿಕೆಗಳನ್ನು ಸಲ್ಲಿಸಿದ್ದಾರೆ. ತರೀಕೆರೆ ರೈಲ್ವೆ ನಿಲ್ದಾಣವು ಹಲವು ವರ್ಷಗಳಿಂದ ಯಾವುದೇ ಬದಲಾವಣೆಯಿಲ್ಲದೆ ಹಾಗೆಯೇ ಉಳಿದಿದೆ. ಇದನ್ನು ಗತಿ ಶಕ್ತಿ ಅಥವಾ ಬೇರೆ ಯೋಜನೆಯಡಿ ಅತ್ಯಾಧುನಿಕ ವ್ಯವಸ್ಥೆಯೊಂದಿಗೆ ಅಭಿವೃದ್ಧಿಪಡಿಸಲು ಈಗಾಗಲೇ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಇನ್ನು 15ರಿಂದ 20 ತಿಂಗಳ ಅವಧಿಯಲ್ಲಿ ಈ ನಿಲ್ದಾಣವನ್ನು ಮೇಲ್ದರ್ಜೆಗೆ ಏರಿಸುವ ಕೆಲಸ ಮಾಡಲಾಗುವುದು ಎಂದು ಅವರು ಭರವಸೆ ನೀಡಿದರು.

ಚಿಕ್ಕಮಗಳೂರು–ಬೀರೂರು ಮಾರ್ಗದ ಲೆವೆಲ್ ಕ್ರಾಸಿಂಗ್‌ನಲ್ಲಿ ಮೇಲ್ಸೇತುವೆ ನಿರ್ಮಾಣಕ್ಕಾಗಿ 70 ಕೋಟಿ ರೂ. ವೆಚ್ಚದ ಯೋಜನೆಗೆ ಈಗಾಗಲೇ ಅನುಮೋದನೆ ನೀಡಲಾಗಿದ್ದು, ಶೀಘ್ರದಲ್ಲೇ ಕಾಮಗಾರಿ ಆರಂಭವಾಗಲಿದೆ. ಹಾಗೆಯೇ 22 ಕೋಟಿ ರೂ. ವೆಚ್ಚದಲ್ಲಿ ಚಿಕ್ಕಮಗಳೂರು ರೈಲ್ವೆ ನಿಲ್ದಾಣದ ಅಭಿವೃದ್ಧಿ ಕಾರ್ಯಗಳು ಪ್ರಗತಿಯಲ್ಲಿವೆ ಎಂದು ಅವರು ಮಾಹಿತಿ ನೀಡಿದರು.

ತರೀಕೆರೆ ರೈಲ್ವೆ ನಿಲ್ದಾಣದ ಅಭಿವೃದ್ಧಿ ಕಾಮಗಾರಿ ಅತ್ಯಂತ ಅವಶ್ಯಕವಾಗಿತ್ತು. ಸುಮಾರು 50–60 ವರ್ಷಗಳಿಂದ ಈ ನಿಲ್ದಾಣ ಇದ್ದರೂ ಕೇಳುವವರಿರಲಿಲ್ಲ, ಆದರೆ ಈಗ ಕಾಲ ಬದಲಾಗಿದೆ. ತರೀಕೆರೆ ನಿಲ್ದಾಣದಲ್ಲಿ ಸುಸಜ್ಜಿತ ಕಾಯುವ ಕೊಠಡಿ (ವೇಟಿಂಗ್ ಹಾಲ್) ನಿರ್ಮಾಣಕ್ಕಾಗಿ 1.01 ಕೋಟಿ ರೂ. ಮಂಜೂರಾಗಿದ್ದು, ಈಗಾಗಲೇ ಟೆಂಡರ್ ಪ್ರಕ್ರಿಯೆ ಮುಗಿದಿದೆ. ಶೀಘ್ರದಲ್ಲೇ ಕಾಮಗಾರಿ ಆರಂಭವಾಗಲಿದೆ ಎಂದರು.

> ಚಿಕ್ಕಮಗಳೂರಿನಿಂದ ತಿರುಪತಿಗೆ ಇತ್ತೀಚೆಗೆ ಆರಂಭಿಸಲಾದ ಹೊಸ ರೈಲಿಗೆ ಭಕ್ತರಿಂದ ಅಭೂತಪೂರ್ವ ಬೆಂಬಲ ಸಿಕ್ಕಿದೆ. ದಿನನಿತ್ಯ ಈ ರೈಲು ಸಂಚರಿಸಿದರೂ ಭಕ್ತರ ಸಂಖ್ಯೆ ಕಡಿಮೆಯಾಗುತ್ತಿಲ್ಲ, ಈ ರೈಲಿನ ಸೇವೆಯನ್ನು ಇನ್ನಷ್ಟು ವಿಸ್ತರಿಸಬೇಕು ಎಂಬ ಒತ್ತಾಯ ಕೇಳಿಬಂದಿದ್ದು, ಈ ಕುರಿತು ಕೇಂದ್ರ ಸರ್ಕಾರದಿಂದ ಶೀಘ್ರದಲ್ಲೇ ಸಕಾರಾತ್ಮಕ ತೀರ್ಮಾನ ಕೈಗೊಳ್ಳಲಾಗುವುದು.
> ■ ವಿ.ಸೋಮಣ್ಣ

ರೈಲ್ವೆ ಹಳಿಯಿಂದಾಗಿ ಎರಡು ಭಾಗವಾಗಿ ಕತ್ತರಿಸಲ್ಪಟ್ಟಿದ್ದ ಬೀರೂರು ಪಟ್ಟಣದ ಜನರ ಬಹುಕಾಲದ ಸಮಸ್ಯೆಗೆ ಈಗ ಪರಿಹಾರ ಸಿಕ್ಕಿದೆ. ಬೀರೂರಿನ ಪಾದಚಾರಿ ಮೇಲ್ಸೇತುವೆ ಕಾಮಗಾರಿಗೆ 5.50 ಕೋಟಿ ರೂ. ಮಂಜೂರು ಮಾಡಲಾಗಿದ್ದು, ಶೀಘ್ರದಲ್ಲೇ ಚಾಲನೆ ನೀಡಲಾಗುವುದು. ಈ ಮೂಲಕ ಎರಡೂ ಊರುಗಳನ್ನು ಜೋಡಿಸುವ ಕೆಲಸವಾಗಲಿದೆ. ಜೊತೆಗೆ ಬೀರೂರು ನಿಲ್ದಾಣದಲ್ಲಿ ಪ್ಲಾಟ್‌ಫಾರ್ಮ್ ಅಭಿವೃದ್ಧಿ ಮತ್ತು ಲೈಟಿಂಗ್ ವ್ಯವಸ್ಥೆಗಾಗಿ 8–10 ಕೋಟಿ ರೂ. ಅನುದಾನದಡಿ ಕಾಮಗಾರಿ ಪ್ರಗತಿಯಲ್ಲಿದೆ. ಕಡೂರು–ಬೀರೂರು ಭಾಗಕ್ಕೆ ಕುಡಿಯುವ ನೀರಿನ ಸೌಲಭ್ಯಕ್ಕೂ ಹಣ ಬಿಡುಗಡೆ ಮಾಡಲಾಗಿದೆ. ಅಲ್ಲದೆ, ದೇವನೂರು ನಿಲ್ದಾಣದಲ್ಲಿ ಪಾದಚಾರಿ ಮೇಲ್ಸೇತುವೆ ನಿರ್ಮಾಣಕ್ಕೆ 3.20 ಕೋಟಿ ರೂ. ಹಾಗೂ ಚಿಕ್ಕಮಗಳೂರು ನಿಲ್ದಾಣದಲ್ಲಿ ಇನ್ನೂ ಎರಡು ಪ್ಲಾಟ್‌ಫಾರ್ಮ್‌ಗಳನ್ನು ವಿಸ್ತರಿಸಲು 1.82 ಕೋಟಿ ರೂ. ವೆಚ್ಚ ಮಾಡಲಾಗುತ್ತಿದೆ ಎಂದರು.

ತರೀಕೆರೆ ಶಾಸಕ ಜಿ.ಎಚ್. ಶ್ರೀನಿವಾಸ್ ಮಾತನಾಡಿ, ತರೀಕೆರೆ–ಅಜ್ಜಂಪುರ ರಸ್ತೆ ಮೇಲ್ಸೇತುವೆ ಹಲವು ವರ್ಷಗಳ ಸಾರ್ವಜನಿಕರ ಬೇಡಿಕೆಯಾಗಿದ್ದು, ಇದನ್ನು ಶೀಘ್ರವಾಗಿ ಪೂರ್ಣಗೊಳಿಸಬೇಕು. ಅಜ್ಜಂಪುರದ ಗೌರಾಪುರ ಹಾಗೂ ಮಾಳೇನಹಳ್ಳಿ ರೈತರು ಜಮೀನುಗಳಿಗೆ ತೆರಳಲು ಅನುಕೂಲವಾಗುವಂತೆ ರೈಲ್ವೆ ಹಳಿಗಳ ಕೆಳಗೆ ಅಂಡರ್‌ಪಾಸ್ ನಿರ್ಮಿಸಿಕೊಡಬೇಕು. ಹೊಸೂರು ಕ್ರಾಸ್ ಬಳಿ ರೈಲ್ವೆ ಮೇಲ್ಸೇತುವೆ ಕಾಮಗಾರಿಯನ್ನು ಕೈಗೆತ್ತಿಕೊಳ್ಳಬೇಕು. ಅಜ್ಜಂಪುರವು ಈಗ ತಾಲೂಕು ಕೇಂದ್ರವಾಗಿರುವುದರಿಂದ, ಇಲ್ಲಿ ಹೆಚ್ಚಿನ ರೈಲುಗಳು ನಿಲ್ಲುವಂತೆ ಕ್ರಮ ಕೈಗೊಳ್ಳಬೇಕು. ತಾಲೂಕಿನಲ್ಲಿ ಕುಡಿಯುವ ನೀರಿನ ಯೋಜನೆಗಳಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರದ 40:60 ಅನುಪಾತದ ಅಡಿಯಲ್ಲಿ ಹಣ ಬಿಡುಗಡೆಯಾಗಬೇಕಿದ್ದು, ಬಾಕಿ ಇರುವ ಅನುದಾನವನ್ನು ತಕ್ಷಣವೇ ಬಿಡುಗಡೆ ಮಾಡಲು ನೆರವಾಗಬೇಕು ಎಂದು ಕೋರಿದರು.

ವಿಧಾನ ಪರಿಷತ್ ಸದಸ್ಯ ಎಸ್.ಎಲ್. ಭೋಜೇಗೌಡ ಮಾತನಾಡಿದರು. ಕಾರ್ಯಕ್ರಮದಲ್ಲಿ ಅಜ್ಜಂಪುರ ಪಟ್ಟಣ ಪಂಚಾಯಿತಿ ಅಧ್ಯಕ್ಷ ರೇವಣ್ಣ, ಉಪಾಧ್ಯಕ್ಷೆ ಕವಿತಾ ಕೇಶವಮೂರ್ತಿ ಹಾಗೂ ರೈಲ್ವೆ ಇಲಾಖೆಯ ಡಿಆರ್‌ಎಂ ಮುದ್ರಾ ಮಿತ್ತಲ್ ಮತ್ತಿತರರು ಉಪಸ್ಥಿತರಿದ್ದರು.

ಜಲಶಕ್ತಿ ಯೋಜನೆಗೆ ಸಂಬಂಧಿಸಿದ ಕಾಮಗಾರಿಗಳಿಗೆ ಶೀಘ್ರದಲ್ಲೇ ಅನುಮೋದನೆ

• **ಅಜ್ಜಂಪುರ:** ಅಜ್ಜಂಪುರ ಭಾಗದ ಕೆರೆಗಳನ್ನು ತುಂಬಿಸುವ ಜಲಶಕ್ತಿ ಯೋಜನೆಗೆ ಸಂಬಂಧಿಸಿದ ಕಾಮಗಾರಿಗಳಿಗೆ ಶೀಘ್ರದಲ್ಲೇ ಅನುಮೋದನೆ ನೀಡುವಂತೆ ಸಂಸದ ಕೋಟಾ ಶ್ರೀನಿವಾಸ ಪೂಜಾರಿ ಅವರು ರೈಲ್ವೇ ಖಾತೆ ರಾಜ್ಯ ಸಚಿವರು ಹಾಗೂ ಕೇಂದ್ರ ಜಲಶಕ್ತಿ ಅಭಿವೃದ್ಧಿ ಸಚಿವ ವಿ. ಸೋಮಣ್ಣ ಅವರಲ್ಲಿ ಮನವಿ ಮಾಡಿದರು.

ಅವರು ಭಾನುವಾರ ಅಜ್ಜಂಪುರದ ರೈಲ್ವೆ ಲೆವೆಲ್ ಕ್ರಾಸಿಂಗ್ ಸಂಖ್ಯೆ 138 ರಲ್ಲಿ ನಿರ್ಮಾಣಗೊಳ್ಳಲಿರುವ 50.48 ಕೋಟಿ ರೂ.ವೆಚ್ಚದ ರಸ್ತೆ ಮೇಲ್ಸೇತುವೆ (ಆರ್.ಒ.ಬಿ) ಕಾಮಗಾರಿಗೆ ಶಿಲಾನ್ಯಾಸ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ನಾನು ಸಂಸದನಾಗಿ ಬರುವಾಗಲೇ ಈ ಮೇಲ್ಸೇತುವೆ ನಿರ್ಮಾಣದ ಪ್ರಸ್ತಾಪವಿತ್ತು. ಇದೀಗ ಕೇವಲ ಒಂದೂವರೆ ವರ್ಷದ ಒಳಗಾಗಿ ಟೆಂಡರ್ ಪ್ರಕ್ರಿಯೆ ಮುಗಿಸಿ, ಕಾಮಗಾರಿಗೆ ಚಾಲನೆ ನೀಡಲಾಗಿದೆ. ಗುಣಮಟ್ಟದ ಕಾಮಗಾರಿಯನ್ನು ನಡೆಸಿ, ಆದಷ್ಟು ಬೇಗ ಇದನ್ನು ಸಾರ್ವಜನಿಕರ ಬಳಕೆಗೆ ಮುಕ್ತಗೊಳಿಸಲಾಗುವುದು ಎಂದು ಭರವಸೆ ನೀಡಿದರು.

ಒಂದು ವೇಳೆ ಸೋಮಣ್ಣ ಅವರು ರೈಲ್ವೆ ಮಂತ್ರಿಯಾಗದಿದ್ದರೆ ಅಜ್ಜಂಪುರ ಹಾಗೂ ಚಿಕ್ಕಮಗಳೂರು ಭಾಗಕ್ಕೆ ಈ ಪ್ರಮಾಣದ ರೈಲ್ವೆ ಸೇವೆ ಸಿಗುತ್ತಿರಲಿಲ್ಲ, ಚಿಕ್ಕಮಗಳೂರಿನಿಂದ ತಿರುಪತಿಗೆ ಹೊಸ ಎಕ್ಸ್‌ಪ್ರೆಸ್ ರೈಲು ಮಂಜೂರು ಮಾಡಿದ ಹೆಗ್ಗಳಿಕೆ ಅವರಿಗೆ ಸಲ್ಲುತ್ತದೆ. ಸೋಮಣ್ಣ ಅವರು ಕೇವಲ ನಮ್ಮ ಪಕ್ಷಕ್ಕಷ್ಟೇ ಅಲ್ಲ, ಸರ್ವ ಪಕ್ಷಗಳಿಗೂ ಲೀಡರ್ ಆಗುವ ಶಕ್ತಿ ಹೊಂದಿದ್ದಾರೆ ಎಂದರು.

ಅಜ್ಜಂಪುರ ಹಾಗೂ ಶಿವನಿ ನಿಲ್ದಾಣಗಳಲ್ಲಿ ರೈಲುಗಳ ನಿಲುಗಡೆಗೆ ಸಾರ್ವಜನಿಕ ವಲಯದಲ್ಲಿ ವ್ಯಾಪಕ ಚರ್ಚೆಗಳು ನಡೆಯುತ್ತಿವೆ. ಈ ಹಿನ್ನೆಲೆಯಲ್ಲಿ ಸಾರ್ವಜನಿಕರ ಒತ್ತಾಯದ ಮೇರೆಗೆ ಯಶವಂತಪುರ–ವಾಸ್ಕೋಡಗಾಮಾ ಎಕ್ಸ್‌ಪ್ರೆಸ್ ಹಾಗೂ ಗೋಲ್ ಗುಂಬಜ್ ಎಕ್ಸ್‌ಪ್ರೆಸ್ ಸೇರಿದಂತೆ ಒಟ್ಟು ನಾಲ್ಕು ರೈಲುಗಳನ್ನು ಅಜ್ಜಂಪುರದಲ್ಲಿ ನಿಲುಗಡೆ ಮಾಡುವಂತೆ ಸಚಿವ ಸೋಮಣ್ಣ ಹಾಗೂ ಹಿರಿಯ ರೈಲ್ವೆ ಅಧಿಕಾರಿಗಳಿಗೆ ಪ್ರಸ್ತಾಪ ಸಲ್ಲಿಸಲಾಗಿದೆ ಎಂದು ಸಂಸದರು ತಿಳಿಸಿದರು.

ಅಜ್ಜಂಪುರ ರೈಲ್ವೆ ನಿಲ್ದಾಣದಲ್ಲಿ ಪ್ರಯಾಣಿಕರಿಗೆ ಸೂಕ್ತ ವ್ಯವಸ್ಥೆಗಳಿಲ್ಲ ಹಾಗೂ ಪಾರ್ಕಿಂಗ್ ಸಮಸ್ಯೆ ಇದೆ ಎಂಬ ದೂರುಗಳು ಕೇಳಿಬಂದಿವೆ. ಹೀಗಾಗಿ ನಿಲ್ದಾಣದಲ್ಲಿ ಅಗತ್ಯ ಮೂಲ ಸೌಕರ್ಯಗಳನ್ನು ಕಲ್ಪಿಸಿಕೊಡಬೇಕಿದೆ. ಇದರೊಂದಿಗೆ, ಅಜ್ಜಂಪುರ ಪಟ್ಟಣದ ಗುರು ಸಿದ್ದೇಶ್ವರ ವೃತ್ತದಿಂದ ಗೌರಾಪುರ ರಸ್ತೆಯವರೆಗೆ ಸಂಪರ್ಕ ಕಲ್ಪಿಸುವ ರೈಲ್ವೆ ಕೆಳಸೇತುವೆ ನಿರ್ಮಾಣಕ್ಕೂ ಸಾರ್ವಜನಿಕರು ಮನವಿ ಮಾಡಿದ್ದು, ಇವೆಲ್ಲವನ್ನೂ ಆದಷ್ಟು ಬೇಗ ಮಂಜೂರು ಮಾಡಿಕೊಡಬೇಕು ಎಂದು ಸಚಿವರಲ್ಲಿ ವಿನಂತಿಸಿದರು.



5.14ಕೋಟಿ ರೈಲ್ವೇ ಕೆಳಸೇತುವೆ ಕಾಮಗಾರಿಗೆ ಕೇಂದ್ರ ರೈಲ್ವೆ ಖಾತೆ ಸಚಿವ ವಿ.ಸೋಮಣ್ಣರಿಂದ ಭೂಮಿ ಪೂಜೆ

ದೇಶದಲ್ಲಿ 13 ಸಾವಿರಕ್ಕೂ ಹೆಚ್ಚಿನ ಲೆವೆಲ್ ಕ್ರಾಸ್ ಕಾಮಗಾರಿ ಪೂರ್ಣ

• **ಬೀರೂರು:** ಪ್ರಧಾನಿ ಮೋದಿಜಿಯವರ ದೂರ ದೃಷ್ಟಿಯ ಆಶಯದಂತೆ ದೇಶದ ಸಂಪರ್ಕ ಕೊಂಡಿ ಮತ್ತು ಆದಾಯ ನೀಡುತ್ತಿರುವ ರೈಲ್ವೆಗೆ ನ್ಯೂನ್ಯತೆಗಳು ಇದ್ದುದ್ದನ್ನು ಗಮನಿಸಿ ಆ ಕಾಮಗಾರಿಗಳಿಗೆ ಹಣ ಬಿಡುಗಡೆ ಮಾಡುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ರಾಜಕಾರಣಿಗಳು ಯಾರೇ ಇದ್ದರು ಸಹ ರಾಜಕಾರಣ ಮಾಡಬಾರದು ಎಂದು ನೈರುತ್ಯ ರೈಲ್ವೆ ಹಾಗೂ ಜಲಶಕ್ತಿ ಸಚಿವ ವಿ. ಸೋಮಣ್ಣ ಹೇಳಿದರು.

ಅವರು ಭಾನುವಾರ ಸಂತೆಕಟ್ಟೆ ಮೇಲ್ಭಾಗದಲ್ಲಿನ ರೂ 5.14ಕೋಟಿ ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ರೈಲ್ವೆ ಕೆಳ ಸೇತುವೆ ಕಾಮಗಾರಿಗೆ ಅಧಿಕಾರಿಗಳೊಂದಿಗೆ ಭೂಮಿಪೂಜೆ ನೇರವೇರಿಸಿ ಮಾತನಾಡಿದರು.

ವಾಹನ ಸವಾರರಿಗೆ ಅಡೆತಡೆ ನೀಡುತ್ತಿದ್ದ ಲೆವೆಲ್ ಕ್ರಾಸ್‌ಗಳಲ್ಲಿ ಈ ದೇಶದಲ್ಲಿ 13 ಸಾವಿರಕ್ಕೂ ಹೆಚ್ಚಿನ ಲೆವೆಲ್ ಕ್ರಾಸ್ ಕಾಮಗಾರಿ ಪೂರ್ಣವಾದರೆ ಕರ್ನಾಟಕದಲ್ಲಿ 700ಲೆವೆಲ್ ಕ್ರಾಸ್ ಕಾಮಗಾರಿಗಳನ್ನು ಸುಗಮ ಸಂಚಾರಕ್ಕೆ ಅಣಿಯಾಗಿವೆ.

ದೇಶದಲ್ಲಿ ರೈಲ್ವೆ ಯೋಜನೆ ಅಭಿವೃದ್ಧಿಯ ಸಂಕೇತ. ಪ್ರಧಾನಿಗಳು ಉತ್ತಮವಾಗಿ ನಡೆಸುತ್ತಿದ್ದಾರೆ. ಇಡೀ ದೇಶ ಸುತ್ತಾಡಿದರೆ, ಜಮ್ಮು–ಕಾಶ್ಮೀರದಿಂದ ಹಿಡಿದು ಚತ್ತಿಸ್‌ಗಢದವರೆಗೂ ರೂ 8 ಲಕ್ಷ ಕೋಟಿಯ ರೈಲ್ವೆ ಯೋಜನೆಯ ಕಾಮಗಾರಿಗಳು ನಡೆಯುತ್ತಿವೆ. ಮುಂದಿನ 10 ವರ್ಷಗಳಲ್ಲಿ ಯಾವ ಲೆವೆಲ್ ಕ್ರಾಸ್‌ಗಳು ಇರುವುದಿಲ್ಲ ಎಂದರು.

ಬಿರೂರು ನಿಲ್ದಾಣದಲ್ಲಿ ಹೆಚ್ಚಿನ ವಿಶಾಲ ಜಾಗವಿದ್ದರು ಸಹ ಪ್ಲಾಟ್ ಫಾರಂ ಕೊರತೆಯಿಂದ ಕೆಲವು ರೈಲುಗಳು ನಿಲ್ಲುತ್ತಿರಲಿಲ್ಲವೆಂಬುದನ್ನು ಗಮನಿಸಿ, ಹೆಚ್ಚಿನ ಪ್ಲಾಟ್ ನಿರ್ಮಾಣಕ್ಕಾಗಿ 8 ಕೋಟಿ 45ಲಕ್ಷ ರೂ. ಬಿಡುಗಡೆ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ಶಾಸಕ ಕೆ.ಎಸ್. ಆನಂದ್ ಮಾತನಾಡಿ, ಬೀರೂರು ಜನತೆಯ ಹಲವು ವರ್ಷಗಳ ಕನಸನ್ನು ರೈಲ್ವೆ ಸಚಿವರಾದ ವಿ. ಸೋಮಣ್ಣನವರು ನನಸು ಮಾಡಿರುವುದು ಸಂತಸ ತಂದಿದ್ದು, ಮಾರ್ಗದ ಕ್ಯಾಂಪ್ ಸುತ್ತಮುತ್ತಲ ಸುಮಾರು 7 ವಾರ್ಡಿನ ಜನತೆಗೆ ಈ ಕೆಳ ಸೇತುವೆಯಿಂದ ಅನುಕೂಲವಾಗಲಿದೆ. ಬಿ.ಕೋಡಿಹಳ್ಳಿ



ರಸ್ತೆಯಲ್ಲಿ ನಿರ್ಮಾಣ ಮಾಡಿರುವ ಕೆಳಸೇತುವೆ ಕಿರಿದಾಗಿದ್ದು, ಅದನ್ನು ಅಗಲೀಕರಿಸಬೇಕೆಂದು ಮನವಿ ಮಾಡಿದ ಅವರು, ಕಡೂರು ನಿಲ್ದಾಣಕ್ಕೆ ವಂದೇ ಭಾರತ್ ರೈಲು ನಿಲುಗಡೆಗೊಳಿಸಿದರೆ 3 ಜಿಲ್ಲೆಯ ಪ್ರಯಾಣಿಕರಿಗೆ ಅನುಕೂಲವಾಗಲಿದೆ. ಕಡೂರು ರೈಲ್ವೆ ನಿಲ್ದಾಣವನ್ನು ಅವೈಜ್ಞಾನಿಕವಾಗಿ ನಿರ್ಮಾಣ ಮಾಡಿರುವ ಪರಿಣಾಮ ಧರ್ಮಸ್ಥಳ ಹಾಗೂ ಮತ್ತಿತರ ಕಡೆ ತೆರಳುವ ಪ್ರಯಾಣಿಕರಿಗೆ ನಿಲ್ದಾಣದ ಮುಂಭಾಗದಲ್ಲಿನ ಮೆಟ್ಟಿಲುಗಳು ಹೈರಾಣಾಗಿಸುತ್ತವೆ. ಆದ್ದರಿಂದ ಈ ನಿಲ್ದಾಣವನ್ನು ಕೆಡವಿ ನೂತನ ನಿಲ್ದಾಣ ಮಾಡಿಕೊಡಬೇಕು ಮನವಿ ಮಾಡಿದ ಅವರು, ನಿಲ್ದಾಣದ ಪಕ್ಕದಲ್ಲಿನ ಲೆವೆಲ್ ಕ್ರಾಸ್ ನಿಂದಾಗಿ ವಾಹನ ಸವಾರರಿಗೆ ಅನಾನುಕೂಲವಾಗಿದೆ. ಈ ಹಿಂದೆ ರೈಲ್ವೆ ಸಚಿವರಾದ ಅಶ್ವಿನ್ ವೈಷ್ಣವ್ ರನ್ನು ಭೇಟಿ ಮಾಡಿ ಮೇಲ್ಸೇತುವೆ ನಿರ್ಮಾಣ ಮಾಡಿಕೊಡುವಂತೆ ಲಿಖಿತ ಅರ್ಜಿಯನ್ನು ನೀಡಿದ್ದೆ ಆದರೆ ಕಾಮಗಾರಿಗೆ ಪ್ರಾರಂಭವಾಗದಿರುವುದು ಬೇಸರ ತಂದಿದೆ ಎಂದರು.

> ಬೀರೂರು ರೈಲ್ವೆ ಜಂಕ್ಷನ್ ಸ್ವಚ್ಛತೆಗಾಗಿ 8 ಕೋಟಿ ರೂ. ಬಿಡುಗಡೆ ಮಾಡಿದ್ದು ಖಾಸಗಿ ಕಂಪನಿಗೆ ಗುತ್ತಿಗೆ ನೀಡಲಾಗಿದೆ. ಇದರಿಂದಾಗಿ ನಿಲ್ದಾಣ ಸ್ವಚ್ಛತೆ, ದೀಪ, ಫ್ಯಾನ್ ಶೌಚಾಲಯ, ಕೊಠಡಿಗಳು ದುರಸ್ತಿಯಾಗಲಿವೆ. ಈ ರೈಲ್ವೆ ಕೆಳ ಸೇತುವೆಯ ಕಾಮಗಾರಿಯನ್ನು ಮುಂಬರುವ ಡಿ.26ರೊಳಗೆ ಉದ್ಘಾಟನೆಯಾಗಬೇಕು.
> ■ ವಿ. ಸೋಮಣ್ಣ, ಜಲಶಕ್ತಿ ಸಚಿವ

ಸಭೆಯಲ್ಲಿ ಮಾಜಿ ಶಾಸಕ ಬೆಳ್ಳಿಪ್ರಕಾಶ್, ಮೈಸೂರಿನ ಡಿ.ಆರ್.ಎಂ ಮಧುಸೂದನ್, ಸಿಪಿಆರ್‌ಒ ಮಂಜುನಾಥ್ ಕಲಮಡಿ, ಬೀರೂರು ದೇವರಾಜ್,ಸುರೇಶ್, ಜಿಲ್ಲಾ ಬಿಜೆಪಿ ಅಧ್ಯಕ್ಷ ದೇವರಾಜ ಶೆಟ್ಟಿ ಮಾನಿಕ್ ಭಾಷ, ತಹಸೀಲ್ದಾರ್ ಪೂರ್ಣಿಮ ಸೇರಿದಂತೆ ಅಧಿಕಾರಿಗಳು ಹಾಗೂ ಸಾರ್ವಜನಿಕರು ಇದ್ದರು.

ಉಡುಪಿ –ಚಿಕ್ಕಮಗಳೂರು ಮಾಜಿ ಸಂಸದ ಜಯಪ್ರಕಾಶ್ ಹೆಗ್ಡೆ

ರಾಜಕೀಯದಲ್ಲಿ ಬದಲಾವಣೆ ಸಹಜ

• **ತರೀಕೆರೆ:** ಜನಪರವಾದ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡಿದ್ದೇನೆ. ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾಗಿ ಅತ್ಯಂತ ಯಶಸ್ವಿಯಾಗಿ ಕಾರ್ಯನಿರ್ವಹಣೆ ಮಾಡಿದ್ದೇವೆ ಎಂದು ಉಡುಪಿ–ಚಿಕ್ಕಮಗಳೂರು ಮಾಜಿ ಸಂಸದ ಜಯಪ್ರಕಾಶ್ ಹೆಗ್ಡೆ ತಿಳಿಸಿದರು.

ಅವರು ಪಟ್ಟಣದ ಅರಮನೆ ಹೋಟೆಲ್‌ನಲ್ಲಿ ಭಾನುವಾರ ಪತ್ರಕರ್ತರೊಂದಿಗೆ ಮಾತನಾಡಿದರು.

ಪ್ರತಿನಿತ್ಯ ಜನರು ಯಾವುದಾದರೂ ಕೆಲಸ ಕಾರ್ಯಗಳಿಗೆ, ಸಮಸ್ಯೆಗಳಿಗೆ ಕರೆ ಮಾಡುತ್ತಾರೆ. ಅಂತಹ ಕೆಲಸಗಳನ್ನು ಅತ್ಯಂತ ಮುತುವರ್ಜಿಯಿಂದ ನಿಭಾಯಿಸಲಾಗುತ್ತಿದೆ ಎಂದು ತಿಳಿಸಿದರು.

ಸಿದ್ದರಾಮಯ್ಯನವರು 8 ವರ್ಷ ಮುಖ್ಯಮಂತ್ರಿಯಾಗಿ, 2 ಬಾರಿ ವಿರೋಧ ಪಕ್ಷದ ನಾಯಕರಾಗಿ ಅತ್ಯಂತ ಸಮರ್ಥವಾಗಿ ಕಾರ್ಯ ನಿರ್ವಹಿಸಿದ್ದಾರೆ. ರಾಜಕೀಯದಲ್ಲಿ ಬದಲಾವಣೆಗಳು ಸಹಜವಾಗಿ ನಡೆಯುತ್ತವೆ. ಮುಖ್ಯಮಂತ್ರಿ ಸ್ಥಾನದ ಬದಲಾವಣೆ ಯಾವುದೇ ಗೊಂದಲವಿಲ್ಲದೆ ಸರಾಗವಾಗಿ ನಡೆದಿದೆ. ಯಾರಿಗೂ ನೋವಾಗದಂತೆ, ಸಿದ್ದರಾಮಯ್ಯನವರ ಗೌರವ ಹೆಚ್ಚಾಗುವಂತೆ ನಡೆದುಕೊಳ್ಳಲಾಗಿದೆ. ಜೂನ್ 3 ರಂದು ನೂತನ ಮುಖ್ಯಮಂತ್ರಿಗಳ ಪ್ರಮಾಣ ವಚನ ಕಾರ್ಯಕ್ರಮ ನಡೆಯಲಿದ್ದು, ಡಿ.ಕೆ.ಶಿವಕುಮಾರ್ ನೇತೃತ್ವದ ಸಚಿವ ಸಂಪುಟದಲ್ಲಿ ಚಿಕ್ಕಮಗಳೂರು ಜಿಲ್ಲೆಗೆ ಮಂತ್ರಿ ಸ್ಥಾನ ಸಿಗಲಿ ಎಂದು ತಿಳಿಸಿದರು.



ತರೀಕೆರೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಚ್.ಯು.ಫಾರುಕ್ ಮಾತನಾಡಿ, ಮಾಜಿ ಸಂಸದ ಜಯಪ್ರಕಾಶ್‌ಹೆಗ್ಡೆ ರವರು ಜನಾನುರಾಗಿಯಾಗಿದ್ದು, ಸರಳ ವ್ಯಕ್ತಿತ್ವದ ರಾಜಕಾರಣಿ. ರಾಜಕಾರಣದಲ್ಲಿ ಸಾಕಷ್ಟು ಅನುಭವ ಹೊಂದಿದ್ದಾರೆ. ಪಕ್ಷದ ಹೈಕಮಾಂಡ್ ಜಯಪ್ರಕಾಶ್‌ಹೆಗ್ಡೆ ರವರಿಗೆ ರಾಜ್ಯಸಭಾ ಸದಸ್ಯ ಸ್ಥಾನ ನೀಡಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಪುರಸಭೆ ಮಾಜಿ ಅಧ್ಯಕ್ಷ ಟಿ.ಎಸ್. ಧರ್ಮರಾಜ್, ಕಾಂಗ್ರೆಸ್ ನಗರಾಧ್ಯಕ್ಷ ಪ್ರಕಾಶ್‌ವರ್ಮಾ, ಕಾಂಗ್ರೆಸ್ ಕಿಸಾನ್ ಸೆಲ್ ಅಧ್ಯಕ್ಷ ಗಿರೀಶ್, ಪುರಸಭೆ ಸದಸ್ಯ ಟಿ.ಜಿ.ಮಂಜುನಾಥ್, ಮಾಜಿ ಸದಸ್ಯ ಕೃಷ್ಣ, ರಾಜು ಹಾಗೂ ಇತರರು ಹಾಜರಿದ್ದರು.

29 ಕಿ.ಮೀ. ಹೆದ್ದಾರಿ ಅಭಿವೃದ್ಧಿ ಬಗ್ಗೆ ಚರ್ಚೆ

• **ಶೃಂಗೇರಿ:** ರಾಷ್ಟ್ರೀಯ ಹೆದ್ದಾರಿ 169ರ ತನಿಕೋಡು ಗೇಟ್‌ನಿಂದ ಎಸ್ ಕೆ ಬಾರ್ಡರ್ ಮೂಲಕ ಕಾರ್ಕಳ ತಾಲೂಕಿನ ಮಾಳ ಗೇಟ್ ವರೆಗಿನ 29 ಕಿಮೀ ಹೆದ್ದಾರಿ ಅಭಿವೃದ್ಧಿ ಬಗ್ಗೆ ಸಂಸದ ಕೋಟಾ ಶ್ರೀನಿವಾಸ ಪೂಜಾರಿ ಸ್ಥಳಕ್ಕೆ ಭೇಟಿ ನೀಡಿ ಅಧಿಕಾರಿಗಳೊಂದಿಗೆ ಚರ್ಚಿಸಿದರು.

ಹೆದ್ದಾರಿ ಅಭಿವೃದ್ಧಿಗೆ 550 ಕೋಟಿ ರೂ. ಪ್ರಸ್ತಾವನೆ ಕೇಂದ್ರ ಸರಕಾರದ ಮುಂದಿದ್ದು, ಮಾಳ ಗೇಟ್ ಆರಂಭದಿಂದ ರಸ್ತೆ ಇಕ್ಕೆಲದಲ್ಲಿ ಬರುವ ಅರಣ್ಯ ತೆರವುಗೊಳಿಸಲು ಕಂದಾಯ ಇಲಾಖೆ ಮೂಲಕ ಅರಣ್ಯ ಇಲಾಖೆಗೆ 50 ಎಕರೆ ಭೂಮಿಯನ್ನು ವರ್ಗಾಯಿಸಬೇಕಿದೆ. ಕಡತ ವಿಲೇವಾರಿಗಾಗಿ ಶಿವಮೊಗ್ಗ ಜಿಲ್ಲಾಧಿಕಾರಿಯನ್ನು ಭೇಟಿ ಮಾಡಿ ಚರ್ಚಿಸಲಾಗುತ್ತದೆ.

ಇಲಾಖೆ ಮಾಹಿತಿ ಪ್ರಕಾರ ಹಿಂದೆ ಗುಲಗಂಜಿ ಮನೆ, ಕೊರಕನ ಹಳ್ಳ ಸಹಿತ ಮೂರು ಸೇತುವೆ ಮಂಜೂರಾಗಿದ್ದರೂ ಅರಣ್ಯ ಇಲಾಖೆ ಅನುಮತಿ ದೊರಕದೆ ರದ್ದಾಗಿತ್ತು. ಈ ಬಗ್ಗೆ ಅನುಮತಿ ನಿರೀಕ್ಷಿಸಿ ರಸ್ತೆ ಇಕ್ಕೆಲದಲ್ಲಿ ಗಡಿ ಗುರುತು ಮಾಡಲು ಸೂಚನೆ ನೀಡಲಾಗಿದೆ. ಕಂದಾಯ ಇಲಾಖೆ ಪ್ರಸ್ತಾವಿತ ಭೂಮಿ ಅರಣ್ಯ ಇಲಾಖೆಗೆ ಹಸ್ತಾಂತರಿಸಿದರೆ 1999 ರಿಂದ 25 ವರ್ಷದಿಂದ ನೆನಗುದಿಗೆ ಬಿದ್ದಿರುವ ಮಾಳ ತನಿಕೋಡು ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗೆ ಚಾಲನೆ ದೊರಕಲಿದೆ.



ಯೋಜನೆ ಬಗ್ಗೆ ಪರಿಶೀಲನೆ ನಡೆಸಿದ್ದು, ಶೀಘ್ರದಲ್ಲಿ ಅಭಿವೃದ್ಧಿಗೆ ಚಾಲನೆ ದೊರಕಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಈ ಸಂದರ್ಭದಲ್ಲಿ ರಾಷ್ಟ್ರೀಯ ಹೆದ್ದಾರಿ ವಿಭಾಗದ ನವೀನ್ ರಾಜ್, ಅರಣ್ಯ ಇಲಾಖೆ ಅಧಿಕಾರಿಗಳಾದ ಅರುಣ್, ಸತೀಶ್ ನಾಯಕ್, ಸುಬ್ರಮಣ್ಯ ಇತರರು ಇದ್ದರು.

ಅಡಿಕೆ ಧಾರಣೆ

ಶಿವಮೊಗ್ಗ	ಸಾಗರ
ಸರಕು-43,366-68,919	ರಾಶಿ-31,229-56,669
ರಾಶಿ-43,899-55,799	ಚಾಲಿ-36,099-43,099
ಬೆಟ್ಟೆ-50,160-61,300	ಕೆಂಪುಗೋಟು-16,189-39,009
ಗೊರಬಲು-19,010-41,211	ಬಿಳಿಗೋಟು-20,105-35,499
	ಸಿಪ್ಪೆಗೋಟು-8,099-22,499



ಸಾಗರ ನೂತನ ತಹಶೀಲ್ದಾರ್ ಅಧಿಕಾರ ಸ್ವೀಕಾರ

ಸಾಗರ: ಇಲ್ಲಿನ ತಾಲೂಕು ಕಚೇರಿಗೆ ತಹಶೀಲ್ದಾರ್ ಆಗಿ ಡಾ. ಪ್ರತಿಭಾ ಆರ್. ವರ್ಗಾವಣೆಯಾಗಿ ಬಂದಿದ್ದು, ಶನಿವಾರ ಅಧಿಕಾರ ಸ್ವೀಕಾರ ಮಾಡಿದ್ದಾರೆ.

ಬೆಂಗಳೂರಿನ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಡಾ. ಪ್ರತಿಭಾ ಆರ್. ಉತ್ತಮ ಕೆಲಸ ಮಾಡುವ ಮೂಲಕ ಅಲ್ಲಿ ಹೆಸರು ಗಳಿಸಿದ್ದರು. ಸಾಹಿತ್ಯ, ಸಾಂಸ್ಕೃತಿಕ ಶೈಕ್ಷಣಿಕ ಕ್ಷೇತ್ರದಲ್ಲಿ ಸಾಕಷ್ಟು ಅನುಭವ ಹೊಂದಿರುವ ಅವರು ಸ್ನಾತಕೋತ್ತರ ಪದವಿಯಲ್ಲಿ ಚಿನ್ನದ ಪದಕ ಗಳಿಸಿದ್ದಾರೆ.

ಮೂಲತಃ ತುಮಕೂರಿನವರಾದ ಡಾ. ಪ್ರತಿಭಾ ಶಿಕ್ಷಣ ಇಲಾಖೆ ಯಲ್ಲಿ ವಿಷಯ ಪರಿವೀಕ್ಷಕರಾಗಿ, ಡಯಟ್ ಉಪನ್ಯಾಸಕರಾಗಿ ಕಾರ್ಯನಿರ್ವಹಿಸಿ, ಕೆ.ಎ.ಎಸ್. ತೇರ್ಗಡೆಯಾಗಿ ತಹಶೀಲ್ದಾರ್ ಹುದ್ದೆಗೆ ಏರಿದ್ದಾರೆ. ಕಾರ್ಕಳ, ಕಾಪು ಇನ್ನಿತರ ಕಡೆ ತಹಶೀಲ್ದಾರ್ ಆಗಿ ಒಳ್ಳೆಯ ಕೆಲಸ ಮಾಡಿದ್ದಾರೆ.

2025ರಲ್ಲಿ ಜೀ ಕನ್ನಡ ವಾಹಿನಿ ಕೊಡಮಾಡುವ ವೀರ ಕನ್ನಡತಿ ಪ್ರಶಸ್ತಿಗೆ ಡಾ. ಪ್ರತಿಭಾ ಆರ್. ಭಾಜನರಾಗಿದ್ದಾರೆ. ತಾವು ಕೆಲಸ ಮಾಡಿದ ಸ್ಥಳಗಳಲ್ಲಿ ಸಾಮಾಜಿಕ ಕಳಕಳಿ ಪ್ರದರ್ಶನ ಮಾಡಿದ ಡಾ. ಪ್ರತಿಭಾ ಸಾಗರದಲ್ಲಿ ಉತ್ತಮ ಕೆಲಸ ಮಾಡುವ ಮೂಲಕ ಜನಸೇವೆ ಮಾಡುವುದಾಗಿ ತಿಳಿಸಿದ್ದಾರೆ.

ಕಿರುಸುದ್ದಿ

ಸಿದ್ಧಾರ್ಥ ಕಶ್ಯಪನಿಗೆ ಪ್ರತಿಭಾ ಪುರಸ್ಕಾರ



ಶಿವಮೊಗ್ಗ: ಚಿಕ್ಕಬಳ್ಳಾಪುರದ ಕನ್ನಡ ಭವನದಲ್ಲಿ ಭಾನುವಾರ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದಿಂದ ಆಯೋಜಿಸಿದ್ದ ಸಮಾರಂಭದಲ್ಲಿ ಪತ್ರಕರ್ತರ ಪ್ರತಿಭಾವಂತ ಮಕ್ಕಳನ್ನು ಪುರಸ್ಕರಿಸಲಾಯಿತು. ಎಸ್ ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ 600 ಕ್ಕೂ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ರಾಜ್ಯಮಟ್ಟದ ಪುರಸ್ಕಾರ ನೀಡಲಾಯಿತು. ಇದರಲ್ಲಿ ಶಿವಮೊಗ್ಗ ಜಿಲ್ಲೆಯ ವಿಕಾಸ ಶಾಲೆಯ ವಿದ್ಯಾರ್ಥಿ ಸಿದ್ಧಾರ್ಥ ಕಶ್ಯಪ ಅವರನ್ನು ಪುರಸ್ಕರಿಸಲಾಯಿತು. ಇವರು ಶಿವಮೊಗ್ಗದ ಡಾ.ಮೈತ್ರೇಯಿ ಹಾಗೂ ಆದಿತ್ಯಪ್ರಸಾದ್ ಅವರ ಪುತ್ರ.

ಮರುಪರೀಕ್ಷೆ ಬರೆದು ಸಾಧನೆಗೈದ ಅಭಿಜ್ಞಾ.ಆರ್.ಕಶ್ಯಪ್

ತೀರ್ಥಹಳ್ಳಿ: 2025–26 ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಮರುಮೌಲ್ಯಮಾಪನದಲ್ಲಿ ಹೆಚ್ಚು ಅಂಕ ಬಾರದ ಕಾರಣದಿಂದ ಮರುಪರೀಕ್ಷೆ ಬರೆದ ತಾಲೂಕಿನ ಚಿಟ್ಟೆಬಯಲಿನ ಪ್ರಜ್ಞಾಭಾರತಿ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ವಿದ್ಯಾರ್ಥಿನಿ ಅಭಿಜ್ಞಾ ಆರ್. ಕಶ್ಯಪ್ 618 ಅಂಕ ಪಡೆದು(98.88)ಪಡೆದು ರಾಜ್ಯಕ್ಕೆ 8ನೇ ರ‍್ಯಾಂಕ್ ಪಡೆದುಕೊಂಡಿದ್ದಾಳೆ.



ಈ ವಿದ್ಯಾರ್ಥಿನಿ ಮಾರ್ಚ್ ತಿಂಗಳಲ್ಲಿ ನಡೆದ ಪರೀಕ್ಷೆಯಲ್ಲಿ 578 ಅಂಕ ಪಡೆದಿದ್ದಳು. ನಂತರ ಮರುಮೌಲ್ಯಮಾಪನದಲ್ಲಿ 603 ಅಂಕ ಪಡೆದಳು. ಮತ್ತೆ ಮೇ ತಿಂಗಳಲ್ಲಿ ಮರುಪರೀಕ್ಷೆ ಬರೆದು 618 ಪಡೆಯುವ ಮೂಲಕ ರಾಜ್ಯಕ್ಕೆ 8ನೇ ರ‍್ಯಾಂಕ್ ಜೊತೆಗೆ ತೀರ್ಥಹಳ್ಳಿ ತಾಲೂಕಿಗೆ ಎರಡನೇ ರ‍್ಯಾಂಕ್ ಗಿಟ್ಟಿಸಿಕೊಂಡಿದ್ದಾಳೆ.ಈಕೆ ತಾಲೂಕಿನ ಆರಳಾಪುರ ಸಮೀಪದ ಕರಿಮನೆಯ ಕೆ.ಎಂ. ರಾಘವೇಂದ್ರ, ಶೋಭಿತಾ ದಂಪತಿಗಳ ಪುತ್ರಿಯಾಗಿದ್ದಾಳೆ.

ವಿದ್ಯಾರ್ಥಿ ನಿಲಯಗಳ ಪ್ರವೇಶಾತಿಗಾಗಿ ಅರ್ಜಿ ಆಹ್ವಾನ

ಹೊಸನಗರ: ತಾಲೂಕಿನ ಸಮಾಜ ಕಲ್ಯಾಣ ಇಲಾಖೆಯಿಂದ ಮೆಟ್ರಿಕ್ ಪೂರ್ವ ಬಾಲಕ ಹಾಗೂ ಬಾಲಕಿಯರ ವಿದ್ಯಾರ್ಥಿ ನಿಲಯ ಹೊಸನಗರ ಹಾಗೂ ರಿಪ್ಪನ್‌ಪೇಟೆಗೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಇತರೆ ವಿದ್ಯಾರ್ಥಿಗಳಿಗೆ ಆಹ್ವಾನಿಸಲಾಗಿದೆ. ಅರ್ಜಿಗಳನ್ನು ಜೂನ್ 30ರೊಳಗೆ www.sw.kar.nic.in ನಲ್ಲಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ವಿದ್ಯಾರ್ಥಿ ನಿಲಯಗಳ ವಾರ್ಡನ್ ಅಥವಾ ಸಹಾಯಕ ನಿರ್ದೇಶಕರು, ಸಮಾಜಕಲ್ಯಾಣ ಇಲಾಖೆ, ಹೊಸನಗರ ಸಂಪರ್ಕಿಸಬಹುದು.

ನಗದು ಕಳ್ಳತನ: ಇಬ್ಬರ ಬಂಧನ

ಶಿವಮೊಗ್ಗ: ಮನೆಯಲ್ಲಿಟ್ಟಿದ್ದ ನಗದು ಕಳ್ಳತನ ಮಾಡಿದ್ದ ಟಿಪ್ಪುನಗರದ ಮೊಹಮದ್ ಸಲೀಮ್(27), ಮೊಹಮದ್ ರಜಾಕ್(26) ಇವರನ್ನು ಬಂಧಿಸಿ ಕಳವು ಮಾಡಿದ್ದ 5,13,000 ರೂ. ನಗದು ವಶಪಡಿಸಿ ಕೊಳ್ಳಲಾಗಿದೆ. ಕಾಶಿಪುರ ಲಕ್ಷ್ಮಪ್ಪ ಲೇ ಔಟ್ 2ನೇ ಕ್ರಾಸ್ ನಿವಾಸಿ ಹೆಚ್.ಎಲ್. ಸೋಮಶೇಖರ್ ಇವರ ಮನೆಯಲ್ಲಿ ಮೇ 27ರಂದು ಮಧ್ಯಾಹ್ನವೇ ನಗದು ಕಳವು ಮಾಡಲಾಗಿತ್ತು. ಈ ಸಂಬಂಧ ವಿನೋಬನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಪ್ರಕರಣದ ಪತ್ತೆಗಾಗಿ ರಚಿಸಲಾಗಿದ್ದ ವಿಶೇಷ ಪೊಲೀಸ್ ತಂಡ ಪ್ರಕರಣದ ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದೆ.

ಕಳೆದೆರಡು ಸಭೆಯಲ್ಲೂ ಸಾರ್ವಜನಿಕರಿಂದ ಭಾರೀ ವಿರೋಧ

ನಾಳೆ ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆ ಅಭಿಪ್ರಾಯ ಸಂಗ್ರಹ

ಸತ್ಯನಾರಾಯಣ ತುಂಬಳ್ಳಿ

ದಿಗಂತ ವಿಶೇಷ

ಶಿವಮೊಗ್ಗ: ಬಹುಚರ್ಚಿತ ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಗೆ ಪರಿಸರವಾದಿಗಳು ಮತ್ತು ಸ್ಥಳೀಯರ ವಿರೋಧ ನಡುವೆಯೂ ಇದನ್ನು ಜಾರಿಗೊಳಿಸಲು ರಾಜ್ಯ ಸರ್ಕಾರ ಯತ್ನಿಸುತ್ತಲೇ ಇದ್ದು, ಮತ್ತೊಮ್ಮೆ ಸಾರ್ವಜನಿಕರ ಅಭಿಪ್ರಾಯ ಸಂಗ್ರಹಿಸಲು ಸೆಂಟ್ರಲ್ ಎಂಪವರ್‌ಮೆಂಟ್ ಕಮಿಟಿ (ಸಿಇಸಿ) ಮುಂದಾಗಿದೆ.

ಜೂ.2ರಂದು ಜೋಗದ ಜಂಗಲ್ ರೆಸಾರ್ಟ್‌ನಲ್ಲಿ ಸ್ಥಳೀಯರ ಅಭಿಪ್ರಾಯ ಸಂಗ್ರಹಿಸಲಿದ್ದು, ಈ ಸಂಬಂಧ ಸ್ಥಳೀಯರಿಗೆ ಮಾಹಿತಿ ನೀಡಲಾಗಿದೆ. ಸಿಇಸಿ ನಡೆಸುತ್ತಿರುವ 3ನೇ ಸಭೆ ಇದಾಗಿದೆ. ಈಗಾಗಲೇ ಎರಡು ಬಾರಿ ಸಾರ್ವಜನಿಕರ ಅಭಿಪ್ರಾಯ ಸಂಗ್ರಹಿಸಿದ್ದು, ಎರಡೂ ಸಭೆಗಳಲ್ಲಿಯೂ ಸಾರ್ವಜನಿಕರಿಂದ ಭಾರೀ ವಿರೋಧ ವ್ಯಕ್ತವಾಗಿತ್ತು.

ಈ ಸಭೆಗೆ ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳು, ಪರಿಸರವಾದಿಗಳು, ಸ್ಥಳೀಯರು ಪಾಲ್ಗೊಳ್ಳಲಿದ್ದಾರೆ. ಈಗಾಗಲೇ ಸ್ಥಳೀಯರು ಈ ಯೋಜನೆ ಬೇಡವ ಬೇಡ ಎಂದು ಕಡ್ಡಿ ತುಂಡು ಮಾಡಿದಂತೆ ಹೇಳಿದರೆ. ಈ ಯೋಜನೆ ಮಲೆನಾಡು ಅದರಲ್ಲೂ ಪಶ್ಚಿಮ ಘಟ್ಟಕ್ಕೆ ಏಕೆ ಬೇಡ ಎನ್ನುವುದನ್ನು ಕಾರಣ ಸಹಿತ ವಿವರಿಸಿದ್ದಾರೆ.

ಅರಣ್ಯ ಭೂಮಿ ಎಷ್ಟು ನಾಶವಾಗಲಿದೆ, ಎಷ್ಟು ಮರಗಳನ್ನು ಕಡಿಯಬೇಕಾಗುತ್ತದೆ. ಇದರಿಂದ ಸೂಕ್ಷ್ಮ ಪರಿಸರದ ಮೇಲೆ ಯಾವ ರೀತಿ ಹಾನಿಯಗುತ್ತದೆ ಎಂಬುದನ್ನು ವಿವರಿಸಲಾಗಿದೆ. ಅಲ್ಲದೆ ಮರಗಳ ಕಡಿತ ಹಾಗೂ ಸುರಂಗ ನಿರ್ಮಾಣದಿಂದಾಗಿ ಮುಂದಿನ ದಿನಗಳಲ್ಲಿ ಭೂ ಕುಸಿತ ಸಂಭವಿಸಲಿದೆ. ಇದರಿಂದಾಗಿ ಪಶ್ಚಿಮಘಟ್ಟದ ಅಸ್ತಿತ್ವಕ್ಕೆ ಧಕ್ಕೆಯಾಗಲಿದೆ ಎಂಬುದರ ಬಗ್ಗೆಯೂ ದಾಖಲೆ ಸಮೇತ ತಿಳಿಸಲಾಗಿದೆ.

ಅಳಿವಿನ ಅಂಚಿನಲ್ಲಿರುವ ಕೊಂಡಿ ಬಾಲದ ಸಿಂಗಳೀಕ, ಮಂಗಟ್ಟೆ ಹಕ್ಕಿ, ಕಂದಳಿಲು ಸೇರಿದಂತೆ ವಿವಿಧ ಜಾತಿಯ ಪ್ರಾಣಿಗಳ ಆವಾಸ ಸ್ಥಾನವಾಗಿದೆ. ಇವುಗಳನ್ನು ಪರಿಗಣಿಸದೆ ಅಭಿವೃದ್ಧಿ ಯೋಜನೆಗಳನ್ನು ಕೈಗೆತ್ತಿಕೊಂಡರೆ ಈ ಪ್ರಾಣಿ ಹಾಗೂ ಪಕ್ಷಿ ಪ್ರಬೇಧಗಳಿಗೆ ಇನ್ನಷ್ಟು ಹಾನಿಯಾಗಲಿದೆ ಎಂಬ ಅಂಶವನ್ನು ಉಲ್ಲೇಖಿಸಲಾಗಿದೆ.

ಪರಿಸರ ನಾಶ, ಸ್ಥಳೀಯರಿಗೆ ಆಗುವ ತೊಂದರೆ, ಸಾರ್ವಜನಿಕರ ವಿರೋಧ ಮೊದಲಾದವುಗಳನ್ನು ಮುಂದಿಟ್ಟುಕೊಂಡು ಯೋಜನೆಯನ್ನು ಕರ್ನಾಟಕ ಹೈ ಕೋರ್ಟ್‌ನಲ್ಲಿ ಪ್ರಶ್ನಿಸಲಾಗಿತ್ತು. ಅರ್ಜಿ ಪರಿಶೀಲಿಸಿದ ನ್ಯಾಯಾಲಯ ಕೂಡ ಯೋಜನೆಗೆ ಮಧ್ಯಂತರ ತಡೆ ನೀಡಿತ್ತು. ಈ ತಡೆ ಇನ್ನೂ ತೆರವಾಗಿಲ್ಲ, ಹೀಗಿದ್ದರೂ 3ನೇ ಸಭೆ ನಡೆಸುತ್ತಿರುವ ಬಗ್ಗೆಯೇ ಸ್ಥಳೀಯರಲ್ಲಿ ಅನುಮಾನ ಮೂಡುವಂತಾಗಿದೆ.

ಈ ಯೋಜನೆ ಜಾರಿ ಬಗ್ಗೆ ಕೇಂದ್ರ ಅಷ್ಟೊಂದು ಆಸಕ್ತಿ ವಹಿಸಿರಲಿಲ್ಲ, ಪ್ರಧಾನಿ ನರೇಂದ್ರ ಮೋದಿ ಅವರು ಬೆಂಗಳೂರಿಗೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಗೆ ಅನುಮತಿ ನೀಡುವಂತೆ ಹಾಗೂ ಅಗತ್ಯ ಅನುದಾನ ನೀಡುವಂತೆಯೂ ಮನವಿ ಮಾಡಿದ್ದರು.

ಯೋಜನೆ ಜಾರಿಗೆ ರಾಜ್ಯ ಸರ್ಕಾರ ಮೇಲಿಂದ ಮೇಲೆ ಒತ್ತಡ ಹಾಕುತ್ತಿರುವುದರಿಂದಾಗಿ ಕೇಂದ್ರ ಸರ್ಕಾರ ಕೂಡ ಯೋಜನೆ ಜಾರಿಗೆ ಒಲವು ತೋರಿರುವ ಬಗ್ಗೆ ಸ್ಥಳೀಯರು ಅನುಮಾನ ವ್ಯಕ್ತಪಡಿಸಿದ್ದಾರೆ. ಇದರಿಂದಾಗಿಯೇ ಮತ್ತೊಮ್ಮೆ ಅಭಿಪ್ರಾಯ ಸಂಗ್ರಹ ಮಾಡಲು ಸಭೆ ಕರೆಯಲಾಗಿದೆ ಎನ್ನಲಾಗುತ್ತಿದೆ.

ಬೇಡ ಎನ್ನುವವರೇ ಅಧಿಕ!

ಯೋಜನೆ ಜಾರಿ ಸಂಬಂಧ ಈಗಾಗಲೇ ಎರಡು ಬಾರಿ ಎಂಪವರ್‌ಮೆಂಟ್ ಕಮಿಟಿಯವರು ಸಭೆ ನಡೆಸಿದ್ದಾರೆ. ಅಲ್ಲದೆ ತಮ್ಮದೇ ಮೂಲದಿಂದಲೂ ಯೋಜನೆಯಿಂದಾಗುವ ಹಾನಿಯ ಬಗ್ಗೆಯೂ ಮಾಹಿತಿ ಕಲೆ ಹಾಕಿದ್ದಾರೆ. ರಾಷ್ಟ್ರೀಯ ವನ್ಯಜೀವಿ ಮಂಡಳಿ ಕೂಡ ಮಾಹಿತಿ ಕಲೆ ಹಾಕಿದೆ. ಇವುಗಳಲ್ಲೆಲ್ಲಾ ಯೋಜನೆ ಬೇಡ ಎನ್ನುವುದರ ಬಗ್ಗೆಯೇ ಹೆಚ್ಚಿನ ಅಭಿಪ್ರಾಯ ವ್ಯಕ್ತವಾಗಿವೆ. ಯೋಜನೆ ಬೇಕೆಂದು ರಾಜ್ಯ ಸರ್ಕಾರ ಪ್ರತಿಪಾದನೆ ಮಾಡುತ್ತಿದೆಯಾದರೂ ಬೇಡ ಎನ್ನುವವರ ಸಂಖ್ಯೆಯೇ ಅಧಿಕವಾಗಿದೆ.



ಜಿಲ್ಲಾ ಕಸಾಪ ಅಧ್ಯಕ್ಷ ಡಿ. ಮಂಜುನಾಥ

ಪುಸ್ತಕ ಕೊಂಡು ಓದಿ



ಶಿವಮೊಗ್ಗ: ಕನ್ನಡ ಪುಸ್ತಕ ಸಂಸ್ಕೃತಿಯ ಜೊತೆಗೆ ನಮ್ಮ ಭಾಷೆಯನ್ನು ಓದುವ, ಬರೆಯುವ, ಚಿಂತಿಸುವ ಸೃಜನಶೀಲರನ್ನು ರೂಪಿಸಲು ಎಲ್ಲರೂ ಪುಸ್ತಕ ಕೊಂಡು ಓದುವುದನ್ನು ರೂಡಿಸಿಕೊಳ್ಳುವಂತೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಿ. ಮಂಜುನಾಥ ಹೇಳಿದರು.

ಶನಿವಾರ ನಗರದ ಜೆ. ಎಚ್. ಪಟೇಲ್ ಬಡಾವಣೆಯ ಡಿ. ಬ್ಲಾಕ್ ನಲ್ಲಿರುವ ನಿವೃತ್ತ ಮುಖ್ಯೋಪಾಧ್ಯಾಯ ಟಿ. ಮಂಜಪ್ಪ ಅವರ ಮನೆಯಲ್ಲಿ, ಕನ್ನಡ ಪುಸ್ತಕ ಪ್ರಾಧಿಕಾರದ ಜಿಲ್ಲಾ ಜಾಗೃತ ಸಮಿತಿ ಮತ್ತು ಜಿಲ್ಲಾ ಕನ್ನಡ ಸಾಹಿತ್ಯ ಸಾಂಸ್ಕೃತಿಕ ವೇದಿಕೆ ಸಹಯೋಗದಲ್ಲಿ ಮನೆಗೊಂದು ಗ್ರಂಥಾಲಯ ಅನುಷ್ಠಾನ ಸಮಾರಂಭವನ್ನು ಗಿಡಕ್ಕೆ ನೀರೆರದು ಉದ್ಘಾಟಿಸಿ ಮಾತನಾಡಿದರು.

ಪುಸ್ತಕ ಓದುವ ಸಂಸ್ಕೃತಿ ಕ್ಷೀಣಿಸುತ್ತಿರುವ ಇಂದಿನ ದಿನಗಳಲ್ಲಿ ಇಂತಹ ಕಾರ್ಯಕ್ರಮಗಳು ಓದುಗರಿಗೆ ಉತ್ತೇಜನ ನೀಡಲಿವೆ. ಪ್ರತೀ ವರ್ಷ ಸಾ ವಿರಾರು ಪುಸ್ತಗಳು ಪ್ರಕಟವಾಗುತ್ತಿವೆ. ಅವುಗಳಲ್ಲಿ ಎಷ್ಟು ಮಾರಾಟವಾಗುತ್ತಿವೆ ಎಂಬುದು ಕೂಡ ಗಮನಾರ್ಹವಾಗಿದೆ. ಪುಸ್ತಕಗಳನ್ನು ಓದುವ ಮೊದಲು ಖರೀದಿ ಮಡುವ ಹವ್ಯಾಸ ಇರಬೇಕು. ಆಗ ಮಾತ್ರ ಓದಲು ಸಾಧ್ಯ ಎಂದರು.

ಮುಖ್ಯ ಅತಿಥಿಗಳಾದಹೊಳೆಹೊನ್ನೂರು ಸ್ವಾಮಿ ವಿವೇಕಾನಂದ ಲಯನ್ಸ್ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲ ಎಸ್. ರಂಗನಾಥಯ್ಯ ಮಾತನಾಡಿ, ಮನೆಗೊಂದು ಗ್ರಂಥಾಲಯ ಶೀರ್ಷಿಕೆಯೆ ಒಂದು ವಿಸ್ಮಯ. ಮನೆಯಲ್ಲಿ ಒಂದು ಗ್ರಂಥಾಲಯ ಆರಂಭವಾದರೆ, ಓದುವ ಸಂಸ್ಕೃತಿ ತಲೆತಲಾಂತರಕ್ಕೆ ಸಾಗಿಬರುತ್ತದೆ ಎಂದರು.

ಸಾಹಿತ್ಯ ಸಮಾಜದಲ್ಲಿ ಮಾನವೀಯತೆ, ಪ್ರೀತಿ, ಮೌಲ್ಯಗಳ ಪ್ರಭಾವ ಬೀರುತ್ತದೆ ಮತ್ತು ಮನಸ್ಸು ಕ್ರಿಯಾಶೀಲಗೊಳ್ಳುತ್ತದೆ. ಒಂದು ತಿಂಗಳಲ್ಲಿ ಒಂದು ಪುಸ್ತಕ ಕೊಂಡು ಓದುವುದನ್ನು ಆರಂಭ ಮಾಡಿ. ಓದಿನ ನಂತರ ಕೊನೆಯ ಪುಟದಲ್ಲಿ ದಿನಾಂಕ ಬರೆಯಿರಿ. ಆ ಒಂದು ಪುಸ್ತಕದಿಂದಲೇ ನಿಮ್ಮ ಮನೆಯ ಗ್ರಂಥಾಲಯ ಆರಂಭವಾಗಲಿ ಎಂದರು.

ಜಿಲ್ಲಾ ವಾರ್ತಾಧಿಕಾರಿ ಆರ್. ಮಾರುತಿ ಮಾತನಾಡಿ, ನಮ್ಮ ಭಾಷೆಯನ್ನು ನಾವು ಬಳಸದಿದ್ದರೆ ಅದು ನಾಶದತ್ತ ಹೋಗುತ್ತದೆ. ಪುಸ್ತಕ ಓದು, ನಮ್ಮ ಚಿಂತನೆಗೆ ಹೇರಳ ಶಬ್ದ ಸಂಪತ್ತು ಒದಗಿಸುತ್ತದೆ. ಓದಲು ಬರೆಯಲು ಸಮಯವಿಲ್ಲ ಎನ್ನುವವರು ಮೊಬೈಲ್ ಜೊತೆ ಸಮಯ ಕಳೆಯುವುದು ನೋಡುತ್ತಿದ್ದೇವೆ. ಮನೆಗೊಂದು ಗ್ರಂಥಾಲಯ ಅತ್ಯುತ್ತಮ ಯೋಜನೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಉಪಾಧ್ಯಕ್ಷ ಶಿಕಾರಿಪುರದ ಕೆ.ಎಸ್. ಹುಚ್ಚರಾಯಪ್ಪ ಮಾತನಾಡಿದರು. ವಿಶ್ರಾಂತ ಮುಖ್ಯಶಿಕ್ಷಕ ಟಿ. ಮಂಜಪ್ಪ ಅಧ್ಯಕ್ಷತೆ ವಹಿಸಿದ್ದರು. ನಿರ್ಮಲ ಅವರು ಉಪಸ್ಥಿತರಿದ್ದರು. ಇದೇ ವೇಳೆ ಅತಿಥಿಗಳು ಜಗದ ಬೆಳಕು ಬುದ್ಧ ಕವನ ಪ್ರತಿ ಬಿಡುಗಡೆ ಮಾಡಿದರು.

ಉಚಿತ ಕಣ್ಣಿನ ತಪಾಸಣೆ



ಹೊಸನಗರ: ಇಲ್ಲಿನ ಸೀತಾರಾಮಚಂದ್ರ ಸಭಾಭವನದ ಆವರಣದಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘ, ಶಿವಮೊಗ್ಗದ ದಿವ್ಯದೃಷ್ಟಿ ಕಣ್ಣಿನ ಆಸ್ಪತ್ರೆ ಹಾಗೂ ಹೊಸನಗರದ ಕೋಟೆಗಾರ್ ವಿದ್ಯಾವರ್ಧಕ ಸಂಘದ ಸಂಯುಕ್ತಆಶ್ರಯದಲ್ಲಿ ವಿಶೇಷ ಸುಸಜ್ಜಿತ ಸಂಚಾರಿ ವಾಹನದ ಸೌಲಭ್ಯದಿಂದ ಉಚಿತ ಕಣ್ಣಿನ ತಪಾಸಣೆ ಕಾರ್ಯಕ್ರಮವನ್ನು ನಡೆಯಿತು.

167 ಜನರ ಕಣ್ಣಿನ ತಪಾಸಣೆ ನಡೆಸಿ ಕೆಲವರಿಗೆ ಉಚಿತ ಕನ್ನಡಕ ವಿತರಿಸಿದರು. ಈ ಸಂದರ್ಭದಲ್ಲಿ ಕೋಟೆಗಾರ್ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಶಶಿಧರ್ ನಾಯ್ಕ್, ಹಾಲು ಉತ್ಪಾದಕರ ಸಂಘದ ಅಧ್ಯಕ್ಷ ಹೆಚ್.ಜಿ. ಪ್ರವೀಣ್‌ಕುಮಾರ್, ಕೋಟೆಗಾರ್ ಯುವಕ ಸಂಘದ ಮಾವಿನಕೊಪ್ಪ ಸತೀಶ್, ಪ್ರಧಾನ ಕಾರ್ಯದರ್ಶಿ ಕೆ.ಜಿ. ನಾಗೇಶ್, ಹೆಚ್. ಶ್ರೀನಿವಾಸ್, ಎಂಪಿಎಂ ನಾರಾಯಣ, ವಾಸಂತಿ, ದಿವ್ಯ ಪ್ರವೀಣ್ ಇನ್ನೂ ಮುಂತಾದವರು ಉಪಸ್ಥಿತರಿದ್ದರು.

ಬಂಟರ ಯಾನೆ ನಾಡವರ ಸಂಘದ ತಾಲೂಕು ಅಧ್ಯಕ್ಷ ದಿವಾಕರ ಶೆಟ್ಟಿ

ಸಂಘದ ಏಳಿಗೆಗೆ ಕ್ರಿಯಾಶೀಲತೆಯ ಕೆಲಸ ಅತ್ಯಗತ್ಯ



ಹೊಸನಗರ: ಯಾವುದೇ ಸಂಘ ಸಂಸ್ಥೆಗಳು ಯಶಸ್ವಿಯಾಗಲು ಸಂಘದ ಸದಸ್ಯರ ಕ್ರಿಯಾ ಶೀಲತೆ ಪ್ರಮುಖ ಪಾತ್ರ ವಹಿಸುತ್ತದೆ. ಕ್ರಿಯಾಶೀಲತೆ ಇಲ್ಲವಾದರೆ ಸಂಘ–ಸಂಸ್ಥೆಗಳನ್ನು ಬೆಳೆಸುವುದು ಅಸಾಧ್ಯ ಎಂದು ಬಂಟರ ಯಾನೆ ನಾಡವರ ಸಂಘದ ತಾಲೂಕು ಅಧ್ಯಕ್ಷ ದಿವಾಕರ ಶೆಟ್ಟಿ ಹೇಳಿದರು.

ಇಲ್ಲಿನ ಗಣಪತಿ ದೇವಸ್ಥಾನದ ಸಭಾಂಗಣದಲ್ಲಿ ಭಾನುವಾರ ಏರ್ಪಡಿಸಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಹಾಗೂ ವಿವಿಧ ಕ್ಷೇತ್ರಗಳನ್ನು ದುಡಿದ ಸಾಧಕರನ್ನು ಸನ್ಮಾನಿಸುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಸಂಘದ ಧ್ಯೇಯೋದ್ದೇಶಗಳು ಸಮುದಾಯದ ಅಭಿವೃದ್ಧಿಗೆ ಪೂರಕವಾಗಿರುತ್ತವೆ. ಅದಕ್ಕೆ ತಕ್ಕಂತೆ ಸದಸ್ಯರು, ಪದಾಧಿಕಾರಿಗಳು ಕಾರ್ಯೋನ್ಮುಖವಾದಾಗ ಗುರಿ ತಲುಪಲು ಸಾಧ್ಯವಿದೆ. ಈ ನಿಟ್ಟಿನಲ್ಲಿ ಅದರಲ್ಲಿಯೂ ವಿಶೇಷವಾಗಿ ಯುವಪೀಳಿಗೆ ಹೆಚ್ಚಿನ ಆಸಕ್ತಿ ವಹಿಸಬೇಕೆಂದು ಕರೆ ನೀಡಿದರು.

ಸಂಘದ ಉಪಾಧ್ಯಕ್ಷ ನಗರ ಚಂದ್ರಶೇಖರ ಶೆಟ್ಟಿ ಮಾತನಾಡಿ, ಸಂಘವು ಪ್ರತಿವರ್ಷವೂ ಪ್ರತಿಭಾನ್ವಿತ ಮಕ್ಕಳನ್ನು ಗೌರವಿಸುವ ಮೂಲಕ ಅವರಿಗೆ ಇನ್ನಷ್ಟು ಸಾಧಿಸುವ ಮನೋಭಾವ ಬೆಳೆಸುವಲ್ಲಿ ಆಸಕ್ತಿ ಮೂಡಿಸುವ ಕೆಲಸ ಮಾಡುತ್ತಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಯಾವುದೇ ಸದಸ್ಯರಿಗೆ ಕಟ್ಟಿದ ಸಂಘ ಸಂಸ್ಥೆಗಳನ್ನು ಬೆಳೆಸಿಕೊಂಡು ಹೋಗುವ ಪರಿಜ್ಞಾನವೇ ಇಲ್ಲವಾಗಿರುವುದು ದುರ ದುಷ್ಟಕರ ಸಂಗತಿಯಾಗಿದೆ. ಶೈಕ್ಷಣಿಕವಾಗಿ ಸಂಘ ಬೆಳೆಯಲು ಬೆಳೆಸಲು ಸಾಕಷ್ಟು ಅವಕಾಶಗಳು ಇದೆ. ಅವುಗಳನ್ನು ಸರಿಯಾದ ರೀತಿಯಲ್ಲಿ ಬಳಸಿಕೊಳ್ಳಬೇಕು ಎಂದರು.

ಪ್ರಾಸ್ತಾವಿಕ ಮಾತನಾಡಿದ ಸಂಪೆಕಟ್ಟೆ ಚಂದ್ರಶೇಖರ ಶೆಟ್ಟಿ, ಸಂಘದ ಕಾರ್ಯ ಚಟುವಟಿಕೆಗಳನ್ನು ನಡೆಸಲು ತಾಲೂಕು ಕೇಂದ್ರದಲ್ಲಿ ಜಾಗ ಮತ್ತು ಕಟ್ಟಡ ನಿರ್ಮಾಣ ಆಗಬೇಕಿದೆ. ನಾವು ಬಂಟರ ಯಾನೆ ನಾಡವರ ಸಂಘ ಹೊಸನಗರ ತಾಲೂಕಿನಲ್ಲಿ ಕಟ್ಟಿ ಸುಮಾರು ಇಪ್ಪತ್ತು ವರ್ಷಗಳು ಕಳೆದಿದೆ. ಎಲ್ಲ ಸರ್ಕಾರಗಳಿಗೂ ಹಾಗೂ ಶಾಸಕರುಗಳ ಗಮನಕ್ಕೂ ಈಗಾಗಲೇ ತರಲಾಗಿದೆ. ಸರಕಾರಗಳಿಗೆ ಹಲವು ಬಾರಿ ಮನವಿ ಸಲ್ಲಿಸಿದರೂ ಉಪಯೋಗವಾಗಿಲ್ಲ. ನಮ್ಮ ಸಂಘದಿಂದ ಆರ್ಥಿಕವಾಗಿ ಹಿಂದುಳಿದವರ ಕುಟುಂಬಗಳನ್ನು ಗುರುತಿಸಿ ಆರ್ಥಿಕ ನೆರವು ನೀಡುತ್ತಾ ಬರಲಾಗುತ್ತಿದೆ ಎಂದರು.

ಜಿಲ್ಲಾ ಜನಜಾಗೃತಿ ವೇದಿಕೆ ಅಧ್ಯಕ್ಷ ಮೋಹನ ಶೆಟ್ಟಿ, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಕರುಣಾಕರ ಶೆಟ್ಟಿ ಮಾತನಾಡಿದರು. ನಿವೃತ್ತ ಸಿಆರ್‌ಪಿಎಫ್ ಯೋಧ ಮೋಹನ ಶೆಟ್ಟಿ, ನಿವೃತ್ತ ಸರಕಾರಿ ನೌಕರ ಕಿಶೋರಕುಮಾರ್ ಅವರನ್ನು ಸನ್ಮಾನಿಸಲಾಯಿತು. ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಗಳಲ್ಲಿ ಉತ್ತಮ ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು.

ಈ ಸಂದರ್ಭದಲ್ಲಿ ದೇವಗಂಗೆ ಚಂದ್ರಶೆಟ್ಟಿ, ನಿವೃತ್ತ ಶಿಕ್ಷಕ ರಾಮಣ್ಣಶೆಟ್ಟಿ, ಉದ್ಯಮಿ ವಿಜಯ ಶೆಟ್ಟಿ, ಶರತ್ ಶೆಟ್ಟಿ, ಭಾಸ್ಕರ ಶೆಟ್ಟಿ, ನವೀನ ಶೆಟ್ಟಿ, ಶಶಿಕಲ ಶೆಟ್ಟಿ, ಕೋಡೂರು ಸುರೇಶ್ ಶೆಟ್ಟಿ, ನಾಗರಕೋಡಿಗೆ ಸುರೇಶ್ ಶೆಟ್ಟಿ, ನಂದಿನಿ ರಮೇಶ್‌ಶೆಟ್ಟಿ ಮತ್ತಿತರರಿದ್ದರು. ಮಾಲಾಶ್ರೀ ಕಾರ್ಯಕ್ರಮ ನಿರೂಪಿಸಿದರು.

ಸಾಗರ ಸರ್ಕಾರಿ ಪಪೂ ಕಾಲೇಜು ಪ್ರಾಚಾರ್ಯರಾಗಿ ಪರಮೇಶ್ವರಪ್ಪ

ಸಾಗರ: ಇಲ್ಲಿನ ಸರ್ಕಾರಿ ಪದವಿಪೂರ್ವ ಕಾಲೇಜಿನ ಪ್ರಾಚಾರ್ಯರಾಗಿ ಜಿ. ಪರಮೇಶ್ವರಪ್ಪ ಶನಿವಾರ ಅಧಿಕಾರ ವಹಿಸಿಕೊಂಡಿದ್ದಾರೆ.

ಸಾಗರದ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಅರ್ಥಶಾಸ್ತ್ರ ವಿಭಾಗದ ಉಪನ್ಯಾ ಸಕರಾಗಿ ಕೆಲಸ ಮಾಡುತ್ತಿದ್ದು, ಸರ್ಕಾರಿ ನೌಕರರ ಸಂಘದ ಅಧ್ಯಕ್ಷರಾಗಿ ಸಹ ಐದು ವರ್ಷಗಳ ಕಾಲ ಸೇವೆ ಸಲ್ಲಿಸಿದ್ದು, ಹಾಲಿ ಸರ್ಕಾರಿ ನೌಕರರ ಸಂಘದ ಸದಸ್ಯರಾಗಿದ್ದಾರೆ. ಇದರ ಜೊತೆಗೆ ಉಪನ್ಯಾಸಕ ಸಂಘ ಸೇರಿದಂತೆ ತಾಲೂಕಿನ ಬೇರೆಬೇರೆ ಸಂಘಟನೆಗಳಲ್ಲಿ ಸಹ ಜಿ. ಪರಮೇಶ್ವರ್ ಸಕ್ರಿಯವಾಗಿ ತೊಡಗಿ ಸಿಕೊಂಡಿದ್ದಾರೆ.

ಶನಿವಾರ ಪ್ರಾಚಾರ್ಯರಾಗಿ ಅಧಿಕಾರಿ ಸ್ವೀಕರಿಸಿ ಮಾತನಾಡಿದ ಅವರು, ರಾಜ್ಯದಲ್ಲಿ ಸರ್ಕಾರಿ ಪದವಿಪೂರ್ವ ಕಾಲೇಜು ಉತ್ತಮ ಹೆಸರು ಗಳಿಸಿದೆ. ಅತಿಹೆಚ್ಚಿನ ವಿದ್ಯಾರ್ಥಿ ಗಳನ್ನು ಹೊಂದಿರುವ ಜೊತೆಗೆ ದ್ವಿತೀಯ ಪಿಯುಸಿಯಲ್ಲಿ ಹೆಚ್ಚು ಫಲಿತಾಂಶ ಬರುತ್ತಿದ್ದು, ಅತ್ಯುನ್ನತ ಶ್ರೇಣಿಯೂ ಉತ್ತಮವಾಗಿ ಬರುತ್ತಿದೆ. ಈ ಕಾಲೇಜಿನಲ್ಲಿಯೆ ಶಾಸಕರು ವಿದ್ಯಾಭ್ಯಾಸ ಮಾಡಿದ್ದು ಕಾಲೇಜಿನ ಅಭಿವೃದ್ದಿಗೆ ಹೆಚ್ಚಿನ ಆದ್ಯತೆ ನೀಡುತ್ತಿದ್ದಾರೆ. ಶಾಸಕರ ಮಾರ್ಗದರ್ಶನದಲ್ಲಿ ಮುಂದಿನ ವರ್ಷ ದ್ವಿತೀಯ ಪಿಯುಸಿಯಲ್ಲಿ ಅತಿ ಹೆಚ್ಚಿನ ಫಲಿತಾಂಶ ತರಲು ಪ್ರಯತ್ನಿಸಲಾಗುತ್ತದೆ. ಪ್ರವೇಶಾತಿ ಪ್ರಾರಂಭವಾಗಿದ್ದು, ಪೋಷಕರು ತಮ್ಮ ಮಕ್ಕಳನ್ನು ಸರ್ಕಾರಿ ಪದವಿಪೂರ್ವ ಕಾಲೇಜಿಗೆ ಸೇರಿಸುವ ಮೂಲಕ ಸಹಕಾರ ನೀಡಬೇಕು ಎಂದು ಮನವಿ ಮಾಡಿದರು.



ಈ ಸಂದರ್ಭದಲ್ಲಿ ಸತ್ಯನಾರಾಯಣ್, ಎಲ್. ಎಂ.ಹೆಗಡೆ, ಡಾ. ಸರ್ಫ್ರಾಜ್ ಚಂದ್ರಗುತ್ತಿ, ಡಾ. ದೇವೇಂದ್ರಪ್ಪ, ವಿ.ಸಿ.ಪಾಟೀಲ್ ಇನ್ನಿತರರಿದ್ದರು.

ಜಿಲ್ಲೆಯ ವಿವಿಧೆಡೆ ಮರಳು, ವಾಹನ ವಶಪಡಿಸಿಕೊಂಡ ಲೋಕಾಯುಕ್ತ ತಂಡ | ಏಕಕಾಲಕ್ಕೆ ದಾಳಿ

ಅಕ್ರಮ ಮರಳು ಗಣಿಗಾರಿಕೆ ವಿರುದ್ಧ ಕಾರ್ಯಾಚರಣೆ

ಶಿವಮೊಗ್ಗ: ಜಿಲ್ಲೆಯ ವಿವಿಧೆಡೆ ನಡೆಯುತ್ತಿದ್ದ ಅಕ್ರಮ ಮರಳು ಗಣಿಗಾರಿಕೆ, ಸಂಗ್ರಹಣೆ ಮತ್ತು ಸಾಗಾಣಿಕೆ ದಂಧೆಯ ವಿರುದ್ಧ ಕರ್ನಾಟಕ ಲೋಕಾಯುಕ್ತ ಇಲಾಖೆಯು ಶನಿವಾರ ಬೃಹತ್ ಕಾರ್ಯಾಚರಣೆ ನಡೆಸಿದ್ದು, ಕೋಟ್ಯಂತರ ರೂ. ಮೌಲ್ಯದ ಮರಳು ಹಾಗೂ ವಾಹನಗಳನ್ನು ವಶಪಡಿಸಿಕೊಂಡಿದೆ.

ಶಿವಮೊಗ್ಗ, ಭದ್ರಾವತಿ, ತೀರ್ಥಹಳ್ಳಿ, ಸಾಗರ ಮತ್ತು ಹೊಸನಗರ ತಾಲೂಕುಗಳಲ್ಲಿ ಹರಿಯುವ ತುಂಗ, ಭದ್ರಾ ಮತ್ತು ಶರಾವತಿ ನದಿ ಪಾತ್ರದ ಸ್ಥಳಗಳಲ್ಲಿ ವ್ಯಾಪಕವಾಗಿ ಅಕ್ರಮ ಮರಳು ದಂಧೆ ನಡೆಯುತ್ತಿರುವ ಕುರಿತು ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡಿದ್ದ ಕರ್ನಾಟಕ ಲೋಕಾಯುಕ್ತ ಅಧಿಕಾರಿಗಳು ಕಾರ್ಯಾಚರಣೆ ನಡೆಸಿದ್ದಾರೆ.

ಈ ಸಂಬಂಧ ಸ್ಥಳ ಪರಿಶೀಲನೆ ನಡೆಸಲು ಹಾಗೂ ಜಿಲ್ಲಾ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಹಿರಿಯ ಭೂ ವಿಜ್ಞಾನಿಗಳ ಕಚೇರಿಯ ದಾಖಲಾತಿಗಳನ್ನು ಪರಿಶೀಲಿಸುವಂತೆ ಲೋಕಾಯುಕ್ತರು ಆದೇಶಿಸಿದ್ದರು.



25 ಕಡೆ ಏಕಕಾಲದಲ್ಲಿ ದಾಳಿ: ಲೋಕಾಯುಕ್ತ ಆದೇಶದ ಹಿನ್ನೆಲೆಯಲ್ಲಿ, ಲೋಕಾಯುಕ್ತ ಪೊಲೀಸ್ ಅಧೀಕ್ಷಕ ಎಂ.ಎಸ್. ಕೌಲಾಪುರೆ ಹಾಗೂ ಪೊಲೀಸ್ ಉಪಾಧೀಕ್ಷಕ ಬಿ.ಪಿ. ಚಂದ್ರಶೇಖರ್ ಅವರ ಮಾರ್ಗದರ್ಶನ ಮತ್ತು ಮೇಲ್ವಿಚಾರಣೆಯಲ್ಲಿ ಬೃಹತ್ ತಂಡವನ್ನು ರಚಿಸಲಾಗಿತ್ತು. ಕರ್ನಾಟಕ ಲೋಕಾಯುಕ್ತದ ವಿವಿಧ ಘಟಕಗಳನ್ನೊಳಗೊಂಡ 15 ಪ್ರತ್ಯೇಕ ತಂಡಗಳು ಜಿಲ್ಲೆಯ 25ಕ್ಕೂ ಹೆಚ್ಚು ಅಕ್ರಮ ಮರಳು ತಾಣಗಳ ಮೇಲೆ ಶನಿವಾರ ಏಕಕಾಲದಲ್ಲಿ ದಾಳಿ ನಡೆಸಿವೆ.

ಮರಳು, ವಾಹನಗಳು ವಶಕ್ಕೆ: ಈ ಕಾರ್ಯಾಚರಣೆಯಲ್ಲಿ 17,000 ಮೆಟ್ರಿಕ್ ಟನ್ ಅಕ್ರಮ ಮರಳು ಸಂಗ್ರಹಣೆಯನ್ನು ಪತ್ತೆ ಮಾಡಲಾಗಿದೆ. ಇದರೊಂದಿಗೆ ಮರಳು ಗಣಿಗಾರಿಕೆ ಮತ್ತು ಸಾಗಾಣಿಕೆಗೆ ಬಳಸಲಾಗುತ್ತಿದ್ದ ಜೆಸಿಬಿ, ಹಿಟಾಚಿ, ಟಿಪ್ಪರ್ ಲಾರಿಗಳು, ಟ್ರ್ಯಾಕ್ಟರ್‌ಗಳು, ಬೋಟ್‌ಗಳು ಹಾಗೂ ಮರಳು ಫಿಲ್ಟರ್ ಮಾಡುವ ಯಂತ್ರಗಳು ಸೇರಿದಂತೆ ಒಟ್ಟು 52 ವಾಹನ, ಪರಿಕರಗಳನ್ನು ವಶಪಡಿಸಿಕೊಳ್ಳಲಾಗಿದೆ.

ಹಿರಿಯ ಭೂ ವಿಜ್ಞಾನಿಗಳು, ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಕಚೇರಿಯ ಮೇಲೂ ಶೋಧನಾ ವಾರೆಂಟ್ ಅಡಿಯಲ್ಲಿ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿ, ಕಚೇರಿಯ ಪ್ರಮುಖ ದಾಖಲೆಗಳನ್ನು ತೀವ್ರ ಪರಿಶೀಲನೆಗೆ ಒಳಪಡಿಸಿದ್ದಾರೆ.

ಜಂಟಿ ಕ್ರಮಕ್ಕೆ ಸೂಚನೆ: ಅಕ್ರಮ ಮರಳು ದಂಧೆಯಲ್ಲಿ ತೊಡಗಿರುವವರ ವಿರುದ್ಧ ಕಾನೂನು ರೀತ್ಯಾ ಕಠಿಣ ಕ್ರಮ ಕೈಗೊಳ್ಳುವಂತೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಕಂದಾಯ ಇಲಾಖೆ, ಪೊಲೀಸ್ ಇಲಾಖೆ, ಆರ್.ಟಿ.ಓ, ಅರಣ್ಯ ಇಲಾಖೆ, ಸಹಾಯಕ ಭೂ ದಾಖಲಾತಿ ಇಲಾಖೆ, ಪರಿಸರ ಮಾಲಿನ್ಯ ಮತ್ತು ನಿಯಂತ್ರಣ ಇಲಾಖೆ ಹಾಗೂ ಪಿ.ಡಬ್ಲ್ಯೂ.ಡಿ ಇಲಾಖೆಗಳಿಗೆ ಲೋಕಾಯುಕ್ತರು ಸೂಚನೆ ನೀಡಿದ್ದಾರೆ.

ಈ ಜಂಟಿ ಕಾರ್ಯಾಚರಣೆಯಲ್ಲಿ ಶಿವಮೊಗ್ಗ ಮಾತ್ರವಲ್ಲದೆ ದಾವಣಗೆರೆ, ಹಾವೇರಿ, ಚಿಕ್ಕಮಗಳೂರು, ಚಿತ್ರದುರ್ಗ ಮತ್ತು ಬೆಳಗಾವಿ ಜಿಲ್ಲೆಗಳ ಲೋಕಾಯುಕ್ತ ಘಟಕಗಳ ಪೊಲೀಸ್ ಉಪಾಧೀಕ್ಷಕರು, ಪೊಲೀಸ್ ಇನ್ಸ್‌ಪೆಕ್ಟರ್‌ಗಳು ಪಾಲ್ಗೊಂಡಿದ್ದರು.

ಕಿರುಸುದ್ದಿ

ವಸತಿ ಯೋಜನೆಗೆ ಅರ್ಜಿ ಆಹ್ವಾನ

• **ಚಿತ್ರದುರ್ಗ:** ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮದ ವತಿಯಿಂದ ಪರಿಶಿಷ್ಟ ಜಾತಿಯ ಅಲೆಮಾರಿ ಸಮುದಾಯದ ಜನರಿಗೆ ವಸತಿ ಯೋಜನೆಯಡಿ ಮನೆ ನಿರ್ಮಿಸಿಕೊಡಲು ಅರ್ಜಿ ಆಹ್ವಾನಿಸಲಾಗಿದೆ.

ಪರಿಶಿಷ್ಟ ಜಾತಿ ಅಲೆಮಾರಿ ಸಮುದಾಯದವರಿಗೆ ನಿವೇಶನ ಹೊಂದಿದ್ದು, ವಸತಿ ರಹಿತರಾಗಿರುವ ಟೆಂಟ್ ಅಥವಾ ಗುಡಿಸಲುಗಳಲ್ಲಿ ವಾಸಿಸುತ್ತಿರುವ ಅಲೆಮಾರಿ ಕುಟುಂಬಗಳು ಈ ಯೋಜನೆಯ ಪ್ರಯೋಜನ ಪಡೆಯಬಹುದಾಗಿದೆ. ಚಿತ್ರದುರ್ಗ ಜಿಲ್ಲೆಗೆ ಪರಿಶಿಷ್ಟ ಜಾತಿಯ ಸಮುದಾಯದವರಿಗೆ ಒಟ್ಟು 100 ಮನೆಗಳ ನಿರ್ಮಾಣದ ಗುರಿ ನಿಗದಿಪಡಿಸಲಾಗಿದೆ.ಅದರಂತೆ ಚಿತ್ರದುರ್ಗ ತಾಲೂಕು ವ್ಯಾಪ್ತಿಯಲ್ಲಿ ಬರುವ ಎಲ್ಲಾ ಟೆಂಟು/ಗುಡಿಸಲು ನಿರ್ಮಿಸಿಕೊಂಡು ವಾಸಿಸುತ್ತಿರುವ ಪರಿಶಿಷ್ಟ ಜಾತಿ ಅಲೆಮಾರಿ ಸಮುದಾಯದವರು ದಾಖಲಾತಿಗಳೊಂದಿಗೆ ತಾಲೂಕು ಸಮಾಜ ಕಲ್ಯಾಣ ಇಲಾಖೆ, ಶ್ರೀಕಲುಗಲಕ್ಷ್ಮಿ ನಿಲಯ, 3ನೇ ಕ್ರಾಸ್, ಆದಿಶಕ್ತಿ ನಗರ, ಚಳ್ಳಕೆರೆ ರಸ್ತೆ, ಚಿತ್ರದುರ್ಗ ಕಚೇರಿ ಹಾಗೂ ದೂರವಾಣಿ ಸಂಖ್ಯೆ 9480843107 ಸಂಪರ್ಕಿಸಲು ಕೋರಿದೆ.

ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಫಲಾನುಭವಿಗಳು ಸ್ವಂತ ನಿವೇಶನ ಹೊಂದಿರುವುದಕ್ಕೆ ಸಂಬಂಧಿಸಿದ ಹಕ್ಕುಪತ್ರ ಅಥವಾ ಪೂರಕ ದಾಖಲಾತಿ ಪ್ರತಿ, 2 ಪಾಸ್‌ಪೋರ್ಟ್ ಅಳತೆಯ ಇತ್ತೀಚಿನ ಭಾವಚಿತ್ರಗಳು, ಆರ್.ಡಿ ಸಂಖ್ಯೆ ಹೊಂದಿರುವ ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಪಡಿತರ ಚೀಟಿ, ಮತದಾರರ ಗುರುತಿನ ಚೀಟಿ ಹಾಗೂ ಬ್ಯಾಂಕ್ ಖಾತೆಯ ಪಾಸ್‌ಬುಕ್ ನಕಲು ಪ್ರತಿಯನ್ನು ಒದಗಿಸಬೇಕಿರುತ್ತದೆ ಎಂದು ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಗ್ರೇಡ್-1 ಓ.ಪರಮೇಶ್ವರಪ್ಪ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಾಸಕ ಪುಟ್ಟರಂಗಶೆಟ್ಟಿ ಅವರಿಗೆ ಸಚಿವ ಸ್ಥಾನ ನೀಡಲು ಒತ್ತಾಯ

• **ಚಿತ್ರದುರ್ಗ:** ಉಪ್ಪಾರ ಸಮಾಜದ ಸಿ.ಪುಟ್ಟರಂಗಶೆಟ್ಟಿಗೆ ನೂತನ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್‌ರವರ ಸಚಿವ ಸಂಪುಟದಲ್ಲಿ ಮಂತ್ರಿ ಸ್ಥಾನ ನೀಡಬೇಕೆಂದು ಉಪ್ಪಾರ ಸಮಾಜದ ಜಿಲ್ಲಾಧ್ಯಕ್ಷ ಆರ್. ಮೂರ್ತಿ ಒತ್ತಾಯಿಸಿದ್ದಾರೆ.

ಚಾಮರಾಜನಗರದಿಂದ ನಾಲ್ಕನೇ ಬಾರಿಗೆ ಸಿ. ಪುಟ್ಟರಂಗಶೆಟ್ಟಿ ಉಪ್ಪಾರ ಸಮಾಜದಿಂದ ಏಕೈಕ ಶಾಸಕರಾಗಿದ್ದು, ನೂತನ ಸಚಿವ ಸಂಪುಟದಲ್ಲಿ ಮಂತ್ರಿ ಸ್ಥಾನ ನೀಡುವ ಮೂಲಕ ನಮ್ಮ ಜನಾಂಗಕ್ಕೆ ಸಾಮಾಜಿಕ ನ್ಯಾಯ ನೀಡಬೇಕೆಂದು ನೂತನ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಲಿರುವ ಡಿ.ಕೆ. ಶಿವಕುಮಾರ್ ರವರಲ್ಲಿ ಮನವಿ ಮಾಡಿರುವ ಆರ್. ಮೂರ್ತಿ ಹಿಂದಿನಿಂದಲೂ ನಮ್ಮ ಸಮಾಜ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಿಕೊಂಡು ಬರುತ್ತಿದೆ. ರಾಜ್ಯದಲ್ಲಿ ನಲವತ್ತೈದು ಲಕ್ಷಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿರುವ ಉಪ್ಪಾರ ಸಮಾಜ ಮುಂಬರುವ ಎಲ್ಲಾ ಚುನಾವಣೆಗಳಲ್ಲಿಯೂ ಪಕ್ಷಕ್ಕೆ ಮತ ನೀಡಬೇಕಾದರೆ ಸಿ. ಪುಟ್ಟರಂಗಶೆಟ್ಟರವರಿಗೆ ಸಚಿವ ಸ್ಥಾನ ಸಿಗಲೇಬೇಕೆಂದು ಆಗ್ರಹಿಸಿದ್ದಾರೆ.

ಶಾಸಕ ಎ.ಸಿ. ಶ್ರೀನಿವಾಸ್ ಅವರಿಗೆ ಸಚಿವ ಸ್ಥಾನ ನೀಡಿ : ಆರ್.ಶೇಷಣ್ಣಕುಮಾರ್

• **ಚಿತ್ರದುರ್ಗ:** ಭೋವಿ ಸಮುದಾಯದ ಕೋಟಾದಡಿಯಲ್ಲಿ ಪುಲಿಕೇಶಿ ನಗರದ ಶಾಸಕ ಎ.ಸಿ. ಶ್ರೀನಿವಾಸ್ ಅವರಿಗೆ ಕ್ಯಾಬಿನೆಟ್ ದರ್ಜೆ ಸಚಿವ ಸ್ಥಾನ ನೀಡುವಂತೆ ಕಾಂಗ್ರೆಸ್ ವರಿಷ್ಠರನ್ನು ಭೋವಿ ಸಮಾಜದ ಹಿರಿಯ ಮುಖಂಡ ಆರ್.ಶೇಷಣ್ಣಕುಮಾರ್ ಆಗ್ರಹಿಸಿದ್ದಾರೆ. ಕರ್ನಾಟಕ ರಾಜ್ಯ ರಾಜಕಾರಣದ 224 ಎಂಎಲ್‌ಎ ಕ್ಷೇತ್ರಗಳ ಪೈಕಿ ಕನಿಷ್ಠ ಸುಮಾರು 150-160 ಕ್ಷೇತ್ರಗಳಲ್ಲಿ ಭೋವಿ ಸಮಾಜ ಅತ್ಯಂತ ನಿರ್ಣಾಯಕ ಪಾತ್ರ ವಹಿಸುತ್ತಿದೆ. ಆದರೆ ಭೋವಿ ಸಮುದಾಯಕ್ಕೆ ಆಳುವ ಪಕ್ಷಗಳಿಂದ ಸಮರ್ಪಕವಾದ ರಾಜಕೀಯ ಪ್ರಾತಿನಿಧ್ಯ ಸಿಗುತ್ತಿಲ್ಲ, ಶ್ರಮಸಂಸ್ಕೃತಿಯ ರುವಾರಿಗಳೂ ಹಾಗೂ ಅತ್ಯಂತ ಕಠಿಣ ಪರಿಶ್ರಮದ ಮೂಲಕ ನಿಷ್ಠಾವಂತರು ಎನಿಸಿಕೊಂಡಿರುವ ಭೋವಿ ಸಮುದಾಯಕ್ಕೆ ಸಿದ್ದರಾಮಯ್ಯನವರ ಸರ್ಕಾರದ ಅವಧಿಯಲ್ಲಿ ಸಮರ್ಪಕ ನ್ಯಾಯ ಸಿಗದೇ ಭೋವಿ ಸಮುದಾಯದ ಜನರು ಅಕ್ಷರಶಃ ಕಂಗಾಲಾಗಿದ್ದಾರೆ ಎಂದಿದ್ದಾರೆ.

ಭೋವಿ ಸಮಾಜ ಕಾಂಗ್ರೆಸ್ಸಿನ ಶ್ರೇಯಸ್ಸಿಗಾಗಿ ಯಾವ ಪ್ರಚಾರವನ್ನು ಬಯಸದೇ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ದುಡಿಯುತ್ತಿದೆ. ಈ ಹಿಂದಿನ ಸರ್ಕಾರದ ಅವಧಿಯಲ್ಲಿ ನೀಡಿದಂತೆಯೇ ಡಿ.ಕೆ.ಶಿವಕುಮಾರ್ ನೇತೃತ್ವದ ಸರ್ಕಾರದಲ್ಲಿಯೂ ಕ್ಯಾಬಿನೆಟ್‌ನಲ್ಲಿ ಸ್ಥಾನ ನೀಡಬೇಕು. ಭೋವಿ ಸಮುದಾಯದ ಜನರೊಂದಿಗೆ ನಿಕಟ ಸಂಬಂಧ ಹೊಂದಿರುವ ಅಪ್ಪಟ ಕಾಂಗ್ರೆಸ್ಸಿಗರೂ ಹಾಗೂ ನಿಷ್ಠಾವಂತ ಶಾಸಕರೆನಿಸಿಕೊಂಡಿರುವ ಎ.ಸಿ. ಶ್ರೀನಿವಾಸ್‌ರವರಿಗೆ ಭೋವಿ ಸಮುದಾಯದ ಕೋಟಾದಡಿ ಪ್ರಮುಖ ಖಾತೆ ನೀಡಬೇಕೆಂದು ಮನವಿ ಮಾಡಿದ್ದಾರೆ.

ಇಂದು ರೈತರ ಪಾದಯಾತ್ರೆ

• **ಭೀಮಸಮುದ್ರ:** ಗಣಿ ಲಾರಿಗಳು ಓಡಾಡುವುದು ಹಾಗೂ ಸಿಆರ್ ಎಸ್ ಹಣದಲ್ಲಿ ಸಾರ್ವಜನಿಕರಿಗೆ ದೊರಕುವ ಸೌಲಭ್ಯ ನೀಡಲು ಆಗ್ರಹಿಸಿ ಗಣಿಬಾಧಿತ ಪರಿಸರ ಮತ್ತು ಜನ ಬದುಕಿನ ಪುನರ್ಚೇತನ ಹೋರಾಟ ಸಮಿತಿ ಹಾಗೂ ಕರ್ನಾಟಕ ರಾಜ್ಯ ರೈತ ಸಂಘ ಭೀಮಸಮುದ್ರ ರೈತ ಸಂಘದ ವತಿಯಿಂದ ಜೂ.01ರ ಸೋಮವಾರ ಬೆಳಗ್ಗೆ 7ಗಂಟೆಗೆ ಪಾದಯಾತ್ರೆ ಏರ್ಪಡಿಸಲಾಗಿದೆ ಎಂದು ರೈತ ಸಂಘದ ಪ್ರಸನ್ನಕುಮಾರ್ ತಿಳಿಸಿದ್ದಾರೆ.

ಭೀಮಸಮುದ್ರ, ಪಾಳ್ಯ, ಬೊಮ್ಮೇನಹಳ್ಳಿ, ಬೆದರು ಬೊಮ್ಮನಹಳ್ಳಿ, ಮೇಗಳಹಳ್ಳಿ, ಕಡ್ಲೆಗುದ್ದು, ಹಿರೇಗುಂಟನೂರು, ಹಳ್ಳಿಯೂರು, ಮಾನಂಗಿ, ಸಿದ್ದಾಪುರ, ಮಾಳಪ್ಪನಟ್ಟಿ ಮೂಲಕ ಪಾದಯಾತ್ರೆ ಸಾಗಿ ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡಿ ಮನವಿ ಸಲ್ಲಿಸಲಾಗುವುದು ಎಂದು ತಿಳಿಸಿದರು.

ಶ್ರೀ ಕ್ಷೇತ್ರ ಧರ್ಮಸ್ಥಳ ಸಂಸ್ಥೆ ಬಡವರ ಪಾಲಿಗೆ ಸಂಜೀವಿನಿ: ಪ್ರವೀಣ್‌ಕುಮಾರ್

• **ನಾಯಕನಹಟ್ಟಿ:** ಗ್ರಾಮೀಣ ಪ್ರದೇಶದ ಬಡ ಜನರಿಗೆ ಶ್ರೀಕ್ಷೇತ್ರ ಧರ್ಮಸ್ಥಳ ಸಂಸ್ಥೆ ಬಡವರ ಪಾಲಿಗೆ ಸಂಜೀವಿನಿ ಆಗಿದೆ ಎಂದು ಜಿಲ್ಲಾ ನಿರ್ದೇಶಕ ಪ್ರವೀಣ್ ಕುಮಾರ್ ಹೇಳಿದರು.

ಭಾನುವಾರ ಪಟ್ಟಣ ಪಂಚಾಯತಿ ವ್ಯಾಪ್ತಿಯ ಜಾಗನೂರಹಟ್ಟಿ ಗ್ರಾಮದ ಕಾರ್ಯಕ್ಷೇತ್ರದಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆ ವತಿಯಿಂದ ಹಮ್ಮಿಕೊಂಡಿದ್ದ ಒಕ್ಕೂಟದ ಸಭೆಯಲ್ಲಿ ಮಾತನಾಡಿದರು.



ಈ ಪುಣ್ಯಕ್ಷೇತ್ರದಲ್ಲಿ ಕಳೆದ 14 ವರ್ಷದಿಂದ ಸಮಾಜದ ಕಟ್ಟ ಕಡೆಯ ಜನರಿಗೆ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಶೈಕ್ಷಣಿಕವಾಗಿ ಸಬಲೀಕರಣ ಆಗದವರಿಗೆ ಸಮಾಜದ ಮುಖ್ಯ ವಾಹಿನಿಗೆ ತರಬೇಕು. ಬಡವರು ಸ್ವಾವಲಂಬಿ ಜೀವನ ಕಟ್ಟಿಕೊಳ್ಳಲು ಕೃಷಿ ಹೈನುಗಾರಿಕೆ ಸಹ ಉದ್ಯೋಗ ಹೀಗೆ ಅನೇಕ ಯೋಜನೆಗಳ ಮೂಲಕ ಶ್ರೀಕ್ಷೇತ್ರ ಧರ್ಮಸ್ಥಳ ಸಹಕಾರ ನೀಡುತ್ತಾ ಬಂದಿದೆ. ಬಡವರು ತಮ್ಮ ಉತ್ತಮ ಬದುಕು ಕಟ್ಟಿಕೊಳ್ಳಲು ಶ್ರೀಕ್ಷೇತ್ರ ಸಂಜೀವಿನಿಯಾಗಿದೆ ಎಂದರು.

ನಾಯಕನಹಟ್ಟಿ ವಲಯ ಮೇಲ್ವಿಚಾರಕಿ ಆರ್.ಎನ್. ಶಶಿಕಲಾ, ಒಕ್ಕೂಟದ ಅಧ್ಯಕ್ಷೆ ಮಂಜುಳಾ, ಉಪಾಧ್ಯಕ್ಷೆ ಪುಷ್ಪಲತಾ, ಕಾರ್ಯದರ್ಶಿ ಕವಿತಾ, ಜೊತೆ ಕಾರ್ಯದರ್ಶಿ ಸುಜಾತ, ಕೋಶಾಧಿಕಾರಿ ಮಮತಾ, ಸೇವಾ ಪ್ರತಿನಿಧಿ ಮಹಾಂತಮ್ಮ ಇದ್ದರು.

ಶ್ರೀ ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿ

ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ

• **ಚಿತ್ರದುರ್ಗ:** ಪ್ರಕೃತಿ ಮುನಿದರೆ ಮಾನವ ಕುಲಕ್ಕೆ ಉಳಿಗಾಲವಿಲ್ಲ. ಇತ್ತೀಚಿನ ದಿನಗಳಲ್ಲಿ ಜಾಗತಿಕ ತಾಪಮಾನ ದಿನೇ ದಿನೇ ಹೆಚ್ಚಾಗುತ್ತಿದೆ. ಮಳೆ-ಬೆಳೆಗಳು ಸಕಾಲಕ್ಕೆ ಆಗುತ್ತಿಲ್ಲ ಎಂದರೆ ಅದಕ್ಕೆ ನಾವು ಮಾಡುತ್ತಿರುವ ಪರಿಸರ ನಾಶವೇ ಕಾರಣ ಎಂದು ಶ್ರೀಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿ ಹೇಳಿದರು.



ಬಸವಕೇಂದ್ರ, ಶ್ರೀ ಜಗದ್ಗುರು ಮುರುಘ ರಾಜೇಂದ್ರ ಬೃಹನ್ಮಠ, ಎಸ್.ಜೆ.ಎಂ.ವಿದ್ಯಾಪೀಠ ಹಾಗೂ ಎಸ್.ಜೆ.ಎಂ.ವಿಶ್ವವಿದ್ಯಾಲಯದ ವತಿಯಿಂದ ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಆಯೋಜಿಸಲಾಗಿರುವ ಸಸಿ ನೆಡುವ ಸಪ್ತಾಹದಲ್ಲಿ ಎರಡನೆಯ ದಿನದ ಕಾರ್ಯಕ್ರಮದಲ್ಲಿ ಸಾನಿಧ್ಯವಹಿಸಿ ಮಾತನಾಡಿದರು.

ಕೇವಲ ಭಾಷಣಗಳಿಂದ ಪರಿಸರ ಬೆಳೆಯುವುದಿಲ್ಲ, ಪ್ರತಿಯೊಬ್ಬ ನಾಗರಿಕನೂ ವರ್ಷಕ್ಕೆ ಕನಿಷ್ಠ ಎರಡು ಸಸಿಗಳನ್ನಾದರೂ ನೆಟ್ಟು, ಅವುಗಳನ್ನು ಮಕ್ಕಳಂತೆ ಪೋಷಿಸಬೇಕು. ಜೋಗಿಮಟ್ಟಿಯಂತಹ ಸುಂದರ ತಾಣವನ್ನು ಮತ್ತಷ್ಟು ಹಸಿರಾಗಿಸುವುದು ನಮ್ಮೆಲ್ಲರ ಕರ್ತವ್ಯ ಎಂದು ಕರೆ ನೀಡಿದರು.

ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠ ಹಾಗೂ ಎಸ್.ಜೆ.ಎಂ. ವಿದ್ಯಾಪೀಠದ ಆಡಳಿತ ಮಂಡಳಿ ಸದಸ್ಯರಾದ ಡಾ. ಶ್ರೀಬಸವಕುಮಾರ ಸ್ವಾಮೀಜಿ ಮಾತನಾಡಿ, ಗಿಡ-ಮರಗಳೇ ಜೀವಸಂಕುಲದ ನಿಜವಾದ ಆಸ್ತಿ. ನಮ್ಮ ಹಿರಿಯರು ನಮಗೆ ಹಸಿರು ಪರಿಸರವನ್ನು ಉಡುಗೊರೆಯಾಗಿ ನೀಡಿದ್ದರು. ಆದರೆ ನಾವು ಮುಂದಿನ ಪೀಳಿಗೆಗೆ ಕಾಂಕ್ರೀಟ್ ನಾಡನ್ನು ಬಿಟ್ಟು ಹೋಗುತ್ತಿದ್ದೇವೆ. ಇದು ಬದಲಾಗಬೇಕು. ಪ್ರಕೃತಿಯನ್ನು ಆರಾಧಿಸುವ ಸಂಸ್ಕೃತಿ ನಮ್ಮದು. ಈ ಸಸಿ ನೆಡುವ ಸಪ್ತಾಹವು ಕೇವಲ ಒಂದು ವಾರದ ಕಾರ್ಯಕ್ರಮವಾಗದೆ, ನಿರಂತರ ಚಳುವಳಿ ಯಾಗಿ ಶ್ರೀಮಠ ನಡೆಸಿಕೊಂಡು ಹೋಗುತ್ತದೆ ಎಂದು ತಿಳಿಸಿದರು.

ಶಾಸಕ ಡಾ.ಎಂ. ಚಂದ್ರಪ್ಪ ಮಾತನಾಡಿ, ಪರಿಸರ ಸಂರಕ್ಷಣೆಯ ಮಹತ್ವವನ್ನು ಒತ್ತು ನೀಡಬೇಕು. ಸ್ಥಳೀಯ ವಾತಾವರಣಕ್ಕೆ ಪೂರಕವಾದ ಬಯಲು ಸೀಮೆ ಪ್ರದೇಶವಾದ ಚಿತ್ರದುರ್ಗದ ವಾತಾವರಣಕ್ಕೆ ಮತ್ತು ಇಲ್ಲಿನ ಮಣ್ಣಿನ ಗುಣಕ್ಕೆ ಹೊಂದುವಂತಹ ಸಸಿಗಳನ್ನು ಹೆಚ್ಚಾಗಿ ನೆಡಬೇಕು. ಕಾಡಿನ ಪ್ರಾಣಿ ಹಾಗೂ ಪಕ್ಷಿಗಳಿಗೆ ಆಹಾರ ಮತ್ತು ಆಶ್ರಯ ನೀಡುವಂತಹ ಹಣ್ಣಿನ ಹಾಗೂ ನೆರಳು ಕೊಡುವ ಗಿಡಗಳನ್ನು ಬೆಳೆಸುವುದರಿಂದ ಜೀವವೈವಿಧ್ಯತೆಯನ್ನು ಕಾಪಾಡಬಹುದು ಎಂದು ಹೇಳಿದರು.

ಚಿತ್ರದುರ್ಗ ಸೈನ್ಸ್ ಫೌಂಡೇಶನ್ ಕಾರ್ಯದರ್ಶಿ ಹೆಚ್.ಎಸ್.ಟಿ.ಸ್ವಾಮಿ ಮಾತನಾಡಿದರು. ಗುರುಮಿಠಕಲ್ ಶ್ರೀ ಶಾಂತವೀರ ಮುರುಘ ರಾಜೇಂದ್ರ ಸ್ವಾಮೀಜಿ, ಶಿರಸಂಗಿ ಶ್ರೀ ಬಸವಮುರುಘೇಂದ್ರ ಸ್ವಾಮೀಜಿ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ನಾಗೇಂದ್ರ ನಾಯಕ್, ಡಿಹೆಚ್‌ಓ ' ಡಾ.ರೇಣುಪ್ರಸಾದ್, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಂ.ಕೆ.ತಾಜ್‌ಪೀರ್, ಡಾ.ಜೆ.ಜೆ.ಹಟ್ಟಿ ತಿಪ್ಪೇಸ್ವಾಮಿ ಸೇರಿದಂತೆ ವಿವಿಧ ಸಂಘ ಸಂಸ್ಥೆಗಳ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಉಪಸ್ಥಿತರಿದ್ದರು.

> **ಪ್ರಕೃತಿಯನ್ನು ರಕ್ಷಿಸುವುದು ಪ್ರತಿಯೊಬ್ಬ ನಾಗರಿಕನ ಆದ್ಯ ಕರ್ತವ್ಯ. ಪ್ರಸ್ತುತ ಎದುರಾಗುತ್ತಿರುವ ಹವಾಮಾನ ವೈಪರೀತ್ಯ ಹಾಗೂ ಪರಿಸರ ಮಾಲಿನ್ಯವನ್ನು ತಡೆಗಟ್ಟಲು ನಾವೆಲ್ಲರೂ ಸಜ್ಜಾಗಬೇಕಿದೆ. ಇಂದಿನ ಆಧುನಿಕ ಜಗತ್ತಿನಲ್ಲಿ ಪರಿಸರ ಸಮತೋಲನ ಕಾಯ್ದುಕೊಳ್ಳುವುದು ಸವಾಲಿನ ಕೆಲಸವಾಗಿದೆ. ಪರಿಸರವನ್ನು ಮುಂದಿನ ಪೀಳಿಗೆಗಾಗಿ ಉಳಿಸಬೇಕಾದರೆ, ನಮ್ಮ ದೈನಂದಿನ ಜೀವನಶೈಲಿಯಲ್ಲಿ ಬದಲಾವಣೆ ಮಾಡಿಕೊಳ್ಳುವುದು ಅನಿವಾರ್ಯ.**
>
> ■ ಕೆ.ಎಸ್. ನವೀನ್, ವಿಧಾನ ಪರಿಷತ್ ಸದಸ್ಯ

ದೃಷ್ಟಿ ಕಳೆದುಕೊಂಡರೆ ಬದುಕೇ ಕತ್ತಲು: ಚಿತ್ರನಟ ದೊಡ್ಡಣ್ಣ



• **ಚಿತ್ರದುರ್ಗ:** ಕಣ್ಣನ್ನು ಸುರಕ್ಷಿತವಾಗಿ ಕಾಪಾಡಿಕೊಂಡರೆ ಜಗತ್ತನ್ನು ನೋಡಬಹುದು. ದೃಷ್ಟಿ ಕಳೆದುಕೊಂಡರೆ ಬದುಕೆ ಕತ್ತಲಾಗುತ್ತದೆಂದು ಚಿತ್ರರಂಗದ ಹಾಸ್ಯ ನಟ ದೊಡ್ಡಣ್ಣ ತಿಳಿಸಿದರು.

ನಗರದ ಅಹಮದ್ ಪ್ಯಾಲೇಸ್‌ನಲ್ಲಿ ಶನಿವಾರ ಹಮ್ಮಿಕೊಳ್ಳಲಾಗಿದ್ದ ಉಚಿತ ಕಣ್ಣಿನ ತಪಾಸಣೆ, ಶಸ್ತ್ರ ಚಿಕಿತ್ಸೆ ಹಾಗೂ ಉಚಿತ ಕನ್ನಡಕಗಳ ವಿತರಣಾ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು.

ಶಾಸಕ ಕೆ.ಸಿ.ವೀರೇಂದ್ರಪಪ್ಪಿರವರು ತಾಲೂಕಿನ 22 ಪಂಚಾಯಿತಿಗಳಲ್ಲಿ ಉಚಿತ ಕಣ್ಣಿನ ತಪಾಸಣೆಗೆ ಅವಕಾಶ ಕಲ್ಪಿಸಿದ್ದು, ಪ್ರತಿಯೊಬ್ಬರು ತಪಾಸಣೆ ಮಾಡಿಸಿಕೊಂಡು ಅಗತ್ಯವಿದ್ದಲ್ಲಿ ಶಸ್ತ್ರ ಚಿಕಿತ್ಸೆ ಮಾಡಿಸಿಕೊಳ್ಳಿ ಕನ್ನಡಕಗಳನ್ನು ಉಚಿತ ವಾಗಿ ನೀಡಲಾಗುವುದು. ಉದಾಸೀನ ಮಾಡಬೇಡಿ. ಕಣ್ಣಿನ ದೃಷ್ಟಿ ಕಳೆದುಕೊಂಡರೆ ಬದುಕೆ ಕತ್ತಲಾಗುತ್ತದೆ. ವಯಸ್ಸಾದವರಿಗಷ್ಟೆ ಕಣ್ಣಿನ ಪೊರೆ ಬರುವುದಿಲ್ಲ, ಈಗ ಚಿಕ್ಕ ಚಿಕ್ಕ ಮಕ್ಕಳಿಗೂ ಕಣ್ಣಿನಲ್ಲಿ ಪೊರೆ ಬೆಳೆಯುತ್ತದೆ ಎಂದು ಹೇಳಿದರು.

ಕಣ್ಣಿಗೆ ಡ್ರಾಪ್ಸ್ ಹಾಕುವುದನ್ನು ಮರೆಯಬೇಡಿ. ನಿಮ್ಮಿಂದ ಒಂದು ರೂ. ಕೂಡ ಪಡೆಯುವುದಿಲ್ಲ, ಎಲ್ಲಾ ಉಚಿತವಾಗಿರುತ್ತದೆ. ಒಂದು ತಿಂಗಳಲ್ಲಿ ಎರಡೆರಡು ಪಂಚಾಯಿತಿಗಳಲ್ಲಿ ಈ ರೀತಿ ತಪಾಸಣೆಯನ್ನು ಏರ್ಪಡಿಸಲಾಗುವುದು. ಈಗ ಹನ್ನೆರಡು ವಾರ್ಡ್‌ಗಳಲ್ಲಿ ಮುಗಿದಿದೆ. ಇನ್ನು 23 ವಾರ್ಡ್‌ಗಳು ಬಾಕಿ ಉಳಿದಿದೆ. ಒಂದು ವರ್ಷದಲ್ಲಿ ನಗರದ 23 ವಾರ್ಡ್‌ಗಳಲ್ಲಿಯೂ ಕಣ್ಣಿನ ತಪಾಸಣೆ ನಡೆಸಲಾಗುವುದು ಎಂದರು.

ಚಿತ್ರದುರ್ಗ ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಆರ್.ಕೆ.ಸರ್ದಾರ್ ಮಾತನಾಡಿ ಮಾನವನ ದೇಹದಲ್ಲಿ ಕಣ್ಣು ಅತ್ಯಂತ ಸೂಕ್ಷ್ಮವಾದುದು. ಹಾಗಾಗಿ ಕಣ್ಣಿನ ಬಗ್ಗೆ ಯಾರಲ್ಲಿಯೂ ಉದಾಸೀನವಿರಬಾರದು. ಇಂತಹ ಶಿಬಿರಗಳಲ್ಲಿ ತಪಾಸಣೆ ಮಾಡಿಸಿಕೊಂಡು ಕನ್ನಡಕಗಳನ್ನು ಹಾಕಿಕೊಳ್ಳುವುದು ಉತ್ತಮ. ಶಾಸಕ ಕೆ.ಸಿ. ವೀರೇಂದ್ರ ಪಪ್ಪಿರವರು ಅತ್ಯಂತ ಪುಣ್ಯದ ಕೆಲಸ ಮಾಡುತ್ತಿರುವುದನ್ನು ನೀವುಗಳೆಲ್ಲಾ ಬಳಸಿಕೊಳ್ಳಿ ಎಂದು ಹನ್ನೆರಡನೆ ವಾರ್ಡ್ ನಿವಾಸಿಗಳಿಗೆ ಕರೆ ನೀಡಿದರು.

ಮುನಿರಾ ಎ.ಮಕಾಂದಾರ್ ಮಾತನಾಡಿದರು. ಜಿಲ್ಲಾ ಕಾಂಗ್ರೆಸ್ ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಆರ್. ಶಿವಣ್ಣ, ಸೈಟ್‌ಬಾಬು, ಪಿ. ಬಾಬು, ನಿವೃತ್ತ ಡಿವೈಎಸ್ಪಿ ಎ.ಎಚ್. ಮಕಾಂದಾರ್, ಚಾಂದ್‌ಪೀರ್, ಅಬ್ದುಲ್ಲಾ, ಬಾಬ್‌ಜಾನ್ ಪಟೇಲ್ ಇನ್ನಿತರರಿದ್ದರು.

ಹಿರಿಯೂರು ಕ್ಷೇತ್ರಕ್ಕೆ ಜೆಡಿಯು ಅಭ್ಯರ್ಥಿ ಸ್ಪರ್ಧೆ: ರಂಗನಾಥ್

• **ಚಿತ್ರದುರ್ಗ:** ಸಂಯುಕ್ತ ಜನತಾದಳದ ರಾಜ್ಯಾಧ್ಯಕ್ಷ ಮಹಿಮ ಪಟೇಲ್ ಅವರ ಸೂಚನೆಯಂತೆ ಪಕ್ಷವನ್ನು ಸಂಘಟಿಸಿ ನೊಂದಣಿ ಮಾಡುವುದು ನಮ್ಮ ಮುಂದಿರುವ ಸವಾಲು ಎಂದು ಜೆಡಿಯು ಪ್ರಧಾನ ಕಾರ್ಯದರ್ಶಿ ಕೆ.ಆರ್. ರಂಗನಾಥ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲಾ ಉಸ್ತುವಾರಿ ಸಚಿವ ಡಿ.ಸುಧಾಕರ್ ನಿಧನದಿಂದ ತೆರವಾಗಿರುವ ಹಿರಿಯೂರು ವಿಧಾನಸಭೆಗೆ ನಡೆಯುವ ಉಪ ಚುನಾವಣೆಯಲ್ಲಿ ನಮ್ಮ ಪಕ್ಷದಿಂದ ಅಭ್ಯರ್ಥಿಯನ್ನು ಕಣಕ್ಕಿಳಿಸುವ ಸಂಬಂಧ ಚರ್ಚೆಯಾಗಿದೆ. ರೈತರ ಫಲವತ್ತಾದ ಭೂಮಿಯನ್ನು ರಾಜ್ಯ ಸರ್ಕಾರ ವಶಪಡಿಸಿಕೊಂಡು ಕೈಗಾರಿಕೆಗೆ ನೀಡುತ್ತಿರುವುದಕ್ಕೆ ನಮ್ಮ ವಿರೋಧವಿದೆ. ಯಾವುದೇ ಕಾರಣಕ್ಕೂ ರೈತರನ್ನು ಒಕ್ಕಲೆಬ್ಬಿಸಲು ಬಿಡುವುದಿಲ್ಲ, ಮುಂಬರುವ ಎಲ್ಲಾ ಚುನಾವಣೆಗಳಲ್ಲಿಯೂ ನಮ್ಮ ಪಕ್ಷ ಸ್ವತಂತ್ರವಾಗಿ ಸ್ಪರ್ಧಿಸಲಿದೆ ಎಂದು ಹೇಳಿದರು.

ಕೆ.ವಿ.ಶಿವರಾಂ ಮಾತನಾಡಿ, ಜೆಡಿಯುಗೆ ಅಧಿಕಾರ ವಿಕೇಂದ್ರೀಕರಣ ಮುಖ್ಯ. ಪ್ರಾಮಾಣಿಕವಾಗಿ ರಾಜಕಾರಣ ಮಾಡುವುದಕ್ಕಾಗಿ ರಾಜ್ಯಾದ್ಯಂತ ಪ್ರವಾಸ ಹಮ್ಮಿಕೊಂಡಿದ್ದೇವೆ. ಜೂನ್ ತಿಂಗಳ ಒಳಗೆ ಪದಾಧಿಕಾರಿಗಳನ್ನು ನೇಮಿಸಿ ವಿವಿಧ ಘಟಕಗಳಿಗೆ ಅಧ್ಯಕ್ಷರನ್ನು ಆಯ್ಕೆ ಮಾಡಲಾಗುವುದು. ಹಿರಿಯೂರು ವಿಧಾನಸಭೆ ಉಪ ಚುನಾವಣೆಯಲ್ಲಿ ನಮ್ಮ ಪಕ್ಷದಿಂದ ಅಭ್ಯರ್ಥಿಯನ್ನು ಕಣಕ್ಕಿಳಿಸಲಾಗುವುದು ಎಂದು ತಿಳಿಸಿದರು. ಈ ವೇಳೆ ಶಿವರುದ್ರಸ್ವಾಮಿ ಮಾತನಾಡಿದರು.




ವಿವಿಧ ಬೇಡಿಕೆ ಈಡೇರಿಕೆಗೆ ಸಿಐಟಿಯು ಒತ್ತಾಯ

• **ಚಿತ್ರದುರ್ಗ:** ಕಟ್ಟಡ ಕಾರ್ಮಿಕರಿಗೆ ವೈಜ್ಞಾನಿಕ ವೇತನ ನೀಡುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಸಿಐಟಿಯು ವತಿಯಿಂದ ಜಿಲ್ಲಾಧಿಕಾರಿ ಕಚೇರಿ ಎದುರು ಶನಿವಾರ ಪ್ರತಿಭಟನೆ ನಡೆಸಿ ಅಪರ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಲಾಯಿತು.

ನಗರದ ಪ್ರವಾಸಿ ಮಂದಿರದಿಂದ ಮೆರವಣಿಗೆ ಮೂಲಕ ಜಿಲ್ಲಾಧಿಕಾರಿ ಕಚೇರಿಗೆ ಆಗಮಿಸಿದ ಪ್ರತಿಭಟನಾ ಕಾರರು ಕಾರ್ಮಿಕ ವಿರೋಧಿ ನೀತಿ ಅನುಸರಿಸುತ್ತಿರುವ ಸರ್ಕಾರಗಳ ವಿರುದ್ಧ ಘೋಷಣೆಗಳನ್ನು ಕೂಗಿದರು.

ಲಾಕ್ ಲೇಬರ್ ಕೋಡನ್ನು ಕೂಡಲೆ ಸರ್ಕಾರ ರದ್ದುಪಡಿಸಬೇಕು. ಕೇಂದ್ರ ಚುನಾವಣಾ ಆಯೋಗ ಮತದಾರರ ಮತಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ನಡೆಸುತ್ತಿರುವುದರಿಂದ ಅರ್ಹ ಮತದಾರರಿಗೆ ಅನ್ಯಾಯವಾಗಬಾರದು. ಕಟ್ಟಡ ಕಾರ್ಮಿಕರ ಮಕ್ಕಳಿಗೆ ನೀಡುತ್ತಿದ್ದ ಮದುವೆ ಸಹಾಯ ಧನ ನಿಂತಿದೆ. ಕೂಡಲೆ ಪುನರ್ ಆರಂಭಿಸಬೇಕು. ಕಟ್ಟಡ ಕಾರ್ಮಿಕರು ಮನೆಗಳನ್ನು ನಿರ್ಮಿಸಿಕೊಳ್ಳಲು ಐದು ಲಕ್ಷ ರೂ.ಗಳ ನೆರವು ನೀಡುವಂತೆ ಪ್ರತಿಭಟನಾಕಾರರು ಒತ್ತಾಯಿಸಿದರು.



ಸಿ.ಐ.ಟಿ.ಯು. ಜಿಲ್ಲಾ ಸಹ ಸಂಚಾಲಕ ಸಿ.ಕೆ.ಗೌಸ್‌ಪೀರ್, ಸಂಚಾಲಕ ತಿಪ್ಪೇಸ್ವಾಮಿ, ಡಿ.ಎಂ.ಮಲಿಯಪ್ಪ, ನಿಂಗಮ್ಮ ಭಾಗವಹಿಸಿದ್ದರು.

ಸಿದ್ದರಾಮಯ್ಯ ರಾಜೀನಾಮೆ ನೋವಿನ ಸಂಗತಿ: ಕುರುಬ ಸಂಘ

• **ಚಿತ್ರದುರ್ಗ:** ಕಾಂಗ್ರೆಸ್ ಹೈಕಮಾಂಡ್ ಸೂಚನೆಯಂತೆ ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯನವರು ರಾಜೀನಾಮೆ ನೀಡಿರುವುದು ಕೇವಲ ಕುರುಬರಿಗಷ್ಟೆ ಅಲ್ಲ, ಇಡೀ ಅಹಿಂದ ವರ್ಗಕ್ಕೆ ನೋವುಂಟಾಗಿದೆ ಎಂದು ಜಿಲ್ಲಾ ಕುರುಬರ ಸಂಘದ ಪ್ರಧಾನ ಕಾರ್ಯದರ್ಶಿ ಬಿ.ಟಿ.ಜಗದೀಶ್ ಬೇಸರ ವ್ಯಕ್ತಪಡಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕುರಿ ಕಾಯುತ್ತಿದ್ದ ಹುಡುಗ ರಾಜ್ಯದ ಮುಖ್ಯಮಂತ್ರಿಯಾಗುವವರೆಗೆ ಬೆಳೆದಿದ್ದಾರೆಂದರೆ ಕಮ್ಮಿ ಸಾಧನೆಯಲ್ಲ. ಅಹಿಂದ ಸಂಘಟಕ ಸಿದ್ದರಾಮಯ್ಯ ಕಾಂಗ್ರೆಸ್‌ಗೆ ಬಂದಾಗ ವರಿಷ್ಠರು ಸ್ವಾಗತಿಸಿ ಎರಡು ಬಾರಿ ವಿರೋಧ ಪಕ್ಷದ ನಾಯಕನನ್ನಾಗಿ ಮಾಡಿದರು. ಮುಖ್ಯಮಂತ್ರಿಯಾಗಿ ಉತ್ತಮ ಕೆಲಸ ಮಾಡಿದರು. ಈಗ ರಾಜಿನಾಮೆ ನೀಡಿರುವುದು ನೋವಿನ ಸಂಗತಿ ಎಂದರು.

ಮೂರನೇ ಅತಿದೊಡ್ಡ ಸಮುದಾಯ ನಮ್ಮದು. ವಿಧಾನಸಭೆ, ವಿಧಾನ ಪರಿಷತ್, ಲೋಕಸಭೆ, ರಾಜ್ಯಸಭೆ ಚುನಾವಣೆಯಲ್ಲಿ ನಮ್ಮ ಸಮಾಜಕ್ಕೆ ಹೆಚ್ಚಿನ ಆದ್ಯತೆ ಕೊಡಬೇಕು. ಜೊತೆಗೆ ರಾಜ್ಯದಲ್ಲಿ ಎರಡನೆ ಅವಧಿಯ ನಿಗಮ ಮಂಡಳಿಗಳ ನೇಮಕದಲ್ಲಿ ನಮ್ಮ ಜನಾಂಗಕ್ಕೆ ಒತ್ತು ಕೊಡಬೇಕು. ನಾಲ್ಕು ಬಾರಿ ಶಾಸಕರಾಗಿರುವ ಬಿ.ಜಿ.ಗೋವಿಂದಪ್ಪ ಅವರಿಗೆ ಸಚಿವ ಸ್ಥಾನ ನೀಡಬೇಕು. ಚಳ್ಳಕೆರೆ ಶಾಸಕ ಟಿ.ರಘುಮೂರ್ತಿ, ಮೊಳಕಾಲ್ಮುರು ಶಾಸಕ ಎನ್.ವೈ. ಗೋಪಾಲಕೃಷ್ಣ, ಚಿತ್ರದುರ್ಗ ಶಾಸಕ ಕೆ.ಸಿ. ವೀರೇಂದ್ರ ಪಪ್ಪಿ ಇವರುಗಳಿಗೂ ಸಚಿವ ಸ್ಥಾನ ಕೊಡಬೇಕೆಂದು ವರಿಷ್ಠರನ್ನು ಒತ್ತಾಯಿಸಿದರು.

ಡಿ.ಕೆ. ಶಿವಕುಮಾರ್‌ರವರ ಮಂತ್ರಿ ಮಂಡಲದಲ್ಲಿ ಕುರುಬರಿಗೆ ಐದು ಸಚಿವ ಸ್ಥಾನ ಸಿಗಬೇಕು. ಏಳು ವಿಧಾನ ಪರಿಷತ್ ಸ್ಥಾನ ಖಾಲಿಯಾಗುತ್ತಿದೆ. ರಾಜ್ಯಸಭೆಗೂ ನಡೆಯುವ ಚುನಾವಣೆಯಲ್ಲಿ ಬಿಜೆಪಿ, ಜೆಡಿಎಸ್ ನವರೂ ಸಹ ಕುರುಬರಿಗೆ ಹೆಚ್ಚಿನ ಪ್ರಾಧಾನ್ಯತೆ ನೀಡಬೇಕು. ಆರ್ಥಿಕ, ಸಾಮಾಜಿಕ, ಶೈಕ್ಷಣಿಕವಾಗಿ ಹಿಂದುಳಿದ ವರ್ಗದವರ ಸಮೀಕ್ಷೆ ವರದಿಯನ್ನು ಸಿದ್ದರಾಮಯ್ಯನವರು ಸ್ವೀಕಾರ ಮಾಡಿದ್ದಾರೆ. ಇದನ್ನು ನೂತನ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅಂಗೀಕರಿಸಿ ಯಥಾವತ್ತಾಗಿ ಜಾರಿಗೊಳಿಸಬೇಕು ಎಂದು ಮನವಿ ಮಾಡಿದರು.

ಜಿಲ್ಲಾ ಕುರುಬರ ಸಂಘದ ಅಧ್ಯಕ್ಷ ಶ್ರೀರಾಮ್ ಮಾತನಾಡಿ, ನೂತನವಾಗಿ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಲಿರುವ ಡಿ.ಕೆ.ಶಿವಕುಮಾರ್ ಓಬಿಸಿ, ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರನ್ನು ಸಮಾನವಾಗಿ ತೆಗೆದುಕೊಂಡು ಹೋಗಬೇಕು. ಜಿಲ್ಲೆಯ ನಾಲ್ವರು ಶಾಸಕರುಗಳಿಗೆ ಸಚಿವ ಸ್ಥಾನ ಸಿಗಬೇಕು. ತಳಮಟ್ಟದ ಕುರುಬ ಜನಾಂಗವನ್ನು ನಿಮ್ಮ ಜೊತೆ ವಿಶ್ವಾಸದಲ್ಲಿಟ್ಟುಕೊಂಡು ಹೆಚ್ಚಿನ ಸ್ಥಾನಮಾನ ಕಲ್ಪಿಸುವಂತೆ ಮನವಿ ಮಾಡಿದರು.

ಜಿಲ್ಲಾ ಕುರುಬರ ಸಂಘದ ಗೌರವಾಧ್ಯಕ್ಷ ಹೆಚ್. ಮಂಜಪ್ಪ ಮಾತನಾಡಿದರು. ಸುದ್ದಿಗೋಷ್ಠಿಯಲ್ಲಿ ಕುರುಬರ ಸಂಘದ ಖಜಾಂಚಿ ಮುತ್ತು, ಮಾಳೇಶ್, ಉಮೇಶ್, ಕುರುಬರ ಸಂಘದ ನಿರ್ದೇಶಕ ಹೊಸದುರ್ಗದ ಲಿಂಗಮೂರ್ತಿ, ಸುರೇಶ್ ಹಾಜರಿದ್ದರು.

ಕುರುಬ ಸಂಘದ ಸುದ್ದಿಗೋಷ್ಠಿ ಯಾವ ಪುರುಷಾರ್ಥಕ್ಕೆ: ನಿಶಾನಿ ಜಯಣ್ಣ

• **ಚಿತ್ರದುರ್ಗ:** ಜಿಲ್ಲಾ ಕುರುಬ ಸಂಘದವರು ನಡೆಸಿದ ಪ್ರತಿಕಾಗೋಷ್ಠಿ ಯಾವ ಪುರುಷಾರ್ಥಕ್ಕೆ ಅಥವಾ ಯಾವ ನೈತಿಕತೆಯಿಂದ ಕರೆದಿದ್ದರೆ ಗೊತ್ತಿಲ್ಲ ಎಂದು ಜಿಲ್ಲಾ ಕುರುಬ ಸಂಘದ ಮಾಜಿ ಅಧ್ಯಕ್ಷ ನಿಶಾನಿ ಜಯಣ್ಣ ಟೀಕಿಸಿದ್ದಾರೆ.

ಈ ಬಗ್ಗೆ ಪತ್ರಿಕಾ ಹೇಳಿಕೆ ನೀಡಿರುವ ಅವರು, ಈಗ ಸಿದ್ದರಾಮಯ್ಯನವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದಾಗ ಪ್ರತಿಕ್ರಿಯೆ ನೀಡಿರುವ ಜಿಲ್ಲಾ ಕುರುಬರ ಸಂಘದವರು ಸಿದ್ದರಾಮಯ್ಯನವರನ್ನು ಜನತಾದಳ ಪಕ್ಷದಿಂದ ಉಚ್ಛಾಟಿಸಿದಾಗ ಏಕೆ ಮಾತನಾಡಲಿಲ್ಲ, ಕಾಂಗ್ರೆಸ್‌ನ ಅದಿನಾಯಕಿ ಶ್ರೀಮತಿ ಸೋನಿಯಾ ಗಾಂಧಿಯವರ ಸಮುಖದಲ್ಲಿ ಕಾಂಗ್ರೆಸ್ ಪಕ್ಷ ಸೇರಿ ಸುದೀರ್ಘ 17 ವರ್ಷ ಸಿಎಲ್‌ಪಿ ಲೀಡರ್ ಆಗಿ, 2 ಬಾರಿ ವಿರೋಧ ಪಕ್ಷದ ನಾಯಕರಾಗಿ, ದಾಖಲೆ 8 ವರ್ಷ ಮುಖ್ಯಮಂತ್ರಿಯಾಗಿ ರಾಜ್ಯಕ್ಕೆ ಅಪಾರ ಕೊಡುಗೆ ನೀಡಿದ್ದಾರೆ ಎಂದಿದ್ದಾರೆ.

ಕೆಲವು ಜನ ನಾವೇ ಕುರುಬ ಸಂಘದ ಪದಾಧಿಕಾರಿಗಳು ಎಂದು ಹೇಳಿಕೊಂಡು ಸುದ್ದಿಗೋಷ್ಠಿ ಕರೆದಿದ್ದಾರೆ. ಆದರೆ ಪದಾಧಿಕಾರಿಗಳನ್ನು ಯಾರು ಆಯ್ಕೆ ಮಾಡಿದರು ಎಂಬುದೇ ಯಕ್ಷ ಪ್ರಶ್ನೆ. ಇದುವರೆಗೂ ಯಾವ ಚುನಾವಣೆ ನೆಡೆಸಿಲ್ಲ, ಇಂತಹ ಸಮಯದಲ್ಲಿ ಸುದ್ದಿಗೋಷ್ಠಿ ಮಾಡುತ್ತಿರುವುದು ಕೇವಲ ಪ್ರಚಾರಕ್ಕೆ ಎಂಬುದು ಮೇಲ್ನೋಟಕ್ಕೆ ಕಾಣಿಸುತ್ತದೆ ಎಂದು ಕಿಡಿಕಾರಿದ್ದಾರೆ.

ತುಮಕೂರಿನ ಸ್ವಾಮಿ ಶ್ರೀವೀರೇಶಾನಂದ ಸರಸ್ವತಿ

ನಿರಂತರ ಸತ್ಕಾರ್ಯದಿಂದ ಭಗವಂತನ ದರ್ಶನ

• **ಹೊಸದುರ್ಗ:** ಧಾರ್ಮಿಕ ಹಾಗೂ ಸಾಮಾಜಿಕ ಮೌಲ್ಯಗಳನ್ನು ಸಾರುವ ಕಾರ್ಯಕ್ರಮಗಳು ನಮ್ಮ ಸಂಸ್ಕೃತಿ ಮತ್ತು ಸಮಾಜದ ಏಳಿಗೆಗೆ ಮಾರ್ಗದರ್ಶಕವಾಗುತ್ತವೆ ಎಂದು ತುಮಕೂರಿನ ಸ್ವಾಮಿ ಶ್ರೀವೀರೇಶಾನಂದ ಸರಸ್ವತಿ ಹೇಳಿದರು.

ನಗರದ ಸದ್ಗುರು ಸೇವಾಶ್ರಮದಲ್ಲಿ ಶ್ರೀ ಕಾಂತಾನಂದ ಭಗವಾನ್ ಸರಸ್ವತಿ ಮಹಾರಾಜರವರ 26ನೇ ವರ್ಷದ ಬ್ರಹ್ಮೋಪದೇಶದ ಅಂಗವಾಗಿ ಆಯೋಜಿಸಿದ್ದ ವಿವೇಕಚಿಂತನೋತ್ಸವ ಕಾರ್ಯಕ್ರಮದಲ್ಲಿ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಜೀವನದಲ್ಲಿ ಆಧ್ಯಾತ್ಮಿಕ ಸಾಧನೆಗೆ ಯಾವುದೇ ಶಾರ್ಟ್‌ಕಟ್ ಇಲ್ಲ, ಭಕ್ತ ಮತ್ತು ಭಗವಂತನ ನಡುವೆ ಪ್ರಾಮಾಣಿಕತೆ, ನಿಷ್ಠೆ ಹಾಗೂ ಬದ್ಧತೆ ಇರಬೇಕು. ಭಗವಂತನ ಸತ್ಯದರ್ಶನಕ್ಕಾಗಿ ಆತ್ಮ ಸಾಕ್ಷಾತ್ಕಾರ ಮತ್ತು ಸತ್ಕಾರ್ಯಗಳ ಮೂಲಕ ನಿರಂತರ ಪ್ರಯತ್ನ ಅಗತ್ಯವಾಗಿದೆ ಎಂದು ತಿಳಿಸಿದರು.

ದೇವರನ್ನು ನೇರವಾಗಿ ಕಾಣುವುದು ಸುಲಭವಲ್ಲ, ಆದ್ದರಿಂದ ಮೊದಲು ಗುರುವಿಗೆ ಗೌರವ ಸಲ್ಲಿಸಿ ನಮಸ್ಕರಿಸಿದರೆ ಭಗವಂತನ ದರ್ಶನದ ಮಾರ್ಗ ಸುಗಮವಾಗುತ್ತದೆ ಎಂದರು.



ಭಕ್ತನಿಗೆ ವಿವೇಚನೆ ಅತ್ಯಗತ್ಯ. ಕೇವಲ ಮನುಷ್ಯನಾಗಿ ಬದುಕುವುದಕ್ಕಿಂತ ಮನುಷ್ಯತ್ವವನ್ನು ರೂಪಿಸಿಕೊಳ್ಳುವುದು ಮುಖ್ಯ. ಆಗ ದೇವರ ಕೃಪೆ ದೊರೆಯುತ್ತದೆ. ಮೂರು ಯತಿಗಳು ಒಂದೆಡೆ ಸೇರಿದರೆ ಅದು ತೀರ್ಥಕ್ಷೇತ್ರದಂತಾಗುತ್ತದೆ. ಈ ಅರಿವಿನಿಂದಲೇ ಜನರು ಶುಭ ಕಾರ್ಯಗಳಾದ ಮದುವೆ, ನಾಮಕರಣ ಹಾಗೂ ಇತರೆ ಧಾರ್ಮಿಕ ಸಮಾರಂಭಗಳಿಗೆ ಗುರುಗಳನ್ನು ಆಹ್ವಾನಿಸಿ ಸತ್ಕರಿಸುತ್ತಾರೆ. ಇದೂ ಸಹ ವಿವೇಕಚಿಂತನೆಯ ಒಂದು ಭಾಗವಾಗಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಶ್ರೀಕಾಂತಾನಂದ ಭಗವಾನ್ ಸರಸ್ವತಿ ಮಹಾರಾಜ್, ಸ್ವಾಮಿ ಪ್ರಕಾಶಾನಂದಜಿ ಮಹಾರಾಜ್, ಶ್ರೀಸುಮೇದಾನಂದ ಸ್ವಾಮೀಜಿ, ಬುದ್ಧಿ ಯೋಗಾನಂದಜಿ ಮಹಾರಾಜ್, ಶ್ರೀವಿನಯಾನಂದ ಸ್ವಾಮೀಜಿ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು.

ತಡೆಗೋಡೆ, ಸೂಚನಾ ಫಲಕಗಳ ಅಳವಡಿಕೆಗೆ ಸ್ಥಳೀಯರ ಆಗ್ರಹ

ಅಪಘಾತ ವಲಯವಾದ ದೇವಸಮುದ್ರ ಜಿಲ್ಲಾ ಹೆದ್ದಾರಿ!

▸ **ಸಿದ್ದೇಶ್ ವೆಂಕಟಾಪುರ**

• **ಮೊಳಕಾಲ್ಮೂರು:** ತಾಲೂಕಿನ ದೇವಸಮುದ್ರ ಹೋಬಳಿ ವ್ಯಾಪ್ತಿಯ ಜಿಲ್ಲಾ ರಸ್ತೆಯಲ್ಲಿ ತಡೆಗೋಡೆ ನಿರ್ಮಿಸದಿರುವುದು ನಿರಂತರವಾಗಿ ಅಪಘಾತಗಳು ಸಂಭವಿಸುವಂತೆ ಮಾಡಿದೆ. ರಾಷ್ಟ್ರೀಯ ಹೆದ್ದಾರಿ 105ಎ ದೇವಸಮುದ್ರ ಕ್ರಾಸ್‌ನಿಂದ ಉರ್ತಾಳ್ ಕ್ರಾಸ್‌ಗೆ ಸಂಪರ್ಕಿಸುವ ರಸ್ತೆಯೀಗ ಜವರಾಯನ ಕೇಂದ್ರವಾಗಿ ಮಾರ್ಪಟ್ಟಿದೆ.

ಹಲವು ಗ್ರಾಮಗಳನ್ನು ಸಂಪರ್ಕಿಸುವ ರಸ್ತೆಯಲ್ಲಿ ನಿತ್ಯ ಒಂದಿಲ್ಲೊಂದು ಅಪಘಾತ ಪ್ರಕರಣ ದಾಖಲಾಗುತ್ತಿದೆ. ತಿರುವು, ಮುರುವುಗಳಿರುವ ಇಡೀ ರಸ್ತೆಯಲ್ಲಿ ತಡೆಗೋಡೆ ಇಲ್ಲದಿರುವುದು ವಿಪರ್ಯಾಸ ಸಂಗತಿಯಾಗಿದೆ. ಅಲ್ಲದೇ ರಸ್ತೆ ಅಭಿವೃದ್ಧಿ ನಂತರ ಬದಿಯಲ್ಲಿ ಮಣ್ಣನ್ನು ಹಾಕದಿರುವುದು ಸವಾರರಿಗೆ ಸಂಕಷ್ಟಕ್ಕೀಡು ಮಾಡಿದೆ.

ಕರ್ನಾಟಕ-ಆಂಧ್ರಪ್ರದೇಶ ಗಡಿ ಭಾಗದ ಜಿಲ್ಲಾ ರಸ್ತೆ ಕರ್ನಾಟಕದ ರಾಷ್ಟ್ರೀಯ ಹೆದ್ದಾರಿ 150ಎ ನಿಂದ ಆರಂಭಗೊಂಡು ದೇವಸಮುದ್ರ, ವಿಠಲಾಪುರ, ವೆಂಕಟಾಪುರ ಹಾಗೂ ಉರ್ತಾಳ್ ನಂತರ ನೆರೆ ರಾಜ್ಯ ಆಂಧ್ರವನ್ನು ಸಂಪರ್ಕಿಸುವ ರಾಜ್ಯ ಹೆದ್ದಾರಿ ರಾಯದುರ್ಗ-ಬಳ್ಳಾರಿ ರಸ್ತೆಯನ್ನು ಸೇರುತ್ತದೆ.

ಇಡೀ ರಸ್ತೆಯಲ್ಲಿ ಸೂಚನಾ ಫಲಕಗಳು ಹಾಗೂ ವೇಗ ನಿಯಂತ್ರಕಗಳು ಅಳವಡಿಸದಿರುವುದು ಅಪಘಾತ ಹೆಚ್ಚಾಗಲು ಕಾರಣ ಹಾಗೂ ಹಲವಾರು ಬಾರಿ ಮನವಿ ಮಾಡಿದರೂ ಕೂಡ ಸೂಕ್ತ ಸ್ಪಂದನೆ ದೊರಕಿಲ್ಲವೆಂಬುದು ಇಲ್ಲಿನ ಗ್ರಾಮಸ್ಥರ ಅಭಿಪ್ರಾಯ.

ದಿಗಂತ ವಿಶೇಷ



> **ಕೋಟ್ಯಾಂತರ ವೆಚ್ಚ ಮಾಡಿ ರಸ್ತೆ ನಿರ್ಮಾಣ ಮಾಡುವ ಸರ್ಕಾರ ಸೂಚನಾ ಫಲಕಗಳನ್ನು ಏಕೆ ಅಳವಡಿಸಲು ಹಿಂದೇಟು ಹಾಕುತ್ತಿದೆ. ಉತ್ತಮ ರಸ್ತೆ ನಿರ್ಮಾಣ ಮಾಡಿರುವುದು ಸಂತಸವಾದರೂ ವಾಹನ ಸವಾರರ ವೇಗವು ಹೆಚ್ಚಾಗುತ್ತಿದೆ. ರಸ್ತೆಯ ಅಕ್ಕಪಕ್ಕದ ಜಾಗಕ್ಕೆ ಸೈಡ್ ಶೋಲ್ಡರ್ ಹಾಗೂ ಸೂಕ್ತ ಮಾಹಿತಿ ಇಲ್ಲದೆ ಹಲವು ಅಪಘಾತಗಳು ನಡೆಯುತ್ತಿದೆ.**
>
> ■ ದೇವಸಮುದ್ರ ಟಿ.ಚಂದ್ರಣ್ಣ, ದಲಿತ ಮುಖಂಡ

ಕಿರುಸುದ್ದಿ

ಸಿದ್ದರಾಮಯ್ಯ ರಾಜೀನಾಮೆ ಪಡೆದ ಕಾಂಗ್ರೆಸ್ಸಿಗೆ ತಕ್ಕ ಪಾಠ

• **ದಾವಣಗೆರೆ:** ಅಹಿಂದ ನಾಯಕ ಸಿದ್ದರಾಮಯ್ಯರ ಜನಪ್ರಿಯತೆ ಬಳಸಿಕೊಂಡು ಅಧಿಕಾರಕ್ಕೆ ಬಂದಿದ್ದ ಕಾಂಗ್ರೆಸ್ ಇದೀಗ ಮುಖ್ಯಮಂತ್ರಿ ಸ್ಥಾನಕ್ಕೆ ಬಲವಂತವಾಗಿ ರಾಜೀನಾಮೆ ಕೊಡಿಸಿದ್ದು, ಇದಕ್ಕೆ ಮುಂಬರುವ ದಿನಗಳಲ್ಲಿ ಅಹಿಂದ ವರ್ಗ ಸೇರಿದಂತೆ ರಾಜ್ಯದ ಜನರು ತಕ್ಕ ಪಾಠ ಕಲಿಸುವುದು ಗ್ಯಾರಂಟಿ ಎಂದು ಧೂಡಾ ಮಾಜಿ ಅಧ್ಯಕ್ಷ, ಬಿಜೆಪಿ ಯುವ ನಾಯಕ ರಾಜನಹಳ್ಳಿ ಶಿವಕುಮಾರ್ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಹಿಂದೆ ಅಹಿಂದ ನಾಯಕರನ್ನು ಮುಗಿಸಿದಂತೆ ಕಾಂಗ್ರೆಸ್ ಈಗಲೂ ನಡೆದುಕೊಂಡಿದೆ. ಎಸ್. ಬಂಗಾರಪ್ಪ, ದೇವರಾಜ ಅರಸು, ಎಸ್.ಆರ್.ಬೊಮ್ಮಾಯಿ ಸೇರಿದಂತೆ ಹಲವು ನಾಯಕರ ಜನಪ್ರಿಯತೆ ಸಹಿಸದೇ ಕಾಂಗ್ರೆಸ್ ತನ್ನ ಕುತಂತ್ರ ಬುದ್ಧಿ ತೋರಿಸಿತ್ತು. ಈಗ ಸಿದ್ದರಾಮಯ್ಯರನ್ನು ಅಧಿಕಾರದಿಂದ ಇಳಿಸಿ ಅಹಿಂದ ವರ್ಗದ ಕೆಂಗಣ್ಣಿಗೆ ಗುರಿಯಾಗಿದೆ. ಇದಕ್ಕೆ ಮುಂದಿನ ದಿನಗಳಲ್ಲಿ ಕಾಂಗ್ರೆಸ್ ತಕ್ಕ ಬೆಲೆ ತೆರಲಿದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ. ಕಾಂಗ್ರೆಸ್ಸಿಗರಿಗೆ ಜನರ ಹಿತಕ್ಕಿಂತ ತಮ್ಮ ಅಧಿಕಾರದ ದರ್ಪವೇ ಮೇಲಾಗಿದೆ. ಅಭಿವೃದ್ಧಿ ಶೂನ್ಯವಾಗಿರುವ ಈ ಆಡಳಿತ ವೈಫಲ್ಯದ ಕರಾಳ ಯುಗ ಆದಷ್ಟು ಬೇಗ ಅಂತ್ಯಗೊಳ್ಳಲಿ ಅಂತಾ ಕನ್ನಡಿಗರು ನಿತ್ಯವೂ ಪ್ರಾರ್ಥಿಸುತ್ತಿದ್ದಾರೆ. ಕೋಟ್ಯಂತರ ಬಡ ಕುಟುಂಬಗಳಿಗೆ ಈ ಬಾರಿ ತಿಂಗಳು ಕಳೆದರೂ ಪಡಿತರ ಅಕ್ಕಿಯು ಮನೆ ತಲುಪಿಲ್ಲ. ರಾಜ್ಯದ ಪಡಿತರ ಕಾರ್ಡ್ ದಾರರಿಗೆ ಅಕ್ಕಿ ನೀಡಲು ಯೋಗ್ಯತೆ ಇಲ್ಲದ ಕಾಂಗ್ರೆಸ್ ಸರ್ಕಾರ ತೊಲಗಿದರಷ್ಟೇ ಒಳಿತಾಗಲಿದೆ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಪಂಚಮಸಾಲಿ ಸಮಾಜಕ್ಕೆ ಡಿಸಿಎಂ ಹಾಗೂ ಸಚಿವ ಸ್ಥಾನ ನೀಡಲು ಒತ್ತಾಯ

• **ದಾವಣಗೆರೆ:** ಪಂಚಮಸಾಲಿ ಸಮುದಾಯಕ್ಕೆ ಒಂದು ಉಪ ಮುಖ್ಯಮಂತ್ರಿ ಸ್ಥಾನ ಸೇರಿ ಮೂರು ಸಚಿವ ಸ್ಥಾನಗಳನ್ನು ನೀಡಲೇಬೇಕು ಎಂದು ವೀರಶೈವ ಲಿಂಗಾಯತ ಪಂಚಮಸಾಲಿ ಸಂಘ ಆಗ್ರಹಿಸಿದೆ. ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ರಚನೆಯಾಗುವಲ್ಲಿ ವೀರಶೈವ-ಲಿಂಗಾಯತ ಪಂಚಮಸಾಲಿ ಸಮುದಾಯದ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಆದರೂ ಸರ್ಕಾರ ರಚನೆಯಾದ ನಂತರ ಸಮುದಾಯದ ಜನಸಂಖ್ಯೆ, ರಾಜಕೀಯ ಪ್ರಭಾವ ಮತ್ತು ಚುನಾವಣಾ ಕೊಡುಗೆಗಳಿಗೆ ತಕ್ಕ ಪ್ರಾತಿನಿಧ್ಯ ದೊರೆಯದಿರುವುದು ಅಸಮಾಧಾನಕ್ಕೆ ಕಾರಣವಾಗಿದೆ. ಈಗಲಾದರೂ ರಾಜ್ಯದ ಲಕ್ಷಾಂತರ ಪಂಚಮಸಾಲಿ ಸಮುದಾಯದ ಭಾವನೆಗಳಿಗೆ ಗೌರವ ನೀಡುವ ನಿಟ್ಟಿನಲ್ಲಿ ಕಾಂಗ್ರೆಸ್ ಹೈಕಮಾಂಡ್ ಹಾಗೂ ನೂತನ ಮುಖ್ಯಮಂತ್ರಿಗಳು ತಮ್ಮ ಸಂಪುಟದಲ್ಲಿ ಒಂದು ಉಪ ಮುಖ್ಯಮಂತ್ರಿ ಸ್ಥಾನ ಸೇರಿ ಮೂರು ಸಚಿವ ಸ್ಥಾನಗಳನ್ನು ಪಂಚಮಸಾಲಿ ಸಮುದಾಯಕ್ಕೆ ನೀಡಬೇಕು ಎಂದು ಸಂಘದ ಜಿಲ್ಲಾಧ್ಯಕ್ಷ ಬಿ.ಸಿ.ಉಮಾಪತಿ ಒತ್ತಾಯಿಸಿದ್ದಾರೆ.

ಜೆ.ಎಂ.ವಿವಿಯಲ್ಲಿ ತಂಬಾಕು ವಿರೋಧಿ ಜಾಗೃತಿ

• **ದಾವಣಗೆರೆ:** ನಗರದ ಜೆ.ಎಂ ವಿಶ್ವವಿದ್ಯಾಲಯದಲ್ಲಿ ಶುಕ್ರವಾರ ವಿಶ್ವ ತಂಬಾಕು ವಿರೋಧಿ ದಿನಾಚರಣೆಯ ಅಂಗವಾಗಿ ವಿಶೇಷ ಜಾಗೃತಿ ಕಾರ್ಯಕ್ರಮ ಆಯೋಜಿಸಲಾಗಿತ್ತು. ಆರೋಗ್ಯವನ್ನು ಆರಿಸಿ, ಜೀವನವನ್ನು ಆರಿಸಿ, ತಂಬಾಕನ್ನು ಬೇಡ ಎಂದು ಹೇಳಿ ಎಂಬ ಘೋಷವಾಕ್ಯದೊಂದಿಗೆ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಲ್ಲಿ ತಂಬಾಕು ಸೇವನೆಯ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸಲಾಯಿತು. ಕಾರ್ಯಕ್ರಮದಲ್ಲಿ ವೈದ್ಯಕೀಯ ಅಂಕಾಲಜಿಸ್ಟ್ ಡಾ.ಸಾಗರ್ ಕಾಂತಾ ಮಾತನಾಡಿ, ತಂಬಾಕು ಸೇವನೆಯಿಂದ ಉಂಟಾಗುವ ಕ್ಯಾನ್ಸರ್, ಹೃದಯ ಸಂಬಂಧಿ ಕಾಯಿಲೆ, ಶ್ವಾಸಕೋಶದ ಸಮಸ್ಯೆ ಕುರಿತು ವಿವರಿಸಿದರು. ವಿಶೇಷವಾಗಿ ಯುವಜನತೆ ತಂಬಾಕು ಉತ್ಪನ್ನಗಳಿಂದ ದೂರವಿದ್ದು, ಆರೋಗ್ಯಕರ ಜೀವನಶೈಲಿಯನ್ನು ಅಳವಡಿಸಿಕೊಳ್ಳಬೇಕೆಂದು ಕರೆ ನೀಡಿದರು. ಜೆಎಂಯು ಎನ್ನೆಸ್ಸೆಸ್ ಅಧಿಕಾರಿ ಹೆಚ್.ಎಸ್. ಅಶೋಕ್ ವಿದ್ಯಾರ್ಥಿಗಳು, ಬೋಧಕ ವೃಂದ ಹಾಗೂ ಸಿಬ್ಬಂದಿಗಳಿಗೆ ತಂಬಾಕು ವಿರೋಧಿ ಪ್ರತಿಜ್ಞೆ ಬೋಧಿಸಿದರು.

ಹಾಲೇಕಲ್ಲು ಲೋಕೇಶ್ ಅವಿರೋಧ ಆಯ್ಕೆ



• **ಜಗಳೂರು:** ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಸ್ಥಾನಕ್ಕೆ ಹಾಲೇಕಲ್ಲು ಲೋಕೇಶ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಬಿಳಿಚೋಡು ಕ್ಷೇತ್ರ ಪಿ.ಎಲ್.ಡಿ ಬ್ಯಾಂಕಿನಿಂದ ನಿರ್ದೇಶಕರಾಗಿದ್ದ ಮದಕೇರನಹಳ್ಳಿ ರಾಜು ಅವರು ರಾಜಿನಾಮೆ ನೀಡಿದ್ದರು. ತೆರುವಾದ ಸ್ಥಾನಕ್ಕೆ ಉಳಿದ ಅವಧಿಗೆ ಹಾಲೇಕಲ್ಲು ಲೋಕೇಶ ಆಯ್ಕೆಯಾಗಿದ್ದಾರೆ.

ಹೊರಗುತ್ತಿಗೆ ಕಾರ್ಮಿಕರ ವಜಾಗೊಳಿಸಿದ್ದನ್ನು ಖಂಡಿಸಿ ಪ್ರತಿಭಟನೆ



• **ದಾವಣಗೆರೆ:** ಕಲಬುರ್ಗಿ ವಿಶ್ವವಿದ್ಯಾಲಯದ ಗುತ್ತಿಗೆ, ಹೊರಗುತ್ತಿಗೆ ಕಾರ್ಮಿಕರನ್ನು ಏಕಾಏಕಿ ಸೇವೆಯಿಂದ ವಜಾಗೊಳಿಸಿದ್ದನ್ನು ಖಂಡಿಸಿ ಎಐಯುಟಿಯುಸಿ ಸಂಯೋಜಿತ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾರ್ಮಿಕರ ಒಕ್ಕೂಟದಿಂದ ಶುಕ್ರವಾರ ತಾಲೂಕಿನ ತೋಳಹುಣಸೆ ಸಮೀಪದ ದಾವಣಗೆರೆ ವಿಶ್ವವಿದ್ಯಾಲಯದ ಎದುರು ಶುಕ್ರವಾರ ಪ್ರತಿಭಟನೆ ನಡೆಸಲಾಯಿತು.

ಒಕ್ಕೂಟದ ಅಧ್ಯಕ್ಷ ಮಂಜುನಾಥ ಕೈದಾಳೆ, ಉಪಾಧ್ಯಕ್ಷ ಎಲ್.ಹೆಚ್.ಪ್ರಕಾಶ ಇತರರ ನೇತೃತ್ವದಲ್ಲಿ ಪ್ರತಿಭಟಿಸಿದ ದಾವಿವಿ ಸಿ ಮತ್ತು ಡಿ ಗ್ರೂಪ್ ಗುತ್ತಿಗೆ ಹಾಗೂ ಹೊರಗುತ್ತಿಗೆ ನೌಕರರು ಕಲಬುರ್ಗಿ ವಿಶ್ವವಿದ್ಯಾಲಯದ ಕ್ರಮವನ್ನು ಖಂಡಿಸಿ ಘೋಷಣೆ ಕೂಗುವ ಮೂಲಕ ಆಕ್ರೋಶ ವ್ಯಕ್ತಪಡಿಸಿದರು.

ಕಾರ್ಯಕ್ಷಮತೆ ಹಾಗೂ ದಕ್ಷತೆಯಿಂದ ಕಳೆದ ಹಲವಾರು ವರ್ಷಗಳಿಂದ ಸೇವೆ ಸಲ್ಲಿಸುತ್ತಾ ಬಂದ ಗುತ್ತಿಗೆ, ಹೊರಗುತ್ತಿಗೆ ಕಾರ್ಮಿಕರನ್ನು ಏಕಾಏಕಿ ಸೇವೆಯಿಂದ ವಜಾಗೊಳಿಸಿದ್ದು ಖಂಡನೀಯ. ಕಾರ್ಮಿಕರಿಗೆ ಉದ್ಯೋಗ ಭದ್ರತೆ, ಸಾಮಾಜಿಕ ಭದ್ರತೆ, ಸಮಾನ ಕೆಲಸಕ್ಕೆ ಸಮಾನ ವೇತನ ಸೌಲಭ್ಯ ನೀಡುವ ಬದಲು ಕಾರ್ಮಿಕರ ಬೇಡಿಕೆ ಕಡೆಗಣಿಸಿ ಏಕಾಏಕಿ ವಜಾ ಮಾಡಿದ್ದು ಸರಿಯಲ್ಲ ಎಂದರು.

ಸಂಘದ ಉಪಾಧ್ಯಕ್ಷರಾದ ಪರಶುರಾಮ, ಶಿವಾಜಿ ರಾವ್, ಲಕ್ಷ್ಮೀಬಾಯಿ, ವಿಜಯಮ್ಮ, ಜಂಟಿ ಕಾರ್ಯದರ್ಶಿ ಬಸವರಾಜ ಕೋಟೆ, ಹನುಮಂತ, ಮಧು, ನಿರ್ಮಲಾ ಬಾಯಿ ಸೇರಿದಂತೆ ಪದಾಧಿಕಾರಿಗಳು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.



ದಾವಣಗೆರೆ ನಗರದ ಗುರುಭವನದಲ್ಲಿ ದಾವಣಗೆರೆ ಜಿಲ್ಲಾ 3 ಮತ್ತು 4 ಚಕ್ರ ಗೂಡ್ಸ್ ವಾಹನ ಚಾಲಕರ ಮತ್ತು ಮಾಲೀಕರ ಸಂಘ, ಶ್ರೀಗಂಧ ಟ್ರಸ್ಟ್ ವತಿಯಿಂದ ಜಿಲ್ಲಾಸ್ಪತ್ರೆಯ ಡಿ ಗ್ರೂಪ್ ನೌಕರರಿಗೆ ಸನ್ಮಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಜಿಲ್ಲಾ ಯೋಗ ಒಕ್ಕೂಟದ ಅಧ್ಯಕ್ಷ ವಾಸುದೇವ ರಾಯ್ಕರ್, ಸಂಘದ ಅಧ್ಯಕ್ಷ ಪಳನಿಸ್ವಾಮಿ, ಶಿಕ್ಷಕರಾದ ಎನ್.ಎಂ.ಕರಿಬಸಪ್ಪ, ಎಂ.ಪಿ.ಶೋಭಾರಾಣಿ, ಹನುಮಂತ ನಾಯ್ಕ, ಕರಿಬಸಪ್ಪ, ರಾಜೇಶ್ ಇದ್ದರು.

ಅರ್ಥಪೂರ್ಣವಾಗಿ ಪರಿಸರ ದಿನಾಚರಣೆ | ಜಿಲ್ಲಾಧಿಕಾರಿ ಜಿ.ಎಂ.ಗಂಗಾಧರಸ್ವಾಮಿ

ತಾಲೂಕಿಗೆ 3 ಸಾವಿರ ಸಸಿ



• **ದಾವಣಗೆರೆ:** ಪರಿಸರ ಸಂರಕ್ಷಣೆ ಮತ್ತು ಹವಾಮಾನ ವೈಪರೀತ್ಯ ತಡೆಗಟ್ಟುವ ನಿಟ್ಟಿನಲ್ಲಿ ಜಿಲ್ಲೆಯಲ್ಲಿ ಜೂನ್ 5ರಂದು ವಿಶ್ವ ಪರಿಸರ ದಿನ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಆಚರಿಸಬೇಕು ಎಂದು ಜಿಲ್ಲಾಧಿಕಾರಿ ಜಿ.ಎಂ.ಗಂಗಾಧರಸ್ವಾಮಿ ಅಧಿಕಾರಿಗಳಿಗೆ ಸೂಚಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಶನಿವಾರ ವಿಶ್ವ ಪರಿಸರ ದಿನಾಚರಣೆ ಸಂಬಂಧ ಏರ್ಪಡಿಸಿದ್ದ ಪೂರ್ವಭಾವಿ ಸಭೆಯ ವಿಡಿಯೋ ಸಂವಾದದಲ್ಲಿ ಮಾತನಾಡಿದ ಅವರು, ಜಿಲ್ಲೆಯಾದ್ಯಂತ ಗಿಡ ನೆಡುವ ಕಾರ್ಯಕ್ರಮ ಹಮ್ಮಿಕೊಳ್ಳಬೇಕು. ವಿದ್ಯಾರ್ಥಿಗಳು, ರೈತರು ಹಾಗೂ ಸಾರ್ವಜನಿಕರಿಗೆ ವಿತರಿಸಲು ಸಸಿಗಳನ್ನು ಕಾಯ್ದಿರಿಸಬೇಕು. ಹಸಿರು ಕರ್ನಾಟಕ ಕಾರ್ಯಕ್ರಮದಡಿ ಪ್ರತಿ ತಾಲೂಕಿಗೆ 3,000 ಸಸಿಗಳನ್ನು ನೀಡಲು ಅರಣ್ಯ ಇಲಾಖೆ ಮತ್ತು ಶಿಕ್ಷಣ ಇಲಾಖೆಯ ಅಧಿಕಾರಿಗಳು ಕ್ರಮ ವಹಿಸಬೇಕೆಂದು ಸೂಚನೆ ನೀಡಿದರು.

ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ವಿವಿಧ ಇಲಾಖೆ ಅಧಿಕಾರಿಗಳಿಗೆ ವಹಿಸಲಾಗಿರುವ ಜವಾಬ್ದಾರಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಕೇವಲ ಗಿಡಗಳನ್ನು ನೆಡುವುದಷ್ಟೇ ನಮ್ಮ ಗುರಿಯಾಗಬಾರದು. ಗಿಡಗಳನ್ನು ನೆಟ್ಟ ನಂತರ ಅವುಗಳ ಸಮರ್ಪಕ ಪೋಷಣೆ, ರಕ್ಷಣೆ ಮಾಡುವುದು ನಮ್ಮೆಲ್ಲರ ಹೊಣೆಯಾಗಿರುತ್ತದೆ. ಆದ್ದರಿಂದ ಸಸಿಗಳ ಪೋಷಣೆಯ ಉಸ್ತುವಾರಿಯನ್ನು ಅತ್ಯಂತ ಜವಾಬ್ದಾರಿಯಿಂದ ನಿರ್ವಹಿಸಬೇಕು. ಒಂದು ಗಿಡವೂ ಸಹ ಒಣಗದಂತೆ ಅಧಿಕಾರಿಗಳು ಅಗತ್ಯ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಬೇಕು ಎಂದು ಅವರು ತಾಕೀತು ಮಾಡಿದರು.

ಜಿಲ್ಲಾ ಪರಿಸರ ಅಧಿಕಾರಿ ಶೈಲಜಾ ಮಾತನಾಡಿ, ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಜೂನ್ 2ರಂದು ನಗರದ ಸೇಂಟ್ ಜಾನ್ಸ್ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಪರಿಸರ ಜಾಗೃತಿ ಮೂಡಿಸುವ ಉದ್ದೇಶದಿಂದ ಪ್ರಬಂಧ, ರಸಪ್ರಶ್ನೆ ಹಾಗೂ ಛಾಯಾಚಿತ್ರ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ. ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಜೂನ್ 5ರಂದು ನಡೆಯುವ ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದರು.

ಬಾಪೂಜಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ವೇದಿಕೆ ಮತ್ತು ಗಿಡ ನೆಡುವ ಕಾರ್ಯಕ್ರಮ, ಜೈನ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ಗಿಡ ನೆಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಕೇಂದ್ರ ಸರ್ಕಾರದ ನಿರ್ದೇಶನದಂತೆ ಈ ಬಾರಿ ಏಕ್ ಪೇಡ್ ಮಾ ಕೆ ನಾಮ್ (ಅಮ್ಮನ ಹೆಸರಿನಲ್ಲಿ ಒಂದು ಮರ) ಎಂಬ ವಿಶೇಷ ಅಭಿಯಾನವನ್ನು ಜಿಲ್ಲೆಯಲ್ಲಿ ನಡೆಸಲಾಗುವುದು. ಜಿಲ್ಲೆಯಲ್ಲಿ ಏಕಬಳಕೆಯ ಪ್ಲಾಸ್ಟಿಕ್ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಿರುವುದರಿಂದ ಪರಿಸರ ದಿನದಂದು ಪರ್ಯಾಯ ವ್ಯವಸ್ಥೆಯಾಗಿ ಉಚಿತ ಬ್ಯಾಗ್ ವಿತರಣೆಗೆ ಚಾಲನೆ ನೀಡಲಾಗುವುದು ಎಂದು ಅವರು ತಿಳಿಸಿದರು.

ಸಾಮಾಜಿಕ ಅರಣ್ಯ ಸಂರಕ್ಷಣಾಧಿಕಾರಿ ನವೀನ್ ಮಾತನಾಡಿ, ರೈತರಿಗಾಗಿ ಕರಿಬೇವು, ನುಗ್ಗೆ, ನೇರಳೆ ಹಾಗೂ ಸಂಪಿಗೆ ಸಸಿ ಬೆಳೆಸಲಾಗಿದ್ದು, ವಿತರಣೆಗೆ ಸಿದ್ಧಪಡಿಸಲಾಗಿದೆ. ಜೊತೆಗೆ ಹೊಂಗೆ, ಬೇವು ಮತ್ತು ನೆರಳು ನೀಡುವ ಸಿಂಗಾಪುರ್ ಚೆರ್ರಿ ಸಸಿಗಳೂ ಲಭ್ಯವಿವೆ ಎಂದು ಮಾಹಿತಿ ನೀಡಿದರು.

ಮಹಾನಗರ ಪಾಲಿಕೆ ಆಯುಕ್ತ ಡಾ.ಮಹಾಂತೇಶ್ ಮಾತನಾಡಿ, ದಾವಣಗೆರೆ ದಕ್ಷಿಣ ಮತ್ತು ಉತ್ತರ ವಿಧಾನಸಭಾ ಕ್ಷೇತ್ರಗಳಲ್ಲಿ ಗಿಡ ನೆಡಲು ಶಾಸಕರು ಆಗಮಿಸಲಿದ್ದಾರೆ. ಅದಕ್ಕೆ ಸಂಬಂಧಿಸಿದಂತೆ ಎಲ್ಲಾ ಪೂರ್ವತಯಾರಿ ಮಾಡಿಕೊಳ್ಳಲಾಗಿದೆ ಎಂದರು.

ಸಭೆಯಲ್ಲಿ ವಿವಿಧ ಇಲಾಖೆಗಳ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

> **ಕೇಂದ್ರ ಸರ್ಕಾರದ ನಿರ್ದೇಶನದಂತೆ ಈ ಬಾರಿ ಏಕ್ ಪೇಡ್ ಮಾ ಕೆ ನಾಮ್ (ಅಮ್ಮನ ಹೆಸರಿನಲ್ಲಿ ಒಂದು ಮರ) ಎಂಬ ವಿಶೇಷ ಅಭಿಯಾನವನ್ನು ಜಿಲ್ಲೆಯಲ್ಲಿ ನಡೆಸಲಾಗುವುದು. ಜಿಲ್ಲೆಯಲ್ಲಿ ಏಕಬಳಕೆಯ ಪ್ಲಾಸ್ಟಿಕ್ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಿರುವುದರಿಂದ ಪರಿಸರ ದಿನದಂದು ಪರ್ಯಾಯ ವ್ಯವಸ್ಥೆಯಾಗಿ ಉಚಿತ ಬ್ಯಾಗ್ ವಿತರಣೆಗೆ ಚಾಲನೆ ನೀಡಲಾಗುವುದು.**
> ■ ಜಿ.ಎಂ.ಗಂಗಾಧರಸ್ವಾಮಿ, ಜಿಲ್ಲಾಧಿಕಾರಿ

- » ವಿದ್ಯಾರ್ಥಿಗಳಿಗೆ ಪರಿಸರ ಜಾಗೃತಿ ಮೂಡಿಸುವ ಉದ್ದೇಶದಿಂದ ಪ್ರಬಂಧ, ರಸಪ್ರಶ್ನೆ ಹಾಗೂ ಛಾಯಾಚಿತ್ರ ಸ್ಪರ್ಧೆಗಳ ಆಯೋಜನೆ
- » ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಜೂನ್ 5ರಂದು ನಡೆಯುವ ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ
- » ಹಸಿರು ಕರ್ನಾಟಕ ಕಾರ್ಯಕ್ರಮದಡಿ ಪ್ರತಿ ತಾಲೂಕಿಗೆ 3,000 ಸಸಿಗಳ ವಿತರಣೆ

ವಿದ್ಯಾರ್ಥಿಗಳಿಗೆ ದಿನೇಶ್ ಶೆಟ್ಟಿ ಸಲಹೆ

ಜೀವನದಲ್ಲಿ ಉನ್ನತಿ ಸಾಧಿಸಿ



• **ದಾವಣಗೆರೆ:** ಮಕ್ಕಳು ಮೊಬೈಲ್, ಕಂಪ್ಯೂಟರ್ ಕಡೆಗೆ ಹೆಚ್ಚಿನ ಒಲವು ತೋರುತ್ತಿದ್ದು, ತಂತ್ರಜ್ಞಾನವನ್ನು ಅಗತ್ಯಕ್ಕೆ ತಕ್ಕಂತೆ ಬಳಸುವ ಮೂಲಕ ಜೀವನದಲ್ಲಿ ಉನ್ನತಿ ಸಾಧಿಸಬೇಕು ಎಂದು ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ದಿನೇಶ ಕೆ.ಶೆಟ್ಟಿ ಸಲಹೆ ನೀಡಿದರು.

ನಗರದ ದೈವಜ್ಞ ಕಲ್ಯಾಣ ಮಂಟಪದಲ್ಲಿ ಭಾನುವಾರ ರೇವಣಕರ್ ಪರಿವಾರದಿಂದ ಏರ್ಪಡಿಸಿದ್ದ ಎಸ್ಸೆಸ್ಸೆಲ್ಸಿಯಲ್ಲಿ ಶೇ.75ಕ್ಕಿಂತ ಹೆಚ್ಚು ಅಂಕ ಗಳಿಸಿದ ಸಮಾಜದ ವಿದ್ಯಾರ್ಥಿಗಳಿಗೆ ದೈವಜ್ಞ ವಿದ್ಯಾಸಿರಿ ಜಿಲ್ಲಾ ಪ್ರಶಸ್ತಿ ಪ್ರದಾನ ಹಾಗೂ ವಿಶೇಷ ಚೇತನರಿಗೆ ಸಹಾಯಹಸ್ತ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಮೊಬೈಲ್ ಗಳಿಂದ ವಿದ್ಯಾರ್ಥಿಗಳ ಮನಸ್ಸು ಅನಗತ್ಯ ವಿಚಾರಗಳ ಕಡೆ ತಿರುಗುತ್ತಿದೆ. ಮನೆಗೆ ಗುರು-ಹಿರಿಯರು, ಸಂಬಂಧಿಕರು ಬಂದರೂ ಮಕ್ಕಳು ತಮ್ಮ ಕೋಣೆಯಿಂದ ಹೊರಗೇ ಬರುವುದಿಲ್ಲ. ಮೊಬೈಲ್ ನ್ನು ಅವಶ್ಯಕತೆಗೆ ತಕ್ಕಂತೆ ಮಾತ್ರ ಬಳಸಬೇಕು. ಪ್ರಸ್ತುತ ದಿನಗಳಲ್ಲಿ ಎಲ್ಲಾ ರಂಗದಲ್ಲಿಯೂ ಸ್ಪರ್ಧೆ ಇದೆ. ಹೀಗಾಗಿ ವಿದ್ಯಾರ್ಥಿಗಳು ಎಚ್ಚರಿಕೆಯಿಂದ ಹೆಜ್ಜೆ ಇಡಬೇಕು ಎಂದರು.

ಮಹಾನಗರ ಪಾಲಿಕೆ ಮಾಜಿ ಸದಸ್ಯ ಎ.ನಾಗರಾಜ ಮಾತನಾಡಿ, ಪ್ರತಿಭಾ ಪುರಸ್ಕಾರ ಸ್ವೀಕರಿಸಿದ ಮಕ್ಕಳು ಮುಂದಿನ ದಿನಗಳಲ್ಲಿ ಒಳ್ಳೆಯ ವಿದ್ಯಾಭ್ಯಾಸ ಪಡೆದು ಸಮಾಜಕ್ಕೆ ಕೀರ್ತಿ ತರಬೇಕು. ನಾವೆಲ್ಲಾ ಓದುವಾಗ ಶೇ.35ರಷ್ಟು ಅಂಕ ಗಳಿಸುವುದೇ ದೊಡ್ಡ ಸಾಧನೆಯಾಗಿತ್ತು. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಬಹುತೇಕ ಮಕ್ಕಳು ಶೇ.95ಕ್ಕಿಂತ ಹೆಚ್ಚು ಅಂಕ ಗಳಿಸುತ್ತಿದ್ದಾರೆ. ಎಲ್ಲ ಮಕ್ಕಳೂ ಓದಿನ ಕಡೆಗೆ ಹೆಚ್ಚಿನ ಗಮನ ಹರಿಸಬೇಕು. ಸಮಾಜ ನೀಡುತ್ತಿರುವ ಪ್ರೋತ್ಸಾಹ ಸ್ಮರಿಸಿಕೊಂಡು, ಮುಂದೆ ಉನ್ನತ ಸ್ಥಾನಕ್ಕೇರಿದಾಗ ತಾವೂ ಕೂಡ ಸಮಾಜಕ್ಕೆ ಕೈಲಾದ ಕೊಡುಗೆ ನೀಡಬೇಕು ಎಂದು ಆಶಿಸಿದರು.

ಪರಿವಾರದ ಅಧ್ಯಕ್ಷ ಮಂಜುನಾಥ ಎನ್.ರೇವಣಕರ್ ಸಂಜಯ್ ರೇವಣಕರ್ ಶ್ರೀ ರಾಮನಾಥ ಪ್ರಭು ದೇಸಾಯಿ, ಪರಿವಾರದ ಸಂಸ್ಥಾಪಕ ಗೌರವಾಧ್ಯಕ್ಷ ಡಾ.ನಲ್ಲೂರು ಅರುಣಾಚಲ ಎನ್.ರೇವಣಕರ್, ದೈವಜ್ಞ ಬ್ರಾಹ್ಮಣ ಸಮಾಜ ಸಂಘದ ಅಧ್ಯಕ್ಷ ಪ್ರಶಾಂತ್ ವಿ.ವರ್ಣೇಕರ್, ಮೈಸೂರಿನ ಮೀರಾ ನಾಗೇಶ ರೇವಣಕರ್, ಪರಿವಾರದ ಉಪಾಧ್ಯಕ್ಷ ದೇವಿದಾಸ್ ಸುಬ್ರಾಯ ರೇವಣಕರ್, ನಲ್ಲೂರು ರಾಘವೇಂದ್ರ, ಮದನ್, ಮಾರುತಿ, ರಾಮಚಂದ್ರ, ಅಶೋಕ ಇದ್ದರು.

ಮಲೆಬೆನ್ನೂರು ವ್ಯಾಪ್ತಿಯಲ್ಲಿ ಮೇವು ಕೊರತೆ ಆತಂಕ

• **ಮಲೇಬೆನ್ನೂರು:** ಪಟ್ಟಣದ ವಿವಿಧೆಡೆ ಗದ್ದೆಗಳಲ್ಲಿ ಯಂತ್ರಗಳನ್ನು ಬಳಸಿ ಭತ್ತದ ಕಟಾವು ನಡೆಸಲಾಗುತ್ತಿದ್ದು, ಮಳೆ ನೀರು ನಿಂತಿರುವುದರಿಂದ ಹುಲ್ಲು ಒದ್ದೆಯಾಗಿ ಕೊಳೆಯುತ್ತಿದೆ. ಹೀಗಾಗಿ ಜಾನುವಾರುಗಳಿಗೆ ಮೇವಿನ ಕೊರತೆಯಾಗುವ ಆತಂಕ ರೈತರನ್ನು ಕಾಡುತ್ತಿದೆ.

ಜಾನುವಾರುಗಳ ಮೇವಿಗೆ ಒಂದು ವರ್ಷದವರೆಗೆ ಭತ್ತದ ಒಣ ಹುಲ್ಲು ಆಧಾರವಾಗಿರುತ್ತಿತ್ತು. ಈಗ ಆ ಹುಲ್ಲು ನೀರು ಪಾಲಾಗಿದ್ದರಿಂದ ಮೇವಿನ ಕೊರತೆ ಉಂಟಾಗುವ ಸಾಧ್ಯತೆ ಇದೆ. ಜಾನುವಾರು ಕಡಿಮೆ ಇದ್ದವರು ತಮಗೆ ಬೇಕಾದಷ್ಟು ಹುಲ್ಲನ್ನು

ಇಟ್ಟುಕೊಂಡು ಉಳಿದಿದ್ದನ್ನು ಒಂದು ಎಕರೆಗೆ 4 ಸಾವಿರ ರೂ.ನಂತೆ ಮಾರಾಟ ಮಾಡುತ್ತಿದ್ದರು. ಅಗತ್ಯ ಇದ್ದವರು ಅದನ್ನು ಖರೀದಿಸುತ್ತಿದ್ದರು. ಹುಲ್ಲು ಕೈಗೆ ಸಿಗದಂತಾಗಿರುವುದರಿಂದ ಒಂದೆಡೆ ಮೇವಿನ ಕೊರತೆ, ಮತ್ತೊಂದೆಡೆ ಆದಾಯಕ್ಕೆ ಕತ್ತರಿ ಬಿದ್ದಂತಾಗಿದೆ ಎಂದು ರೈತರಾದ ವೆಂಕಟೇಶ್ ಮಕರಿ ಮತ್ತು ವಿ.ರಾಮಪ್ಪ ಆತಂಕ ವ್ಯಕ್ತಪಡಿಸಿದರು. ಗ್ರಾಮೀಣ ಪ್ರದೇಶಗಳಲ್ಲಿ ಹೈನುಗಾರಿಕೆಯನ್ನು ಉಪಕಸುಬು ಹಾಗೂ ಹೈನೋದ್ಯಮವನ್ನೇ ನಂಬಿಕೊಂಡ ಕುಟುಂಬಗಳ ಜಾನುವಾರುಗಳಿಗೆ ಆರು ತಿಂಗಳವರೆಗೆ ಮೇವಿನ ಕೊರತೆ ಕಾಡಲಿದೆ. ಹಸಿ ಮೇವಿನ ಜೊತೆ ಭತ್ತದ ಒಣ ಹುಲ್ಲಿನ ಬಳಕೆ ಮಾಡಿದರೆ ಜಾನುವಾರುಗಳ ಸಾಕಾಣಿಕೆಗೆ ಅನುಕೂಲವಾಗುತ್ತಿತ್ತು. ಈಗ ಒಣ ಹುಲ್ಲಿನ ಕೊರತೆ ಕಾಡಲಿದೆ ಎಂದು ರೈತರು ಹೇಳಿದ್ದಾರೆ.

ತಿಪ್ಪಣ್ಣಪ್ಪ ಕಮ್ಮಕ್ಕನವರ್‌ಗೆ ಸಚಿವ ಸ್ಥಾನ ನೀಡುವಂತೆ ಆಗ್ರಹ

• **ಹರಪನಹಳ್ಳಿ:** ತಿಪ್ಪಣ್ಣಪ್ಪ ಕಮ್ಮಕ್ಕನವರ್‌ಗೆ ಸಚಿವ ಸ್ಥಾನ ನೀಡಬೇಕು ಎಂದು ಗಂಗಾಮತ ಸಮಾಜದ ಪರವಾಗಿ ವಕೀಲ ಕಣಿವೆಹಳ್ಳಿ ಮಂಜುನಾಥ್ ಆಗ್ರಹಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು. ಆರ್ಥಿಕ, ಶೈಕ್ಷಣಿಕ, ಸಾಮಾಜಿಕ ಹಾಗೂ ರಾಜಕಾರಣದಲ್ಲಿಯೂ ಅತ್ಯಂತ ಹಿಂದುಳಿದ ಬಲಿಷ್ಠ ಸಮಾಜ ಏಳಿಗೆ ಆಗಬೇಕಾದರೆ ಇಂತಹ ವ್ಯಕ್ತಿಗಳು ಸಚಿವ ಸಂಪುಟಕ್ಕೆ ಸೇರಿ ಸಮಾಜಕ್ಕೆ ಬೃಹತ್ ಶಕ್ತಿ ಆಗಬೇಕಿದೆ. 25ನೇ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಲಿರುವ ಡಿ.ಕೆ.ಶಿವಕುಮಾರ್ ಅವರ ಸಚಿವ ಸಂಪುಟದಲ್ಲಿ ಕಲ್ಯಾಣ ಕರ್ನಾಟಕದ ಹಿರಿಯ ರಾಜಕಾರಣಿ ತಿಪ್ಪಣ್ಣಪ್ಪ ಅವರಂತಹ ಜಾಣರಾಜಕಾರಣಿಗಳ ಅವಶ್ಯವಿದೆ. ಜೊತೆಗೆ ಸಮಾಜಗಳ ಅಭಿವೃದ್ಧಿಯು ಸರಳವಾಗುವುದು ಎಂದರು. ಕಾಂಗ್ರೆಸ್ ಹೈಕಮಾಂಡ್ ಪ್ರಮುಖ ನಾಯಕರ ಆತ್ಮೀಯರಾಗಿರುವ ಇವರು ಚತುರ ರಾಜಕಾರಣಿಗಳಾಗಿದ್ದಾರೆ. ಇವರನ್ನ ಸಚಿವ ಸಂಪುಟಗಳಲ್ಲಿ ಸೇರ್ಪಡೆ ಮಾಡಿ ತಳ ಸಮುದಾಯಕ್ಕೆ ಸಾಮಾಜಿಕ ನ್ಯಾಯ ಒದಗಿಸಿ ಕೊಡಬೇಕು ಎಂದು ಮನವಿ ಮಾಡಿದರು. ಸಮಾಜದ ಮುಖಂಡ ಪವಾಡಿ ಬಸವರಾಜ್ ಮಾತನಾಡಿ. ಮಗು ಅಳದೆ ತಾಯಿ ಹಾಲು ಕೊಡಲು ಬೇಕಾಗಿದ್ದನ್ನು ಆಗ್ರಹಿಸದೆ ಸ್ಥಾನವು ದೊರೆಯದು ಎನ್ನುವಂತೆ ಸಮಾಜದ ಎಲ್ಲರೂ ಮುಖಂಡರ ಸಚಿವ ಸ್ಥಾನಕ್ಕೆ ಬೇಡಿಕೆ ಇಡುವುದು ನಮ್ಮ ಕರ್ತವ್ಯವಾಗಿದೆ. ಜೊತೆಗೆ ಪೀಠಾಧ್ಯಕ್ಷರಾದ ಶಾಂತಭೀಷ್ಮ ಸ್ವಾಮೀಜಿಯವರ ಮೂಲಕ ಮನವಿ ಸಲ್ಲಿಸಲು ಸಮಾಜದ ಮುಖಂಡರು ಪೀಠಕ್ಕೆ ನಿಯೋಗ ಹೋಗಲು ತಯಾರಿ ನಡೆಸಿದ್ದರ ಬಗ್ಗೆ ಹೇಳಿದರು. ಗಂಗಾಮತ ಸಮಾಜದ ತಾಲೂಕು ಉಪಾಧ್ಯಕ್ಷ ಚಾಲಗಾರ ಕೊಟ್ರೇಶ, ಖಜಾಂಚಿ ದುರ್ಗೇಶ, ಮುಖಂಡರಾದ ಜಾಲಗಾರ ಮಂಜಪ್ಪ, ಕೊಂಗನ ಹೊಸೂರು ಮಹಾಂತೇಶ, ಕೊಂಗನ ಹೊಸೂರ ನಾಗರಾಜ್, ಮೀನುಗಾರರ ಸಹಕಾರ ಸಂಘದ ಕಾರ್ಯದರ್ಶಿ ರವಿ ಎನ್ ಇದ್ದರು.



ದಾವಣಗೆರೆ ನಗರದ ಜಿಲ್ಲಾ ಬಿಜೆಪಿ ಕಚೇರಿಗೆ ಪಕ್ಷದ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಭೇಟಿ ನೀಡಿದ್ದರು. ಈ ಸಂದರ್ಭದಲ್ಲಿ ಮಾಜಿ ಕೇಂದ್ರ ಸಚಿವ ಡಾ.ಜಿ.ಎಂ.ಸಿದ್ದೇಶ್ವರ, ವಿಧಾನ ಪರಿಷತ್ ಮಾಜಿ ಮುಖ್ಯ ಸಚೇತಕ ಡಾ.ಎ.ಹೆಚ್.ಶಿವಯೋಗಿಸ್ವಾಮಿ, ಬಿಜೆಪಿ ಜಿಲ್ಲಾಧ್ಯಕ್ಷ ಎನ್. ರಾಜಶೇಖರ, ಯಶವಂತರಾವ್ ಜಾಧವ್, ಎನ್.ಎಂ.ವೀರೇಶ ಹನಗವಾಡಿ, ಅಣಬೇರು ಜೀವನಮೂರ್ತಿ, ಶ್ರೀನಿವಾಸ ದಾಸಕರಿಯಪ್ಪ, ದೊಗ್ಗಳ್ಳಿ ವೀರೇಶ, ಕೆ.ಎಂ.ಸುರೇಶ, ಬಿ.ಜಿ.ಅಜಯಕುಮಾರ, ಎಲ್.ಎನ್.ಕಲ್ಲೇಶ, ಹನುಮಂತನಾಯ್ಕ, ಹೆಚ್.ಸಿ.ಜಯಮ್ಮ, ಕೆ.ಜಿ.ಕಲ್ಲಪ್ಪ ಹಾಜರಿದ್ದರು.

ಶೈಕ್ಷಣಿಕವಾಗಿ ಅಭಿವೃದ್ಧಿ ಹೊಂದಿದರೆ ಉನ್ನತ ಗುರಿ ಸಾಧ್ಯ

• **ಹರಿಹರ:** ಶೈಕ್ಷಣಿಕವಾಗಿ ಅಭಿವೃದ್ಧಿ ಹೊಂದಿದಲ್ಲಿ ಮಾತ್ರ ಸರ್ವವನ್ನು ಸಂಪಾದಿಸಲು ಸಾಧ್ಯವೆಂದು ಶಾಸಕ ಬಿ.ಪಿ.ಹರೀಶ್ ಹೇಳಿದರು.

ಮಾದರ ಚೆನ್ನಯ್ಯಜಯಂತಿ ಅಂಗವಾಗಿ ತಾಲೂಕು ಮಾದಿಗ ಸಮಾಜದ ವತಿಯಿಂದ ಹಮ್ಮಿಕೊಂಡಿದ್ದ ಪ್ರತಿಭಾ ಪುರಸ್ಕಾರ, ಬಡ ವಿದ್ಯಾರ್ಥಿಗಳಿಗೆ ಉಚಿತ ವಿದ್ಯಾರ್ಥಿ ಕಿಟ್ ವಿತರಣಾ ಹಾಗೂ ಜನಜಾಗೃತಿ ಸಮಾವೇಶ ಉದ್ಘಾಟಿಸಿದ ಅವರು ಮಾತನಾಡಿದರು. ಅಂಬೇಡ್ಕರವರು ನಮಗೆ ಸಂವಿಧಾನದ ಮೂಲಕ ಸರ್ವವನ್ನು ನೀಡಿದ್ದಾರೆ. ಅದರ ಸಮಗ್ರ ಲಾಭವನ್ನು ಪಡೆಯಲು ಶಿಕ್ಷಣವೇ ಶಕ್ತಿಯಾಗಿದ್ದು ಸರ್ವರೂ ಶಿಕ್ಷಣವಂತರಾಗಬೇಕು ಎಂದರು. ಮಾದಿಗ ಸಮಾಜ ಅಧ್ಯಕ್ಷ ಆನಂದಕುಮಾರ್ ಮಾತನಾಡಿ, ಕಳೆದ 7 ವರ್ಷಗಳಿಂದ ಈ ಕಾರ್ಯಕ್ರಮ ನಡೆದು ಬಂದಿದ್ದು, ಈ ವರ್ಷಎಸ್.ಎಸ್ಎಲ್ ಸಿ ಹಾಗೂ ಪಿ.ಯು.ಸಿಯಲ್ಲಿ ಶೇ 75 ಕ್ಕಿಂತ ಹೆಚ್ಚು ಅಂಕಗಳಿಸಿದ 65 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ, 300 ಬಡವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ಕಿಟ್ ವಿತರಿಸಿದ್ದೇವೆ. ಮಾದಿಗ ಸಮಾಜದಲ್ಲಿ ಜನಿಸಿರುವ ಪ್ರಜಾವಂತರೆಲ್ಲಾ ನಮ್ಮ ಸಮಾಜದ ಏಳಿಗೆಗಾಗಿ ಶ್ರಮಿಸುತ್ತಿದ್ದು, ಅದಕ್ಕೆ ಸರ್ವರ ಸಹಕಾರ ಅತ್ಯಗತ್ಯವೆಂದು ಮನವಿ ಮಾಡಿದರು. ನ್ಯಾಯವಾದಿ



ಎಂ.ಸಿ.ಮೋಹನ್‌ಕುಮಾರ್, ನಿವೃತ್ತ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪಿ.ರವಿನಾರಾಯಣ, ಜಿ. ಎಚ್. ಮರಿಯೋಜಿರಾವ್, ಮಾಜಿ ಶಾಸಕ ಎಸ್. ರಾಮಪ್ಪ, ಎನ್. ಎಚ್.ಶ್ರೀನಿವಾಸ್ ನಂದಿಗಾವಿ, ಧೂಡಾಅಧ್ಯಕ್ಷ ದಿನೇಶ್ ಕೆ ಶೆಟ್ಟಿ, ಹಾಲೇಶಗೌಡ್ರು, ಎಲ್.ಬಿ.ಹನುಮಂತಪ್ಪ, ಭೂಮೇಶ್, ಎಂ.ಬಿ.ಧರ್ಮದತ್, ಹನುಮಂತಪ್ಪ ದೊಡ್ಡನೆ ಹಳ್ಳಿಹಾಳ್, ಎಚ್.ಶಿವಪ್ಪ, ಬಿ.ಡಿ.ಬಸವರಾಜಪ್ಪ ಕೊಕ್ಕನೂರು,ಎಚ್.ಎಂ.ಹನುಮಂತಪ್ಪ ಬನ್ನಿಕೋಡ್, ಎ.ಕೆ. ನಾಗೇಂದ್ರಪ್ಪ ರಾಜನಹಳ್ಳಿ, ಚೌಡಪ್ಪ ಹೊಳೆಸಿರಿಗೆರೆ ಮುಂತಾದವರು ಉಪಸ್ಥಿತರಿದ್ದರು.

ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹ | ದಾವಣಗೆರೆಯಲ್ಲಿ ಜಿಲ್ಲಾಧಿಕಾರಿ ಕಚೇರಿ ಎದುರು ಸಿಐಟಿಯು ನೇತೃತ್ವದಲ್ಲಿ ಪ್ರತಿಭಟನೆ

ಕಾರ್ಮಿಕರಿಗೆ ಕನಿಷ್ಠ 36 ಸಾವಿರ ರೂ. ವೇತನ ನಿಗದಿ ಮಾಡುವಂತೆ ಒತ್ತಾಯ

• **ದಾವಣಗೆರೆ:** ಮಾಸಿಕ ಸರಾಸರಿ 36 ಸಾವಿರ ರೂ. ಕನಿಷ್ಠ ವೇತನ ನಿಗದಿ, ಖಾಯಂಯೇತರ ಕಾರ್ಮಿಕರ ಖಾಯಂ ಗೆ ಶಾಸನ ರೂಪಿಸುವುದು ಸೇರಿದಂತೆ ಹಲವು ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್(ಸಿಐಟಿಯು) ಜಿಲ್ಲಾ ಘಟಕದಿಂದ ನಗರದಲ್ಲಿ ಶನಿವಾರ ಪ್ರತಿಭಟಿಸಲಾಯಿತು.

ಇಲ್ಲಿನ ಜಿಲ್ಲಾಡಳಿತ ಭವನದ ಎದುರು ಸಿಐಟಿಯು ರಾಜ್ಯ ಕಾರ್ಯದರ್ಶಿ ಕೆ.ಎಚ್.ಆನಂದರಾಜ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿದ ಸಂಘಟನೆ ಮುಖಂಡರು, ಕಾರ್ಮಿಕರು ಜಿಲ್ಲಾಡಳಿತದ ಮುಖಾಂತರ ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ಮನವಿಪತ್ರ ಸಲ್ಲಿಸಿದರು.

ಇದೇ ವೇಳೆ ಮಾತನಾಡಿದ ಕೆ.ಹೆಚ್.ಆನಂದರಾಜ, ಸರ್ಕಾರವು ವೈಜ್ಞಾನಿಕವಾಗಿ ಎಲ್ಲಾ ಕಾರ್ಮಿಕರಿಗೂ ಕನಿಷ್ಠ ವೇತನ ನಿಗಧಿಪಡಿಸಿ ಜಾರಿಗೊಳಿಸಬೇಕು. ಕನಿಷ್ಠ ವೇತನ ಪರಿಷ್ಕರಿಸಿ, ಬಹುತೇಕ ಉದ್ದಿಮೆಗಳಿಗೆ ಏಕರೂಪವಾಗಿ 3 ವಲಯಗಳಲ್ಲಿ ಕನಿಷ್ಠ ವೇತನದ ಅಂತಿಮ ಅಧಿಸೂಚನೆ ಹೊರಡಿಸಿರುವುದು ಸ್ವಾಗತಾರ್ಹವಾದರೂ, ಅದರಲ್ಲಿನ ನ್ಯೂನ್ಯತೆಗಳನ್ನು ಸರಿಪಡಿಸಬೇಕು ಎಂದು ಒತ್ತಾಯಿಸಿದರು.



ಕಾರ್ಮಿಕರ ಜೀವನ ನಿರ್ವಹಣಾ ವೆಚ್ಚ ಮತ್ತು ಪ್ರಸ್ತುತ ಬೆಲೆಗಳಿಗೆ ಅನುಗುಣವಾಗಿ ಸುಪ್ರೀಂ ಕೋರ್ಟ್ ನ ಐತಿಹಾಸಿಕ ರೆಪ್ಟಕೋಸ್ ಬ್ರೆಟ್ ಅಂಡ್ ಕಂ ಪ್ರಕರಣದಲ್ಲಿ ನಿಗಧಿಪಡಿಸಿದ ಮಾನದಂಡಗಳನ್ನು ಆಧರಿಸಿ, ರಾಜ್ಯದಲ್ಲಿ ಕನಿಷ್ಠ ವೇತನ ಪರಿಷ್ಕರಿಸಬೇಕೆಂಬುದು ಕರ್ನಾಟಕ ಹೈಕೋರ್ಟ್ ನಿರ್ದೇಶನ ಹಾಗೂ ಸಿಐಟಿಯು ಕಾರ್ಮಿಕ ಸಂಘಟನೆಗಳ ಆಗ್ರಹವಾಗಿತ್ತು. ಕನಿಷ್ಠ ವೇತನದಿಂದ 1 ಕೋಟಿಗೂ ಅಧಿಕ ಕಾರ್ಮಿಕರಿಗೆ ಪ್ರಯೋಜನವಾದರೂ, ಹೆಚ್ಚಿಸಿದ ಕನಿಷ್ಠ ವೇತನವು ಸುಪ್ರೀಂ ಕೋರ್ಟ್ ನಿಗಧಿಪಡಿಸಿದ ಮಾನದಂಡಗಳಿಗೆ ಪೂರಕವಾಗಿಲ್ಲ ಎಂದು ಅವರು ದೂರಿದರು.

ಈಗಿನ ಬೆಲೆಗಳು ಮತ್ತು ಜೀವನ ವೆಚ್ಚಕ್ಕನುಗುಣವಾಗಿ ಸರಾಸರಿ 36 ಸಾವಿರ ಕನಿಷ್ಠ ವೇತನ ನಿಗಧಿಪಡಿಸಬೇಕು. ಕನಿಷ್ಠ ವೇತನದ ಕರಡು ಅಧಿಸೂಚನೆಯನ್ನು 1.4.2025ರಿಂದಲೇ ಪೂರ್ವಾನ್ವಯಿಸಿ ಕನಿಷ್ಠ ವೇತನ ಜಾರಿಗೆ ಬದಲಾಗಿ 22.5.2026ರಂದು ಅಧಿಸೂಚನೆ ಹೊರಡಿಸಿದ ದಿನದಿಂದ ಜಾರಿಗೆ ತಂದಿರುವುದು ಬಹುಸಂಖ್ಯಾತ ಕಾರ್ಮಿಕರಿಗೆ ಒಂದು ವರ್ಷದ ಅರಿಯರ್ಸ್ ಸಿಗದಂತೆ ಮಾಡಿದೆ. ಹಾಗಾಗಿ ಕನಿಷ್ಠ ವೇತನವನ್ನು ಏಪ್ರಿಲ್ 2025ರಿಂದಲೇ ಜಾರಿಗೆ ಬರುವಂತೆ ತಿದ್ದುಪಡಿ ಮಾಡಿ ಅಧಿಸೂಚನೆ ಹೊರಡಿಸಬೇಕು ಎಂದು ಅವರು ತಾಕೀತು ಮಾಡಿದರು.

ಅಧಿಸೂಚನೆಯಿಂದ ಗಾರ್ಮೆಂಟ್ಸ್, ಪ್ಲಾಂಟೇಷನ್, ಬೀಡಿ, ಅಗರಬತ್ತಿ, ಕೈಮಗ್ಗ ಸೇರಿದಂತೆ 19 ವಿಭಾಗದ ಉದ್ದಿಮೆ ಹೊರಗಿಟ್ಟ ಸರ್ಕಾರದ ಕ್ರಮದಿಂದ ಬಹುಸಂಖ್ಯಾತ ಮಹಿಳಾ ಕಾರ್ಮಿಕರು ಕನಿಷ್ಠ ವೇತನ ಹೆಚ್ಚಳದಿಂದ ವಂಚಿತರಾಗಲಿದ್ದಾರೆ. ಮೇ 22ರಂದು ಜಾರಿಗೆ ತಂದ ಕನಿಷ್ಠ ವೇತನವನ್ನೇ ಈ 19 ಉದ್ದಿಮೆಗೂ ವಿಸ್ತರಿಸಿ, ತಕ್ಷಣ ಅಧಿಸೂಚನೆ ಹೊರಡಿಸಬೇಕು. ಸ್ಕೀಂ ನೌಕರರನ್ನು ಕನಿಷ್ಠ ವೇತನ ವ್ಯಾಪ್ತಿಗೆ ತರಬೇಕು. ಪ್ರಸ್ತುತ ಪ್ರಕಟಿತ ಕನಿಷ್ಠ ವೇತನದಿಂದ ಕಾರ್ಮಿಕರಿಗೆ ಸ್ವಲ್ಪ ಪ್ರಮಾಣದಲ್ಲಿ ವೇತನ ಹೆಚ್ಚಿಸಿರುವುದರಿಂದ ಮಾಲೀಕರ ಯಾವುದೇ ಒತ್ತಡಕ್ಕೆ ಮಣಿಯದೆ ಪರಿಷ್ಕೃತ ಕನಿಷ್ಠ ವೇತನದ ಆದೇಶವನ್ನು ಸರ್ಕಾರ ಕಟ್ಟುನಿಟ್ಟಾಗಿ ಅನುಷ್ಠಾನಕ್ಕೆ ತರಬೇಕು ಎಂದು ಅವರು ಆಗ್ರಹಿಸಿದರು.

ಕಾರ್ಮಿಕರನ್ನು ನವ ಗುಲಾಮಗಿರಿಗೆ ದೂಡುವ ಕೇಂದ್ರದ 4 ಸಂಹಿತೆಗಳನ್ನು ರಾಜ್ಯದಲ್ಲಿ ಯಥಾವತ್ತಾಗಿ ಜಾರಿಗೆ ತರಬಾರದು. ದೇಶದ ಸಂವಿಧಾನ ನೀಡಿದ ಪ್ರದತ್ತ ಅಧಿಕಾರ ಬಳಸಿ ರಾಜ್ಯ ಸರ್ಕಾರ ಈ 4 ಸಂಹಿತೆಗೆ ಕಾರ್ಮಿಕರ ಪರ ಕರ್ನಾಟಕ ತಿದ್ದುಪಡಿ ತರಬೇಕು. ಸರ್ಕಾರಿ, ಖಾಸಗಿ ವಲಯದಲ್ಲಿ ಹಂಗಾಮಿ, ಗುತ್ತಿಗೆ, ನಿಯಮಿತ ಅವಧಿ, ಟ್ರೈನಿ ಇನ್ನಿತರ ಸ್ವರೂಪದ ಖಾಯಂಯೇತರ ಕಾರ್ಮಿಕರು ಕಡಿಮೆ ವೇತನಕ್ಕೆ ಯಾವುದೇ ಕಾನೂನುಬದ್ಧ ಸವಲತ್ತುಗಳಿಲ್ಲದೇ ಅಭದ್ರತೆಯಲ್ಲಿ ದುಡಿಯುತ್ತಿದ್ದು, ಇಂತಹವರಿಗೆ ಸರ್ಕಾರದಡಿ ಸೊಸೈಟಿ ಮಾದರಿ ಕೈಬಿಟ್ಟು ರಾಜ್ಯದಲ್ಲಿ ಖಾಯಂಯೇತರ ಖಾಯಂ ಗೆ ಶಾಸನ ರೂಪಿಸಬೇಕು ಎಂದು ಅವರು ಮನವಿ ಮಾಡಿದರು.

ಸಂಘಟನೆ ಮುಖಂಡರಾದ ಮುದಿಮಲ್ಲನಗೌಡ, ಅಫ್ರೋಜ್ ಅಹಮ್ಮದ್, ಎಸ್.ಸಿ.ಶ್ರೀನಿವಾಸಾಚಾರ್, ಬಿ.ಎನ್.ಹಾಲೇಶ ನಾಯ್ಕ, ಜಿ.ಡಿ.ಮಂಜುನಾಥ ಮತ್ತಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

> **ಕೇಂದ್ರ ಸರ್ಕಾರವು 29 ಕಾರ್ಮಿಕ ಕಾನೂನನ್ನು ರದ್ದುಪಡಿಸಿ ಮಾಡಿರುವ ನಾಲ್ಕು ಕಾರ್ಮಿಕ ಸಂಹಿತೆಗಳಲ್ಲಿ ಕಾರ್ಮಿಕರ ಪರ ತಿದ್ದುಪಡಿ ಮಾಡಿ, ನಿಯಮಗಳನ್ನು ರೂಪಿಸಬೇಕು.**
> ■ ಕೆ.ಎಚ್.ಆನಂದರಾಜ

ಸಂಪಾದಕೀಯ

ಹಲ್ಲೆ ಮತ್ತು ಹುಟ್ಟುವ ಪ್ರಶ್ನೆಗಳು

ತೃಣಮೂಲ ಕಾಂಗ್ರೆಸಿನ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ಬ್ಯಾನರ್ಜಿ ಮೇಲೆ ಹಲ್ಲೆ ನಡೆಸಿದವರ ಬಂಧನವಾಗಿದೆ. ಆದರೆ ರಾಜಕೀಯದಾಟ ಆರಂಭವಾಗಿದೆ. ಮಮತಾ ಬ್ಯಾನರ್ಜಿಯವರು ಅದನ್ನು ದೇಶದ ಅತ್ಯಂತ ಪ್ರಮುಖ ಘಟನೆ ಎಂಬಂತೆ ಚಿತ್ರಿಸಲಾರಂಭಿಸಿದ್ದಾರೆ. ರಾಹುಲ್ ಗಾಂಧಿ ಕೂಡ ಸಾಂತ್ವನ ವ್ಯಕ್ತಪಡಿಸಿದ್ದಾರೆ. ಸ್ವಯಂ ಅಭಿಷೇಕ್ ಬ್ಯಾನರ್ಜಿ, ಇದು ಸರ್ಕಾರಿ ಪ್ರಾಯೋಜಿತ ಹಲ್ಲೆ ಎಂದಿದ್ದಾರೆ. ಹಲ್ಲೆ ಅಕ್ಷಮ್ಯ. ಆದರೆ ಈ ಪ್ರಕರಣ ಅನೇಕ ಪ್ರಶ್ನೆಗಳನ್ನು ಹುಟ್ಟಿಸುತ್ತವೆ.



ಬಿಜೆಪಿ ಸರ್ಕಾರ ಪಶ್ಚಿಮ ಬಂಗಾಳದಲ್ಲಿ ಹಿಂಸೆಯ ರಾಜಕಾರಣಕ್ಕಿಳಿದಿದೆ, ವ್ಯವಸ್ಥೆಯನ್ನು ಬಳಸಿಕೊಂಡು ವಿರೋಧ ಪಕ್ಷಗಳನ್ನು ದಮನಿಸುತ್ತಿದೆ ಎನ್ನುವ ಮಮತಾ ತಮ್ಮ ಅಧಿಕಾರಾವಧಿಯಲ್ಲಿ ದಿನನಿತ್ಯ ಬಿಜೆಪಿ ಕಾರ್ಯಕರ್ತರ ಕೊಲೆಗಳಾಗುತ್ತಿದ್ದಾಗ ಸಂವೇದನಾಹೀನರಾಗಿ ನಡೆದುಕೊಂಡಿದ್ದರು. ಅಭಿಷೇಕ್ ಬ್ಯಾನರ್ಜಿಯ ಸೋನಾರ್‌ಪುರ ಭೇಟಿಯಲ್ಲೇ ಅಪ್ರಮಾಣಿಕತೆಯಿದೆ. ಚುನಾವಣೆಯ ನಂತರದ ಹಿಂಸಾಚಾರದಲ್ಲಿ ಮೃತರಾದವರ ಮನೆಗಳಿಗೆ ಸಂತಾಪ ಸೂಚಿಸಲು ತೆರಳಿದ್ದರೋ ಅಥವಾ ಕೆರಳಿಸಲು ಹೋಗಿದ್ದರೋ ಎಂಬ ಗುಮಾನಿ ಜನರಿಗಿದೆ. ಚುನಾವಣೆಯ ಸಮಯದಲ್ಲಿ ಇದೇ ಅಭಿಷೇಕ್ ಬ್ಯಾನರ್ಜಿ ಮೇ 4ರ ನಂತರ ನಿಮ್ಮನ್ನು ಕಾಪಾಡಲು ಯಾವ ದೆಹಲಿಯ ನಾಯಕ ಬರುತ್ತಾನೆ ನೋಡೋಣ ಎಂದು ನೇರಾನೇರ ಬಿಜೆಪಿ ಕಾರ್ಯಕರ್ತರಿಗೆ ಬೆದರಿಕೆಯನ್ನೂ ಒಡ್ಡಿದ್ದರು. ಅಂದರೆ ಈ ಅಭಿಷೇಕ್ ಬ್ಯಾನರ್ಜಿ ಮೂಲತಃ ಗೂಂಡಾಗಿರಿಯನ್ನೇ ರಾಜಕಾರಣ ಎಂದುಕೊಂಡ ಮನುಷ್ಯ. ಅಲ್ಲದೆ ಪ.ಬಂಗಾಳದಲ್ಲಿ ಮಮತಾರನ್ನು ಬೆಂಬಲಿಸುವ ಅಸಂಖ್ಯಾತ ಕಾರ್ಯಕರ್ತರಿಗೂ ಅಭಿಷೇಕ್ ಬ್ಯಾನರ್ಜಿ ಕಂಡರಾಗುತ್ತಿರಲಿಲ್ಲ, ಸೋಲಿನ ನಂತರ ಇದಕ್ಕೆ ನೇರವಾಗಿ ಅಭಿಷೇಕ್ ಬ್ಯಾನರ್ಜಿಯೇ ಕಾರಣ ಎಂದು ಅನೇಕ ಟಿ.ವಿ ಚರ್ಚೆಗಳಲ್ಲಿ ತೃಣಮೂಲ ಕಾಂಗ್ರೆಸಿನ ಸಮರ್ಥಕರೇ ಆರೋಪವನ್ನು ಮಾಡಿದ್ದರು. ಇವೆಲ್ಲವನ್ನೂ ನೋಡಿದರೆ ಟಿಎಂಸಿಯ ಕಾರ್ಯಕರ್ತರೇ ತಮ್ಮ ಸೋಲಿಗೆ ಇವರೇ ಕಾರಣರಾದರೆಂದು ಯಾಕೆ ಹಲ್ಲೆ ನಡೆಸಿರಬಾರದು? ದಶಕಗಳ ಕಾಲ ವ್ಯವಸ್ಥೆಯನ್ನು ದುರ್ಬಳಕೆ ಮಾಡಿಕೊಂಡು ಹಿಂಸಾಚಾರದ ಮೂಲಕ ಗೆಲ್ಲುತ್ತಿದ್ದ ಟಿಎಂಸಿ ಹಲ್ಲೆಯ ಬಗ್ಗೆ ದೂರನ್ನೇಕೆ ನೀಡಲಿಲ್ಲ? ಇದು ಸರ್ಕಾರಿ ಪ್ರಾಯೋಜಿತ ಹಲ್ಲೆಯಾಗಿದ್ದರೆ ಪೊಲೀಸರೇಕೆ ಸ್ವಯಂಪ್ರೇರಣೆಯಿಂದ ದೂರು ದಾಖಲಿಸಿಕೊಳ್ಳುತ್ತಿದ್ದರು? ನಾಲ್ವರನ್ನೇಕೆ ಬಂಧಿಸುತ್ತಿದ್ದರು? ಘಟನೆಯ ನಂತರ ಅನುಕಂಪದ ಹೇಳಿಕೆಗಳನ್ನು ನೀಡುತ್ತಿರುವ ಟಿಎಂಸಿ ಮತ್ತು ಅದರ ನಾಯಕಿಯ ಸುಳ್ಳುಗಳನ್ನು ನೋಡಿದರೆ ಇವೆಲ್ಲಾ ಸೋಲಿನ ಹತಾಶೆಯಿಂದ ಹೊರಬಂದ ನಾಟಕ ಎಂದೇ ಅನಿಸುತ್ತದೆ. ಮಮತಾ ಬ್ಯಾನರ್ಜಿ ಒಂದು ಹೆಜ್ಜೆ ಮುಂದುವರಿದು ಐಸಿಯುನಲ್ಲಿದ್ದ, ಗಂಭೀರವಾಗಿ ಗಾಯಗೊಂಡಿದ್ದ ವ್ಯಕ್ತಿಯನ್ನು ಆಸ್ಪತ್ರೆಯಿಂದ ತುರಾತುರಿಯಲ್ಲಿ ಬಿಡುಗಡೆ ಮಾಡಿದ್ದಾರೆ ಎಂದೂ ಆರೋಪಿಸಿದ್ದಾರೆ, ಇದಕ್ಕೆ ಸರ್ಕಾರದ ಬೆದರಿಕೆಯೇ ಕಾರಣ ಎಂದು ಆರೋಪವನ್ನು ಮಾಡಿದ್ದಾರೆ. ಹಲ್ಲೆ ಪ್ರಕರಣದಲ್ಲಿ ಸಹಜವಾಗಿ ನಡೆಯಬೇಕಾದ ವೈದ್ಯಕೀಯ ಪ್ರಕ್ರಿಯೆಗಳು ಮುಗಿದ ಮೇಲೆ ಯಾಕಾದರೂ ಅಭಿಷೇಕ್ ಬ್ಯಾನರ್ಜಿ ಆಸ್ಪತ್ರೆಯಲ್ಲಿರಬೇಕು? ಈ ಎಲ್ಲಾ ನಾಟಕದ ತಾತ್ಪರ್ಯವೇನೆಂದರೆ ಸೋತು ಸುಣ್ಣವಾದ ಟಿಎಂಸಿ ಮುಂದಿನ ದಿನಗಳಲ್ಲಿ ಇಂಥ ನಾಟಕಗಳನ್ನು ನಿರಂತರ ಮಾಡುತ್ತಿರುತ್ತದೆ ಎಂಬುದು!

ಸಮರ್ಪಿತ ಬದುಕಿನ ಒಂದೇ ಬಳ್ಳಿಯ ಹೂಗಳು

ಈ ಮೂವರದೂ ಒಂದೇ ರಾಗ -ಅದು ಸಮಾಜಮುಖಿ ರಾಗ. ಅವರೆಲ್ಲ ಸ್ವಂತಕ್ಕಾಗಿ ಬದುಕದೆ ಸಮಾಜಕ್ಕಾಗಿ ಬದುಕು ನಡೆಸಿದವರು.


ನೇರ ನೋಟ
• ದು.ಗು. ಲಕ್ಷ್ಮಣ
dugulakshman@yahoo.com



ಒಂದೇ ಮನೆಗೆ ಸೇರಿದ ಸದಸ್ಯರಲ್ಲಿ ಹಲವರು ವೈದ್ಯರಾಗುವುದನ್ನು ನೋಡಿದ್ದೇವೆ. ನ್ಯಾಯವಾದಿ, ನ್ಯಾಯಾಧೀಶರು, ಅಧ್ಯಾಪಕರಾಗುವುದನ್ನು ನೋಡಿದ್ದೇವೆ. ಒಂದೇ ಮನೆಯಲ್ಲಿ, ತಂದೆ, ಮಗ, ಮೊಮ್ಮಗ ರಾಜಕಾರಣಿಯಾಗುವುದು ಹೊಸತೇನಲ್ಲ. ಆದರೆ ಒಂದೇ ಮನೆಗೆ ಸೇರಿದ ಸೋದರ, ಸೋದರಿಯರು ಸಮಾಜ ಸೇವೆಗಾಗಿ ಬದುಕು ಮುಡಿಪಾಗಿಟ್ಟ ನಿದರ್ಶನ ತೀರಾ ವಿರಳ. ಬೆಂಗಳೂರಿನ ಸ್ವರ್ಗೀಯರಾದ ಸೂರ್ಯನಾರಾಯಣರಾವ್, ಕೃ. ನರಹರಿ ಮತ್ತು ಕೃ. ರುಕ್ಮಿಣಿ ಸಮಾಜ ಸೇವೆಗಾಗಿಯೇ ಸಂಪೂರ್ಣ ಬದುಕು ಮುಡಿಪಾಗಿಟ್ಟ ಒಂದೇ ಬಳ್ಳಿಯ ಹೂಗಳು.

1967ರಲ್ಲಿ ಎಂ.ನಾಗೇಶ್ವರರಾವ್ ಮತ್ತು ಎಂ.ಎಸ್.ನಾಯಕ್ ನಿರ್ದೇಶನದ 'ಒಂದೇ ಬಳ್ಳಿಯ ಹೂಗಳು' ಎಂಬ ಕನ್ನಡ ಚಿತ್ರ ತೆರೆಕಂಡಿತ್ತು. ಅದರಲ್ಲೊಂದು ಅರ್ಥಗರ್ಭಿತ ಹಾಡು: ''ಒಂದೇ ಬಳ್ಳಿಯ ಹೂಗಳು ನಾವು ಪ್ರೀತಿಯೇ ನಮಗಾಧಾರ! ಒಂದೇ ರಾಗ ಹರಿಸಿರೇ ಹರಿಸಿರೆ ಈಗ ಪಾವನ ಗಂಗಾಧರ'' ಸ್ವರ್ಗೀಯರಾದ ಕೃ.ಸೂರ್ಯನಾರಾಯಣರಾವ್, ಕೃ.ನರಹರಿ ಮತ್ತು ಕೃ. ರುಕ್ಮಿಣಿ– ಈ ಮೂವರು ಒಂದೇ ಬಳ್ಳಿಯ ಹೂಗಳು. ಒಂದೇ ತಾಯಿಯ ಮಕ್ಕಳು. ದೇಶಭಕ್ತಿ, ಸಮಾಜ ಸೇವೆಯೇ ಅವರಿಗಾಧಾರ. ಈ ಮೂವರದೂ ಒಂದೇ ರಾಗ –ಅದು ಸಮಾಜಮುಖಿ ರಾಗ. ಸ್ವಂತಕ್ಕಾಗಿ ಬದುಕದೆ ಸಮಾಜಕ್ಕಾಗಿ ಬದುಕು ನಡೆಸಿದರು. ಸ್ವಂತದ ಸುಖ ಭೋಗಗಳನ್ನು ತ್ಯಜಿಸಿ, ಸಮಾಜ ಸೇವೆಯ ಯಜ್ಞದಲ್ಲಿ ಸಮಿಧೆಯಾಗಿ ಉರಿದರು. 'ಹಮ್ ಕರೇ ರಾಷ್ಟ್ರ ಆರಾಧನ್/ತನ್‌ಸೇ ಮನ್ ಸೇ ಧನ್ ಸೇ/ ತನು ಮನ ಧನ ಜೀವನ ಸೇ' ಎಂಬ ಸಂಘಗೀತೆಗೆ ನಿದರ್ಶನವಾದರು.

ಕೃ. ಸೂರ್ಯನಾರಾಯಣ ರಾವ್



ಸೂರೂಜಿ ಎಂದೇ ಜನಪ್ರಿಯರಾಗಿದ್ದ ಸೂರ್ಯನಾರಾಯಣರಾವ್ ಆಜಾನುಬಾಹು ವ್ಯಕ್ತಿ. (ಜನನ 20-08-1924; ನಿಧನ 19-11-2016). ತಮ್ಮ ಬಿ.ಎಸ್‌ಸಿ. ಪದವಿ ಮುಗಿಸಿದ ಬಳಿಕ ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಚಾರಕರಾಗಿ ಹೊರಟವರು ಮತ್ತೆ ಹಿಂತಿರುಗಿ ನೋಡಿದ್ದೇ ಇಲ್ಲ, ಕರ್ನಾಟಕದಲ್ಲಿ ಸಂಘದ ವಿವಿಧ ಜವಾಬ್ದಾರಿಗಳನ್ನು ಯಶಸ್ವಿಯಾಗಿ ನಿರ್ವಹಿಸಿದ ಸೂರೂಜಿಯವರನ್ನು ಸಂಘದ ಪಾಲಿಗೆ ಕಬ್ಬಿಣದ ಕಡಲೆಯಂತಿದ್ದ ತಮಿಳುನಾಡು ಪ್ರಾಂತ ಪ್ರಚಾರಕರಾಗಿ ಶ್ರೀ ಗುರೂಜಿಯವರು ಕಳುಹಿಸಿದಾಗ ಸೂರೂಜಿ ಅಲ್ಲೊಂದು ಪವಾಡವನ್ನೇ ಮಾಡಿಬಿಟ್ಟರು. ಕನ್ನಡಿಗರಾಗಿದ್ದ ಸೂರೂಜಿ ಮೊದಲು ತಮಿಳು ಭಾಷೆಯನ್ನು ಮಾತನಾಡಲು, ಓದಲು ಕಲಿತರು. ಕ್ರಮೇಣ ಸಭೆಗಳಲ್ಲಿ ತಮಿಳಿನಲ್ಲೇ ಭಾಷಣ ಮಾಡಿ ತಮಿಳರ ಹೃದಯ ಗೆದ್ದರು. ನಡುವೆ ಕರ್ನಾಟಕಕ್ಕೆ ಕಾರ್ಯನಿಮಿತ್ತ ಬಂದು ಇಲ್ಲಿ ಸ್ವಯಂಸೇವಕರ ಬೈಠಕ್ ತೆಗೆದುಕೊಂಡಾಗ ಸೂರೂಜಿ ಮರೆತು ತಮಿಳಿನಲ್ಲೇ ಕೆಲವು ಬಾರಿ ಮಾತನಾಡಿದ್ದೂ ಉಂಟು! ಆ ಮಟ್ಟಕ್ಕೆ ತಮಿಳು ಅವರಿಗೆ ಹೃದ್ಗತವಾಗಿತ್ತು. ಸ್ವಾಮಿ ವಿವೇಕಾನಂದರ ಕುರಿತು ಅವರು ಮಾತನಾಡತೊಡಗಿದರೆ ವಿವೇಕಾನಂದರೇ ಪ್ರತ್ಯಕ್ಷ ಎದುರು ಬಂದು ಮಾತಾಡಿದಷ್ಟು ಪ್ರಭಾವಿಯಾಗಿರುತ್ತಿತ್ತು. ಸಂಘದ ಅ.ಭಾ. ಸೇವಾ ಪ್ರಮುಖರಾಗಿಯೂ ಕಾರ್ಯನಿರ್ವಹಿಸಿದ ಸೂರೂಜಿ ಕೀನ್ಯಾ, ನೈರೋಬಿ ಸೇರಿದಂತೆ ಹಲವು ದೇಶಗಳಿಗೆ ತೆರಳಿ, ಅಲ್ಲೆಲ್ಲ ಹಿಂದೂ ಸಂಘಟನೆಗಳಿಗೆ ಮಾರ್ಗದರ್ಶನ ಮಾಡಿದ್ದರು.

ಉಡುಪಿಯಲ್ಲಿ ನಡೆದ ವಿಶ್ವ ಹಿಂದು ಪರಿಷತ್ ಸಮ್ಮೇಳನದ ಯಶಸ್ಸಿಗೆ ಸೂರೂಜಿಯವರ ಕುಶಲ ಸಂಘಟನೆಯೂ ಪ್ರಮುಖ ಕಾರಣ. ಸಮಾಜದ ಅನೇಕ ಗಣ್ಯರು, ಸಂತ ಮಹಂತರು, ಚಿಂತಕರನ್ನು ಸಂಘದ ತೆಕ್ಕೆಗೆ ತಂದು ಅವರನ್ನು ಸಮಾಜಮುಖಿ ಕಾರ್ಯಗಳಿಗೆ ಪ್ರೇರಿಸಿದ ಮಹಾನ್ ಸಂಘಟಕ. ಕುಟುಂಬದ ಹಿರಿ ಮಗನಾಗಿ ಸಂಸಾರದ ನೊಗವನ್ನು ಹೊರಬೇಕಾಗಿದ್ದರೂ ಸಮಾಜ ಕಾರ್ಯದ ನೊಗಹೊತ್ತು ತಿರುಗಿದ ಧ್ಯೇಯವಾದಿ.

ಕೃ. ನರಹರಿ



ಕೃ. ನರಹರಿಯವರು ಮೆಕ್ಯಾನಿಕಲ್ ಇಂಜಿನಿಯರಿಂಗ್ ಪದವೀಧರ. ಕೊಡಗು ಜಿಲ್ಲೆಯಲ್ಲಿ ಎರಡು ವರ್ಷ ಸಂಘದ ಪ್ರಚಾರಕ್ ಆಗಿ ಕಾರ್ಯನಿರ್ವಹಣೆ. ಮನೆಯ ಆರ್ಥಿಕ ಸ್ಥಿತಿ ಸರಿಯಾಗಿಸಲು ಬಿಎಂಎಸ್ ಇಂಜಿನಿಯರಿಂಗ್ ಕಾಲೇಜಿನಲ್ಲಿ 24 ವರ್ಷ ಉಪನ್ಯಾಸಕನಾಗಿ ಸೇವೆ. ಸಂಘದ ಸೂಚನೆಯಂತೆ ಉಪನ್ಯಾಸಕ ವೃತ್ತಿ ಕೈಗೊಂಡಿದ್ದರೇ ಹೊರತು ಅವರ ಸ್ವಂತ ಇಚ್ಛೆ ಅದಾಗಿರಲಿಲ್ಲ, (ಅಸಲಿಗೆ ಸ್ವಂತದ ಇಚ್ಛೆ ಎಂಬುದೇ ಅವರಿಗಿರಲಿಲ್ಲ). ಅನಂತರ ಸ್ವಯಂ ನಿವೃತ್ತಿ ಪಡೆದು ಶಿಕ್ಷಕ ಕ್ಷೇತ್ರದಿಂದ ವಿಧಾನ ಪರಿಷತ್ ಚುನಾವಣೆಗೆ ಸ್ಪರ್ಧಿಸಿದ್ದೂ ಸಂಘದ ಸೂಚನೆಯ ಪಾಲನೆಗಾಗಿ. ವಿಧಾನ ಪರಿಷತ್ ಸದಸ್ಯರಾಗಿ 18 ವರ್ಷ ಕಾಲ ಕಾರ್ಯ ನಿರ್ವಹಿಸಿದರೂ ತಾನೊಬ್ಬ ಎಂಎಲ್‌ಸಿ ಎಂಬ ಗತ್ತು, ದರ್ಪ ಅವರಲ್ಲಿ ಒಂದಿನಿತೂ ಇರಲಿಲ್ಲ, ಶಾಸಕನಾಗಿ ದೊರೆಯುತ್ತಿದ್ದ ವೇತನ , ಉಚಿತ ಸರ್ಕಾರಿ ನಿವೇಶನ ಇನ್ನಿತರ ಸೌಲಭ್ಯಗಳನ್ನು ನರಹರಿಯವರು ಸ್ವಂತಕ್ಕೆ ಬಳಕೆ ಮಾಡಿಕೊಂಡಿದ್ದೇ ಇಲ್ಲ, ಅದನ್ನೆಲ್ಲ ಸಂಘ ಪರಿವಾರದ ಸಂಘ ಸಂಸ್ಥೆಗಳಿಗೆ ದಾನವಾಗಿ ನೀಡಿದರು. ಅದೆಷ್ಟೋ ಬಡ ವಿದ್ಯಾರ್ಥಿಗಳಿಗೆ ಪ್ರತಿ ತಿಂಗಳು ತಮ್ಮ ಜೇಬಿನಿಂದ ಹಣ ಕಳಿಸುತ್ತಿದ್ದರು. ಪ್ರಸಿದ್ಧಿ, ಪ್ರಚಾರಗಳಿಂದ ಸದಾ ದೂರ. ನರಹರಿಯವರು ಆರೆಸ್ಸೆಸ್‌ನ ಕಟ್ಟಾಳು ಎಂಬುದು ಬಿಜೆಪಿಯೇತರ ರಾಜಕೀಯ ಪಕ್ಷಗಳಿಗೆ ಚೆನ್ನಾಗಿ ತಿಳಿದಿತ್ತು. ಆದರೆ ಎಲ್ಲಾ ಪಕ್ಷದ ಮುಖಂಡರು ಅವರಿಗೆ ತಲೆಬಾಗಿ ಗೌರವ ನೀಡುತ್ತಿದ್ದರು. ಅಧಿವೇಶನದ ವೇಳೆ ಶಿಕ್ಷಣ ರಂಗಕ್ಕೆ ಸಂಬಂಧಿಸಿ ನರಹರಿಯವರು ಮಾಡುತ್ತಿದ್ದ ಭಾಷಣವನ್ನು ತದೇಕಚಿತ್ತರಾಗಿ ಆಲಿಸುತ್ತಿದ್ದರು.

ವೈಯಕ್ತಿಕ ಮೌಲ್ಯ, ಕೌಟುಂಬಿಕ ಮೌಲ್ಯ, ಸಾಮಾಜಿಕ ಮೌಲ್ಯ, ಆಧ್ಯಾತ್ಮಿಕ ಮೌಲ್ಯ ಮತ್ತು ರಾಷ್ಟ್ರೀಯ ಮೌಲ್ಯ– ಈ ಐದು ಬಗೆಯ ಮೌಲ್ಯಗಳನ್ನು ರೂಢಿಸಿಕೊಳ್ಳುವಂತೆ ನರಹರಿಯವರು ತಾವು ಹೋದೆಡೆಯಲ್ಲೆಲ್ಲ ಯುವ ಪೀಳಿಗೆಗೆ ಕರೆ ನೀಡುತ್ತಿದ್ದರು. ಶಿಸ್ತು, ಸರಳತೆ, ಬದ್ಧತೆಗೆ ಅನ್ವರ್ಥಕರಾಗಿ ಸಮಾಜ ಸಮರ್ಪಿತ ಬದುಕು ನಡೆಸಿದರು. (ಜನನ 25-05-1932; ನಿಧನ 8-10-2025).

ಕೃ. ರುಕ್ಮಿಣಿ



ಕೃ. ಸೂರೂಜಿಯವರ ತಂಗಿಯಾಗಿ, ನರಹರಿಯವರ ಅಕ್ಕನಾಗಿ ಜನಿಸಿದವರು ಕೃ. ರುಕ್ಮಿಣಿ (ರುಕ್ಮಿಣಿಯಕ್ಕ ಎಂದೇ ಚಿರಪರಿಚಿತರು). ಬಿ.ಎಸ್‌ಸಿ, ಬಿಎಡ್ ಪದವಿ ಪಡೆದ ಬಳಿಕ ಮಲ್ಲೇಶ್ವರಂ ಲೇಡೀಸ್ ಅಸೋಸಿಯೇಷನ್ ಪ್ರೌಢಶಾಲೆಗೆ ಶಿಕ್ಷಕಿಯಾಗಿ ಸೇರಿ ವೃತ್ತಿ ಆರಂಭಿಸಿದರು. ಅನಂತರ ಗಣಿತದ ಸಂಖ್ಯಾಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು ನಾಗಪುರ ವಿಶ್ವವಿದ್ಯಾಲಯದಲ್ಲಿ ಗಳಿಸಿದರು. ಪರೀಕ್ಷೆ ವೇಳೆ ಅವರ ವಾಸ್ತವ್ಯ ಆರೆಸ್ಸೆಸ್ ಸರಸಂಘಚಾಲಕರಾಗಿದ್ದ ಗುರೂಜಿಯವರ ಮನೆಯಲ್ಲಿ, ಮುಂದೆ ಎಂ.ಎಲ್.ಎ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾಗಿ ಬಡ್ತಿ ಹೊಂದಿ, ಸಮರ್ಥವಾಗಿ ಆ ಜವಾಬ್ದಾರಿ ನಿರ್ವಹಿಸಿದರು. ಅವರ ಬೋಧನಾ ಕ್ರಮ ವಿದ್ಯಾರ್ಥಿಗಳಿಗೆ ಮೆಚ್ಚುಗೆಯಾಗಿತ್ತು.

ಕಾಲೇಜಿನಿಂದ ನಿವೃತ್ತಿ ಹೊಂದಿದ ಮೇಲೆ ಅವರನ್ನು ಸೆಳೆದಿದ್ದು ಮಹಿಳೆಯರ ಕ್ಷೇತ್ರದಲ್ಲಿ ಹಿಂದು ಸಂಘಟನೆ ಮಾಡುತ್ತಿದ್ದ ರಾಷ್ಟ್ರ ಸೇವಿಕಾ ಸಮಿತಿ. ಹೆಚ್ಚು ಕಡಿಮೆ ಸಮಿತಿಯ ಪೂರ್ಣಾವಧಿ ಕಾರ್ಯಕರ್ತೆಯಾಗಿ ಕಾರ್ಯನಿರ್ವಹಿಸಿ, ಆ ಸಂಘಟನೆಯ ಅಖಿಲ ಭಾರತ ಸಹಕಾರ್ಯ ವಾಹಿಕೆಯಾಗಿ ಕಾರ್ಯನಿರ್ವಹಿಸಿದ್ದ ರುಕ್ಮಿಣಿಯಕ್ಕನವರು ಸೂರ್ಯನಾರಾಯಣ ರಾವ್ ಕುಟುಂಬದ ಕೊನೆಯ ಕೊಂಡಿಯಾಗಿದ್ದರು. ರಾಷ್ಟ್ರಸೇವಿಕಾ ಸಮಿತಿಯ ಮೂಲಕ ಹಿಂದು ಸಮಾಜವನ್ನು ಸಂಘಟಿಸುವ ಮತ್ತು ಮಹಿಳೆಯರಿಗೆ ಮೌಲ್ಯ-ಸಂಸ್ಕಾರಗಳನ್ನು ನೀಡುವ ಉದಾತ್ತ ಕೆಲಸದಲ್ಲಿ ಅವರು ಸದಾ ಸಕ್ರಿಯರಾಗಿದ್ದರು. ಅವರ ನಿಷ್ಕಪಟ ಮಾತೃತ್ವ ಮತ್ತು ನಿರಂತರ ಕ್ರಿಯಾಶೀಲತೆ ಎಲ್ಲರ ಮೇಲೂ ಪ್ರಭಾವ ಬೀರಿತ್ತು.

ವೈರಲ್ ಆರ್ಥರೈಟಿಸ್‌ನಿಂದಾಗಿ ಮಂಡಿಗಳ ಶಕ್ತಿ ಕುಗ್ಗಿ ನಡೆಯಲು ಅಶಕ್ತರಾಗಿದ್ದಾಗಲೂ 12 ಮನೆಗಳ ಸುಡೋಕು ಸವಾಲುಗಳಿಗೆ ಪರಿಹಾರ ಕಂಡುಹಿಡಿಯುವಲ್ಲಿ ತಮ್ಮನ್ನು ತೊಡಗಿಸಿಕೊಂಡಿರುತ್ತಿದ್ದರು. ವಿವಾಹವಾದ ಕೆಲವೇ ದಿನಗಳಲ್ಲಿ ಪತಿಯನ್ನು ಕಳೆದುಕೊಂಡರೂ ಧೃತಿಗೆಡದೆ ಸಮಾಜಮುಖಿ ಬದುಕು ನಡೆಸಿದರು. (ಜನನ 14-03-1929; ನಿಧನ: 21-05-2026). ರುಕ್ಮಿಣಿಯಕ್ಕನವರ ತಾಯಿ ಸುಂದರಮ್ಮನವರ ಇಚ್ಛೆಯಂತೆ, ಮಲ್ಲೇಶ್ವರಂ ರೈಲ್ವೇ ನಿಲ್ದಾಣದ ಹಿಂದಿರುವ ಗಾಯತ್ರಿ ನಗರದಲ್ಲಿ ರುಕ್ಮಿಣಿಯಕ್ಕನವರ ಸ್ವಂತ ಸ್ವತ್ತಾಗಿ ಒಂದು ಮನೆಯನ್ನು ಕಟ್ಟಿಸಲಾಗಿತ್ತು. 'ಸುಕೃಪಾ' ಹೆಸರಿನ ಆ ಮನೆಯನ್ನು ರಾಷ್ಟ್ರ ಸೇವಿಕಾ ಸಮಿತಿಯ ಸುಕೃಪಾ ಟ್ರಸ್ಟಿಗೆ ದಾನವಾಗಿ ನೀಡಿದರು.

ಕೃ. ಸೂರ್ಯನಾರಾಯಣ ರಾವ್ ಬದುಕಿದ್ದುದು 93 ವರ್ಷ. ಕೃ.ನರಹರಿಯವರ ಜೀವಿತಾವಧಿಯೂ 93 ವರ್ಷ. ಕೃ. ರುಕ್ಮಿಣಿಯಕ್ಕನವರದು 97 ವರ್ಷಗಳ ತುಂಬು ಜೀವನ. ಒಂದೇ ಬಳ್ಳಿಯ ಹೂಗಳಾದ ಈ ಮೂವರು ಪ್ರಾತಃಸ್ಮರಣೀಯರು. ಸಮಾಜ ಪುರುಷನ ಅಭಂಗ ಪೂಜೆಗೆ ಅರಳಿದ ಕಮಲಗಳಾದರು. ಸಾರ್ಥಕ ಬದುಕು ನಡೆಸಿದರು. 'ಸ್ವಂತಕ್ಕೆ ಸ್ವಲ್ಪ , ಸಮಾಜಕ್ಕೆ ಸರ್ವಸ್ವ' ಎಂಬ ನುಡಿಗೆ ಉಜ್ವಲ ನಿದರ್ಶನವಾಗಿ ಬೆಳಗಿದರು. ಸಾಮಾಜಿಕ ಕಾರ್ಯಕರ್ತರಿಗೆ ಒಂದೇ ಬಳ್ಳಿಯ ಈ ಹೂಗಳ ಉಜ್ವಲ ಬದುಕು ನಿತ್ಯ ನಿರಂತರ ಪ್ರೇರಣಾದಾಯಿ.

ಹರೆಯದವರು–ಪೋಷಕರ ಜವಾಬ್ದಾರಿ

ಹರಯದ ಮಕ್ಕಳ ಜತೆ ಪೋಷಕರು ಸಹನೆಯಿಂದ ವರ್ತಿಸಿ ಅವರ ಅನಿಸಿಕೆಗಳನ್ನು ಲಕ್ಷ್ಯ ಕೊಟ್ಟು ಆಲಿಸಬೇಕು.

ತಾರುಣ್ಯ ತಲ್ಲಣ
• ಡಾ.ಕೆ.ಆರ್. ಶ್ರೀಧರ್
drkrsridhar208@gmail.com



ಹರೆಯದವರು ಉಜ್ವಲ ಭವಿಷ್ಯವನ್ನು ಎದುರಿಸಿ ಸಫಲರಾಗುವಲ್ಲಿ ಪೋಷಕರ ಪಾತ್ರ ಹಿರಿದು. ಮಕ್ಕಳು ಹರೆಯಕ್ಕೆ ಕಾಲಿಟ್ಟಾಗ ಅವರನ್ನು ಸಕಾರಾತ್ಮಕ ಮಾರ್ಗದರ್ಶನದಿಂದ ಅವರು ಸಾಗುವ ದಾರಿಯಲ್ಲಿ ಯಶಸ್ಸು ಗಳಿಸುವಂತೆ ನೋಡಿಕೊಳ್ಳುವುದು ಪೋಷಕರ ಹಿಂದಿನ ಜವಾಬ್ದಾರಿ. ಹಿಂದಿನ ಲೇಖನಗಳಲ್ಲಿ ತಿಳಿಸಿದಂತೆ ಮಕ್ಕಳು ಹರೆಯಕ್ಕೆ ಕಾಲಿಡುತ್ತಿದ್ದಂತೆ ಹಲವಾರು ಸವಾಲುಗಳನ್ನು ಎದುರಿಸಬೇಕಾಗುತ್ತದೆ. ಮುಖ್ಯವಾಗಿ ಶರೀರದಲ್ಲಾಗುವ ಬದಲಾವಣೆಗಳು, ಮನೋವಿಕಾಸದಿಂದ ಉಂಟಾಗುವ ತಲ್ಲಣಗಳು, ಭಾವನಾತ್ಮಕವಾಗಿ ಹೊಂದಿಕೊಳ್ಳುವುದು, ಸಾಮಾಜಿಕ ಸವಾಲುಗಳನ್ನು ಎದುರಿಸುವುದು ಇವು ತಾರುಣ್ಯದ ಮನಸ್ಸನ್ನು ಸುಳಿಯಲ್ಲಿ ಸಿಕ್ಕಿಸುತ್ತವೆ. ಅದೇ ರೀತಿ ಎದುರಾಗುವ ಒತ್ತಡಗಳನ್ನು ಎದುರಿಸಿ ಅವುಗಳನ್ನು ಯಶಸ್ವಿಯಾಗಿ ನಿಭಾಯಿಸಬೇಕಾಗುತ್ತದೆ. ಹಾಗಿದ್ದಲ್ಲಿ ಮಾತ್ರ ಅವರು ನಡೆಯುವ ದಾರಿ ಸುಗಮವಾಗಿ ಮುಂದೆ ಸಾಗಬಹುದು. ಮನಸ್ಸನ್ನು ನೆಮ್ಮದಿಯಿಂದ ಇಟ್ಟುಕೊಳ್ಳಬಹುದು. ಅದಿಲ್ಲದಿದ್ದಲ್ಲಿ ಅವರ ಭವಿಷ್ಯ ಡೋಲಾಯಮಾನವಾಗುತ್ತದೆ. ಈ ಕುರಿತು ಕೆಲವು ಅಂಶಗಳನ್ನು ಪೋಷಕರು ಗಮನಿಸಿದರೆ ಒಳ್ಳೆಯದು.

ಮಗು ಹರೆಯಕ್ಕೆ ಕಾಲಿಟ್ಟಾಗ ಮೊದಲು ಕಾಣಿಸಿಕೊಳ್ಳುವುದು ಶಾರೀರಿಕ ಬದಲಾವಣೆಗಳು. ಹೀಗೆ ಆಗುವ ಬದಲಾವಣೆಗಳನ್ನು ಕಂಡು ಮನಸ್ಸು ದಿಗಿಲುಗೊಳ್ಳುವ ಸಂದರ್ಭಗಳು ಸಾಮಾನ್ಯ. ಶಾರೀರಿಕ ಬದಲಾವಣೆಗಳು ಎಲ್ಲರಲ್ಲೂ ಒಂದೇ ಅವಧಿಗೆ ಆಗುವುದಿಲ್ಲ, ಕೆಲವರಿಗೆ ಕೊಂಚ ಬೇಗ ಆದರೆ ಇನ್ನು ಕೆಲವರಿಗೆ ಕೊಂಚ ತಡವಾಗಿ ಆಗಬಹುದು. ಕೆಲವರಿಗೆ ನನಗೇಕೆ ಇಷ್ಟು ಮುಂಚಿತವಾಗಿ ಆಯಿತು ಎಂಬ ಸಂದೇಹ ಉಂಟಾದರೆ, ನನ್ನಲ್ಲೇಕೆ ಇನ್ನೂ ಅವರಿಗಾದ ಬದಲಾವಣೆಗಳು (ಬೆಳವಣಿಗೆ) ಆಗಲಿಲ್ಲ ಎಂಬ ಚಿಂತೆ ಕೆಲವರಿಗೆ. ತಮ್ಮ ಚಿಂತೆಯನ್ನು ಯಾರೊಂದಿಗೆ ಹಂಚಿಕೊಳ್ಳಬೇಕು, ಅಪ್ಪ ಅಮ್ಮನ ಹತ್ತಿರ ಕೇಳಿದರೆ ಅವರು ಅಲಕ್ಷ್ಯ ಮಾಡಬಹುದು. ಗೆಳೆಯರ ಹತ್ತಿರ ಕೇಳಲು ನಾಚಿಕೆ, ಹೀಗೆ ಮನಸ್ಸು ಸಂದೇಹಗಳ ಒತ್ತಡಕ್ಕೆ ಗುರಿಯಾಗುತ್ತದೆ. ಇದಕ್ಕೆ ಅವಶ್ಯವಿರುವುದು ಪೋಷಕರ ಸಕಾರಾತ್ಮಕ ಮಾರ್ಗದರ್ಶನ.

ಹರೆಯದಲ್ಲಿ ಲೈಂಗಿಕ ಅಂಗಾಂಗಗಳು ವಿಕಾಸಗೊಳ್ಳುತ್ತವೆ. ಲೈಂಗಿಕ ವಿಕಾಸದಲ್ಲಿ ಮೊದಲು ಉಂಟಾಗುವ ಸಂದೇಹ ಲಿಂಗಭೇಧ, ಹುಡುಗನಾದರೆ, ತನ್ನಲ್ಲಾಗುವ ಲೈಂಗಿಕ ಬದಲಾವಣೆಗಳು ಸರಿಯಾಗಿವೆಯೋ ಅಥವಾ ಇಲ್ಲವೇ, ತನ್ನ ಕುರಿತು ಇತರರು ಏನು ಹೇಳುತ್ತಾರೆ? ತಾನು ಇತರರಿಗಿಂತ ಚೆನ್ನಾಗಿದ್ದೇನೆಯೋ, ಇಲ್ಲವೋ, ತಾನು ಧರಿಸುವ ಉಡುಪುಗಳು, ತಲೆಕೂದಲು, ಧ್ವನಿ, ಸ್ನಾಯುಗಳು ಹೀಗೆ ಪುರುಷ ಚಿಹ್ನೆಗಳು ಆಕರ್ಷಿತವಾಗಿವೆಯೋ ಇಲ್ಲವೋ ಎಂಬ ಹಲವಾರು ಪ್ರಶ್ನೆಗಳು ಮೂಡುತ್ತವೆ. ಅದರೊಂದಿಗೆ ಸುಮಾರು ಹದಿನಾಲ್ಕನೇ ವಯಸ್ಸಿಗೆ ಗಂಡುಮಕ್ಕಳಲ್ಲಿ ವೀರ್ಯೋತ್ಪತ್ತಿ ಪ್ರಾರಂಭವಾಗುತ್ತದೆ. ಉತ್ಪತ್ತಿಯಾದ ಹೆಚ್ಚಿನ ವೀರ್ಯವು ರಾತ್ರಿ ನಿದ್ದೆಯಲ್ಲಿ ಸ್ಖಲನವಾಗಿ ಹಾಸಿಗೆ ಒದ್ದೆಯಾಗಬಹುದು. ಆದರೆ ಬೆಳಗಿರುವ ಈ ದ್ರವ ಎಲ್ಲಿಂದ ಬಂತು, ಹೇಗೆ ಬಂತು, ಇದರಿಂದ ಆಗುವ ದುಷ್ಪರಿಣಾಮಗಳೇನು ಎಂಬ ಹಲವಾರು ಪ್ರಶ್ನೆಗಳು ಹರೆಯದವರ ಮನಸ್ಸಿನಲ್ಲಿ ಮೂಡಿ ಅದು ಒತ್ತಡಕ್ಕೆ ಕಾರಣವಾಗುತ್ತದೆ. ಇದನ್ನು ಯಾರೊಂದಿಗೆ ಕೇಳಿ ತನ್ನ ಸಂದೇಹಗಳನ್ನು ಪರಿಹರಿಸಿಕೊಳ್ಳಬೇಕೆಂಬ ಚಿಂತೆ ಸದಾ ಹರೆಯದ ಮನಸ್ಸನ್ನು ಕಾಡುತ್ತದೆ.

ಹರೆಯದ ಗಂಡು ಮಕ್ಕಳಲ್ಲಿ 'ವೀರ್ಯಸ್ಖಲನ' (Night wets)ವು ಸಹಜವಾದ ಪ್ರಕ್ರಿಯೆ. ಇದು ಪುರುಷ ಲಿಂಗದ ಸಂಕೇತ ಎಂಬುದನ್ನು ತಂದೆ ತಾಯಿಗಳು ಮಕ್ಕಳಿಗೆ ತಿಳಿಸಬೇಕಾಗುತ್ತದೆ. ಅದಿಲ್ಲದಿದ್ದಲ್ಲಿ ಅದರಿಂದ ತಾನು ಮುಂದೆ ಷಂಡನಾಗಬಹುದು, ತನ್ನ ಭವಿಷ್ಯ ಹಾಳಾಗುತ್ತದೆ ಎಂದು ಭಾವಿಸಿ ಅದರ ಕುರಿತೇ ಚಿಂತಿಸುತ್ತಾ ಕಲಿಕೆಯಲ್ಲಿ ಆಸಕ್ತಿ ಕಳೆದುಕೊಳ್ಳುತ್ತಾರೆ. ಕೈಕಾಲು ಸುಸ್ತು, ಹೊಟ್ಟೆನೋವು, ಒಂದು ವಿಧದ ಭಯ, ಗಾಬರಿ, ಹಸಿವಿಲ್ಲದಿರುವಿಕೆ, ಹೀಗೆ ಹಲವಾರು ದೈಹಿಕ ಮತ್ತು ಮಾನಸಿಕ ರೋಗ ಲಕ್ಷಣಗಳಿಂದ ನರಳುತ್ತಾ ಅದನ್ನು ನಿವಾರಿಸಲು ಗ್ರಹಚಾರ, ವೈದ್ಯರು, ಹೀಗೆ, ನಾನಾವಿಧದ ಪದ್ಧತಿಗೆ ಮಾರುಹೋಗುತ್ತಾರೆ. ಹರೆಯದ ಕೆಲವರಿಗೆ ಗಡ್ಡ ಮೀಸೆಗಳು, ಕಂಕುಳು ಮತ್ತು ಜನನಾಂಗದ ಮೇಲ್ಭಾಗದಲ್ಲಿ ಸಹಜವಾಗಿ ಕಾಣಿಸಿಕೊಳ್ಳುವ ಕೂದಲುಗಳು ತಡವಾಗಬಹುದು. ಅದಕ್ಕೆ ತನಗೆ ಹೀಗೆ ತಡವಾದರೆ ತನ್ನ ಸ್ನೇಹಿತರು ನೀನು ಹೆಣ್ಣಿಗ ಎಂದು ಟೀಕಿಸಬಹುದು ಎಂಬ ಚಿಂತೆಯಿಂದ ಮನಸ್ಸು ಸಂಕಟ ಅನುಭವಿಸಬಹುದು.

ಹೆಣ್ಣು ಮಕ್ಕಳಲ್ಲಿ ಲೈಂಗಿಕ ಅಂಗಾಂಗಗಳ ವಿಕಾಸದಲ್ಲಿ ಶರೀರದ ಉಬ್ಬು ತಗ್ಗುಗಳು ರೂಪುಗೊಂಡು, ಜನನದ ಗುಪ್ತಾಂಗಗಳು ವೃದ್ಧಿಸುತ್ತವೆ. ಸ್ತನಗಳು ದೊಡ್ಡವಾಗುತ್ತವೆ. ಹರೆಯದ ಹೆಣ್ಣು ಮಕ್ಕಳಲ್ಲಿ ಲೈಂಗಿಕ ವಿಕಾಸದ ಮುಖ್ಯವಾದ ಪ್ರಕ್ರಿಯೆ ಋತುಮತಿಯಾಗುವಿಕೆ, ಋತುವಿನ ಪ್ರಕ್ರಿಯೆಯಲ್ಲಿ ಗುಪ್ತಾಂಗದಿಂದ ಹೊರಹೊಮ್ಮುವ ರಕ್ತಸ್ರಾವ, ಇದರ ಕುರಿತು ತಾಯಿ ಮಗಳಿಗೆ ಸರಿಯಾದ ಮಾಹಿತಿ ನೀಡಬೇಕು. ಅದು ಏಕಾಗುತ್ತದೆ, ಅದರ ಅರ್ಥವೇನು, ರಕ್ತಸ್ರಾವ ಹೆಚ್ಚು ಕಡಿಮೆಯಾದರೆ ಏನು ಮಾಡಬೇಕು, ನೆಂಟರಿಷ್ಟರ ಮನೆಗೆ ಹೋಗುವಾಗ ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆಗಳು ಹೀಗೆ ಎಲ್ಲವನ್ನೂ ಸಮಾಧಾನದಿಂದ ವಿವರಿಸಬೇಕು. ಆಗ ಹರೆಯದ ಹೆಣ್ಣು ಮಕ್ಕಳ ಮನಸ್ಸು ನಿರಾಳವಾಗುತ್ತದೆ. ಹೆಣ್ಣು ಮಕ್ಕಳ ಸಾಮಾಜಿಕ ನಡವಳಿಕೆ ಹೇಗಿರಬೇಕು, ಹೇಗೆ ಹೆಣ್ತನದ ಮೌಲ್ಯಗಳನ್ನು ಕಾಪಾಡಿಕೊಳ್ಳಬೇಕು, ಶೀಲವನ್ನು ರಕ್ಷಣೆ ಮಾಡಿಕೊಳ್ಳಲು ಇತರರೊಂದಿಗೆ ಹೇಗೆ ವರ್ತಿಸಬೇಕು, ಅದಿಲ್ಲದಿದ್ದಲ್ಲಿ ಆಗುವ ಪರಿಣಾಮಗಳನ್ನು ತಾಯಿ ಮಗಳಿಗೆ ವಿವರಿಸಬೇಕು. ಹಾಗೆಯೇ ಸಂದರ್ಭವೊದಗಿದಾಗ ಹೇಗೆ ತನ್ನನ್ನು ರಕ್ಷಣೆ ಮಾಡಿಕೊಳ್ಳಬೇಕು ಎಂಬ ಹಲವಾರು ವಿವರಗಳನ್ನು ಮಕ್ಕಳಿಗೆ ತಿಳಿಸಬೇಕು. ಗಂಡು ಮಕ್ಕಳಾಗಲೀ ಅಥವಾ ಹೆಣ್ಣು ಮಕ್ಕಳಾಗಲೀ ಅವರಿಗೆ ಲೈಂಗಿಕ ಶಿಕ್ಷಣ ನೀಡಬೇಕು. ಸರಿಯಾಗಿ ಲೈಂಗಿಕ ಶಿಕ್ಷಣ ಅವರ ಭವಿಷ್ಯದಲ್ಲಿ ಮಹತ್ವದ ಪಾತ್ರ ವಹಿಸುತ್ತದೆ.

ಹರೆಯದವರಲ್ಲಿ ಮಿದುಳಿನಲ್ಲಿರುವ ನರಕೋಶಗಳ ಸಮೂಹಗಳು ವೃದ್ಧಿಯಾಗುತ್ತಿರುತ್ತವೆ. ಹರೆಯದ ಮಿದುಳಿನ ಕೆಲವು ಭಾಗಗಳಲ್ಲಿ ಸ್ರವಿಸುವ ನರವಾಹಕಗಳು ಹರೆಯದವರ ಭಾವನೆಗಳನ್ನು ನಿಯಂತ್ರಿಸುತ್ತವೆ. ಅದೇ ಕಾರಣದಿಂದ ಹರೆಯದವರ ಭಾವನೆಗಳು ಪ್ರವಾಹದೋಪಾದಿಯಲ್ಲಿ ಏರಿಳಿತಗೊಳ್ಳುತ್ತವೆ. ಭಾವನೆಗಳ ಪ್ರವಾಹವು ಹರೆಯದವರ ಯೋಚನೆಗಳ ಮೇಲೆ ಪರಿಣಾಮ ಬೀರಿ ಏನಾದರೂ ಆಗಬೇಕೆಂದರೆ ಅದು ಕೂಡಲೇ ಆಗಬೇಕೆಂದು ಹಾತೊರೆಯುತ್ತದೆ. ಅದು ಆಗದಿದ್ದಾಗ ಒಂದೇ ಬಾರಿಗೆ ಮನಸ್ಸು ನಿರಾಸೆ, ಹತಾಶೆಗೊಳ್ಳಬಹುದು. ಕೂಡಲೆ ತಡೆಯಲಾರದ ಕೋಪವುಂಟಾಗಬಹುದು. ಇದರಿಂದ ಹರೆಯದ ಮನಸ್ಸು ಖಿನ್ನತೆಗೊಳಗಾಗಿ ಆ ಕ್ಷಣದಲ್ಲಿ ತನಗೆ ಜೀವವೇ ಬೇಡ ಎಂಬ ಯೋಚನೆಯಿಂದ ಆತ್ಮಹತ್ಯೆಗೆ ಆಲೋಚಿಸಬಹುದು. ಇದಕ್ಕೆ ಅವಶ್ಯವಾಗಿರುವುದು ಪೋಷಕರ ಆತ್ಮೀಯತೆ, ಮುಕ್ತ ಸಂವಹನ, ಸಹನೆಯಿಂದ ಅವರ ಅನಿಸಿಕೆಗಳನ್ನು ಆಲಿಸಿ ಘಟನೆಗಳ ಕುರಿತು ಸರಿಯಾದ ಮಾಹಿತಿ ಒದಗಿಸುವುದು.

ಹರೆಯದ ಅವಧಿಯ ಮುಖ್ಯವಾದ ಮತ್ತೊಂದು ಪ್ರಕ್ರಿಯೆ 'ತನ್ನತನ' ವನ್ನು ಕಂಡುಕೊಳ್ಳುವುದು. 'ತನ್ನತನ' ಎಂದರೆ ಮನೋವಿಕಾಸದಿಂದ ಪುಟಿದೇಳುವ ತಾನು ಯಾರು? ತಾನು ಸಹಜವಾಗಿದ್ದೇನೆಯೇ? ತಾನು ಯಾರಂತಾಗಬೇಕು? ತಾನು ಭವಿಷ್ಯವನ್ನು ಹೇಗೆ ರೂಪಿಸಿಕೊಳ್ಳಬೇಕು, ತನ್ನನ್ನು ಗುರುತಿಸುವವರಿದ್ದಾರೆಯೇ? ತನ್ನ ಸಾಮರ್ಥ್ಯ ಎಷ್ಟು, ತನ್ನನ್ನು ತನ್ನ ತಂದೆ ತಾಯಿಗಳು ಹೇಗೆ ಗುರುತಿಸುತ್ತಾರೆ? ಈ ಸಮಾಜದಲ್ಲಿ ತನ್ನ ಸ್ಥಾನಮಾನಗಳೇನು ಎಂಬ ಹಲವಾರು ಪ್ರಶ್ನೆಗಳಿಗೆ 'ತನ್ನತನ' (Self Identity) ಎಂದು ಕರೆಯುತ್ತಾರೆ. ಅಪಕ್ವವಾಗಿರುವ ಹರೆಯದ ಮನಸ್ಸಿಗೆ ಇವಕ್ಕೆಲ್ಲ ಉತ್ತರ ಕಂಡುಕೊಂಡು 'ತನ್ನತನ' ವನ್ನು ಸಾಧಿಸಿ ಮುನ್ನಡೆಯುವುದು ಅತಿಯಾದ ಒತ್ತಡವನ್ನುಂಟು ಮಾಡುವ ಅಂಶ. ಇದನ್ನು ನಿಭಾಯಿಸಿ ಹರೆಯದ ಮಕ್ಕಳನ್ನು ಮುನ್ನಡೆಯಲು ಅನುವು ಮಾಡಿಕೊಡುವುದು ಪೋಷಕರಿಗೂ ಒಂದು ಸವಾಲು ಎನ್ನಬಹುದು.

ಹರೆಯದವರು ತನ್ನತನವನ್ನು ಕಂಡುಕೊಳ್ಳುವ ಪ್ರಕ್ರಿಯೆಯಲ್ಲಿ ಅವರ ವರ್ತನೆಗಳು ಅಸಹಜವೆಂದು ಪೋಷಕರಿಗೆ ಅನಿಸಬಹುದು. ಈ ಅವಧಿಯಲ್ಲಿ ಅವರು ಯೋಚಿಸುವ ರೀತಿ, ಕೇಳುವ ಪ್ರಶ್ನೆಗಳು, ಪ್ರದರ್ಶಿಸುವ ಭಾವನೆಗಳು ಹರೆಯದವರ ಆತಂಕಗಳನ್ನು ಮತ್ತು ಒತ್ತಡಗಳನ್ನು ಹೊರಹಾಕುವ ಒಂದು ಮಾರ್ಗ. ಇದಕ್ಕೆ ಅವಶ್ಯವಿರುವುದು ಪೋಷಕರ ಸಹನೆ, ಅವರ ಅನಿಸಿಕೆಗಳನ್ನು ಲಕ್ಷ್ಯಕೊಟ್ಟು ಆಲಿಸುವುದು, ಆತ್ಮೀಯ ಮುಕ್ತ ಸಂವಾದ ಮತ್ತು ಅವರಿಗೆ ವಾಸ್ತವಗಳ ಕುರಿತು ತಿಳಿಸಿ ಹೇಳುವುದು. ಸಮಸ್ಯೆಗಳು ಇದ್ದಲ್ಲಿ ಅದಕ್ಕೆ ತಾವೂ ಜವಾಬ್ದಾರರು ಎಂದು ಭಾವಿಸಿ ಅವರೊಂದಿಗೆ ಸಹಕರಿಸಬೇಕು. 'ತನ್ನತನ'ವನ್ನು ಸಾಧಿಸುವ ಹರೆಯದ ಮನಸ್ಸು ಆತ್ಮವಿಶ್ವಾಸದಿಂದ ಬೀಗುತ್ತದೆ. ಸಾಧನೆಯ ಹಾದಿಯಲ್ಲಿ ಮುನ್ನಡೆಯುತ್ತದೆ. ನೆಮ್ಮದಿಯ ಬಾಳನ್ನು ನಡೆಸಲು ಸಿದ್ಧವಾಗುತ್ತದೆ.

ಸಾಮಾಜಿಕವಾಗಿ ಹರೆಯದ ಮನಸ್ಸು ಗಲಿಬಿಲಿಗೊಳ್ಳುತ್ತದೆ. ಅವುಗಳಲ್ಲಿ ಮುಖ್ಯವಾದವು ಒಳ್ಳೆಯ ಗೆಳೆಯರ ಒಡನಾಟ, ಸಮಾಜದ ಟೀಕೆ ಟಿಪ್ಪಣಿಗಳಿಗೆ ಸಹನೆಯಿಂದ ಸ್ಪಂದಿಸುತ್ತಾ ಮುನ್ನಡೆ ಸಾಧಿಸುವುದು. ಸಾಮಾಜಿಕ ಮೌಲ್ಯಗಳನ್ನು ಅಳವಡಿಸಿಕೊಳ್ಳುವುದು. ಪೋಷಕರು, ಮಕ್ಕಳಿಗೆ ಬಾಲ್ಯದಿಂದಲೇ ಜೀವನ ಕೌಶಲಗಳನ್ನು ಕುರಿತು ತರಬೇತಿ ನೀಡಿದಾಗ, ಹರೆಯದ ಮನಸ್ಸು ಪೋಷಕರ ಮಾರ್ಗದರ್ಶನದಲ್ಲಿ ಮುನ್ನಡೆ ಸಾಧಿಸುವುದರಲ್ಲಿ ಸಂಶಯವಿಲ್ಲ.


ತುಂಡು 'but'ಏ ಸಾಕು ಅನುಮಾನ ಹೆಚ್ಚೋಕೆ!

ವಾರದ ವರಸೆ
• ಸಂದೇಶ್ ನಾಯ್ಕ್ ಹಕ್ಲಾಡಿ
naiksh2@gmail.com



'ಈಚಲು ಮರದ ಕೆಳಗೆ ಕುಳಿತು ಮಜ್ಜಿಗೆಯನ್ನೇ ಕುಡಿದರೂ, ಅದು ಹೆಂಡ ಇರಬಹುದು' ಎಂದು ಭಾವಿಸುತ್ತಾರೆ ಎಂಬ ಮಾತಿದೆ. ಯಾರಾದರೂ ಹಾಗೆ ಭಾವಿಸುತ್ತಾರೆಂದರೆ ಅದಕ್ಕೆ ಮೂಲ ಕಾರಣವೇ ಅವರ ಮನಸ್ಸಿನಲ್ಲಿ ಮೂಡುವ ಅನುಮಾನ. ಹಾಗಾದರೆ ಅದನ್ನೇ ಪ್ರಸ್ತುತ ಕಾಲಮಾನದ ಸಂದರ್ಭಕ್ಕೆ ಅನ್ವಯಿಸೋಣ. ಯಾರಾದರೂ ಈಚಲು ಮರದ ಕೆಳಗೆ ಕುಳಿತು ಮಜ್ಜಿಗೆ ಕುಡಿದರೆ, ಆಗ ಅದು ಹೆಂಡ ಇರಬಹುದೆಂಬ ಅನುಮಾನ ಮೂಡುವುದಷ್ಟೇ ಅಲ್ಲದೇ, ಅವರನ್ನು ಅಲ್ಲಿ ಕುಳ್ಳಿರಿಸಿದ್ದು ಯಾರು? ಅದರ ಹಿಂದೆ ಒಂದು ನಿರ್ದಿಷ್ಟ ಕಸುಬುದಾರರನ್ನು ಅವಮಾನಿಸುವ ಉದ್ದೇಶ ಅಡಗಿರಬಹುದೇ?, ಮರದ ಕೆಳಗೆ ಕುಳಿತು ಕುಡಿಯಲು ಈ ಕೆಟ್ಟ ವ್ಯವಸ್ಥೆಯೇ ಕಾರಣವಲ್ಲವೇ? ಇದರ ಹಿಂದೆ ಮೇಲ್ವರ್ಗ ಕೆಳವರ್ಗವೆಂಬ ತಾರತಮ್ಯ ಕೆಲಸ ಮಾಡಿಲ್ಲವೆಂದು ಹೇಗೆ ಹೇಳುವುದು? – ಇಂಥ ಸಾಲು ಸಾಲು ಅನುಮಾನಗಳು ಹೆಡೆಯೆತ್ತಿ ನಿಲ್ಲುತ್ತವೆ. ಏಕೆಂದರೆ ಇದು 'ಅನುಮಾನ'ವಂತರ ಕಾಲ! ಮಾನವಂತರಿಗಿದು ಕಾಲ ಹೌದೋ ಅಲ್ಲವೋ ಎನ್ನುವುದು ಅವರವರ ಜಿಜ್ಞಾಸೆಗೆ ಬಿಟ್ಟಿದ್ದು, ಆದರೆ ಇದು 'ಅನುಮಾನ'ವಂತರ ಕಾಲ ಎನ್ನುವುದನ್ನು ಮಾತ್ರ ಯಾವುದೇ ಕಾರಣಕ್ಕೂ ತಳ್ಳಿಹಾಕುವಂತಿಲ್ಲ.

ಮಾನವರು ಎಂದ ಮೇಲೆ ಕೆಲವರು ಮಾನವೀಯತೆ ಉಳ್ಳವರಾದರೆ, ಇನ್ನೊಂದಷ್ಟು ಜನ ಅಮಾನವೀಯತೆಯನ್ನೇ ಹೊದ್ದಿರುತ್ತಾರೆ. ಈ ನಡುವೆಯೂ ಮಾನವೀಯ ನೋಟ, ಸಂವೇದನೆ ಇರಬೇಕು ಎಂಬ ನಿರೀಕ್ಷೆ ಸಹಜ. ಆದರೆ ಇದಕ್ಕೆ ಹೊರತಾಗಿ ಕೆಲವರು ಸದಾ 'ಅನುಮಾನ'ವೀಯ ನೋಟವನ್ನೇ ಹೊಂದಿರುತ್ತಾರೆ. ತನ್ಮೂಲಕ ಅಲ್ಲಲ್ಲಿ ಸಂ'ವೇದನೆ'ಗೂ ಕಾರಣರಾಗುತ್ತಾರೆ. ಹಾಗೆಂದ ಮಾತ್ರಕ್ಕೆ ಅನುಮಾನವೇ ಇರಬಾರದು ಎಂದೇನಲ್ಲ, ಆದರೆ ಆ ಅನುಮಾನ ಅತಿರೇಕವಾದರೆ ಅದೂ ಒಂದು ಬಗೆಯ ಅಮಾನವೀಯ ನಡೆಯೇ ಎಂದೆನಿಸಿಕೊಳ್ಳುವುದು ನಿಸ್ಸಂಶಯ. ಎಲ್ಲೇ ಏನೇ ನಡೆಯಲಿ ಆ ಬಗ್ಗೆ ಒಂದು ಅನುಮಾನದ ಬಾಣ ಎಸೆಯುವ ಆಧುನಿಕ 'ಬಾಣ'ಭಟ್ಟರು ಜಾಲತಾಣಗಳಲ್ಲಿ, ಕೆಲವು ವೀಡಿಯೊಗಳಲ್ಲಿ ಭರಪೂರ ಕ್ರಿಯಾಶೀಲರಾಗಿದ್ದಾರೆ. ಹೀಗೆ ಅವರವರ ಆಸಕ್ತಿ, ಒಲವು, ನಿಲುವಿಗೆ ಅನುಗುಣವಾಗಿ ಎಲ್ಲರನ್ನೂ, ಎಲ್ಲವನ್ನೂ ಅನುಮಾನದಿಂದಲೇ ನೋಡಿ ನೋಡಿ, 'ಅನುಮಾನ'ವೇ ಒಂದು ಮಟ್ಟಿಗೆ ಅವಮಾನಕ್ಕೆ ಗುರಿಯಾಗಬೇಕು. ಹಾಗಿರುತ್ತದೆ ಅವರ ವೈಖರಿ. ಏನೇ ಹೇಳಿ ಹೆಚ್ಚೆಚ್ಚು ಅನುಮಾನಪಡುವವರನ್ನು ಅನು'ಮಾನವ'ರು ಎಂದು ಕರೆಯಬಹುದೇನೋ!



ಅನುಮಾನ ಎಂಬ ಪದಕ್ಕೆ ಸಂಶಯ, ಸಂದೇಹ, ಗುಮಾನಿ, ಶಂಕೆ ಎಂಬಿತ್ಯಾದಿ ಅರ್ಥಗಳಿವೆ. ಗೊಂದಲ, ಇಬ್ಬಂದಿತನ ಎನ್ನುವುದೂ ಕೂಡಾ ಒಂದು ರೀತಿಯಲ್ಲಿ ಅದಕ್ಕೆ ಸಂಬಂಧಿಸಿದ ಪದಗಳೇ ಆಗಿವೆ. ಇಂಗ್ಲೀಷ್‌ನಲ್ಲಿ ಇದಕ್ಕೆ ಬೇರೆ ಬೇರೆ ಪದಗಳಿದ್ದರೂ ಬಹುಮುಖ್ಯವಾಗಿ 'ಡೌಟ್' ಎಂಬ ಪದವನ್ನು ಬಳಸಲಾಗುತ್ತದೆ. ಈ ಡೌಟ್ ಎಂಬ ಪದದ ಮೂಲ 'ಡ್ಯೂಓ' (duo) ಎಂದರೆ ಎರಡು ಎಂಬ ಅರ್ಥದ ಪದವಂತೆ. ಅಂದರೆ ಯಾವುದೇ ಆಗಲಿ ಎರಡೆರಡು ಇದ್ದಾಗ ಅಲ್ಲಿ ಅನುಮಾನ ಹುಟ್ಟುವ ಸಾಧ್ಯತೆಯೇ ಹೆಚ್ಚು ಎಂದು ಅರ್ಥೈಸಿಕೊಳ್ಳಬಹುದು. ಉದಾಹರಣೆಗೆ ಎರಡು ಮನೆ, ಎರಡು ಪಕ್ಷ, ಎರಡು ಮಡದಿ... ಇರುವೆಡೆಗಳಲ್ಲಿ ಎಷ್ಟೇ ಆದರೂ ಅನುಮಾನವೂ ಜಾಸ್ತಿಯೇ! ಕೆಲವೊಮ್ಮೆ ಅನುಮಾನಗಳ ಕಾರಣಕ್ಕೇ ಇವೆಲ್ಲವೂ ಎರಡೆರಡು ಆಗಿ ಬದಲಾಗುವ ಸಾಧ್ಯತೆಯೂ ಇದೆ. ಕೆಲವರ ಮೂಡು ಹೇಗಿದೆ, ಅವರ ಮನಸ್ಸಿನಲ್ಲಿ ಎಂಥೆಂಥ ಯೋಚನೆ ಮೂಡೀತು ಎಂದೆಲ್ಲಾ ಯೋಚಿಸಬೇಕಾದ್ದೇ ಇಲ್ಲ, ಏಕೆಂದರೆ ಅವರು ಸದಾ 'ಅನುಮಾನದ' ಮೋಡ್‌ನಲ್ಲೇ ಇರುತ್ತಾರೆ. ಅಂದರೆ ಸದಾ ಸುತ್ತಮುತ್ತಲ ಆಗುಹೋಗುಗಳ ಬಗ್ಗೆ ಅನುಮಾನ ಮೂಡುತ್ತಿರುತ್ತದೆ ಎಂದು ಹೇಳಬಹುದು!

'ನಂಗ್ಯಾಕೋ ಡೌಟು!' ಎನ್ನುತ್ತಲೇ ತಮ್ಮ ಮಾತು, ಆಲೋಚನೆ ಹಾಗೂ ವಿವೇಚನೆಗಳೆಲ್ಲವನ್ನೂ ಅದರ ಸುತ್ತಲೇ ಸುತ್ತುವಂತೆ ಮಾಡುವ 'ಡೌಟೇಶ'ರಿಗೆ ನಮ್ಮಲ್ಲೇನೂ ಕೊರತೆಯೇ ಇಲ್ಲ, 'ಡೌನ್-ಟು-ಅರ್ಥ್' ರೀತಿಯ ಮನುಷ್ಯರು ಇರುವಂತೆ ಇವರು ಅಗ್ದಿ 'ಡೌಟ್-ಟು-ಅರ್ಥ್' ಮನುಷ್ಯರೇ ಸೈ. ಅವರು ಈ ಭೂಮಿಯ ಮೇಲೆ ಇರುವುದೇ ಒಂದಿಲ್ಲೊಂದು ರೀತಿಯಲ್ಲಿ ಇನ್ನೊಬ್ಬರ ಮೇಲೆ ಡೌಟ್ ಪಡಲು ಎನ್ನುವುದನ್ನು ಅವರು ಅತ್ಯಂತ ಕಟ್ಟುನಿಟ್ಟಿನಿಂದ ಪಾಲಿಸಿಕೊಂಡು ಬರಲು ಅನವರತ ಶ್ರಮಿಸುತ್ತಲೇ ಇರುತ್ತಾರೆ. ತನ್ನ ದೇಹವೇ ಸಂದೇಹಗಳ ಗುಡಾಣ ಎನ್ನುವುದನ್ನು ಡಣಾಡಂಗುರ ಬಾರಿಸುತ್ತಾ ಸಾರಿ ಸಾರಿ ಹೇಳುವಂತಿರುತ್ತದೆ ಅವರ ವರ್ತನೆ ಎಂದರೆ ಬಹುಶಃ ತಪ್ಪಾಗಲಿಕ್ಕಿಲ್ಲ.

'...ತುಂಡು ಬಟ್ಟೆ ಸಾಕು ಮಾನ ಮುಚ್ಚೋಕೆ' ಎಂಬ ಸಾಲು ಎಲ್ಲರಿಗೂ ಗೊತ್ತು. ಇಂದಿಗೆ ತುಂಡುಡುಗೆಯನ್ನೇ ಕೆಲವರು ಹೆಚ್ಚು ಹೆಚ್ಚು ಬಳಸುವುದರಿಂದ, ಆ ಸಾಲುಗಳಲ್ಲಿ ಅಡಗಿರುವ ತತ್ವವು ಈ ಆಧುನಿಕ ಕಾಲದಲ್ಲಿ ಬೇರೆಯದೇ ಅರ್ಥ ಪಡೆದುಕೊಂಡಿದ್ದನ್ನು ಗಮನಿಸಬಹುದು. ಅದೇನೇ ಇರಲಿ. ಅದನ್ನೇ ಈ 'ಅನುಮಾನ'ದ ಬಗ್ಗೆ ಹೇಳುವುದಾದರೆ, 'ತುಂಡು ' but'ಏ ಸಾಕು ಅನುಮಾನ ಹೆಚ್ಚೋಕೆ...' ಎಂದು ನಿಸ್ಸಂಶಯವಾಗಿ ಹೇಳಬಹುದು. ಅಲ್ಲವೇ ಮತ್ತೆ ಯಾವುದರಲ್ಲಾದರೂ ಅನುಮಾನವನ್ನು ಹೆಚ್ಚಿಸುವವರಿಗೆ, ವಾಕ್ಯದ ಒಂದು ಸಣ್ಣ ತುಂಡಾದ 'but' ಅರ್ಥಾತ್ 'ಆದರ' ಎನ್ನುವುದು ಬಲು ದೊಡ್ಡ ಆಧಾರವೇ ಆಗುತ್ತದೆ. ಅವರು 'ಆದರೆ, ಹಾಗಾದರೆ, ಹೀಗಾದರೆ' ಎಂಬಿತ್ಯಾದಿ 'ರೇ'ಗಳನ್ನು ನಿರಂತರವಾಗಿ ಬೀರುತ್ತಲೇ ಇರುತ್ತಾರೆ! ಅವರಿಗೆ ಅದೇ ಒಂಥರಾ 'ರೇ ಆಫ್ ಹೋಪ್' (ಭರವಸೆಯ ಕಿರಣ) ಅವರ ಅಸ್ತಿತ್ವಕ್ಕೆ! ಹಸ್ತದಲ್ಲಿ ಅದೃಷ್ಟದ ರೇಖೆ, ವಿಜಯದ ರೇಖೆ, ಸಂತಾನ ರೇಖೆ ಇತ್ಯಾದಿಗಳನ್ನು ಗುರುತಿಸುವುದನ್ನು ನೋಡಿದ್ದೇವೆ. ಆದರೆ ಈ 'ರೇ' ಮಂದಿಗಳಿಗೆ ಬಾಯಲ್ಲೇ ಒಂದು ವಿಶಿಷ್ಟ ರೇಖೆ ಇರುತ್ತದೆ. ಅದೆಂದರೆ 'ರೇ' ಪ್ರಯೋಗ ಹಾಗೂ ಅದನ್ನು ಅನುಸರಿಸಿ ಏ'ಕೆ' ಎಂಬ ಪ್ರಶ್ನೆ. ಎರಡೂ ಒಟ್ಟಾಗಿ ರೇಖೆ! ಅದನ್ನೆಲ್ಲಾ 'ಮಹಾತ್ರಾಣ'ದಿಂದ ಮಾಡುವುದರಿಂದ, ಇನ್ನೊಬ್ಬರಿಗೆ ತ್ರಾಣ ಉಂಟುಮಾಡುವುದರಿಂದ 'ಕ' ಅಕ್ಷರಕ್ಕೆ ಮಹಾಪ್ರಾಣ ಕಾಂಪ್ಲಿಮೆಂಟರಿ!

ಇನ್ನು, ಆರಂಭದಲ್ಲಿ ಪ್ರೀತಿ ಪ್ರೇಮದ 'ಅನುಬಂಧ'ವಾಗಿ ಅಣು ಅಣುವಲ್ಲೂ ಪರಸ್ಪರ ಪ್ರೀತಿಸುತ್ತಾ ದಾಂಪತ್ಯ ನಡೆಸುವವರ ಮಧ್ಯೆ ಪರಸ್ಪರ ಗುಮಾನಿಯ ಅಪಥ್ಯವೊಂದು ಹುಟ್ಟಿ ಅದು ಅವರ ಪಥವನ್ನೇ ಬದಲಿಸಬಲ್ಲದು. ಕೊನೆಗೆ ಅನುಬಂಧ ಹೋಗಿ 'ಅನುಮಾನ'ಬಂಧವಾಗಿ ಪರಿವರ್ತಿತವಾಗುತ್ತದೆ. ಹೋದ ಬಂದಲ್ಲೆಲ್ಲಾ ಬರೀ ಅನುಮಾನ! ಇನ್ನು ರಾಜಕಾರಣದಲ್ಲಂತೂ ಅನುಮಾನದ ಹಾವಳಿ ಹೇಳತೀರದು. ಪ್ರತೀ ಕ್ಷಣವೂ 'ಅನುಮಾನವನ್ನೇ ಚಾಳೀಸು' ಮಾಡಿಕೊಂಡಿರುತ್ತಾರೆ ಅವರು. ಅಂದರೆ ಎಲ್ಲವನ್ನೂ ಹಾಗೂ ಎಲ್ಲರನ್ನೂ ಅನುಮಾನಿಸುವ ಚಾಳಿಯೂ ಹಾಗೂ ಅನುಮಾನದ ಕನ್ನಡಕ(ಚಾಳೀಸು) ತೊಟ್ಟೇ ಎಲ್ಲವನ್ನೂ ನೋಡುವ ಖಯಾಲಿಯೂ ಅವರಲ್ಲಿ ಖಾಯಂ. ಹಾಗಾಗಿ ಅಲ್ಲಿರುವವರ ಬಗ್ಗೆ 'ಮಾನವನಾಗುವೆಯೋ... ಇಲ್ಲ ಅನುಮಾನವನಾಗುವೆಯೋ...?' ಎಂದು ಕೇಳಬೇಕಾಗುತ್ತದೆ. ಅನುಮಾನದ ದೃಷ್ಟಿಕೋನ, ಅನುಮಾನದ ಕಣ್ಣು ಎಂದೆಲ್ಲಾ ಹೇಳುತ್ತೇವೆ. ಆ ನಿಟ್ಟಿನಲ್ಲಿ ನೋಡಿದರೆ ಸಿ.ಸಿ.ಟಿ.ವಿ ಕ್ಯಾಮೆರಾಗಳು ಅನುಮಾನದ ಆಧುನಿಕ ಕಣ್ಣುಗಳು ಎಂದರೆ ತಪ್ಪಾಗಲಿಕ್ಕಿಲ್ಲ, ಕಣ್ಣಿಗೆ ಸಮೀಕರಿಸಿ ಹೇಳಿದರೂ ಇದು ತದನಂತರ ಕಿವಿಗೂ ಲಿಂಕ್ ಆಗುತ್ತದೆ. ಯಾವುದೇ ಸಂಗತಿಯ ಬಗ್ಗೆ 'ಅನುಮಾನ'ವೊಂದು ಮೂಡಿದಾಗ, ಅದು ಕದ್ದು ಕೇಳಬೇಕು ಎಂಬ ಕ್ರಿಯೆಗೆ ಪ್ರಚೋದನೆಯಾಗಿಯೂ ಪರಿಣಮಿಸುತ್ತದೆ. ಯಾವುದೇ ಸಂಗತಿ ಎಂದೆನಷ್ಟೇ ಅದು ಅಷ್ಟೇ ಮುಖ್ಯವಾಗಿ 'ಸಂಗಾತಿ'ಗೂ ಅನ್ವಯವಾಗುವಂಥದ್ದೇ! ಅವರೂ ಒಂದಿಲ್ಲೊಂದು ಸಂದರ್ಭದಲ್ಲಿ ಕದ್ದು ಕೇಳುವುದನ್ನು ಮಾಡಿಯೇ ಇರುತ್ತಾರಲ್ಲ.

ರಾಜಕಾರಣದಲ್ಲಿ ಆಕೆ/ಈಕೆ ಯ ಬಗ್ಗೆಯೆಲ್ಲಾ ಚರ್ಚೆಯಾದಂತೆಯೇ ಕದ್ದಾಲಿಕೆಯ ಬಗ್ಗೆಯೂ ಆಗುತ್ತದೆ. ಇದನ್ನು ಸಂಪೂರ್ಣವಾಗಿ 'ಅನುಮಾನದ ಕಿವಿ' ಎಂದೇ ಹೇಳಬಹುದು. ಫೋನ್ ಟ್ಯಾಪ್ ಮಾಡಿ ತಮ್ಮ ವಿರೋಧಿಗಳ ಮಾತಿಗೆ 'ಖಾನ್' ಕೊಟ್ಟು ಸಾಕಷ್ಟು ವಿಷಯಗಳನ್ನು ಚಪ್ಪರಿಸಿ ಕೇಳಿ ಸವಿಯುವ ಅವರ ಪಾಲಿಗೆ ಅದುವೇ 'ಖಾನ'ವಳಿ. ಒಂದು ಮಟ್ಟಿಗೆ ಅದು ಅವರ ಅನುಮಾನದ ಹಸಿವನ್ನು ತೀರಿಸುತ್ತದೆ ಇಲ್ಲವೇ ಮತ್ತಷ್ಟು ಹೆಚ್ಚಿಸುತ್ತದೆ. ಕೆಲವು ಖಾನಾವಳಿಗಳ ಹೆಸರು ಕೇಳಿದಾಕ್ಷಣ ಹೊಟ್ಟೆ, ಮುಂಚೆಗಿಂತ ಹೆಚ್ಚೇ ಚುರುಗುಡುತ್ತದಲ್ಲ, ಹಾಗೆ! ರಾಜಕಾರಣದಲ್ಲಿ ಇಂಥವರ ಖಾನ್‌ದಾನ್ ಬಗ್ಗೆ ಆಗಿಂದಾಗ್ಗೆ ಸದ್ದು, ಸುದ್ದಿ ಆಗುತ್ತಲೇ ಇರುತ್ತದೆ. ಇದನ್ನೆಲ್ಲಾ ಗಮನಿಸಿದರೆ ಕೆಲವರಿಗಂತೂ ಶಯನಾಗ್ರಹ ಅಂದರೆ ಮಲಗುವ ಕೋಣೆಗಿಂತಲೂ ತುಂಬಾ ಮುಖ್ಯವಾಗಿ ಬೇಕಾಗಿರುವುದು 'ಸಂಶಯ'ನಾಗ್ರಹ ಎನ್ನುವುದು ಸ್ಪಷ್ಟವಾಗುತ್ತದೆ. ಅಷ್ಟಕ್ಕೂ ನಮ್ಮ ಜೀವನವು ಒಂದು ಸಂದೇಶವಾಗಬೇಕೇ ಹೊರತು ಸಂದೇಹವಲ್ಲ!

ಓವರ್‌ಡೋಸ್: ಎಲ್ಲದರ ಬಗ್ಗೆಯೂ ಏನೋ ಒಂದು 'ಶಂಕೆ' ವ್ಯಕ್ತಪಡಿಸುತ್ತಲೇ ಇರುವ ಮನೋಧೋರಣೆ ಒಂದು ರೀತಿಯ ಕಾಯಿಲೆಯೇ ಸರಿ ಎಂದು ಹೇಳುತ್ತಾರೆ. ಹಾಗಾದರೆ ಆ ಕಾಯಿಲೆಯನ್ನು 'ಆಮಶಂಕೆ' ಎನ್ನಬಹುದೇನೋ?!

ಮನ್ ಕಿ ಬಾತ್‌ನಲ್ಲಿ ಜನರಿಗೆ ಮೋದಿ ಸಲಹೆ

ಉಷ್ಣ ಅಲೆಯಿಂದ ಜಾಗರೂಕರಾಗಿರಿ

• **ಹೊಸದಿಲ್ಲಿ:** ಉಷ್ಣ ಅಲೆಯ ಮುನ್ನೆಚ್ಚರಿಕೆಗಳು, ಮಾವು ಬೆಳೆಗಾರರಿಗೆ ಪ್ರಶಂಸೆ, ಜಲ ಸಂರಕ್ಷಣೆ, ಕ್ರೀಡಾ ಸಾಧನೆ ಹಾಗೂ ಸಮಾಜ ಸೇವೆ ಸೇರಿದಂತೆ ಹಲವು ಪ್ರಮುಖ ವಿಷಯಗಳ ಕುರಿತು ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ತಮ್ಮ ಮನ್ ಕಿ ಬಾತ್ ರೇಡಿಯೋ ಕಾರ್ಯಕ್ರಮದ 134ನೇ ಸಂಚಿಕೆಯಲ್ಲಿ ಬೆಳಕು ಚೆಲ್ಲಿದರು.

ದೇಶದ ಹಲವು ಭಾಗಗಳಲ್ಲಿ ಉಷ್ಣ ಅಲೆ ತೀವ್ರವಾಗಿರುವ ಹಿನ್ನೆಲೆಯಲ್ಲಿ ನಾಗರಿಕರು ಜಾಗರೂಕರಾಗಿರಬೇಕು ಎಂದು ಮೋದಿ ಕೋರಿದರು. ಸಾಕಷ್ಟು ನೀರು ಕುಡಿಯಿರಿ, ಬಿಸಿಲಿನಲ್ಲಿ ಹೋಗುವಾಗ ಎಚ್ಚರದಿಂದಿರಿ ಮತ್ತು ಸರ್ಕಾರಿ ಇಲಾಖೆಗಳು ನೀಡಿರುವ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಿ ಎಂದು ಅವರು ಜನರಲ್ಲಿ ಮನವಿ ಮಾಡಿದರು.



ಸಮಾಜ ಸೇವಕರನ್ನು ಗುರುತಿಸಿ: ಸಮಾಜದಲ್ಲಿ ಸಕಾರಾತ್ಮಕ ಬದಲಾವಣೆ ತರುತ್ತಿರುವ ವ್ಯಕ್ತಿಗಳಿಂದ ಕಲಿಯುವಂತೆ ಕರೆ ನೀಡಿದ ಪ್ರಧಾನಿ, ಸಮಾಜಕ್ಕಾಗಿ ಉತ್ತಮ ಕೆಲಸ ಮಾಡುತ್ತಿರುವವರನ್ನು ಗುರುತಿಸಿ, ಅವರನ್ನು ಶ್ಲಾಘಿಸಿ. ಸಾಧ್ಯವಾದರೆ ನೀವೂ ಅಂತಹ ಸತ್ಕಾರ್ಯಗಳ ಭಾಗವಾಗಿ ಎಂದರು. ಇಂತಹ ನಿಸ್ವಾರ್ಥ ಸೇವೆಗಳು ದೇಶದ ಪ್ರಗತಿಗೆ ಪ್ರೇರಣೆಯಾಗುತ್ತವೆ ಎಂದು ಆಶಯ ವ್ಯಕ್ತಪಡಿಸಿದರು.

ಸಾಂಪ್ರದಾಯಿಕ ಪಾನೀಯಗಳಲ್ಲಿ ಏಕ ಭಾರತ ಶ್ರೇಷ್ಠ ಭಾರತ: ದೇಶದ ಸಾಂಸ್ಕೃತಿಕ ವೈವಿಧ್ಯತೆಯನ್ನು ಬಿಂಬಿಸುವ ಸಾಂಪ್ರದಾಯಿಕ ಬೇಸಿಗೆ ಪಾನೀಯಗಳಾದ ಉತ್ತರ ಭಾರತದ ಆಮ್ ಪನ್ನಾ, ಪಂಜಾಬ್‌ನ ಲಸ್ಸಿ, ಗುಜರಾತ್‌ನ ಮಜ್ಜಿಗೆ, ಬಿಹಾರದ ಸತ್ತು ಶರಬತ್, ಕೊಂಕಣದ ಕೋಕಂ ಹಾಗೂ ದಕ್ಷಿಣ ಭಾರತದ ಪಾನಕ ಮತ್ತು ಮಜ್ಜಿಗೆ ಕುರಿತು ಪ್ರಧಾನಿ ಮಾತನಾಡಿದರು. ಇವು ಏಕ ಭಾರತ ಶ್ರೇಷ್ಠ ಭಾರತದ ಸಂಕೇತಗಳಾಗಿವೆ ಎಂದರು.

ಜಲ ಸಂರಕ್ಷಣೆ ಮತ್ತು ಕ್ರೀಡಾ ಸಾಧಕರಿಗೆ ಶ್ಲಾಘನೆ: ನದಿ, ಕೆರೆ ಮತ್ತು ಬಾವಿಗಳನ್ನು ಪುನಶ್ಚೇತನಗೊಳಿಸುವಲ್ಲಿ ಸಾರ್ವಜನಿಕರ ಪಾಲ್ಗೊಳ್ಳುವಿಕೆಯನ್ನು ಪ್ರಧಾನಿ ಶ್ಲಾಘಿಸಿದರು.

- ಜನಸಾಮಾನ್ಯರ ಅಸಾಧಾರಣ ಸಾಧನೆಗಳಿಗೆ ಪ್ರಧಾನಿ ಶ್ಲಾಘನೆ
- ಜಲ ಸಂರಕ್ಷಣೆ, ಕ್ರೀಡೆ, ದೇಶದ ವೈವಿಧ್ಯತೆಯ ಬಗ್ಗೆ ಉಲ್ಲೇಖ

ಮಾವು ಬೆಳೆಗಾರರಿಗೆ ಪ್ರಧಾನಿ ಗೌರವ

ಭಾರತದ ವೈವಿಧ್ಯಮಯ ಮಾವಿನ ತಳಿಗಳ ಬಗ್ಗೆ ಮಾತನಾಡಿರುವ ಪ್ರಧಾನಿ ಮೋದಿಯವರು, ಮಾವು ಕೃಷಿಯಲ್ಲಿ ತೊಡಗಿರುವ ರೈತರನ್ನು ಶ್ಲಾಘಿಸಿದರು. ಬೇಸಿಗೆಯ ಆಗಮನದೊಂದಿಗೆ ಪ್ರತಿಯೊಂದು ಮನೆಯಲ್ಲೂ ಮತ್ತೊಂದು ಚರ್ಚೆ ಆರಂಭವಾಗುತ್ತದೆ – ಅದೇ ಮಾವಿನ ಹಣ್ಣಿನ ಬಗ್ಗೆ... ಮಹಾರಾಷ್ಟ್ರ ಮತ್ತು ಕೊಂಕಣ ಭಾಗದಲ್ಲಿ ಹಾಪುಸ್, ಅಲ್ಫಾನ್ಸೋ ಇದ್ದರೆ, ಗುಜರಾತ್‌ನ ಕೇಸರ್ ತಳಿಯು ಮಾವಿನ ರಸದ ಆಕರ್ಷವಾಗಿದೆ. ಉತ್ತರ ಪ್ರದೇಶದಲ್ಲಿ ದಶೇರಿ ಮತ್ತು ನನ್ನ ಕಾಶಿಯಲ್ಲಿ ಲಂಗ್ಡಾ ಮಾವುಗಳಿವೆ... ಮಾವಿನ ಹಣ್ಣಿನ ಪ್ರಯಾಣವು ಈಗ ಹಳ್ಳಿಗಳಿಂದ ಜಾಗತಿಕ ಮಾರುಕಟ್ಟೆಯವರೆಗೆ ತಲುಪುತ್ತಿದೆ... ಮಾವು ಬೆಳೆಗಾರರನ್ನು ಶ್ಲಾಘಿಸುತ್ತಾ ಅವರು, ಮಾವು ಕೃಷಿಯಲ್ಲಿ ತೊಡಗಿರುವ ನನ್ನ ರೈತ ಮಿತ್ರರನ್ನು ನಾನು ಪ್ರಶಂಸಿಸಲು ಬಯಸುತ್ತೇನೆ. ದೇಶದ ಕೃಷಿ ಆರ್ಥಿಕತೆಗೆ ನೀವು ಕೇವಲ ಸಾಮಾನ್ಯ ರೈತರಲ್ಲ, ಬದಲಿಗೆ ಅತ್ಯಂತ ವಿಶೇಷವಾದವರು ಎಂದು ಹೇಳಿದರು.

ಇದೇ ವೇಳೆ, ಜಾರ್ಖಂಡ್‌ನಲ್ಲಿ ನಡೆದ ರಾಷ್ಟ್ರೀಯ ಅಥ್ಲೆಟಿಕ್ಸ್‌ನಲ್ಲಿ ಹೊಸ ದಾಖಲೆ ಬರೆದ ಗುರುಇಂದರ್ ವೀರ್ ಸಿಂಗ್, ತೇಜಸ್ವಿನ್ ಶಂಕರ್ ಸೇರಿದಂತೆ ಹಲವು ಯುವ ಕ್ರೀಡಾಪಟುಗಳನ್ನು ಮೋದಿ ಅಭಿನಂದಿಸಿದರು.

ಜನಸಾಮಾನ್ಯರ ಸಾಮೂಹಿಕ ಪ್ರಯತ್ನಗಳು ಮತ್ತು ರಾಷ್ಟ್ರ ನಿರ್ಮಾಣದ ಜವಾಬ್ದಾರಿಯನ್ನು ಈ ಬಾರಿಯ ಮನ್ ಕಿ ಬಾತ್ ಸಂಚಿಕೆ ಯಶಸ್ವಿಯಾಗಿ ಬಿಂಬಿಸಿತು.

ಹೈಕೋರ್ಟ್ ತೀರ್ಪುಗಳ ಪ್ರಕಟಣೆಗೆ ಸುಪ್ರೀಂ ವೇಗ

ದೇಶದ ಎಲ್ಲಾ ಹೈಕೋರ್ಟ್‌ಗಳಿಗೆ ಸುಪ್ರೀಂ ಕೋರ್ಟ್ ಕಡ್ಡಾಯ ನಿರ್ದೇಶನ ನೀಡಿದ್ದು, ತೀರ್ಪುಗಳ ಪ್ರಕಟಣೆ ಮತ್ತು ಜಾಮೀನು ಅರ್ಜಿಗಳ ವಿಲೇವಾರಿಗೆ ಕಟ್ಟುನಿಟ್ಟಾದ ಗಡುವು ನಿಗದಿಪಡಿಸಿದೆ. ಆದೇಶಗಳನ್ನು ಕಾಯ್ದಿರಿಸಿದ ನಂತರ ತೀರ್ಪು ನೀಡಲು ಹೈಕೋರ್ಟ್‌ಗಳಿಗೆ ಸುಪ್ರೀಂ ಕೋರ್ಟ್ ಗರಿಷ್ಠ ಮೂರು ತಿಂಗಳ ಅವಧಿಯನ್ನು ನಿಗದಿಪಡಿಸಿದೆ.



ಕಾಲಮಿತಿ ಜಾರಿ

ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಮತ್ತು ನ್ಯಾಯಮೂರ್ತಿ ಜೊಯ್ಮಲ್ಯ ಬಾಗ್ಚಿ ಅವರನ್ನೊಳಗೊಂಡ ಪೀಠ ಈ ನ್ಯಾಯಾಂಗ ಸುಧಾರಣೆಯನ್ನು ಪ್ರಕಟಿಸಿದೆ. ಆದೇಶವನ್ನು ಕಾಯ್ದಿರಿಸಿದ ದಿನಾಂಕದಿಂದ ಗರಿಷ್ಠ ಮೂರು ತಿಂಗಳೊಳಗೆ ಹೈಕೋರ್ಟ್‌ಗಳು ತಮ್ಮ ತೀರ್ಪು ಪ್ರಕಟಿಸಬೇಕು ಎಂದು ಈ ಕಡ್ಡಾಯ ಮಾರ್ಗಸೂಚಿ ಹೇಳುತ್ತದೆ. ಇದರೊಂದಿಗೆ, ಜಾಮೀನು ಅರ್ಜಿಗಳನ್ನು ಸಾಮಾನ್ಯವಾಗಿ ಅದೇ ದಿನ, ಅಥವಾ ತಡವಾದರೆ ವಿಚಾರಣೆಯ 24 ಗಂಟೆಗಳ ಒಳಗೆ ಆಲಿಸಿ ನಿರ್ಧರಿಸಬೇಕು ಎಂದು ಉನ್ನತ ನ್ಯಾಯಾಲಯ ನಿರ್ದೇಶಿಸಿದೆ. ದೇಶಾದ್ಯಂತ ನ್ಯಾಯಾಂಗ ಪ್ರಕ್ರಿಯೆಯನ್ನು ಸುಗಮಗೊಳಿಸಲು ಈ ಹೊಸ ನಿರ್ದೇಶನಗಳು ತಕ್ಷಣದಿಂದಲೇ ಜಾರಿಗೆ ಬರಲಿವೆ.

ಸ್ವಯಂಚಾಲಿತ ಅಧಿಸೂಚನೆಗಳು

ನಿರಂತರ ನಿಗಾ ವಹಿಸಲು ಮತ್ತು ಸಾಂಸ್ಥಿಕ ಟ್ರ್ಯಾಕಿಂಗ್ ಕಾಯ್ದುಕೊಳ್ಳಲು, ವಿಳಂಬವಾದ ಕಾಯ್ದಿರಿಸಿದ ತೀರ್ಪುಗಳ ವಿವರಗಳನ್ನು ಒಳಗೊಂಡಿರುವ ಮಾಸಿಕ ಇಮೇಲ್‌ಗಳನ್ನು ಸಂಬಂಧಪಟ್ಟ ನ್ಯಾಯಾಧೀಶರಿಗೆ ಮತ್ತು ಆಯಾ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಗಳಿಗೆ ನೇರವಾಗಿ ಕಳುಹಿಸಲಾಗುತ್ತದೆ. ಇದಲ್ಲದೆ, ತೀರ್ಪುಗಳನ್ನು ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಿದ ತಕ್ಷಣ ವಕೀಲರಿಗೆ ಸ್ವಯಂಚಾಲಿತ ಇಮೇಲ್‌ಗಳು ಮತ್ತು ಅಧಿಸೂಚನೆಗಳು ತಲುಪುತ್ತವೆ. ಇದು ಬಾಕಿ ಇರುವ ವಿಷಯಗಳಲ್ಲಿ ಭಾಗಿಯಾಗಿರುವ ಎಲ್ಲಾ ಕಾನೂನು ಪ್ರತಿನಿಧಿಗಳ ನಡುವೆ ಪಾರದರ್ಶಕ ಸಂವಹನವನ್ನು ಖಾತರಿಪಡಿಸುತ್ತದೆ.

ಹೊಣೆಗಾರಿಕೆ ಕಾರ್ಯವಿಧಾನ

ವಿಳಂಬವನ್ನು ನಿಯಂತ್ರಿಸಲು ವ್ಯವಸ್ಥಿತ ಹೊಣೆಗಾರಿಕೆಯ ಚೌಕಟ್ಟನ್ನು ಸ್ಥಾಪಿಸಲಾಗಿದೆ. ಇದನ್ನು ಅನುಷ್ಠಾನಕ್ಕೆ ತರಲು ತಮ್ಮ ತಮ್ಮ ಮುಖ್ಯ ನ್ಯಾಯಮೂರ್ತಿಗಳ ಮುಂದೆ ಮಂಡಿಸುವಂತೆ ಎಲ್ಲಾ ಹೈಕೋರ್ಟ್‌ಗಳ ರಿಜಿಸ್ಟ್ರಾರ್ ಜನರಲ್‌ಗಳಿಗೆ ಸೂಚಿಸಲಾಗಿದೆ. ಹೊಸ ಮಾರ್ಗಸೂಚಿಗಳ ಪ್ರಕಾರ, ತೀರ್ಪು ಮೂರು ತಿಂಗಳಿಗಿಂತ ಹೆಚ್ಚು ಕಾಲ ಬಾಕಿ ಉಳಿದಿದ್ದರೆ, ಆ ವಿಷಯವನ್ನು ಎರಡು ವಾರಗಳ ಒಳಗೆ ಸಂಬಂಧಪಟ್ಟ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಗಳ ಗಮನಕ್ಕೆ ತರಬೇಕು. ಹೆಚ್ಚುವರಿ ಎರಡು ವಾರಗಳ ನಂತರವೂ ತೀರ್ಪು ಹೊರಬರದಿದ್ದರೆ, ಮುಖ್ಯ ನ್ಯಾಯಮೂರ್ತಿಗಳು ಹೊಸ ವಿಚಾರಣೆಗಾಗಿ ಪ್ರಕರಣವನ್ನು ಮತ್ತೊಂದು ಪೀಠಕ್ಕೆ ವರ್ಗಾಯಿಸಬಹುದು.

ದಾವೆದಾರರಿಗೆ ಪರಿಹಾರ

ತೀರ್ಪು ಪ್ರಕಟಣೆಯ ವಿಳಂಬದಿಂದ ತೊಂದರೆಗೊಳಗಾದ ದಾವೆದಾರರಿಗೆ, ಸುಪ್ರೀಂ ಕೋರ್ಟ್ ಆದೇಶ ನಿರ್ದಿಷ್ಟ ಕಾನೂನು ಪರಿಹಾರಗಳನ್ನು ಒದಗಿಸಿದೆ. ತೀರ್ಪನ್ನು ಕಾಯ್ದಿರಿಸಿದ ಮೂರು ತಿಂಗಳೊಳಗೆ ತೀರ್ಪು ನೀಡದಿದ್ದರೆ, ಸಂಬಂಧಪಟ್ಟ ಪಕ್ಷಗಳು ಶೀಘ್ರ ತೀರ್ಪು ಕೋರಿ ಅರ್ಜಿ ಸಲ್ಲಿಸಲು ಅನುಮತಿಸಲಾಗಿದೆ. ಅಂತಹ ಅರ್ಜಿಗಳನ್ನು ರಜಾದಿನಗಳನ್ನು ಹೊರತುಪಡಿಸಿ ಎರಡು ಕೆಲಸದ ದಿನಗಳ ಒಳಗೆ ಸಂಬಂಧಪಟ್ಟ ಪೀಠದ ಮುಂದೆ ಪಟ್ಟಿ ಮಾಡಬೇಕೆಂದು ಮಾರ್ಗಸೂಚಿ ಸೂಚಿಸುತ್ತದೆ. ಆರಂಭಿಕ ಮೂರು ತಿಂಗಳು ಮತ್ತು ಹೆಚ್ಚುವರಿ ಒಂದು ತಿಂಗಳ ನಂತರವೂ ತೀರ್ಪು ಬಾಕಿ ಉಳಿದಿದ್ದರೆ, ದಾವೆದಾರರು ಹೊಸ ವಿಚಾರಣೆಗಾಗಿ ಪ್ರಕರಣವನ್ನು ಮತ್ತೊಂದು ಪೀಠಕ್ಕೆ ವರ್ಗಾಯಿಸಲು ಕೋರಬಹುದು.




ನ್ಯಾಯದಾನಕ್ಕೆ ಸುಪ್ರೀಂ ವೇಗ

- ಸುಪ್ರೀಂ ಕೋರ್ಟ್‌ನಿಂದ ಹೈಕೋರ್ಟ್ ತೀರ್ಪುಗಳಿಗೆ ಮೂರು ತಿಂಗಳ ಗಡುವು
- ಜಾಮೀನು ಅರ್ಜಿಗಳ ಮೇಲೆ 24 ಗಂಟೆಗಳ ಒಳಗೆ ನಿರ್ಧಾರ ಅಗತ್ಯ.
- ಮೂರು ತಿಂಗಳು ಮೀರಿದ ಪ್ರಕರಣಗಳನ್ನು ಮುಖ್ಯ ನ್ಯಾಯಮೂರ್ತಿಗಳು ಮರುನಿಯೋಜಿಸಬಹುದು.
- ನಾಲ್ಕು ತಿಂಗಳ ವಿಳಂಬದ ನಂತರ ದಾವೆದಾರರು ವರ್ಗಾವಣೆ ಕೋರಬಹುದು.
- ಒಂದು ತಿಂಗಳಾದರೂ ಸಕಾರಣ ಆದೇಶ ಸಿಗದಿದ್ದರೆ ಮರುನಿಯೋಜನೆಗೆ ವಿನಂತಿಸಬಹುದು.

ಸಕಾರಣ ಆದೇಶಗಳು

ವಿವರವಾದ ತೀರ್ಪುಗಳನ್ನು ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡುವಲ್ಲಿನ ವಿಳಂಬವನ್ನೂ ಈ ನಿರ್ದೇಶನ ಪರಿಹರಿಸುವ ಪ್ರಯತ್ನ ನಡೆಸಿದೆ. ತೀರ್ಪಿನ ಕೇವಲ ಮುಖ್ಯ ಭಾಗವನ್ನು ಮಾತ್ರ ಪ್ರಕಟಿಸಿ, ವಿವರವಾದ ಆದೇಶವನ್ನು 15 ದಿನಗಳ ಒಳಗೆ ಅಪ್‌ಲೋಡ್ ಮಾಡದ ಸಂದರ್ಭಗಳಲ್ಲಿ, ಪಕ್ಷಗಳು ಅದರ ಶೀಘ್ರ ಬಿಡುಗಡೆಗಾಗಿ ಅರ್ಜಿ ಸಲ್ಲಿಸಬಹುದು. ಒಂದು ತಿಂಗಳ ನಂತರವೂ ವಿವರವಾದ ತೀರ್ಪು ಲಭ್ಯವಾಗದಿದ್ದರೆ, ದಾವೆದಾರರು ಪ್ರಕರಣವನ್ನು ಮತ್ತೊಂದು ಪೀಠಕ್ಕೆ ಮರುನಿಯೋಜಿಸಲು ವಿನಂತಿಸಬಹುದು.

- ಸರ್ವೋಚ್ಚ ನ್ಯಾಯಾಲಯದಿಂದ ನಿರ್ದೇಶನ
- ಕಾಯ್ದಿರಿಸಿದ ತೀರ್ಪು ಘೋಷಣೆಗೆ ಗರಿಷ್ಠ 3 ತಿಂಗಳ ಅವಧಿ ನಿಗದಿ



ಕಾಯ್ದಿರಿಸಿದ ತೀರ್ಪಿನ ವಿವರಣೆ

ವಿಚಾರಣೆಯ ಮುಕ್ತಾಯದ ನಂತರ ನ್ಯಾಯಾಲಯದ ನಿರ್ಧಾರವನ್ನು ತಕ್ಷಣವೇ ನೀಡದೆ ಮುಂದೂಡಿದಾಗ ಮತ್ತು ಅದನ್ನು ಔಪಚಾರಿಕವಾಗಿ ಪ್ರಕಟಿಸುವವರೆಗೆ ಬಾಕಿ ಇರಿಸಿದಾಗ ಅದನ್ನು ಕಾಯ್ದಿರಿಸಿದ ತೀರ್ಪು ಎನ್ನಲಾಗುತ್ತದೆ. ಇದು ನ್ಯಾಯಾಧೀಶರಿಗೆ ವಾದಗಳು, ಪುರಾವೆಗಳು, ಕಾನೂನು ಪೂರ್ವಾಪರಗಳು ಮತ್ತು ಸಂಕೀರ್ಣ ಕಾನೂನು ಪ್ರಶ್ನೆಗಳನ್ನು ಪರಿಶೀಲಿಸಲು ಅಥವಾ ಲಿಖಿತ ನಿರ್ಧಾರವನ್ನು ನೀಡುವ ಮುನ್ನ ಇತರ ನ್ಯಾಯಾಧೀಶರೊಂದಿಗೆ ಚರ್ಚಿಸಲು ಸಮಯ ನೀಡುತ್ತದೆ. ವಿಚಾರಣೆ ಮುಗಿದ ತಕ್ಷಣವೇ ಪ್ರಕಟವಾಗುವ ಸಾಮಾನ್ಯ ತೀರ್ಪಿಗಿಂತ ಇದು ಕೇವಲ ಸಮಯದ ವಿಷಯದಲ್ಲಿ ಭಿನ್ನವಾಗಿದೆ. ಸಾಕಷ್ಟು ಪುರಾವೆಗಳು, ಸಂಕೀರ್ಣ ಸಂಗತಿಗಳು ಅಥವಾ ಮಹತ್ವದ ಕಾನೂನು ಪ್ರಶ್ನೆಗಳನ್ನು ಒಳಗೊಂಡಿರುವ ಪ್ರಕರಣಗಳಲ್ಲಿ ತೀರ್ಪುಗಳನ್ನು ಕಾಯ್ದಿರಿಸುವುದು ಸಾಮಾನ್ಯ. ತೀರ್ಪುಗಳನ್ನು ಕಾಯ್ದಿರಿಸುವುದು ವಿವರವಾದ ವಿಶ್ಲೇಷಣೆಗೆ ಅವಕಾಶ ನೀಡುತ್ತದೆಯಾದರೂ, ಸುದೀರ್ಘ ವಿಳಂಬ ನ್ಯಾಯಾಂಗ ವ್ಯವಸ್ಥೆಯ ಮೇಲಿನ ಸಾರ್ವಜನಿಕ ನಂಬಿಕೆಯನ್ನು ಕುಂದಿಸಬಹುದು ಎಂಬ ಅಭಿಪ್ರಾಯ ವ್ಯಾಪಕವಾಗಿದೆ.

ಹಿಮಾಚಲದಲ್ಲಿ ಬಿಜೆಪಿ ಸಂಭ್ರಮ

• **ಧರ್ಮಶಾಲಾ:** ಹಿಮಾಚಲ ಪ್ರದೇಶ ಸ್ಥಳೀಯ ಸಂಸ್ಥೆ ಚುನಾವಣಾ ಫಲಿತಾಂಶ ಭಾನುವಾರ ಪ್ರಕಟವಾಗಿದ್ದು, ಮೂರು ಮಹಾನಗರಪಾಲಿಕೆಗಳಲ್ಲಿ ಬಿಜೆಪಿ ಸ್ಪಷ್ಟ ಬಹುಮತದೊಂದಿಗೆ ಗೆಲುವು ಸಾಧಿಸಿದೆ. ಒಂದು ಮಹಾನಗರಪಾಲಿಕೆಯಲ್ಲಿ ಮಾತ್ರ ಕಾಂಗ್ರೆಸ್ ಅಧಿಕಾರ ಉಳಿಸಿಕೊಂಡಿದ್ದು, ಮುಖ್ಯಮಂತ್ರಿ ಸುಖ್ವಿಂದರ್ ಸಿಂಗ್ ಸುಖು ನೇತೃತ್ವದ ಕಾಂಗ್ರೆಸ್ ಸರ್ಕಾರಕ್ಕೆ ಭಾರೀ ಹಿನ್ನಡೆ ಅನುಭವಿಸಿದೆ. ಧರ್ಮಶಾಲಾದ 17 ವಾರ್ಡ್‌ಗಳಲ್ಲಿ 11ರಲ್ಲಿ ಬಿಜೆಪಿ ಗೆದ್ದರೆ, 5 ಕಾಂಗ್ರೆಸ್ ಪಾಲಾಗಿವೆ. ಸೋಲನ್‌ನ 17 ವಾರ್ಡ್‌ಗಳಲ್ಲಿ 10ರಲ್ಲಿ ಬಿಜೆಪಿ ಗೆದ್ದರೆ, 6ರಲ್ಲಿ ಕಾಂಗ್ರೆಸ್ ಮತ್ತು ಒಬ್ಬ ಸ್ವತಂತ್ರ ಅಭ್ಯರ್ಥಿ ಜಯ ಸಾಧಿಸಿದ್ದಾರೆ. ಮಂಡಿಯ 14 ವಾರ್ಡ್‌ಗಳಲ್ಲಿ ಬಿಜೆಪಿ 12ರನ್ನು ಗೆದ್ದುಕೊಂಡಿದೆ. ಪಾಲಂಪುರ್‌ನ 15 ವಾರ್ಡ್‌ಗಳಲ್ಲಿ ಕಾಂಗ್ರೆಸ್ 11 ಸ್ಥಾನ ಗೆದ್ದು ಗದ್ದುಗೆ ಉಳಿಸಿಕೊಂಡರೆ, 4 ವಾರ್ಡ್‌ಗಳು ಬಿಜೆಪಿ ಪಾಲಾಗಿವೆ. 25 ನಗರಸಭೆಗಳ ಚುನಾವಣೆಯಲ್ಲೂ ತಾವರೆ ಪಕ್ಷ 18ರಲ್ಲಿ ಗೆದ್ದು ಸಂಭ್ರಮಿಸಿದ್ದು, 22 ನಗರ ಪಂಚಾಯಿತಿಗಳಲ್ಲಿ 12ರಲ್ಲಿ ಬಿಜೆಪಿ ಗೆಲುವು ಸಾಧಿಸಿದೆ.

ಕಿರುಸುದ್ದಿ

ಅಪಘಾತ: ಬೆಂಗಳೂರಿನ ಮೂವರ ಸಹಿತ 8 ಸಾವು

• **ಚಂಬಾ:** ಹಿಮಾಚಲ ಪ್ರದೇಶದ ಚಂಬಾ ಜಿಲ್ಲೆಯ ಕಾಲಾವನ್‌ನಲ್ಲಿ ಭಾನುವಾರ ಭೀಕರ ಅಪಘಾತ ಸಂಭವಿಸಿದ್ದು, ಪ್ರವಾಸಿಗರನ್ನು ಕರೆದೊಯ್ಯುತ್ತಿದ್ದ ಟ್ಯಾಕ್ಸಿ ಚಾಲಕನ ನಿಯಂತ್ರಣ ತಪ್ಪಿ 500 ಮೀ. ಆಳದ ಪ್ರಪಾತಕ್ಕೆ ಉರುಳಿದೆ. ದುರಂತದಲ್ಲಿ ಬೆಂಗಳೂರಿನ ಒಂದು ಕುಟುಂಬ, ಛತ್ತೀಸ್‌ಗಢದ ಇನ್ನೊಂದು ಕುಟುಂಬ ಮತ್ತು ಸ್ಥಳೀಯ ಚಾಲಕ ಸೇರಿ ಒಟ್ಟು 8 ಮಂದಿ ಮೃತಪಟ್ಟಿದ್ದಾರೆ. ಅಪಘಾತದ ಸಮಯದಲ್ಲಿ ಒಟ್ಟು 8 ಮಂದಿ ವಾಹನದಲ್ಲಿದ್ದರು. ಈವರೆಗೆ 3 ಮೃತದೇಹಗಳನ್ನು ಹೊರತೆಗೆಯಲಾಗಿದೆ ಎಂದು ಪೊಲೀಸ್ ವರಿಷ್ಠಾಧಿಕಾರಿ(ಎಸ್‌ಪಿ) ತಿಳಿಸಿದ್ದಾರೆ.

ಕೇದಾರನಾಥ ಯಾತ್ರೆ ಸ್ಥಗಿತ

• **ರುದ್ರಪ್ರಯಾಗ್:** ಉತ್ತರಾಖಂಡದ ರುದ್ರಪ್ರಯಾಗದಲ್ಲಿ ಭಾರೀ ಮಳೆ ಮತ್ತು ಬಿರುಗಾಳಿಯ ಮುನ್ಸೂಚನೆ ನೀಡಿ ಹವಾಮಾನ ಇಲಾಖೆ ಆರೆಂಜ್ ಅಲರ್ಟ್ ಘೋಷಿಸಿದ ಹಿನ್ನೆಲೆಯಲ್ಲಿ, ಭಾನುವಾರ ಕೇದಾರನಾಥ ಯಾತ್ರೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ಯಾತ್ರಿಕರ ಸುರಕ್ಷತೆಯ ದೃಷ್ಟಿಯಿಂದ ಯಾತ್ರೆಯನ್ನು ನಿಲ್ಲಿಸಲಾಗಿದ್ದು, ಪ್ರಯಾಣಿಕರನ್ನು ಸುರಕ್ಷಿತ ಸ್ಥಳಗಳಲ್ಲಿ ಉಳಿಯುವಂತೆ ಜಿಲ್ಲಾಡಳಿತ ಸೂಚಿಸಿದೆ.

ಇಂದಿನಿಂದ ನಾಲ್ಕು ದಿನ ಭಾರತ-ಅಮೆರಿಕ ಚರ್ಚೆ

• **ಹೊಸದಿಲ್ಲಿ:** ಭಾರತ ಮತ್ತು ಅಮೆರಿಕ ನಡುವಿನ ವ್ಯಾಪಾರ ಮಾತುಕತೆ ಮತ್ತೆ ವೇಗ ಪಡೆಯುತ್ತಿದ್ದು, ದಿಲ್ಲಿಯಲ್ಲಿ ಉಭಯ ನಿಯೋಗಗಳು ನಾಲ್ಕು ದಿನಗಳ ಚರ್ಚೆ ನಡೆಸಲಿವೆ. ಮುಖ್ಯ ಸಂಧಾನಕಾರ ಬ್ರೆಂಡನ್ ಲಿಂಚ್ ನೇತೃತ್ವದ ಹಾಗೂ ವಾಣಿಜ್ಯ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿ ಮತ್ತು ಮುಖ್ಯ ಸಂಧಾನಕಾರ ದರ್ಪಣ್ ಜೈನ್ ನೇತೃತ್ವದ ಭಾರತ ನಿಯೋಗ ರಾಷ್ಟ್ರ ರಾಜಧಾನಿಯಲ್ಲಿ ಪರಸ್ಪರ ಲಾಭದಾಯಕ ವ್ಯಾಪಾರ ಬಗ್ಗೆ ಚರ್ಚಿಸಲಿವೆ.

ವಾಣಿಜ್ಯ ಇಲಾಖೆಯ ಪ್ರಕಾರ, ಅಮೆರಿಕ ಜತೆ ಮಧ್ಯಂತರ ವ್ಯಾಪಾರ ಒಪ್ಪಂದವನ್ನು ಅಂತಿಮಗೊಳಿಸಿದ ಬಳಿಕ ವಿಸ್ತೃತ ದ್ವಿಪಕ್ಷೀಯ ವ್ಯಾಪಾರ ಒಪ್ಪಂದ(ಬಿಟಿಎ) ಚರ್ಚೆ ನಡೆಸುವತ್ತ ಕೇಂದ್ರ ಸರ್ಕಾರ ಯೋಚಿಸಲಿದೆ. ವಿದೇಶಿ ಮಾರುಕಟ್ಟೆ ವ್ಯಾಪ್ತಿ, ತೆರಿಗೇತರ ವಿಧಾನಗಳು, ಸುಂಕ ಮತ್ತು ವ್ಯಾಪಾರ ಸೌಲಭ್ಯಗಳು, ಹೂಡಿಕೆ ಉತ್ತೇಜನ ಹಾಗೂ ಆರ್ಥಿಕ ಭದ್ರತೆ ಇತ್ಯಾದಿ ವಿಚಾರಗಳ ಕುರಿತು ಚರ್ಚೆ ನಡೆಯಲಿದೆ.

ಭಾರತ-ಅಮೆರಿಕ ನಡುವಿನ ಮಧ್ಯಂತರ ಒಪ್ಪಂದವೆಂದು ಪರಿಗಣಿಸಲಾದ ಮೊದಲ ಹಂತದ ಬಿಟಿಎ ಚೌಕಟ್ಟನ್ನು ಫೆ.7ರಂದು ಜಂಟಿಯಾಗಿ ಘೋಷಿಸಿದ್ದವು. ಪ್ರಸ್ತಾವಿಸಿದ ಒಪ್ಪಂದವನ್ನು ಕಾನೂನಾತ್ಮಕ ರೀತಿಯಲ್ಲಿ ಸಿದ್ಧಪಡಿಸುವುದು ಮುಂದಿನ ಹಂತ. ಬಿಟಿಎ ಒಪ್ಪಂದ ಚೌಕಟ್ಟನ್ನು ಘೋಷಿಸಿದ್ದರಿಂದ, ಉಭಯ ರಾಷ್ಟ್ರಗಳ ನಡುವಿನ ವಿಶಾಲವಾದ ವ್ಯಾಪಾರ ಸಾಧ್ಯತೆ ಖಚಿತಪಡಿಸಿದೆ. ಘೋಷಿತ ಬಿಟಿಎ ಚೌಕಟ್ಟಿನ ಪ್ರಕಾರ, ಭಾರತ ಮೇಲಿನ ಶೇ.50 ಸುಂಕವನ್ನು ಅಮೆರಿಕ ಶೇ.18ಕ್ಕೆ ಇಳಿಸಿದ್ದು, ರಷ್ಯಾ ತೈಲ ಖರೀದಿಗೆ ಹೇರಿದ್ದ ಶೇ.25 ದಂಡವನ್ನೂ ತೆಗೆದುಹಾಕಿದೆ.

ಬಕ್ರೀದ್‌ಗೆ ಕರೆದು ಹಿಂದು ಹತ್ಯೆಗೈದ ಆರೋಪಿ ವಧೆ

• **ಘಾಜಿಯಾಬಾದ್:** ಬಕ್ರೀದ್‌ಗೆ ಆಹ್ವಾನಿಸಿ ಹಿಂದು ಯುವಕನ ಹತ್ಯೆಗೈದ ಪ್ರಕರಣದ ಪ್ರಮುಖ ಆರೋಪಿ ಅಸಾದ್ ಭಾನುವಾರ ಮುಂಜಾನೆ ಪೊಲೀಸ್ ಎನ್‌ಕೌಂಟರ್‌ಗೆ ಬಲಿಯಾಗಿದ್ದಾನೆ. ಅಸಾದ್ ತಂದೆ ನವಾಬ್ ಸೇರಿ ಮೂವರು ಆರೋಪಿಗಳನ್ನು ಬಂಧಿಸಲಾಗಿದೆ. ಉತ್ತರಪ್ರದೇಶದ ಘಾಜಿಯಾಬಾದ್‌ನ ಖೋಡಾದಲ್ಲಿ 17 ವರ್ಷದ ಸೂರ್ಯ ಪ್ರತಾಪ್ ಚೌಹಾಣ್‌ನನ್ನು ಬಕ್ರೀದ್‌ಗೆ ಆಹ್ವಾನಿಸಿದ್ದ ಅಸಾದ್, ಚಾಕುನಿಂದ ಇರಿದು ಹಲ್ಲೆ ನಡೆಸಿದ್ದ. ಏಳು ಮಂದಿಯಿಂದ ಚಾಕು ಇರಿತಕ್ಕೊಳಗಾಗಿ ಗಂಭೀರ ಗಾಯಗೊಂಡಿದ್ದ ಸೂರ್ಯನನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಿದ್ದರೂ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾನೆ. ಘಟನೆಗೆ ವ್ಯಾಪಕ ಆಕ್ರೋಶಕ್ಕೆ ಕಾರಣವಾಗಿದ್ದು, ಕುಟುಂಬಸ್ಥರು ಮತ್ತು ಸ್ಥಳೀಯರು ಆರೋಪಿಗಳ ಬಂಧನಕ್ಕೆ ಆಗ್ರಹಿಸಿದ್ದರು. ಅಸಾದ್ ಮಾಹಿತಿ ನೀಡಿದವರಿಗೆ 50,000 ರೂ. ಬಹುಮಾನವನ್ನೂ ಪೊಲೀಸರು ಘೋಷಿಸಿದ್ದರು.

7 ಮಂದಿಯಿಂದ ಚಾಕು ಇರಿತ: ಸಹೋದರ ಮನೆಯಲ್ಲಿದ್ದ ಅಸಾದ್‌ನಿಂದ ದೂರವಾಣಿ ಕರೆ ಮಾಡಿ ಪದೇ ಪದೆ ಬಕ್ರೀದ್‌ಗೆ ಆಹ್ವಾನಿಸಿದ್ದ. ಆತನಿಗೆ ಬಕ್ರೀದ್ ಆಚರಣೆಗೆ ಹೋಗುವ ಇಚ್ಛೆಯಿರಲಿಲ್ಲ. ಅಸಾದ್ ಒತ್ತಾಯಕ್ಕೆ ತೆರಳಿದ್ದ. ಅಸಾದ್ ಜತೆಗಿದ್ದ 7 ಮಂದಿ ಕೈಯಲ್ಲಿ ಚಾಕುಗಳಿದ್ದವು. ನನ್ನ ಸಹೋದರನ ಮೇಲೆ ಎಲ್ಲರೂ ಚಾಕುವಿನಿಂದ ಇರಿದಿದ್ದಾರೆಂದು ಮೃತನ ಸಹೋದರಿ ಆರೋಪಿಸಿದ್ದಾರೆ. ತನ್ನ ಜೀವ ರಕ್ಷಿಸಿಕೊಳ್ಳಲು ಸೂರ್ಯ 200 ಮೀ. ದೂರದವರೆಗೆ ಓಡಿದ್ದ. ಆದರೆ ದಾಳಿಕೋರರು ಸೂರ್ಯನನ್ನು ಬೆನ್ನತ್ತಿ ಹೋಗಿ ಮತ್ತೆ ಚಾಕುವಿನಿಂದ ಇರಿದಿದ್ದಾರೆಂದು ಸಹೋದರಿ ಆರೋಪಿಸಿದ್ದಾರೆ.

ಭಾರತ- ಬಾಂಗ್ಲಾ ಗಡಿ ಮಾತುಕತೆ ಮಾ.8ರಿಂದ

• **ಹೊಸದಿಲ್ಲಿ:** ಬಾಂಗ್ಲಾದೇಶದಲ್ಲಿ ಹೊಸ ಬಿಎನ್‌ಪಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಭಾರತ ಮತ್ತು ಬಾಂಗ್ಲಾದೇಶ ನಡುವಿನ ಮೊದಲ ದ್ವೈವಾರ್ಷಿಕ ಡಿಜಿ ಮಟ್ಟದ ಗಡಿ ಮಾತುಕತೆ ಮುಂದಿನ ವಾರ ದಿಲ್ಲಿಯಲ್ಲಿ ನಡೆಯಲಿದೆ. ಜೂನ್ 8ರಿಂದ 11ರವರೆಗೆ ನಡೆಯಲಿರುವ ಈ ಸಭೆಯಲ್ಲಿ ಬಿಎಸ್‌ಎಫ್ ಡಿಜಿ ಪ್ರವೀಣ್ ಕುಮಾರ್ ಮತ್ತು ಬಿಜಿಬಿ ಡಿಜಿ ಮೇಜರ್ ಜನರಲ್ ಮೊಹಮ್ಮದ್ ಅಶ್ರಫುಜ್ಜಮಾನ್ ಸಿದ್ದಿಕಿ ನೇತೃತ್ವದ ನಿಯೋಗಗಳು ಭಾಗವಹಿಸಲಿವೆ.

ಭಾರತವು ಬಾಂಗ್ಲಾದೇಶದೊಂದಿಗೆ 4,096 ಕಿಮೀ ಉದ್ದದ ಅಂತಾರಾಷ್ಟ್ರೀಯ ಗಡಿ ಹಂಚಿಕೊಂಡಿದ್ದು, ಇದರಲ್ಲಿ ಸುಮಾರು 860 ಕಿಮಿ ಭಾಗಕ್ಕೆ ಇನ್ನು ಬೇಲಿ ಹಾಕಲಾಗಿಲ್ಲ. ಪಶ್ಚಿಮ ಬಂಗಾಳದಲ್ಲಿ ಇತ್ತೀಚೆಗೆ ಸುವೇಂದು ಅಧಿಕಾರಿ ನೇತೃತ್ವದ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದಿದ್ದು, ಅಕ್ರಮ ನುಸುಳುವಿಕೆ ತಡೆಯಲು ಬಿಎಸ್‌ಎಫ್‌ಗೆ ಭೂಮಿ ಹಸ್ತಾಂತರಿಸಿದೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಅಕ್ರಮ ನುಸುಳುಕೋರರ ವಿರುದ್ಧ ಪತ್ತೆ ಹಚ್ಚಿ, ತೆಗೆದುಹಾಕಿ ಮತ್ತು ಗಡೀಪಾರು ಮಾಡಿ ಎಂಬ 3ಡಿ ಯೋಜನೆಯನ್ನು ಈಗಾಗಲೇ ಹೇಳಿದ್ದಾರೆ. ಈ ಮಾತುಕತೆಯಲ್ಲಿ ಗಡಿ ಬೇಲಿ ನಿರ್ಮಾಣ, ಬಿಎಸ್‌ಎಫ್ ಸಿಬ್ಬಂದಿ ಮೇಲಿನ ದಾಳಿ ತಡೆ, ಕಳ್ಳಸಾಗಣೆ, ಡ್ರೋನ್ ನುಸುಳುವಿಕೆ ಮತ್ತು ಅಕ್ರಮ ಬಾಂಗ್ಲಾ ವಲಸಿಗರನ್ನು ಮರಳಿ ಹಸ್ತಾಂತರಿಸುವ ಕುರಿತು ಚರ್ಚಿಸಲಾಗುವುದು. ಬಿಜಿಬಿ ತನ್ನ ನಾಗರಿಕರ ಮೇಲಿನ ದಾಳಿ ಬಗ್ಗೆ ಪ್ರಸ್ತಾಪಿಸುವ ಸಾಧ್ಯತೆಯಿದೆ. ಜೂ.11ರಂದು ಉಭಯ ದೇಶಗಳ ನಡುವೆ ಜಂಟಿ ಚರ್ಚೆಯ ದಾಖಲೆಗೆ ಸಹಿ ಹಾಕಲಾಗುವುದು.

ತೈಲ ರಫ್ತು ಮೇಲೆ ವಿಶೇಷ ಹೆಚ್ಚುವರಿ ಸುಂಕ ಕಡಿತ

• **ಹೊಸದಿಲ್ಲಿ:** ಪೆಟ್ರೋಲ್, ಡೀಸೆಲ್, ಎಟಿಎಫ್ ಇಂಧನಗಳ ರಫ್ತು ಮೇಲಿನ ವಿಶೇಷ ಹೆಚ್ಚುವರಿ ಸುಂಕವನ್ನು ಕೇಂದ್ರ ಸರ್ಕಾರ ಕಡಿತಗೊಳಿಸಿದೆ. ಲೀಟರ್ ಪೆಟ್ರೋಲ್‌ಗೆ 1.5 ರೂ., ಡೀಸೆಲ್‌ಗೆ 13.5 ರೂ. ಮತ್ತು ವಿಮಾನಯಾನ ಟರ್ಬೈನ್ ಇಂಧನಕ್ಕೆ 9.5 ರೂ. ಕಡಿತಗೊಳಿಸಿದ್ದು, ಸೋಮವಾರದಿಂದ ಜಾರಿಯಾಗಲಿವೆ. ಪೆಟ್ರೋಲ್ ಮತ್ತು ಡೀಸೆಲ್ ರಫ್ತಿನ ಮೇಲೆ ರಸ್ತೆ ಮತ್ತು ಮೂಲಸೌಕರ್ಯ ಸೆಸ್ ಕಡಿತಗೊಳಿಸಿದ್ದಾಗಿ ವಿತ್ತ ಸಚಿವಾಲಯ ತಿಳಿಸಿದೆ. ದೇಶೀಯ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಸುಂಕದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ, ಮಧ್ಯಪ್ರಾಚ್ಯ ಯುದ್ಧದಿಂದ ದೇಶೀಯ ತೈಲ ಪೂರೈಕೆ ಹೆಚ್ಚಿಸುವುದಕ್ಕಾಗಿ ಮೇ 16ರಂದು ಪೆಟ್ರೋಲಿಯಂ ರಫ್ತಿನ ಮೇಲೆ ಮೋದಿ ಸರ್ಕಾರ ವಿಶೇಷ ಹೆಚ್ಚುವರಿ ಸುಂಕ ವಿಧಿಸಿತ್ತು. 2022ರಲ್ಲಿ ಕೇಂದ್ರ ಸರ್ಕಾರ ಇಂಧನ ರಫ್ತುಗಳ ಮೇಲಿನ ವಿಶೇಷ ಹೆಚ್ಚುವರಿ ತೆರಿಗೆಯನ್ನು ಜಾರಿಗೆ ತಂದಿತ್ತು.

ನೌಕಾ ಪಡೆ ಮುಖ್ಯಸ್ಥರಾಗಿ ಅಧಿಕಾರ ಸ್ವೀಕರಿಸಿದ ಅಡ್ಮಿರಲ್ ಕೃಷ್ಣ ಸ್ವಾಮಿನಾಥನ್

ದೇಶದ ಪ್ರತಿಷ್ಠಿತ ಹುದ್ದೆಗೇರಿದ ಕನ್ನಡಿಗ

• **ಹೊಸದಿಲ್ಲಿ:** ಭಾರತೀಯ ಸಶಸ್ತ್ರ ಪಡೆಯಲ್ಲಿ ಕನ್ನಡಿಗರು ಮತ್ತೊಮ್ಮೆ ಅತ್ಯುನ್ನತ ಸ್ಥಾನಕ್ಕೇರುವ ಮೂಲಕ ರಾಜ್ಯಕ್ಕೆ ಕೀರ್ತಿ ತಂದಿದ್ದಾರೆ. ಭಾರತೀಯ ನೌಕಾಪಡೆಯ ನೂತನ ಮುಖ್ಯಸ್ಥರಾಗಿ ವೈಸ್ ಅಡ್ಮಿರಲ್ ಕೃಷ್ಣ ಸ್ವಾಮಿನಾಥನ್ ಅವರು ಭಾನುವಾರ ಅಧಿಕಾರ ಸ್ವೀಕರಿಸಿದರು. ನೌಕಾಪಡೆ ಮುಖ್ಯಸ್ಥರಾಗಿದ್ದ ಅಡ್ಮಿರಲ್ ದಿನೇಶ್ ಕುಮಾರ್ ತ್ರಿಪಾಠಿ ಅವರ ಅಧಿಕಾರಾವಧಿ ಮುಕ್ತಾಯಗೊಂಡ ಹಿನ್ನೆಲೆಯಲ್ಲಿ, ಸ್ವಾಮಿನಾಥನ್ ಅವರು ಈ ಜವಾಬ್ದಾರಿಯನ್ನು ವಹಿಸಿಕೊಳ್ಳುತ್ತಿದ್ದಾರೆ. ಇವರು ಡಿಸೆಂಬರ್ 31, 2028ರವರೆಗೆ ಈ ಹುದ್ದೆಯಲ್ಲಿ ಮುಂದುವರಿಯಲಿದ್ದಾರೆ.

ವೈಸ್ ಅಡ್ಮಿರಲ್ ಕೃಷ್ಣ ಸ್ವಾಮಿನಾಥನ್ ಅವರ ಬಾಲ್ಯ ಮತ್ತು ಶಿಕ್ಷಣದ ಹಿನ್ನೆಲೆ ಅತ್ಯಂತ ಪ್ರೇರಣಾದಾಯಕವಾಗಿದೆ. ಬೆಂಗಳೂರಿನ ಐತಿಹಾಸಿಕ ಬಸವನಗುಡಿಯ ಎನ್.ಆರ್. ಕಾಲೋನಿಯಲ್ಲಿ ಬೆಳೆದ ಅವರು, ನಗರದ ಪ್ರತಿಷ್ಠಿತ ಬಿಷಪ್ ಕಾಟನ್ ಶಾಲೆಯಲ್ಲಿ ತಮ್ಮ ಆರಂಭಿಕ ಶಿಕ್ಷಣವನ್ನು ಪಡೆದರು. ದೇಶಸೇವೆಯ ಕನಸು ಹೊತ್ತು ನಂತರ ವಿಜಯಪುರದ(ವಿಜಾಪುರ) ಪ್ರಸಿದ್ಧ ಸೈನಿಕ ಶಾಲೆಯಲ್ಲಿ ಸೇನಾ ಶಿಕ್ಷಣವನ್ನು ಪೂರೈಸಿದರು. ಕಠಿಣ ಪರಿಶ್ರಮದ ಮೂಲಕ ಮೊದಲ ಪ್ರಯತ್ನದಲ್ಲೇ ರಾಷ್ಟ್ರೀಯ ರಕ್ಷಣಾ ಅಕಾಡೆಮಿ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಕೇವಲ 19ನೇ ವಯಸ್ಸಿನಲ್ಲಿಯೇ (1987ರಲ್ಲಿ) ಭಾರತೀಯ ನೌಕಾಪಡೆಗೆ ಅಧಿಕಾರಿಯಾಗಿ ನೇಮಕಗೊಳ್ಳುವ ಮೂಲಕ ಯುವಕರಿಗೆ ಮಾದರಿಯಾದರು.



ಕಾರ್ಯಾಚರಣೆಗಳ ಸನ್ನದ್ಧತೆಗೆ ಆದ್ಯತೆ

ರಾಷ್ಟ್ರೀಯ ಭದ್ರತೆ ಮತ್ತು ಆರ್ಥಿಕ ಹಿತಾಸಕ್ತಿಗಳನ್ನು ರಕ್ಷಿಸಲು ಗರಿಷ್ಠ ಕಾರ್ಯಾಚರಣೆಯ ಸಿದ್ಧತೆ ಹಾಗೂ ಯುದ್ಧದ ಪರಿಣಾಮಕಾರಿತ್ವವನ್ನು ಕಾಯ್ದುಕೊಳ್ಳುವುದು ತಮ್ಮ ಅತ್ಯುನ್ನತ ಆದ್ಯತೆ ಎಂದು ನೂತನ ಮುಖ್ಯಸ್ಥರು ತಿಳಿಸಿದ್ದಾರೆ. ಪ್ರಸ್ತುತ ಪ್ರಾದೇಶಿಕ ಕಡಲ ಭದ್ರತೆ ಸವಾಲಿನಿಂದ ಕೂಡಿದ್ದು, ಸಂಕೀರ್ಣ, ಅನಿರೀಕ್ಷಿತ ಮತ್ತು ಅನಿಶ್ಚಿತವಾಗಿದೆ ಎಂದಿದ್ದಾರೆ.

ಪರಮ ವಿಶಿಷ್ಟ ಸೇವಾ ಪದಕ, ಅತಿ ವಿಶಿಷ್ಟ ಸೇವಾ ಪದಕ ಮತ್ತು ವಿಶಿಷ್ಟ ಸೇವಾ ಪದಕಗಳನ್ನು ಅವರು ಪಡೆದಿದ್ದಾರೆ.

ಸ್ವಾಮಿನಾಥನ್ ಅವರು, ಪಶ್ಚಿಮ ನೌಕಾ ಕಮಾಂಡ್‌ನ ಫ್ಲಾಗ್ ಆಫೀಸರ್ ಕಮಾಂಡಿಂಗ್-ಇನ್-ಚೀಫ್ ಆಗಿ ಮತ್ತು ಅದಕ್ಕೂ ಮುನ್ನ ನೌಕಾಸೇನೆಯ ಉಪ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದ್ದರು. ಸಂವಹನ ಮತ್ತು ಎಲೆಕ್ಟ್ರಾನಿಕ್ ಯುದ್ಧ ತಂತ್ರಜ್ಞಾನದಲ್ಲಿ ಪರಿಣತಿ ಹೊಂದಿದ್ದಾರೆ.

ಐಎನ್‌ಎಸ್ ವಿದ್ಯುತ್ ಮತ್ತು ವಿನಾಶ್ ಕ್ಷಿಪಣಿ ನೌಕೆಗಳು, ಐಎನ್‌ಎಸ್ ಕುಲಿಶ್ ಕ್ಷಿಪಣಿ ಕಾರ್ವೆಟ್, ಐಎನ್‌ಎಸ್ ಮೈಸೂರು ಮಾರ್ಗದರ್ಶಿ ಕ್ಷಿಪಣಿ ವಿಧ್ವಂಸಕ ನೌಕೆ ಮತ್ತು ಐಎನ್‌ಎಸ್ ವಿಕ್ರಮಾದಿತ್ಯ ಯುದ್ಧನೌಕೆಗಳ ಕಮಾಂಡಿಂಗ್ ಅಧಿಕಾರಿಯಾಗಿದ್ದರು. ಭಾರತೀಯ ನೌಕಾ ಸುರಕ್ಷತಾ ತಂಡವನ್ನೂ ರಚಿಸಿದ ಅನುಭವವೂ ಇದೆ.

ಸಿಡಿಎಸ್ ಆಗಿ ಜನರಲ್ ರಾಜಾ ಸುಬ್ರಮಣಿ ಅಧಿಕಾರ ಸ್ವೀಕಾರ

• **ಹೊಸದಿಲ್ಲಿ:** ಪಾಕಿಸ್ತಾನ ಮತ್ತು ಚೀನಾ ವಿಷಯಗಳಲ್ಲಿ ತಜ್ಞರೆನಿಸಿಕೊಂಡಿರುವ ಜನರಲ್ ಎನ್.ಎಸ್. ರಾಜಾ ಸುಬ್ರಮಣಿ ಅವರು ಭಾನುವಾರ ಭಾರತದ ನೂತನ ರಕ್ಷಣಾ ಸಿಬ್ಬಂದಿ ಮುಖ್ಯಸ್ಥರಾಗಿ(ಸಿಡಿಎಸ್) ಅಧಿಕಾರ ವಹಿಸಿಕೊಂಡಿದ್ದಾರೆ. ಮೂರು ಸಶಸ್ತ್ರ ಪಡೆಗಳ ಏಕೀಕರಣ ಮತ್ತು ಮಹತ್ವಾಕಾಂಕ್ಷೆಯ ಥಿಯೇಟರೈಸೇಶನ್(ಸಮಗ್ರ ಮಿಲಿಟರಿ ಕಮಾಂಡ್) ಯೋಜನೆಯನ್ನು ಜಾರಿಗೊಳಿಸುವುದು ಅವರ ಪ್ರಮುಖ ಆದ್ಯತೆಯಾಗಿದೆ. ಶನಿವಾರ ನಿವೃತ್ತರಾದ ಜನರಲ್ ಅನಿಲ್ ಚೌಹಾಣ್ ಅವರ ಸ್ಥಾನಕ್ಕೆ ಸುಬ್ರಮಣಿ ಅವರು ನಿಯುಕ್ತರಾಗಿದ್ದಾರೆ.



ಅಧಿಕಾರ ಸ್ವೀಕರಿಸಿದ ನಂತರ ಮಾತನಾಡಿದ ಜನರಲ್ ಸುಬ್ರಮಣಿ, ಪ್ರಧಾನಮಂತ್ರಿಯವರ ಜೆಎಐ(ಜಾಯಿಂಟ್‌ನೆಸ್, ಆತ್ಮನಿರ್ಭರತೆ ಮತ್ತು ಇನ್ನೋವೇಶನ್)ದೃಷ್ಟಿಕೋನವನ್ನು ಸಾಕಾರಗೊಳಿಸಲು ನಾವು ಬದ್ಧರಾಗಿದ್ದೇವೆ. ಸಶಸ್ತ್ರ ಪಡೆಗಳ ಆಧುನೀಕರಣಕ್ಕಾಗಿ ಮಿಲಿಟರಿ, ಕೈಗಾರಿಕೆಗಳು, ನವೋದ್ಯಮಗಳು ಮತ್ತು ಸಂಶೋಧನಾ ಸಂಸ್ಥೆಗಳ ನಡುವೆ ಹೆಚ್ಚಿನ ಸಹಯೋಗವನ್ನು ಏರ್ಪಡಿಸಲಾಗುವುದು. ಸ್ವದೇಶಿ ಶಸ್ತ್ರಾಸ್ತ್ರಗಳ ಅಭಿವೃದ್ಧಿ ಮತ್ತು ಬಳಕೆಗೆ ವೇಗ ನೀಡಲಾಗುವುದು ಎಂದು ತಿಳಿಸಿದರು.

ಸುದೀರ್ಘ ಸೇನಾ ಅನುಭವ: ಸುಮಾರು 40 ವರ್ಷಗಳ ಸುದೀರ್ಘ ಸೇನಾ ವೃತ್ತಿಜೀವನ ಹೊಂದಿರುವ ಜನರಲ್ ಸುಬ್ರಮಣಿ ಅವರು ಈ ಹಿಂದೆ ಉಪ ಸೇನಾ ಮುಖ್ಯಸ್ಥರಾಗಿ ಮತ್ತು ರಾಷ್ಟ್ರೀಯ ಭದ್ರತಾ ಮಂಡಳಿ ಸಚಿವಾಲಯದಲ್ಲಿ ಮಿಲಿಟರಿ ಸಲಹೆಗಾರರಾಗಿ ಸೇವೆ ಸಲ್ಲಿಸಿದ್ದಾರೆ. ಡಿಸೆಂಬರ್ 14, 1985ರಂದು ಗರ್ವಾಲ್ ರೈಫಲ್ಸ್‌ನ 8ನೇ ಬೆಟಾಲಿಯನ್ ಮೂಲಕ ಇವರು ಸೇನೆಗೆ ಸೇರಿದರು.

ಪ್ರಮುಖ ಸಾಧನೆಗಳು: ಅಸ್ಸಾಂನಲ್ಲಿ ಆಪರೇಷನ್ ರೈನೋ ಅನ್ವಯ ಬಂಡಾಯ ನಿಗ್ರಹ ಕಾರ್ಯಾಚರಣೆ, ಜಮ್ಮು-ಕಾಶ್ಮೀರದಲ್ಲಿ ಇನ್‌ಫೆಂಟ್ರಿ ಬ್ರಿಗೇಡ್ ಹಾಗೂ ಪಶ್ಚಿಮ ಗಡಿಯಲ್ಲಿ ಪ್ರಮುಖ ಸ್ಟ್ರೈಕ್ ಕಾರ್ಪ್ಸ್ ಸೇರಿದಂತೆ ವಿವಿಧ ಕಠಿಣ ರಂಗಗಳಲ್ಲಿ ಅವರು ಯಶಸ್ವಿಯಾಗಿ ಕಮಾಂಡರ್ ಆಗಿ ಕಾರ್ಯನಿರ್ವಹಿಸಿದ್ದಾರೆ.

ಸುಬ್ರಮಣಿ ಅವರಿಗೆ ವಿಶಿಷ್ಟ ಸೇವೆಗಾಗಿ ಪರಮ ವಿಶಿಷ್ಟ ಸೇವಾ ಪದಕ, ಅತಿ ವಿಶಿಷ್ಟ ಸೇವಾ ಪದಕ, ಸೇನಾ ಪದಕ ಮತ್ತು ವಿಶಿಷ್ಟ ಸೇವಾ ಪದಕಗಳನ್ನು ನೀಡಿ ಗೌರವಿಸಲಾಗಿದೆ.

ಗಡಿ ನಿಯಂತ್ರಣ ರೇಖೆ ಬಳಿ ಭಾರತೀಯ ಸೇನಾ ಕಾರ್ಯಾಚರಣೆ

ಪಿಒಕೆ ನುಸುಳುಕೋರ ಸೇರಿ ಮೂವರ ಬಂಧನ

• **ಶ್ರೀನಗರ:** ಜಮ್ಮು ಮತ್ತು ಕಾಶ್ಮೀರದ ಗಡಿ ನಿಯಂತ್ರಣ ರೇಖೆಯ (ಎಲ್‌ಒಸಿ) ಬಳಿ ಭಾರತೀಯ ಸೇನಾ ಪಡೆಗಳು ಭರ್ಜರಿ ಕಾರ್ಯಾಚರಣೆ ನಡೆಸಿದ್ದು, ಅಕ್ರಮವಾಗಿ ಗಡಿ ದಾಟಲು ಯತ್ನಿಸುತ್ತಿದ್ದ ಮೂವರನ್ನು ಬಂಧಿಸುವಲ್ಲಿ ಯಶಸ್ವಿಯಾಗಿವೆ. ಇದರ ಬೆನ್ನಲ್ಲೇ ಮತ್ತೊಂದು ಪ್ರತ್ಯೇಕ ಕಾರ್ಯಾಚರಣೆಯಲ್ಲಿ, ಪ್ರೀತಿಯ ಆಮಿಷಕ್ಕೆ ಒಳಗಾಗಿ ಗಡಿ ದಾಟಿ ಬಂದಿದ್ದ ಪಾಕಿಸ್ತಾನ ಆಕ್ರಮಿತ ಕಾಶ್ಮೀರದ ಯುವಕನೊಬ್ಬನನ್ನು ಸೇನೆ ವಶಕ್ಕೆ ಪಡೆದಿದೆ.

ಬಾರಾಮುಲ್ಲಾ ಜಿಲ್ಲೆಯ ಉರಿ ಸೆಕ್ಟರ್‌ನಲ್ಲಿ ಕೆಲವರು ದೇಶ ವಿರೋಧಿ ಕೃತ್ಯ ಎಸಗುವ ಉದ್ದೇಶದಿಂದ ಗಡಿ ದಾಟಲುಯತ್ನಿಸುತ್ತಿದ್ದಾರೆ ಎಂಬ ನಿಖರ ಮಾಹಿತಿ ಸೇನೆಗೆ ಲಭ್ಯವಾಗಿತ್ತು. ಶನಿವಾರ ರಾತ್ರಿ ಭಾರತೀಯ ಸೇನೆ ಮತ್ತು ಜಮ್ಮು-ಕಾಶ್ಮೀರ ಪೊಲೀಸರು ಜಂಟಿಯಾಗಿ ನಡೆಸಿದ ಕಾರ್ಯಾಚರಣೆಯಲ್ಲಿ ಸೋಪೋರ್ ಮೂಲದ ಇಬ್ಬರು ಹಾಗೂ ಅವರಿಗೆ ಸಹಾಯ ಮಾಡುತ್ತಿದ್ದ ಗೈಡ್ (ಮಾರ್ಗದರ್ಶಿ) ಸೇರಿದಂತೆ ಮೂವರನ್ನು ಚಿನಾರ್ ವಾರಿಯರ್ಸ್ ಪಡೆಗಳು ಬಂಧಿಸಿವೆ. ಬಂಧಿತರನ್ನು ಆದಿಲ್ ಹುಸೇನ್, ಇಶ್ಫಾಕ್ ಲೋನ್ ಮತ್ತು ಜಾಫರ್ ಹಫೀಜ್ ಎಂದು ಗುರುತಿಸಲಾಗಿದ್ದು, ಸದ್ಯ ಇವರನ್ನು ತೀವ್ರ



ವಿಚಾರಣೆಗೆ ಒಳಪಡಿಸಲಾಗಿದೆ.

ಇದೇ ಉರಿ ವಲಯದಲ್ಲಿ ನಡೆದ ಮತ್ತೊಂದು ಹೈಡ್ರಾಮಾ ಘಟನೆಯಲ್ಲಿ, ಭಾರತದ ಗಡಿಯೊಳಗೆ ಅಕ್ರಮವಾಗಿ ನುಸುಳುತ್ತಿದ್ದ ಪಾಕ್ ಆಕ್ರಮಿತ ಕಾಶ್ಮೀರದ ಯುವಕನನ್ನು ಸೇನೆ ಜಾಣ್ಮೆಯಿಂದ ಬಂಧಿಸಿದೆ. ಆತನ ಬಳಿ ಇದ್ದ ಗುರುತಿನ ಚೀಟಿ ಆಧರಿಸಿ ಮುಜಾಫರಾಬಾದ್ ಮೂಲದ 22 ವರ್ಷದ


ಸಾಮಾಜಿಕ ಜಾಲತಾಣ ಪ್ರೇಮಿ ಗಡಿ ದಾಟಿದ ಸಾಹಸ

ಗಡಿ ದಾಟಿ ಬಂದ ಯುವಕನ ಕಥೆ ಕೇಳಿ ಅಧಿಕಾರಿಗಳೇ ದಂಗು

ಜೀಶನ್ ಮೀರ್ ಎಂದು ಗುರುತಿಸಲಾಗಿದೆ.

ಪ್ರಾಥಮಿಕ ವಿಚಾರಣೆ ವೇಳೆ ಈತ ನೀಡಿದ ಹೇಳಿಕೆ ಕೇಳಿ ಭದ್ರತಾ ಸಿಬ್ಬಂದಿಯೇ ಆಶ್ಚರ್ಯಚಕಿತರಾಗಿದ್ದಾರೆ. ಸಾಮಾಜಿಕ ಜಾಲತಾಣದ ಮೂಲಕ ಭಾರತದ ಕಡೆಯ ಹುಡುಗಿಯೊಬ್ಬಳ ಪರಿಚಯವಾಗಿದ್ದು, ಅವಳನ್ನು ಭೇಟಿಯಾಗಲು ತಾನು ಗಡಿ ದಾಟಿ ಬಂದಿರುವುದಾಗಿ ಆತ ಒಪ್ಪಿಕೊಂಡಿದ್ದಾನೆ. ಗಡಿಯಲ್ಲಿ ಜಾಗರೂಕರಾಗಿದ್ದ ಚಿನಾರ್ ವಾರಿಯರ್ಸ್ ಯುವಕನ ಮೇಲೆ ಗುಂಡು ಹಾರಿಸದೆ, ಅತ್ಯಂತ ಸಂಯಮದಿಂದ ಆತನನ್ನು ಜೀವಂತವಾಗಿ ಸೆರೆಹಿಡಿದು ಮುಂದಿನ ಕಾನೂನು ಕ್ರಮಗಳಿಗಾಗಿ ಜಮ್ಮು-ಕಾಶ್ಮೀರ ಪೊಲೀಸರಿಗೆ ಒಪ್ಪಿಸಿದ್ದಾರೆ. ಗಡಿಯಲ್ಲಿ ಉಭಯ ಘಟನೆಗಳಿಂದಾಗಿ ಭದ್ರತೆಯನ್ನು ಮತ್ತಷ್ಟು ಕಠಿಣಗೊಳಿಸಲಾಗಿದೆ.

ರಾಮ ಬಾಣ



ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ನಮ್ಮ ಸಮಾಜ ಕಟ್ಟುವಲ್ಲಿ ಮಹತ್ತರ ಪಾತ್ರ ವಹಿಸುವ ಪತ್ರಿಕೆಯವರ ಪೆನ್ನು ಸದಾ ಕಾಲ ಸತ್ಯದ ಕಡೆಗಿರಲಿ – ಯು.ಟಿ.ಖಾದರ್

– ಸತ್ಯ ಹೇಳಬಹುದಿತ್ತು, ಆದರೆ ಪೆನ್ನಿನ ಹಿಂದೆ ಗನ್ನು ಇರುವ ಭಯ ಅನೇಕರಿಗೆ!

ದಿನ ಭವಿಷ್ಯ

ಮೇಷ
ವೃತ್ತಿಯಲ್ಲಿ ಒತ್ತಡ. ಯಾವುದೇ ಕೆಲಸ ಬಾಕಿ ಇಡಬೇಡಿ. ಸಂಗಾತಿ ಜತೆಗಿನ ಸಂಬಂಧ ಸುಧಾರಣೆ. ಭಿನ್ನಮತ ನಿವಾರಣೆ.

ವೃಷಭ
ಆಪ್ತ ಸಂಬಂಧ ಇನ್ನೊಂದು ಸ್ತರ ಮೇಲೇರಲಿದೆ. ಏಕಾಂಗಿಗಳಿಗೆ ವೈವಾಹಿಕ ಅವಕಾಶ ಉಜ್ವಲ. ಆರ್ಥಿಕ ಪರಿಸ್ಥಿತಿ ಉತ್ತಮ, ಆದಾಯ ಏರಿಕೆ.

ಮಿಥುನ
ವೃತ್ತಿಯಲ್ಲಿ ಸವಾಲು. ತಪ್ಪು ಘಟಿಸದಂತೆ ಎಚ್ಚರ ವಹಿಸಿ. ಹೊಸ ವ್ಯವಹಾರದಲ್ಲಿ ಹಣ ಹೂಡುವುದು ಸಮಂಜಸವೆನಿಸದು. ಕೌಟುಂಬಿಕ ಅಸಹಕಾರ.

ಕಟಕ
ಎಲ್ಲ ವಿಧಗಳಲ್ಲೂ ಇಂದು ತೃಪ್ತಿಕರ ದಿನ. ಧನಪ್ರಾಪ್ತಿ. ಕಾರ್ಯ ಸಫಲ. ನಿಮ್ಮ ಇಷ್ಟವೊಂದು ನೆರವೇರುವುದು. ಬಂಧು ಸಹಕಾರ.

ಸಿಂಹ
ಏರಿಳಿತಗಳ ದಿನ. ದೊಡ್ಡ ಹೊಣೆ ಬೀಳಲಿದೆ. ಅದನ್ನು ಪೂರೈಸಲು ಕಷ್ಟ ಪಡುವಿರಿ. ಕಳಕೊಂಡ ಪ್ರೀತಿ ಪಡೆಯಲು ಪ್ರಾಮಾಣಿಕ ಪ್ರಯತ್ನ ನಡೆಸಿರಿ.

ಕನ್ಯಾ
ಸವಾಲಿನ ದಿನ. ಹಣದ ವ್ಯವಹಾರದಲ್ಲಿ ತೊಡಕು ಕಾಣಿಸೀತು. ಹದ ತಪ್ಪಿದ ಮಾತು ಉದ್ವಿಗ್ನತೆ ಉಂಟು ಮಾಡಬಹುದು. ಸಂಯಮ ವಹಿಸಿರಿ.

ತುಲಾ
ವೃತ್ತಿಕ್ಷೇತ್ರದಲ್ಲಿ ಉಂಟಾಗಿದ್ದ ಉದ್ವಿಗ್ನತೆ ನಿವಾರಣೆ. ಸೌಹಾರ್ದ ಪರಿಸ್ಥಿತಿ ನೆಲೆಸಲಿದೆ. ಧನಹಾನಿ ಸಂಭವ, ಎಚ್ಚರದಿಂದ ವ್ಯವಹರಿಸಿ.

ವೃಶ್ಚಿಕ
ದೈನಂದಿನ ಒತ್ತಡದಿಂದ ಮುಕ್ತಿ. ನಿಮ್ಮ ಇಷ್ಟದ ಹವ್ಯಾಸದಲ್ಲಿ ಕಾಲ ಕಳೆಯುವ ಅವಕಾಶ. ಒಟ್ಟಿನಲ್ಲಿ ಇಂದು ಸಂತೋಷದ ಮನಸ್ಥಿತಿ

ಧನು
ಅದೃಷ್ಟ ನಿಮಗೆ ಕೈಕೊಡಬಹುದು. ಹಾಗಾಗಿ ಕಾರ್ಯದಲ್ಲಿ ಸಫಲತೆ ದೊರಕದು. ಪ್ರೀತಿಯ ವಿಷಯದಲ್ಲಿ ಭಾವನಾತ್ಮಕ ಏರುಪೇರು.

ಮಕರ
ಇಂದು ಹೆಚ್ಚು ಭಾವುಕ ಪ್ರಸಂಗಕ್ಕೆ ಸಾಕ್ಷಿಯಾಗುವಿರಿ. ಆರ್ಥಿಕ ಪ್ರಗತಿಗೆ ಅಡ್ಡಿ ಬಂದೀತು. ವೃತ್ತಿಯಲ್ಲಿ ಆಂಶಿಕ ಯಶಸ್ಸು ಪಡೆಯುವಿರಿ

ಕುಂಭ
ಬಹಳಷ್ಟು ಕೆಲಸ ಬಾಕಿಯಿದೆ. ಅದನ್ನು ಪೂರೈಸಬೇಕಾದ ಒತ್ತಡ. ಪ್ರೀತಿಯ ವಿಚಾರದಲ್ಲಿ ದುಡುಕಿನ ನಿರ್ಧಾರ ತಾಳಬೇಡಿ.

ಮೀನ
ವೃತ್ತಿಯಲ್ಲೂ, ಖಾಸಗಿ ಬದುಕಲ್ಲೂ ಕೆಲ ಸಮಸ್ಯೆ ಎದುರಿಸುವಿರಿ. ಅಭದ್ರತೆಯ ಭಾವ ಕಾಡಲಿದೆ. ಸಂಗಾತಿ ಜತೆಗೆ ಮನಸ್ತಾಪ ಸಂಭವ.

ರಾಹುಕಾಲ: 7.30-9.00
ಗುಳಿಕಕಾಲ: 1.30-3.00

ಅದೃಷ್ಟ ಸಂಖ್ಯೆ: 4,9,2,8

ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಡಿ.ಕೆ. ಶಿವಕುಮಾರ್

ಜೂ.3ಕ್ಕೆ ಕಾಂಗ್ರೆಸ್ ಭವನ ನಿರ್ಮಾಣಕ್ಕೆ ಭೂಮಿ ಪೂಜೆ

• **ಬೆಂಗಳೂರು:** ಜೂನ್ 3ರಂದು ಸಿಎಂ ಆಗಿ ಪ್ರಮಾಣ ವಚನ ಸ್ವೀಕಾರ ಕಾರ್ಯಕ್ರಮ ಮುಗಿದ ಬಳಿಕ ರೇಸ್ ಕೋರ್ಸ್ ರಸ್ತೆ ಬಳಿ ಕಾಂಗ್ರೆಸ್ ಭವನ ನಿರ್ಮಾಣಕ್ಕೆ ಭೂಮಿ ಪೂಜೆ ಕಾರ್ಯಕ್ರಮ ನಡೆಸಲು ಆಲೋಚಿಸಲಾಗಿದೆ ಎಂದು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಡಿ.ಕೆ. ಶಿವಕುಮಾರ್ ತಿಳಿಸಿದರು.

ರೇಸ್ ಕೋರ್ಸ್ ರಸ್ತೆ ಬಳಿ ಉದ್ದೇಶಿತ ಕಾಂಗ್ರೆಸ್ ಭವನ ನಿರ್ಮಾಣ ಜಾಗಕ್ಕೆ ಭಾನುವಾರ ಭೇಟಿ ನೀಡಿ, ಪರಿಶೀಲನೆ ನಡೆಸಿ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದರು. ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಹಾಗೂ ರಾಹುಲ್ ಗಾಂಧಿ ಅವರು ಇನ್ನಷ್ಟೇ ಸಮಯ ನಿಗದಿ ಮಾಡಬೇಕಿದೆ. ಈ ಕಾರ್ಯಕ್ರಮದ ಆಹ್ವಾನ ಪತ್ರಿಕೆಯನ್ನು ರಾಹುಲ್ ಅವರಿಗೆ ಇನ್ನಷ್ಟೇ ನೀಡಲಾಗುವುದು. ರಾಮಲಿಂಗಾರೆಡ್ಡಿ ಅವರ ನೇತೃತ್ವದಲ್ಲಿ ಕಚೇರಿ ಶಂಕುಸ್ಥಾಪನೆ ನೆರವೇರಿಸಲು ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಪಕ್ಷದ ಎಲ್ಲಾ ಬ್ಲಾಕ್ ಹಾಗೂ ಜಿಲ್ಲಾ ಅಧ್ಯಕ್ಷರು, ಶಾಸಕರು ಹಾಗೂ ಮಾಜಿ ಶಾಸಕರು, ಗ್ಯಾರಂಟಿ ಸಮಿತಿಗಳ ಅಧ್ಯಕ್ಷರು, ಪಕ್ಷದ ವಿವಿಧ ಮುಂಚೂಣಿ ಘಟಕಗಳ ಅಧ್ಯಕ್ಷರು, ಸಂಸದರು, ವಿವಿಧ ನಿಗಮ, ಮಂಡಳಿಗಳ ಅಧ್ಯಕ್ಷರಿಗೆ ಆಹ್ವಾನ ನೀಡಲಾಗುವುದು. ಈ ಕಾರ್ಯಕ್ರಮದಲ್ಲಿ ಸಾರ್ವಜನಿಕರಿಗೆ ಅವಕಾಶ ಇರುವುದಿಲ್ಲ. ಕಾರ್ಯಕರ್ತರು ಕ್ಷಮಿಸಬೇಕು. ಜಾಗದ ಕೊರತೆ ಇರುವುದರಿಂದ ಆಹ್ವಾನಿತರಿಗೆ ಮಾತ್ರ ಅವಕಾಶ ಕಲ್ಪಿಸಲಾಗುವುದು ಎಂದು ಹೇಳಿದರು.

ಪ್ರಮಾಣ ವಚನ ಸ್ವೀಕಾರ ಕಾರ್ಯಕ್ರಮಕ್ಕೆ ನಮ್ಮ ಪಕ್ಷದ ಎಲ್ಲಾ ನಾಯಕರು ಹಾಗೂ ಪದಾಧಿಕಾರಿಗಳಿಗೆ ಆಹ್ವಾನ ನೀಡಲು ಆಗದ ಕಾರಣ, ಇಲ್ಲೇ ಎಲ್‌ಇಡಿ ಪರದೆಗಳಲ್ಲಿ ಆ ಕಾರ್ಯಕ್ರಮ ವೀಕ್ಷಣೆಗೆ ಅವಕಾಶ ಕಲ್ಪಿಸಲಾಗಿದೆ. ನಮಗಾಗಿ ಹೋರಾಟ ಮಾಡಿ, ಶ್ರಮಿಸಿದ ನಾಯಕರಿಗೆ ನಾವು ಇಷ್ಟಾದರೂ ಅವಕಾಶ ಮಾಡಿಕೊಡಬೇಕು ಎಂದು ತಿಳಿಸಿದರು.



ಸಾರ್ವಜನಿಕರಿಗೆ ತೊಂದರೆಯಾಗದಂತೆ ಸರಳ ಸಮಾರಂಭ

ಬೆಂಗಳೂರಿನ ನಾಗರಿಕರಿಗೆ ತೊಂದರೆಯಾಗಬಾರದು, ಪ್ರಮಾಣ ವಚನ ಕಾರ್ಯಕ್ರಮಕ್ಕೆ ಹೊರಗಡೆಯಿಂದ ಹೆಚ್ಚಿನ ವಾಹನ ಆಗಮಿಸಿ ಸಂಚಾರ ದಟ್ಟಣೆ ಆಗಬಾರದು ಎಂಬ ಕಾರಣಕ್ಕೆ ವಿಧಾನಸೌಧದ ಮೆಟ್ಟಿಲುಗಳ ಬದಲು ಲೋಕಭವನದಲ್ಲಿ ಪ್ರಮಾಣ ವಚನ ಕಾರ್ಯಕ್ರಮ ಮಾಡಲಾಗುವುದು. ಈ ಕಾರ್ಯಕ್ರಮ ಸರಳವಾಗಿ ನಡೆಯುತ್ತಿರುವುದರಿಂದ ಹೆಚ್ಚಿನ ಜನ ಸೇರಲು ಆಗುವುದಿಲ್ಲ. ಹೀಗಾಗಿ ನಮ್ಮ ಕಾರ್ಯಕರ್ತರು ಕ್ಷಮಿಸಬೇಕು ಎಂದು ನಿಯೋಜಿತ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮನವಿ ಮಾಡಿದರು. ತಮ್ಮೊಂದಿಗೆ ಬೇರೆ ಸಚಿವರು ಪ್ರಮಾಣ ವಚನ ಸ್ವೀಕರಿಸುವ ಕುರಿತ ಪ್ರಶ್ನೆಗೆ, ಅದರ ಬಗ್ಗೆ ನನಗೆ ಗೊತ್ತಿಲ್ಲ, ಪಕ್ಷದ ಹೈಕಮಾಂಡ್ ನಿರ್ಧರಿಸಿದಂತೆ ಮಾಡುತ್ತೇವೆ. ಹಾಗಾಗಿ ಈ ಬಗ್ಗೆ ಯಾವುದೇ ಹೇಳಿಕೆ ನೀಡಲು ಬಯಸುವುದಿಲ್ಲ ಎಂದು ತಿಳಿಸಿದರು.

ನೂರು ಕಚೇರಿಗಳ ಶಂಕುಸ್ಥಾಪನೆ ಬಗ್ಗೆ ಕೇಳಿದಾಗ, ಗಾಂಧಿ ಭಾರತ ಮತ್ತು ಗಾಂಧೀಜಿಯವರ 100 ವರ್ಷಗಳ ನೆನಪಿನ ಅಂಗವಾಗಿ ನಾವು 100 ಕಚೇರಿಗಳನ್ನು ಸ್ಥಾಪಿಸಲು ನಿರ್ಧರಿಸಿದ್ದೆವು. ಈಗ ಅವುಗಳನ್ನು ಸಿದ್ಧಪಡಿಸುತ್ತಿದ್ದೇವೆ. ಅವುಗಳಿಗೆ ಮುಂದಿನ ದಿನಗಳಲ್ಲಿ ಭೂಮಿ ಪೂಜೆ ಮಾಡಲಾಗುವುದು. ಈಗ ರೇಸ್ ಕೋರ್ಸ್ ರಸ್ತೆಯ ಕಚೇರಿಗೆ ಭೂಮಿ ಪೂಜೆ ಮಾಡಲು ಅನುಮತಿ ಕೇಳುತ್ತಿದ್ದೇವೆ ಎಂದು ಸ್ಪಷ್ಟಪಡಿಸಿದರು.

ಸ್ಪೀಕರ್ ಸ್ಥಾನಕ್ಕೆ ಶಾಸಕರ ಹಿಂದೇಟು

• **ಬೆಂಗಳೂರು:** ಒಂದೆಡೆ ಸಚಿವ ಸ್ಥಾನಕ್ಕಾಗಿ ಹಿರಿಯ ಮತ್ತು ಕಿರಿಯ ಶಾಸಕರಿಂದ ಇನ್ನಿಲ್ಲದ ಲಾಬಿ ನಡೆಯುತ್ತಿದ್ದರೆ, ಮತ್ತೊಂದೆಡೆ ಅದಕ್ಕೆ ವ್ಯತಿರಿಕ್ತವಾಗಿ ವಿಧಾನಸಭೆಯ ಸಭಾಧ್ಯಕ್ಷ ಸ್ಥಾನ ಕೊಡ್ತೀನಿ ಅಂದ್ರೂ, ಹಿಂದೇಟು ಹಾಕುತ್ತಿರುವುದು ಕಂಡುಬರುತ್ತಿದೆ.

ಹಾಲಿ ಇರುವ ಸ್ಪೀಕರ್ ಯು.ಟಿ. ಖಾದರ್ ಸಚಿವ ಆಕಾಂಕ್ಷಿಯಾಗಿದ್ದಾರೆ. ಇದಕ್ಕಾಗಿ ಭಾರಿ ಲಾಬಿ ನಡೆಸಿದ್ದಾರೆ. 2023 ರಲ್ಲೇ ಇದಕ್ಕಾಗಿ ಅವರು ಕಸರತ್ತು ನಡೆಸಿದ್ದರು. ಆದರೆ, ಅಂತಿಮವಾಗಿ ಸ್ಪೀಕರ್ ಹುದ್ದೆ ಲಭಿಸಿತ್ತು. ಈಗ ಹೊಸ ಸಂಪುಟದಲ್ಲಿ ಶತಾಯಗತಾಯ ಸೇರಲು ಯತ್ನಿಸುತ್ತಿದ್ದಾರೆ.

ಇನ್ನು ಒಂದು ವೇಳೆ ಖಾದರ್ ಸಂಪುಟ ಸೇರಿದರೆ, ತೆರವಾಗಲಿರುವ ಸ್ಥಾನಕ್ಕೆ ಹಿರಿಯ ನಾಯಕರಾದ ಎಚ್.ಕೆ. ಪಾಟೀಲ, ಆರ್.ವಿ. ದೇಶಪಾಂಡೆ ಮತ್ತು ಟಿ.ಬಿ. ಜಯಚಂದ್ರ ಅವರ ಹೆಸರು ಕೇಳಿಬರುತ್ತಿದೆ. ಇವರಲ್ಲಿ ಒಬ್ಬರನ್ನು ಆಯ್ಕೆ ಮಾಡುವ ಸಾಧ್ಯತೆ ಇದೆ. ಆದರೆ, ಈ ಪೈಕಿ ಆರ್.ವಿ. ದೇಶಪಾಂಡೆ ಈಗಾಗಲೇ ಸ್ಪೀಕರ್ ಸ್ಥಾನ ನಿರಾಕರಿಸಿದ್ದಾರೆ.

ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ದೇಶಪಾಂಡೆ, ನಾನು ಸ್ಪೀಕರ್ ಹುದ್ದೆ ಆಕಾಂಕ್ಷಿ ಅಲ್ಲ, ನನಗೆ ಆಸಕ್ತಿಯೂ ಇಲ್ಲ, ಒಂದು ವೇಳೆ ಕೊಟ್ಟರೂ ನನಗೆ ಆ ಹುದ್ದೆ ಬೇಡ ಎಂದು ಸ್ಪಷ್ಟಪಡಿಸಿದ್ದಾರೆ.

ಒಟ್ಟಾರೆಯಾಗಿದೆಹಲಿ ಭೇಟಿಯ ನಂತರ ರಾಜ್ಯ ರಾಜಕಾರಣದ ಹೊಸ ಸಂಪುಟ ಮತ್ತು ಕೆಪಿಸಿಸಿ ಸಾರಥ್ಯದ ಕುರಿತು ಚರ್ಚೆ ನಡೆಯಲಿದೆ. ಇದೇ ವೇಳೆ ಸ್ಪೀಕರ್ ಹುದ್ದೆಯ ಬಗ್ಗೆಯೂ ಸ್ಪಷ್ಟ ಚಿತ್ರಣ ಸಿಗಲಿದೆ ಎನ್ನಲಾಗಿದೆ.

ಮತ್ತೆ ಮುನ್ನೆಲೆಗೆ ಬಂದ ಸಮನ್ವಯ ಸಮಿತಿ

• **ಬೆಂಗಳೂರು:** ಈ ಹಿಂದೆ ಕಾಂಗ್ರೆಸ್-ಜೆಡಿಎಸ್ ಸಮ್ಮಿಶ್ರ ಸರ್ಕಾರದಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗಿದ್ದ ಸಮನ್ವಯ ಸಮಿತಿ ರಚನೆ ವಿಚಾರ ಮತ್ತೆ ಮುನ್ನೆಲೆಗೆ ಬಂದಿದ್ದು, ಇದರ ಬಗ್ಗೆ ಪರ-ವಿರೋಧಗಳು ವ್ಯಕ್ತವಾಗುತ್ತಿವೆ.

ಸಿದ್ದರಾಮಯ್ಯ ನಾಯಕತ್ವದಲ್ಲಿ 3 ವರ್ಷ ಪೂರ್ಣಗೊಳಿಸಿರುವ ಕಾಂಗ್ರೆಸ್ ಸರ್ಕಾರ ಈಗ ಸುಸೂತ್ರ ಅಧಿಕಾರ ಹಸ್ತಾಂತರದ ಬಳಿಕ ಡಿ.ಕೆ. ಶಿವಕುಮಾರ್ ಅವರ ನಾಯಕತ್ವದಲ್ಲಿ ಮುಂದುವರಿಯುತ್ತಿದೆ. ಈ ಸಂದರ್ಭದಲ್ಲಿ ಎರಡೂ ಬಣಗಳು ಮತ್ತು ಹೈಕಮಾಂಡ್ ನಡುವೆ ಸಂಪರ್ಕ ಕೊಂಡಿಯಂತೆ ಕೆಲಸ ಮಾಡಲು ಕೋರ್ ಕಮಿಟಿ ಅಥವಾ ಸಮನ್ವಯ ಸಮಿತಿಯೊಂದರ ಅಗತ್ಯತೆ ಇದೆ ಎಂಬ ಮಾತುಗಳು ಕೆಲ ಹಿರಿಯ ಸಚಿವರಿಂದ ಕೇಳಿಬರುತ್ತಿದೆ.

ಸಮನ್ವಯ ಸಮಿತಿ ಅತ್ಯವಶ್ಯ: ಭಾನುವಾರ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಮಾಜಿ ಸಚಿವ ಕೆ.ಎಚ್. ಮುನಿಯಪ್ಪ, ಯಾವುದೇ ರಾಜಕೀಯ ಪಕ್ಷ ಅಧಿಕಾರದಲ್ಲಿರಲಿ. ಅದಕ್ಕೊಂದು ಸಮನ್ವಯ ಸಮಿತಿ ಇರುವುದು ಅತ್ಯಂತ ಅವಶ್ಯಕ. ಅದು ತುಂಬ ಮುಖ್ಯವಾದದ್ದಾಗಿದೆ. ಹಾಗಾಗಿ, ನಾನೂ ಅದನ್ನೇ ಸಲಹೆ ಮಾಡುತ್ತೇನೆ ಎಂದು ತಿಳಿಸಿದರು.

ಈ ಹಿಂದೆ ಅಂದರೆ 2018-19ರಲ್ಲಿ ಸಮ್ಮಿಶ್ರ ಸರ್ಕಾರ ರಚನೆಯಾಗಿತ್ತು. ಆಗ ಸಿದ್ದರಾಮಯ್ಯ ನೇತೃತ್ವದಲ್ಲಿ ಸಮನ್ವಯ ಸಮಿತಿ ರಚನೆಯಾಗಿತ್ತು. ಆದಾಗ್ಯೂ ಅದೇ ಸಮನ್ವಯದ ಕೊರತೆಯಿಂದ ಸರ್ಕಾರ ಅವಧಿಗೂ ಮೊದಲೇ ವಿಸರ್ಜನೆಯಾಯಿತು.

ಸಂಪುಟ ರಚನೆ ಕಸರತ್ತು

ಪುಟ ೧➡ ವಿಧಾನ ಪರಿಷತ್ ಮತ್ತು ರಾಜ್ಯಸಭೆ ಅಭ್ಯರ್ಥಿಗಳ ಆಯ್ಕೆಯ ಬಗ್ಗೆ ಚರ್ಚೆ ಇಲ್ಲ ಎಂದು ಮೂಲಗಳು ತಿಳಿಸಿವೆ. ರಾಜ್ಯಸಭೆ ಚುನಾವಣೆ ಇನ್ನೂ ಒಂದು ವಾರ ಇರುವುದರಿಂದ ಸದ್ಯಕ್ಕೆ ಸಂಪುಟ ಚರ್ಚೆ ಮಾತ್ರ ಆಗಲಿದೆ. ಅಲ್ಲದೆ, ಪ್ರಮಾಣವಚನ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ ಹಾಗೂ ಪ್ರಿಯಾಂಕ್ ಗಾಂಧಿ ಅವರಿಗೆ ಡಿ.ಕೆ. ಶಿವಕುಮಾರ್ ಆಹ್ವಾನ ನೀಡಲಿದ್ದಾರೆ.

15 ದಿನ ಬಳಿಕ ಸಂಪುಟ ವಿಸ್ತರಣೆ: ಖರ್ಗೆ

ಪುಟ ೧➡ ಪ್ರಸ್ತಾವ ಬಂದ ಬಳಿಕ ಎಷ್ಟು ಡಿಸಿಎಂ ಮಾಡಬೇಕು? ಎಷ್ಟು ಸಚಿವರನ್ನು ಮಾಡಬೇಕು? ಎಂದು ತೀರ್ಮಾನಿಸಲಾಗುವುದು. ಮಹತ್ವದ ನಿಗಮದ ಅಧ್ಯಕ್ಷ ಸ್ಥಾನಗಳನ್ನೂ ಜತೆಯಲ್ಲೇ ಮಾಡಬೇಕಾ? ಎನ್ನುವ ಚರ್ಚೆ ಸಹ ನಡೆದಿದೆ. ಇವೆಲ್ಲಾ ಜೂನ್ 3ರ ನಂತರ ನಿರ್ಧಾರ ಮಾಡುತ್ತೇವೆ ಎಂದರು.

ಎಷ್ಟು ಮಂದಿ ಪ್ರಮಾಣವಚನ ಸ್ವೀಕರಿಸುತ್ತಾರೋ ಗೊತ್ತಿಲ್ಲ: ಡಿ.ಕೆ. ಶಿವಕುಮಾರ್ ಅವರೊಂದಿಗೆ ಎಷ್ಟು ಶಾಸಕರು ಸಚಿವರಾಗಿ ಪ್ರಮಾಣವಚನ ಸ್ವೀಕರಿಸುತ್ತಾರೆ ಎನ್ನುವ ಪ್ರಸ್ತಾವ ಇನ್ನೂ ಬಂದಿಲ್ಲ. ಎಂಟು ಸಚಿವರನ್ನು ಮಾಡುತ್ತಾರೋ, ಹತ್ತು ಜನರನ್ನು ಸಚಿವರನ್ನಾಗಿ ಮಾಡುತ್ತಾರೋ ಗೊತ್ತಿಲ್ಲ. ಸದ್ಯಕ್ಕೆ ಒಂದು ಹಂತದಲ್ಲಿ ಸಚಿವರನ್ನು ಮಾಡುತ್ತೇವೆ. ಆದಾದ 15 ದಿನ ಅಥವಾ ಒಂದು ತಿಂಗಳು ಬಿಟ್ಟು ಎರಡನೇ ಹಂತದ ಮಂತ್ರಿಮಂಡಲ ರಚನೆ ಮಾಡುವ ವಿಚಾರ ಇದೆ. ಆದರೆ, ಸಿಎಂ ಏನು ವಿಚಾರ ಮಾಡುತ್ತಾರೋ ಅವರಿಗೇ ಬಿಟ್ಟದ್ದು ಎಂದು ಮಲ್ಲಿಕಾರ್ಜುನ ಖರ್ಗೆ ಹೇಳಿದರು.

ಕಮಿಟಿ ರಚನೆ ಹೈಕಮಾಂಡ್‌ಗೆ ಬಿಟ್ಟಿದ್ದು: ಸತೀಶ್

• **ಬೆಂಗಳೂರು:** ಸರ್ಕಾರಕ್ಕೆ ಮಾರ್ಗದರ್ಶನ ನೀಡಲು ಹಿರಿಯ ನಾಯಕರ ನೇತೃತ್ವದಲ್ಲಿ ಕೋರ್ ಕಮಿಟಿ ರಚನೆ ಮಾಡುವುದು ಹೈಕಮಾಂಡ್‌ಗೆ ಬಿಟ್ಟಿದ್ದು ಎಂದು ಮಾಜಿ ಸಚಿವ ಸತೀಶ್ ಜಾರಕಿಹೊಳಿ ತಿಳಿಸಿದ್ದಾರೆ.

ನಗರದಲ್ಲಿ ಮಾಧ್ಯಮಗಳೊಂದಿಗೆ ಮಾತುಕತೆ ನಡೆಸಿದ ಅವರು, ಈ ಹಿಂದೆಯೂ ಕೋರ್ ಕಮಿಟಿ ಬಗ್ಗೆ ಚರ್ಚೆ ಆಗಿತ್ತು, ಆದರೆ ಆಗಲಿಲ್ಲ, ಮಾಡುವುದು ಬಿಡುವುದು ಹೈಕಮಾಂಡ್ ನಿರ್ಧರಿಸಲಿದೆ ಎಂದರು. ಡಿ.ಕೆ. ಶಿವಕುಮಾರ್ ಆಡಳಿತಕ್ಕೆ ಸಿದ್ದರಾಮಯ್ಯ ಮಾರ್ಗದರ್ಶನ ಇದೆ. ಅವರು ಅನುಸರಿಸ ಮಾರ್ಗಗಳೇ ಮಾನದಂಡ ಆಗಿದ್ದು, 3 ವರ್ಷದ ಆಡಳಿತದ ಮಾದರಿಯಲ್ಲೇ ಇವರು ಆಡಳಿತ ನಡೆಸಲಿದ್ದಾರೆ. ಅಧಿಕಾರ ಹಂಚಿಕೆ ಸರಳವಾಗಿ ಗೊಂದಲ ಇಲ್ಲದೇ ಹಂಚಿಕೆಯಾಗಿದೆ. ಪಕ್ಷದಲ್ಲಿ ಶಿಸ್ತು ಇದೆ ಎಂಬುದನ್ನು ತೋರಿಸಲಾಗಿದೆ ಎಂದರು.

ಕೆಪಿಸಿಸಿ ಅಧ್ಯಕ್ಷ ಸ್ಥಾನದ ಬಗ್ಗೆ ಹೈಕಮಾಂಡ್ ಸಭೆಯಲ್ಲಿ ಚರ್ಚೆಯಾಗಬಹುದು, ಅಧ್ಯಕ್ಷ ಸ್ಥಾನಕ್ಕೆ ಬೇಡಿಕೆ ಇಟ್ಟಿಲ್ಲ, ನಾನೇ ಆಗಬೇಕು ಅಂತ ಇಲ್ಲ, ಸೂಕ್ತ ಅನಿಸಿದವರು ಅಧ್ಯಕ್ಷ ಆಗುತ್ತಾರೆ. ಲಾಭನಷ್ಟದ ಬಗ್ಗೆ ಹೈಕಮಾಂಡ್ ಚರ್ಚೆ ಮಾಡಲಿದ್ದಾರೆ. ಮೊದಲ ಹಂತದಲ್ಲಿ ಹಿರಿಯರಿಗೆ ಅವಕಾಶ ಸಿಗುವ ಸಾಧ್ಯತೆ ಇದೆ ಎಂದು ಜಾರಕಿಹೊಳಿ ಹೇಳಿದರು.

ಇಂದಿನಿಂದ ನಾಮಪತ್ರ ಸಲ್ಲಿಕೆ ಆರಂಭ


• **ಬೆಂಗಳೂರು:** ವಿಧಾನಸಭೆಯಿಂದ ರಾಜ್ಯಸಭೆಯ 4 ಹಾಗೂ ವಿಧಾನಪರಿಷತ್ತಿನ 7 ಸ್ಥಾನಗಳಿಗೆ ಸೋಮವಾರದಿಂದ ಅಧಿಸೂಚನೆ ಆರಂಭವಾಗಲಿದೆ.

ವಿಧಾನಸಭೆಯಿಂದ ವಿಧಾನ ಪರಿಷತ್ತಿಗೆ ಚುನಾಯಿತರಾಗಿದ್ದ 7 ಸದಸ್ಯರ ಅವಧಿ ಜೂನ್ 30ಕ್ಕೆ ಕೊನೆಗೊಳ್ಳಲಿದೆ. ಅದೇ ರೀತಿ ರಾಜ್ಯಸಭೆಯ 4 ಸದಸ್ಯರ ಅವಧಿ ಜೂನ್ 26ಕ್ಕೆ ಕೊನೆಗೊಳ್ಳಲಿದೆ. ಸರ್ಕಾರ ರಚನೆಯ ಕಸರತ್ತು ಜೋರಾಗಿರುವುದರಿಂದ ಆಡಳಿತ ಪಕ್ಷದ ಅಭ್ಯರ್ಥಿಗಳ ಆಯ್ಕೆ ಅಂತಿಮಗೊಂಡಿಲ್ಲ, ವಿರೋಧ ಪಕ್ಷಗಳ ಅಭ್ಯರ್ಥಿಗಳ ಆಯ್ಕೆ ಅಂತಿಮಗೊಳ್ಳದ ಕಾರಣ ಅಭ್ಯರ್ಥಿಗಳ ನಾಮಪತ್ರ ಸಲ್ಲಿಕೆ ವಿಳಂಬವಾಗಬಹುದು.

ಜೂ.8 ನಾಮಪತ್ರ ಸಲ್ಲಿಕೆಗೆ ಕೊನೆಯ ದಿನವಾಗಿದ್ದು, ಜೂ.9 ನಾಮಪತ್ರಗಳ ಪರಿಶೀಲನೆ. ನಾಮಪತ್ರ ಹಿಂಪಡೆಯಲು ಕೊನೆ ದಿನ ಜೂ.11 ಜೂ.18 ರಂದು ಬೆಳಗ್ಗೆ 9ರಿಂದ ಸಂಜೆ 4 ಗಂಟೆ ನಡೆಯಲಿದೆ. ಅದೇ ದಿನ ಫಲಿತಾಂಶ ಪ್ರಕಟಗೊಳ್ಳಲಿದೆ. ರಾಜ್ಯಸಭೆಯ 4 ಸ್ಥಾನಗಳಿಗೂ ಅದೇ ದಿನ ಮತದಾನ ನಿಗದಿಯಾಗಿರುವುದರಿಂದ ಶಾಸಕರು ಮತದಾರರಾಗಿರುವ ರಾಜ್ಯಸಭೆಯ 4 ಹಾಗೂ ವಿಧಾನ ಪರಿಷತ್ತಿನ 7 ಸ್ಥಾನಗಳಿಗೆ ಒಂದೇ ದಿನ ಏಕಕಾಲಕ್ಕೆ ಚುನಾವಣೆ ನಡೆಯಲಿದೆ.

ಡಿಕೆಶಿಗೆ ಹೂವಿನ ಹಾರ ಹಾಕುವುದು ನಿಷೇಧ

• **ಬೆಂಗಳೂರು:** ನಿಯೋಜಿತ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಅಭಿನಂದಿಸಲು ಕಾರ್ಯಕರ್ತರು, ಸಾರ್ವಜನಿಕರು ಮುಗಿ ಬೀಳುತ್ತಿದ್ದಾರೆ. ಆದರೆ, ಅವರಿಗೆ ಹೂವಿನ ಹಾರ ಹಾಕುವುದನ್ನು ನಿಷೇಧಿಸಲಾಗಿದೆ.



ಸಾಮಾನ್ಯವಾಗಿ ಅಭಿನಂದಿಸುವಾಗ ಹೂಗುಚ್ಛ ನೀಡುವುದು, ಹೂವಿನ ಹಾರಗಳನ್ನು ಕೊರಳಿಗೆ ಹಾಕುವುದು ಸಾಮಾನ್ಯ. ಡಿ.ಕೆ. ಶಿವಕುಮಾರ್ ಅವರಿಗೆ ಸುಗಂಧರಾಜ ಹೂವು ಅಲರ್ಜಿ. ಸುಗಂಧರಾಜ ಹೂವು ಮೈಗೆ ತಾಗಿದರೆ ತುರಿಕೆ ಬರುವುದರಿಂದ ಈವರೆಗೆ ಅವರನ್ನು ಅಭಿನಂದಿಸಲು ಸುಗಂಧರಾಜ ಹೂವಿನ ಮಾಲೆಗಳಿಗೆ ನಿಷೇಧವಿತ್ತು. ಇನ್ನು ಮುಂದೆ ಎಲ್ಲಾ ರೀತಿಯ ಹೂವಿನ ಹಾರಗಳನ್ನೂ ನಿಷೇಧಿಸಲಾಗಿದೆ.

ಅಂಗಡಿಗಳಲ್ಲಿ ಹೂವಿನ ಹಾರಗಳು ಒಂದಕ್ಕೊಂದು ತಗಲುವಂತೆ ಇಡುವುದು, ಒಂದೇ ಬುಟ್ಟಿಯಲ್ಲಿ ಹಾಕುವುದು ಇದೆಲ್ಲವೂ ನಡೆಯುವುದರಿಂದ ಬೇರೆ ಹೂವಿನ ಮಾಲೆಗಳಿಗೂ ಸುಗಂಧರಾಜ ಹೂವು ತಗುಲಿರುವ ಸಾಧ್ಯತೆ ಹೆಚ್ಚು. ಹೊಸದಾಗಿ ಆಯ್ಕೆಯಾಗಿರುವ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಬೆಂಬಲಿಗರು, ಕಾರ್ಯಕರ್ತರು, ಸಾರ್ವಜನಿಕರು, ಅಧಿಕಾರಿಗಳಾದಿಯಾಗಿ ಎಲ್ಲರೂ ಅಭಿನಂದಿಸುವುದರಿಂದ ಕಟ್ಟುನಿಟ್ಟಾಗಿ ಹೂವಿನ ಹಾರವನ್ನು ನಿಷೇಧಿಸಲಾಗಿದೆ ಎಂದು ಸ್ವತಃ ಡಿ.ಕೆ. ಶಿವಕುಮಾರ್ ಅವರೇ ತಿಳಿಸಿದ್ದಾರೆ. ತಮಗೆ ಸುಗಂಧರಾಜ ಹೂವಿನ ಅಲರ್ಜಿ ಇರುವುದರಿಂದ ಈ ನಿರ್ಧಾರ ಮಾಡಲಾಗಿದೆ ಎಂದು ಅವರು ಸ್ಪಷ್ಟಪಡಿಸಿದ್ದಾರೆ. ಇದೇ ವೇಳೆ ತಮ್ಮ ಪ್ರಮಾಣ ವಚನ ಸಮಾರಂಭಕ್ಕೆ ಆಹ್ವಾನಿಸಲು ಸಾಧ್ಯವಾಗದಿರುವುದಕ್ಕೆ ಡಿ.ಕೆ. ಶಿವಕುಮಾರ್ ಅವರು ಕಾರ್ಯಕರ್ತರಲ್ಲಿ ಕ್ಷಮೆ ಕೋರಿದ್ದಾರೆ.

ಮಹಿಳಾ ಸಬಲೀಕರಣ ಧರ್ಮಸ್ಥಳವೇ ಮಾದರಿ



ಪುಟ ೧➡ ಧರ್ಮ ಮತ್ತು ಪರಂಪರೆಯ ರಕ್ಷಣೆಯೊಂದಿಗೆ ಅನ್ನದಾನ ವಿದ್ಯಾದಾನ, ಔಷಧದಾನ, ಅಭಯದಾನ ಮೊದಲಾದ ಮಾನವೀಯ ಸೇವೆಗಳನ್ನು ಮಾಡುವುದರ ಜತೆಗೆ ಸ್ವಚ್ಛತೆ ಕಾಪಾಡುವುದು ಹಾಗೂ ವೈಜ್ಞಾನಿಕವಾದ ಪಾರದರ್ಶಕ ಆಡಳಿತ ವೈಖರಿ ಮಾದರಿಯಾಗಿದೆ ಎಂದು ಅವರು ಮೆಚ್ಚುಗೆ ವ್ಯಕ್ತಪಡಿಸಿದರು. ಗ್ರಾಮೀಣ ಹಿನ್ನೆಲೆಯುಳ್ಳ ಬಡವರಿಗೆ ಸಿರಿ ನೇರವಾಗಿ ನೆರವಾಗಿದೆ. ರಾತ್ರೋರಾತ್ರಿ ಇದು ಬೆಳೆದಿಲ್ಲ, ವರ್ಷಾನುಗಟ್ಟಲೆ ಕಾಲ ತೆಗೆದುಕೊಂಡು ಬೆಳೆದಿದೆ. ಮಾತೃಶ್ರೀ ಸಿರಿ ಕೈಗಾರಿಕಾ ಪಾರ್ಕ್ ನಿರ್ಮಾಣ ಆಗಿರುವುದು, ಅಲ್ಲಿ ಕೆಲಸ ಮಾಡುವ ಮಹಿಳೆಯರಿಗೆ ಹಾಸ್ಟೆಲ್ ವ್ಯವಸ್ಥೆ ಸೇರಿದಂತೆ ಕೊಟ್ಟಿರುವ ಸೌಲಭ್ಯಗಳನ್ನೆಲ್ಲ ನೋಡಿ ನಾನು ಬಹಳ ಖುಷಿಯಾಗಿದ್ದೇನೆ ಎಂದು ಉಪ ರಾಷ್ಟ್ರಪತಿ ರಾಧಾಕೃಷ್ಣನ್ ಹೇಳಿದರು.

ಕರ್ನಾಟಕ ರಾಜ್ಯಪಾಲರಾದ ಥಾವರಚಂದ್ ಗೆಹ್ಲೋಟ್, ಲೋಕಸಭಾ ಸದಸ್ಯ ಕ್ಯಾಪ್ಟನ್ ಬ್ರಿಜೇಶ್ ಚೌಟ, ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆ, ಹೇಮಾವತಿ ಹೆಗ್ಗಡೆ, ವಿಧಾನಪರಿಷತ್ ಸದಸ್ಯ ಕೆ. ಪ್ರತಾಪಸಿಂಹ ನಾಯಕ್, ಡಿ. ಸುರೇಂದ್ರ ಕುಮಾರ್, ಡಿ. ಹರ್ಷೇಂದ್ರ ಕುಮಾರ್, ಡಿ. ಶ್ರೇಯಸ್ ಕುಮಾರ್ ಹಾಗೂ ಅಮಿತ್ ಕುಮಾರ್ ಮೊದಲಾದ ಗಣ್ಯರು ಉಪಸ್ಥಿತರಿದ್ದರು.

2026-27ನೇ ಸಾಲಿನಲ್ಲಿ 150 ಲಕ್ಷ ಟನ್ ಆಹಾರ ಧಾನ್ಯ ಉತ್ಪಾದನೆ ನಿರೀಕ್ಷೆ

ರಾಜ್ಯದ 114.50 ಲಕ್ಷ ಹೆಕ್ಟೇರ್‌ನಲ್ಲಿ ಬಿತ್ತನೆ ಗುರಿ

▸ ದೇವಿತಾ.ಸಿ.ಸುಬ್ಬಯ್ಯ

• **ಬೆಂಗಳೂರು:** ಈ ಬಾರಿ 2026-27ನೇ ಸಾಲಿನ ಮುಂಗಾರು ಹಂಗಾಮಿಗೆ ಕೃಷಿ ಇಲಾಖೆಯು ಮಹತ್ವಾಕಾಂಕ್ಷಿ ಗುರಿ ನಿಗದಿಪಡಿಸಿದ್ದು, ಒಟ್ಟು 114.50 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ನಡೆಸುವ ಯೋಜನೆ ರೂಪಿಸಿದೆ.

ಕೃಷಿ ಇಲಾಖೆಯು 2026-27ನೇ ಸಾಲಿನಲ್ಲಿ ರಾಜ್ಯದಲ್ಲಿ 150 ಲಕ್ಷ ಟನ್ ಆಹಾರ ಧಾನ್ಯ ಉತ್ಪಾದನೆ ಮಾಡುವ ಮಹತ್ವಾಕಾಂಕ್ಷಿ ಗುರಿ ಹೊಂದಿದ್ದು, ಮುಂಗಾರು ಹಂಗಾಮಿನಲ್ಲಿ ವಿವಿಧ ಕೃಷಿ ಬೆಳೆಗಳನ್ನು ಬೆಳೆಯಲು 82.48 ಲಕ್ಷ ಹೆಕ್ಟೇರ್ ಪ್ರದೇಶವನ್ನು ನಿಗದಿಪಡಿಸಲಾಗಿದೆ. ಪೂರ್ವ ಮುಂಗಾರು ಅವಧಿಯಲ್ಲಿ 2.78 ಲಕ್ಷ ಹೆಕ್ಟೇರ್ ಗುರಿಗೆ ಅನುಗುಣವಾಗಿ ಈಗಾಗಲೇ 28,900 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಕಾರ್ಯ ಪೂರ್ಣಗೊಂಡಿದ್ದು, ಮಳೆ ಪ್ರಮಾಣಕ್ಕೆ ಅನುಗುಣವಾಗಿ ಬಿತ್ತನೆ ಚಟುವಟಿಕೆಗಳು ವೇಗ ಪಡೆಯುತ್ತಿವೆ. ಮುಂಗಾರು ಹಂಗಾಮಿನಲ್ಲಿ 4.71 ಲಕ್ಷ ಕ್ವಿಂಟಾಲ್ ವಿವಿಧ ಬಿತ್ತನೆ ಬೀಜಗಳ ಬೇಡಿಕೆಯಿದ್ದು, ಅಗತ್ಯಕ್ಕಿಂತ ಅಧಿಕ 5.46 ಲಕ್ಷ ಕ್ವಿಂಟಲ್ ಬಿತ್ತನೆ ಬೀಜಗಳು ಲಭ್ಯವಿದೆ.

ದಿಗಂತ ವಿಶೇಷ



❝ ಈ ವರ್ಷದ ಮುಂಗಾರು ಹಂಗಾಮಿಗೆ ಬೇಕಾದ ಎಲ್ಲ ಸಿದ್ಧತೆಗಳನ್ನು ಪೂರ್ಣಗೊಳಿಸಿದ್ದೇವೆ. ರೈತರಿಗೆ ಗುಣಮಟ್ಟದ ಬೀಜ, ರಸಗೊಬ್ಬರ ಹಾಗೂ ತಾಂತ್ರಿಕ ಸಲಹೆ ಲಭ್ಯವಾಗುವಂತೆ ಕ್ರಮ ಕೈಗೊಂಡಿದ್ದೇವೆ. ರೈತರು ಸಮಯಕ್ಕೆ ಸರಿಯಾಗಿ ಬಿತ್ತನೆ ಆರಂಭಿಸಿದರೆ ಉತ್ತಮ ಉತ್ಪಾದನೆ ಸಾಧ್ಯ.

■ **ಎನ್.ಚೆಲುವರಾಯಸ್ವಾಮಿ,** ಹಂಗಾಮಿ ಕೃಷಿ ಸಚಿವ

ಬೆಳೆವಾರು ಗುರಿ ಏನು? ಮುಂಗಾರು ಹಂಗಾಮಿನಲ್ಲಿ ಬಹುಪಾಲು ಆಹಾರ ಧಾನ್ಯಗಳನ್ನು ಬೆಳೆಯುವ ಗುರಿಯಿದ್ದು, ಒಟ್ಟಾರೆ 37.60 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ರಾಗಿ, ಜೋಳ, ಮೆಕ್ಕೆಜೋಳ, ಭತ್ತ, ನವಣೆ, ಸಾವೆ, ಬರಗು ಮತ್ತಿತರ ಆಹಾರ ಧಾನ್ಯಗಳ ಬೆಳೆಗಳು ಹೆಚ್ಚಿನ ಪ್ರಮಾಣದಲ್ಲಿ ಬಿತ್ತನೆಯಾಗುವ ಗುರಿಯಿದೆ. ಈ ಬೆಳೆಗಳಿಂದ 101.71 ಲಕ್ಷ ಮೆಟ್ರಿಕ್ ಟನ್ ಉತ್ಪಾದನೆ ನಿರೀಕ್ಷಿಸಲಾಗಿದೆ.

22 ಲಕ್ಷ ಹೆಕ್ಟೇರ್‌ನಲ್ಲಿ ತೊಗರಿ, ಹೆಸರು, ಅವರೆ ಮತ್ತಿತರ ಬೇಳೆಕಾಳುಗಳನ್ನು ಬೆಳೆಯುವ ಸಾಧ್ಯತೆ ಇದ್ದು, 12.44 ಲಕ್ಷ ಮೆಟ್ರಿಕ್ ಟನ್ ಉತ್ಪಾದನೆ ನಿರೀಕ್ಷಿಸಲಾಗಿದೆ. ಸೂರ್ಯಕಾಂತಿ, ಶೇಂಗಾ, ಎಳ್ಳುಮತ್ತಿತರ ಎಣ್ಣೆಕಾಳು ಬೆಳೆಗಳನ್ನು 7.91 ಲಕ್ಷ ಹೆಕ್ಟೇರ್‌ನಲ್ಲಿ ಬಿತ್ತನೆ ಮಾಡುವ ಗುರಿ ಇದ್ದು, 8.08 ಲಕ್ಷ ಮೆಟ್ರಿಕ್ ಟನ್ ಉತ್ಪಾದನೆ ಆಗಬಹುದು. ಇನ್ನುಳಿದಂತೆ ಹತ್ತಿ, ಕಬ್ಬು, ತಂಬಾಕು ಮತ್ತಿತರ ಬೆಳೆಗಳನ್ನು 15.75 ಲಕ್ಷ ಹೆಕ್ಟೇರ್‌ನಲ್ಲಿ ಬಿತ್ತನೆ ಮಾಡಬಹುದಾಗಿದೆ ಎಂದು ಕೃಷಿ ಇಲಾಖೆ ಅಂದಾಜಿಸಿದೆ.



ರೈತರಿಗೆ ಅಗತ್ಯ ಸಿದ್ಧತೆ

ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಮುಂಗಾರು ಮಳೆ ಆರಂಭವಾಗುವ ಮುನ್ನವೇ ಬೀಜ, ರಸಗೊಬ್ಬರ ಹಾಗೂ ಕೃಷಿ ಪರಿಕರಗಳ ಸಂಗ್ರಹಣೆ ಮಾಡಲಾಗಿದೆ. ರೈತರಿಗೆ ಯಾವುದೇ ಕೊರತೆ ಉಂಟಾಗದಂತೆ ಸಹಕಾರಿ ಸಂಘಗಳು ಹಾಗೂ ರೈತ ಸಂಪರ್ಕ ಕೇಂದ್ರಗಳ ಮೂಲಕ ವಿತರಣೆ ಮಾಡುವ ಯೋಜನೆ ರೂಪಿಸಲಾಗಿದೆ. ಕೃಷಿ ತಜ್ಞರ ಅಭಿಪ್ರಾಯದಂತೆ, ಹವಾಮಾನದಲ್ಲಿ ಉಂಟಾಗುತ್ತಿರುವ ಬದಲಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಬೆಳೆ ವೈವಿಧ್ಯತೆ ಕಡೆ ಹೆಚ್ಚು ಒತ್ತು ನೀಡಲಾಗುತ್ತಿದೆ. ಮಳೆ ಪ್ರಮಾಣ ಕಡಿಮೆ ಇರುವ ಪ್ರದೇಶಗಳಲ್ಲಿ ಕಡಿಮೆ ನೀರಿನ ಅವಶ್ಯಕತೆ ಇರುವ ಬೆಳೆ ಬೆಳೆಸುವಂತೆ ಸಲಹೆ ನೀಡಲಾಗುತ್ತಿದೆ ಎಂದು ಕೃಷಿ ಇಲಾಖೆಯ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಡಿಕೆಶಿಗೆ ಅಭಿನಂದನೆ ಮಹಾಪೂರ


• **ಬೆಂಗಳೂರು:** ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆಯಾಗಿರುವ ಡಿ.ಕೆ ಶಿವಕುಮಾರ್ ಅವರಿಗೆ ಪಕ್ಷದ ಹಿರಿಯ ಮತ್ತು ಕಿರಿಯ ನಾಯಕರು ಭೇಟಿ ಮಾಡಿ ಹೂಗುಚ್ಛ ನೀಡಿ ಶುಭ ಹಾರೈಸಿದರು.

ಭಾನುವಾರಬೆಳಗ್ಗೆಯಿಂದಲೇಸದಾಶಿವನಗರದನಿವಾಸಕ್ಕೆಆಗಮಿಸಿದನಾಯಕರುಶುಭಕೋರಿ ಮಾತುಕತೆ ನಡೆಸಿದರು. ಕಾಂಗ್ರೆಸ್ ಮುಖಂಡರಾದ ಎಂ.ಬಿ ಪಾಟೀಲ್, ದಿನೇಶ್ ಗುಂಡೂ ರಾವ್, ಎಚ್ ಕೆ ಪಾಟೀಲ್, ಎಚ್.ಸಿ ಮಹದೇವಪ್ಪ, ಸುನಿಲ್ ಬೋಸ್, ಡಾ ಅಜಯ್ ಸಿಂಗ್, ಮಾಂಕಾಳ ವೈದ್ಯ, ಮಧು ಬಂಗಾರಪ್ಪ, ರಾಘವೇಂದ್ರ ಹಿಟ್ನಾಳ್, ಬಿ.ಆರ್ ಪಾಟೀಲ್, ತನ್ವೀರ್ ಸೇಠ್, ವಿಜಯಾನಂದ್ ಕಾಶಪ್ಪನವ ನವರ್, ಅಡ್ವೋಕೇಟ್ ಜನರಲ್ ಶಶಿಕಿರಣ್ ಶೆಟ್ಟಿ ಮತ್ತಿತರರು ಆಗಮಿಸಿದ್ದರು.



ನಾನು ಸಚಿವ ಸ್ಥಾನದ ಆಕಾಂಕ್ಷಿ: ವಿಧಾನ ಪರಿಷತ್ ಸದಸ್ಯ ಯತೀಂದ್ರ ಸಿದ್ದರಾಮಯ್ಯ ಅವರು ಡಿ.ಕೆ ಶಿವಕುಮಾರ್ ಅವರನ್ನು ಕುಮಾರಕೃಪ ಅತಿಥಿ ಗೃಹದಲ್ಲಿ ಸಂಜೆ ಭೇಟಿ ಮಾಡಿ ಶುಭ ಹಾರೈಸಿದರು. ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆಯಾಗಿರುವ ಡಿ.ಕೆ ಶಿವಕುಮಾರ್ ಅವರನ್ನು ಅಭಿನಂದಿಸಲು ಬಂದಿದ್ದೆ, ಈ ವೇಳೆ ಎಸ್‌ಐಆರ್ ಮತ್ತು ಮೈಸೂರು ಜಿಲ್ಲೆಯ ರಾಜಕೀಯ ಕುರಿತು ಚರ್ಚಿಸಿದ್ದೇವೆ. ನಾನು ಸಚಿವ ಸ್ಥಾನದ ಆಕಾಂಕ್ಷಿಯಾಗಿದ್ದು, ಹೈಕಮಾಂಡ್ ನನಗೂ ಭರವಸೆ ನೀಡಿದೆ ಎಂದು ತಿಳಿಸಿದರು.

ಡಿಕೆಶಿಗೆ ಶುಭ ಹಾರೈಕೆ



ವಿಧಾನ ಪರಿಷತ್ ಸದಸ್ಯ ಯತೀಂದ್ರ ಸಿದ್ದರಾಮಯ್ಯ ಅವರು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಡಿ.ಕೆ. ಶಿವಕುಮಾರ್ ಅವರನ್ನು ಕುಮಾರಕೃಪ ಅತಿಥಿ ಗೃಹದಲ್ಲಿ ಭಾನುವಾರ ಭೇಟಿ ಮಾಡಿ ಶುಭ ಹಾರೈಸಿದರು.

ಬ್ರಾಹ್ಮಣರು ಸಮಾಜಕ್ಕೆ ಅನಿವಾರ್ಯ: ಜಯಸಿಂಹ

• **ಬೆಂಗಳೂರು:** ಬ್ರಾಹ್ಮಣರು ಸರ್ವೇ ಜನಾಃಸುಖಿನೋ ಭವಂತು ಎಂದು ಎಲ್ಲರ ಹಿತಾವನ್ನು ಕಾಪಾಡುತ್ತಾರೆ, ಬ್ರಾಹ್ಮಣರು ಸಮಾಜಕ್ಕೆ ಅನಿವಾರ್ಯ ಎಂದು ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಮಾಜಿ ಅಧ್ಯಕ್ಷ ಅಸಗೋಡು ಜಯಸಿಂಹ ಹೇಳಿದರು.

ನಗರದ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಗಾಯಿತ್ರಿ ಭವನದಲ್ಲಿ ವಿಪ್ರ ಬ್ಯುಸಿನೆಸ್ ಫೋರಂ ವತಿಯಿಂದ ನಡೆದ ಮಾತೃ ವೈಭವ ಕಾರ್ಯಕ್ರಮ, ಬ್ರಾಹ್ಮಣ ಸಮುದಾಯದ ಮಹಿಳೆಯರ ತಯಾರಿಕೆ ಮಾಡಿದ ಆಹಾರ ಮತ್ತು ವಸ್ತುಗಳ ಮಾರಾಟ ಮತ್ತು ಪ್ರದರ್ಶನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಜೀವನದಲ್ಲಿ ಸಂಸ್ಕಾರ ಮತ್ತು ಮಾನವೀಯತೆ ಮುಖ್ಯ. ಪ್ರತಿಯೊಬ್ಬರು ಸರಿಯಾದ ದಾರಿಯಲ್ಲಿ ಸಾಗಬೇಕು. ತಂದೆ, ತಾಯಿಗೆ ಮಕ್ಕಳು ಗೌರವ ಕೊಡಬೇಕು. ಅದಕ್ಕೆ ಮಕ್ಕಳಿಗೆ ಸಂಸ್ಕಾರ ಕೊಡಿಸಬೇಕು. ಸಮಾಜದಲ್ಲಿ ಬದುಕಲು ಹಣ ಇರಬೇಕು. ಆದರೆ ಹಣದ ವ್ಯಾಮೋಹಕ್ಕೆ ಬೀಳಬಾರದು. ಬ್ರಾಹ್ಮಣರು ಅಲ್ಪತೃಪ್ತರು. ಸರ್ವೇ ಜನಾಃ ಸುಖಿನೋ ಭವಂತು ಎಂದು ಎಲ್ಲರ ಹಿತವನ್ನು ಕಾಪಾಡುತ್ತಾರೆ ಎಂದು ತಿಳಿಸಿದರು.

ಬ್ರಾಹ್ಮಣರು ತಯಾರಿಸಿದ ಆಹಾರ ಪದಾರ್ಥಗಳಿಗೆ ಉತ್ತಮ ಬೇಡಿಕೆ ಇದೆ.ಬ್ರಾಹ್ಮಣ ಮಹಿಳೆಯರು ಸ್ವಾವಲಂಭಿ, ಸ್ವಾಭಿಮಾನಿಯಾಗಿ ಬದುಕಲು ಸ್ವಂತ ವ್ಯಾಪಾರ ಉದ್ಯಮಿ ಪ್ರಾರಂಭ ಮಾಡಬೇಕು. ಅದಕ್ಕೆ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯಿಂದ ಸುಲಭ ಸಾಲ, ಸೌಲಭ್ಯ ಸಿಗಲಿದೆ. ಮಂಡಳಿಯಿಂದ ಪ್ರತಿಯೊಬ್ಬ ಮಹಿಳೆಗೆ 2ಲಕ್ಷ ಸಾಲ ಸೌಲಭ್ಯ ಸಿಗಲಿದೆ. ಇದುವರಗೆ 1,116 ಜನರಿಗೆ ತಲಾ 2ಲಕ್ಷ ಸಾಲ ನೀಡಲಾಗಿದ್ದು, ಇದರಲ್ಲಿ 376 ಹೆಣ್ಣು ಮಕ್ಕಳು ಫಲಾನುಭವಿಗಳು ಇದ್ದಾರೆ ಎಂದು ಮಾಹಿತಿ ನೀಡಿದರು.



ಮಂಡಳಿ ವತಿಯಿಂದ ಪ್ರತಿ ಜಿಲ್ಲೆಯಲ್ಲಿ ಅತಿ ಹೆಚ್ಚು ಅಂಕ ಪಡೆದವರಿಗೆ ನಗದು ಪುರಸ್ಕಾರ ನೀಡಲಾಗುತ್ತಿದೆ. ಮೆಡಿಕಲ್, ಇಂಜನಿಯರಿಂಗ್ ವಿದ್ಯಾರ್ಥಿಗಳಿಗೆ ಆರ್ಥಿಕ ಸಹಾಯ ನೀಡಲಾಗುತ್ತಿದೆ ಎಂದು ತಿಳಿಸಿದರು.

ವಿಪ್ರ ಬ್ಯುಸಿನೆಸ್ ಫೋರಂ ಅಧ್ಯಕ್ಷ ಆನಂದ್ ಮಾತನಾಡಿ, ಮಾತೃ ವೈಭವ ಎಂಬ ಕಾರ್ಯಕ್ರಮದ ಮೂಲಕ ವಿಪ್ರ ಸಮುದಾಯದವರು ಸ್ವಾವಲಂಭಿ ಮತ್ತು ಸ್ವಯಂ ಉದ್ಯೋಗದಿಂದ ತಯಾರಿಕೆ ಮಾಡಿದ ಆಹಾರ ಪದಾರ್ಥಗಳು ಮತ್ತು ವಸ್ತುಗಳ ಪ್ರದರ್ಶನ ಮತ್ತು ಮಾರಾಟ ಮಾಡಲು ವೇದಿಕೆ ಕಲ್ಪಿಸಲಾಗಿದೆ. ಮಹಿಳೆಯರು ತಾಯಿ, ತಂಗಿ ಅಕ್ಕನಾಗಿ ಹಾಗೂ ಸಮಾಜದ ಅಭಿವೃದ್ಧಿಗೆ ಶ್ರಮಿಸುವಳು. ಅವರಿಗೆ ಗೌರವ ಸಲ್ಲಿಸಬೇಕಾಗಿದ್ದು ನಮ್ಮ ಕರ್ತವ್ಯ ಎಂದು ಹೇಳಿದರು.

ಕಿರುಸುದ್ದಿ

ಜೂ.3ರ ನಂತರ ಡಿಸಿಎಂ ಹುದ್ದೆ ನಿರ್ಧಾರ: ಮಲ್ಲಿಕಾರ್ಜುನ ಖರ್ಗೆ

• **ಕಲಬುರಗಿ:** ಹೆಚ್ಚುವರಿ ಡಿಸಿಎಂ ಸ್ಥಾನಕ್ಕೆ ಸಂಬಂಧಿಸಿದಂತೆ ಹೈಕಮಾಂಡ್‌ಗೆ ಇನ್ನು ಯಾವುದೇ ಅಧಿಕೃತ ಪ್ರಸ್ತಾವನೆ ಬಂದಿಲ್ಲ, ಜೂನ್ 3ರ ನಂತರ ಈ ಕುರಿತು ಸೂಕ್ತ ನಿರ್ಧಾರ ಕೈಗೊಳ್ಳಲಾಗುವುದು ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸ್ಪಷ್ಟಪಡಿಸಿದರು. ಕಲಬುರಗಿ ವಿಮಾನ ನಿಲ್ದಾಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯ ರಾಜಕಾರಣದ ತೀವ್ರ ಕುತೂಹಲ ಕೆರಳಿಸಿರುವ ಉಪಮುಖ್ಯಮಂತ್ರಿ ಸ್ಥಾನದ ಸೃಷ್ಟಿ ಹಾಗೂ ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಕುರಿತು ವಿವರಣೆ ನೀಡಿದರು. ಮುಖ್ಯಮಂತ್ರಿಯವರ ಜೊತೆಗೆ ಎಷ್ಟು ಜನ ಸಚಿವರು ಪ್ರಮಾಣ ವಚನ ಸ್ವೀಕರಿಸಲಿದ್ದಾರೆ ಎಂಬುದು ಸಹ ಇನ್ನೂ ಅಂತಿಮವಾಗಿಲ್ಲ ಎಂದರು. ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿಯಾದ ಮೇಲೆ ಕೆಪಿಸಿಸಿ ಅಧ್ಯಕ್ಷ ಸ್ಥಾನ ಸಹಜವಾಗಿಯೇ ಬದಲಾವಣೆಯಾಗಲಿದೆ. ಮುಖ್ಯಮಂತ್ರಿಯವರೊಂದಿಗೆ ಉತ್ತಮ ಸಮನ್ವಯತೆ (ಕೋ-ಆರ್ಡಿನೇಷನ್) ಹೊಂದಿರುವ ಹಾಗೂ ಸಾರ್ವಜನಿಕವಾಗಿ ದೊಡ್ಡ ಜನ ಬೆಂಬಲವಿರುವ ಸೂಕ್ತ ವ್ಯಕ್ತಿಯನ್ನೇ ಮುಂದಿನ ಅಧ್ಯಕ್ಷ ಸ್ಥಾನಕ್ಕೆ ಆಯ್ಕೆ ಮಾಡಲಾಗುವುದು ಎಂದು ತಿಳಿಸಿದರು.

ಬಾಗೇಪಲ್ಲಿ ಬಳಿ ಭೀಕರ ರಸ್ತೆ ಅಪಘಾತ: 6 ಮಂದಿ ಸಾವು

• **ಬಾಗೇಪಲ್ಲಿ:** ತಾಲೂಕಿನ ಸುಂಕಲಮ್ಮ ದೇವಸ್ಥಾನದ ಬಳಿ ಭೀಕರ ಸರಣಿ ಅಪಘಾತದಲ್ಲಿ ಆರು ಕಾರ್ಮಿಕರು ಅಸುನೀಗಿದ್ದಾರೆ. ಈ ದುರ್ಘಟನೆಯಲ್ಲಿ ಐವರು ಸ್ಥಳದಲ್ಲೇ ಮೃತಪಟ್ಟರೆ, ಆಸ್ಪತ್ರೆಯಲ್ಲಿ ಓರ್ವ ಅಸುನೀಗಿದ್ದಾನೆ. ನಾಲ್ವರು ಗಾಯಗೊಂಡಿದ್ದು, ಇಬ್ಬರ ಸ್ಥಿತಿ ಚಿಂತಾಜನಕವಾಗಿದೆ. ಪಟ್ಟಣ ಹೊರವಲಯದ ರಾಷ್ಟ್ರೀಯ ಹೆದ್ದಾರಿ 44ರ ಗಂಗೋತ್ರಿ ಪೆಟ್ರೋಲ್ ಬಂಕ್ ಬಳಿ ಈ ದುರಂತ ಸಂಭವಿಸಿದೆ. ಮಿಂಚನಹಳ್ಳಿಯಿಂದ ಕೆಲಸ ಮುಗಿಸಿ ಬಾಗೇಪಲ್ಲಿ ಪಟ್ಟಣಕ್ಕೆ ಆಟೋದಲ್ಲಿ ಮರಳುತ್ತಿದ್ದಾಗ್ಗ ಬೆಂಗಳೂರು ಕಡೆಯಿಂದ ವೇಗವಾಗಿ ಬಂದ ಥಾರ್ ಕಾರು ಆಟೋಗೆ ಡಿಕ್ಕಿ ಹೊಡೆದಿದು, ನಿಂತಿದ್ದ ಲಾರಿಗೂ ಡಿಕ್ಕಿಯಾಗಿದೆ. ಪಟ್ಟಣದ ಸರೋಜಮ್ಮ (65) ಉಮಾದೇವಿ(55) ವಿಜಯ (40) ಲಕ್ಷ್ಮೀಬಾಯಿ (50) ಆಟೋ ಚಾಲಕ ಅಂಜನಪ್ಪ (35) ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಸ್ಥಳಕ್ಕೆ ಜಿಲ್ಲಾ ವರಿಷ್ಠಾಧಿಕಾರಿ ಚೌಕ್ಸೆ ಡಿ.ವೈ.ಎಸ್ಪಿ. ಪ್ರಭಾಕರ್ ರೆಡ್ಡಿ, ಎಸ್‌ಐ ಸುನಿಲ್ ಕುಮಾರ್, ಪೊಲೀಸ್ ಸಿಬ್ಬಂದಿ ಶ್ರೀಪತಿ, ಸುರೇಶ್ ನಾಯ್ಕ್ ಭೇಟಿ ನೀಡಿ ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ನಡೆಸುತ್ತಿದ್ದಾರೆ.

ಉಪತಹಸೀಲ್ದಾರ್ ಆತ್ಮಹತ್ಯೆ

• **ಹಾಸನ:** ನಗರದ ಬಿಎಂ ರಸ್ತೆಯಲ್ಲಿರುವ ಲಾಡ್ಜ್‌ನಲ್ಲಿ ಉಪತಹಸೀಲ್ದಾರ್ ತಿಮ್ಮಯ್ಯ (52) ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಡೆದಿದೆ.



ತಿಮ್ಮಯ್ಯ (52) ಆತ್ಮಹತ್ಯೆಗೆ ಶರಣಾದ ಉಪತಹಸೀಲ್ದಾರ್. ಮೈಸೂರು ಜಿಲ್ಲೆ, ಸಾಲಿಗ್ರಾಮದಲ್ಲಿ ಉಪತಹಸೀಲ್ದಾರ್ ಆಗಿದ್ದ ತಿಮ್ಮಯ್ಯ ಮೂರು ವರ್ಷಗಳ ಹಿಂದೆ ಹಾಸನದಲ್ಲಿ ಕರ್ತವ್ಯ ನಿರ್ವಹಿಸಿದ್ದರು. ನಾಲ್ಕು ಪುಟದ ಡೆತ್‌ನೋಟ್ ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮೂಲತಃ ಕೊಡಗು ಜಿಲ್ಲೆಯವರಾದ ತಿಮ್ಮಯ್ಯ ಹಾಸನ ನಗರದ ಚನ್ನಪಟ್ಟಣದ ದ್ಯಾವಮ್ಮ ಬಡಾವಣೆಯಲ್ಲಿ ಕುಟುಂಬಸ್ಥರೊಂದಿಗೆ ವಾಸವಿದ್ದರು. ಬಡಾವಣೆ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದ್ದು ಸ್ಥಳಕ್ಕೆ ಪೊಲೀಸರು ಭೇಟಿ, ಪರಿಶೀಲನೆ ನಡೆಸಿದ್ದಾರೆ.

ಜಾತಿವಾರು 4ರಿಂದ 5 ಕಾರ್ಯಾಧ್ಯಕ್ಷ ನೇಮಕದ ಬಗ್ಗೆಯೂ ಚರ್ಚೆ

ಕೆಪಿಸಿಸಿ ಸಾರಥಿಗೆ ಹುಡುಕಾಟ

• **ಬೆಂಗಳೂರು:** ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆಯಾಗಿರುವ ಡಿ.ಕೆ.ಶಿವಕುಮಾರ್ ಜೂನ್ 3 ರಂದು ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಲಿರುವ ಹಿನ್ನೆಲೆಯಲ್ಲಿ ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಲಿದ್ದಾರೆ. ಹೀಗಾಗಿ ತೆರವಾಗುವ ಈ ಮಹತ್ವದ ಸ್ಥಾನಕ್ಕೆ ಸಮರ್ಥ ನಾಯಕನ ಹುಡುಕಾಟ ನಡೆದಿದೆ.

ಈಗಾಗಲೇ ಸಚಿವ ಸ್ಥಾನದ ಜೊತೆಗೆ ಅಧ್ಯಕ್ಷ ಪಟ್ಟವನ್ನೂ ನಿಭಾಯಿಸಲು ಸಿದ್ಧ ಎಂದು ಸತೀಶ್ ಜಾರಕಿಹೊಳಿ ಆಸಕ್ತಿ ತೋರಿದ್ದಾರೆ. ಇವರ ಜೊತೆಗೆ ಡಾ. ಜಿ. ಪರಮೇಶ್ವರ್ ಮತ್ತು ಎಂ.ಬಿ.ಪಾಟೀಲ್ ಹೆಸರುಗಳು ಮುಂಚೂಣಿಯಲ್ಲಿವೆ. ಇದರೊಂದಿಗೆ ಜಾತಿವಾರು 4 ರಿಂದ 5 ಕಾರ್ಯಾಧ್ಯಕ್ಷ ನೇಮಕದ ಬಗ್ಗೆಯೂ ಚರ್ಚೆ ನಡೆದಿದೆ.

ಇನ್ನು ಕಲಬುರಗಿಯಲ್ಲಿ ಮಾತನಾಡಿದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾದ ಬಳಿಕ ಕೆಪಿಸಿಸಿಗೆ ಹುದ್ದೆಗೆ ಮತ್ತೊಬ್ಬರು ಬರಲೇಬೇಕು. ಅದು ಸಹಜ ಪ್ರಕ್ರಿಯೆ. ಒಳ್ಳೆಯವರನ್ನು ನೋಡಿ, ಕಾಂಬಿನೇಷನ್ ನೋಡಿ ಕೆಪಿಸಿಸಿಗೆ ನೇಮಕ ಮಾಡಬೇಕಾಗುತ್ತದೆ ಎಂದು ಸ್ಪಷ್ಟಪಡಿಸಿದರು.

ಚುನಾವಣೆಗೆ ಕೇವಲ 24 ತಿಂಗಳು ಮಾತ್ರ ಬಾಕಿ ಇದೆ. ಬಹಳ ವೇಗವಾಗಿ ಕೆಲಸ ಮಾಡಬೇಕಿದೆ. ವೇಗವಾಗಿಯೂ, ಸಾಮೂಹಿಕವಾಗಿ ಎಲ್ಲರನ್ನೂ ಒಟ್ಟಾಗಿ ತೆಗೆದುಕೊಂಡು ಹೋಗುವ ನಾಯಕನನ್ನು ನಾವು ಹುಡುಕಬೇಕಿದೆ.

ಜೊತೆಗೆ ಅವರಿಗೆ ಸಹಕಾರ ನೀಡುವಂಥ ತಂಡವೂ ಇರಬೇಕಾಗುತ್ತದೆ. ಇವೆಲ್ಲವೂ ವಿಚಾರ ಮಾಡಿ ನಾವು ಅಧ್ಯಕ್ಷರ ಆಯ್ಕೆ ಮಾಡುತ್ತೇವೆ' ಎಂದು ಮಲ್ಲಿಕಾರ್ಜುನ ಖರ್ಗೆ ಸ್ಪಷ್ಟಪಡಿಸಿದರು.

ಕೆಪಿಸಿಸಿ ಅಧ್ಯಕ್ಷ ಸ್ಥಾನ ಪಕ್ಷದ ವೇದಿಕೆಯಲ್ಲಿ ಚರ್ಚೆ: ಎಂಬಿಪಾ



ವೀರಶೈವ ಲಿಂಗಾಯತ ಸಮುದಾಯಕ್ಕೆ ಕೆಪಿಸಿಸಿ ಅಧ್ಯಕ್ಷ ಸ್ಥಾನ ನೀಡುವ ವಿಚಾರವಾಗಿ ಪಕ್ಷದ ವೇದಿಕೆಯಲ್ಲಿ ಚರ್ಚೆ ಮಾಡುವುದಾಗಿ ಮಾಜಿ ಸಚಿವ ಎಂ.ಬಿ.ಪಾಟೀಲ್ ತಿಳಿಸಿದ್ದಾರೆ. ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಿನ್ನೆ ಶಾಸಕಾಂಗ ಸಭೆ ನಡೆದು ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಿ ಆಗಿ ಆಯ್ಕೆಯಾಗಿದ್ದಾರೆ. ಆಗ ಅಭಿನಂದನೆ ಸಲ್ಲಿಸಲು ಆಗಲಿಲ್ಲ, ಅದಕ್ಕಾಗಿ ಮನೆಗೆ ಬಂದು ಶುಭ ಹಾರೈಸಿದ್ದಾಗಿ ಹೇಳಿದರು. ಭೇಟಿಯ ವೇಳೆ ಸಾಮಾನ್ಯವಾದ ಮಾತುಕತೆಗಳಾಗಿವೆ. ಲಿಂಗಾಯತ ಸಮುದಾಯಕ್ಕೆ ಪಕ್ಷದ ಅಧ್ಯಕ್ಷ ಸ್ಥಾನ ನೀಡುವುದು, ಸಂಪುಟ ಪುನರ್ ರಚನೆ ಸೇರಿದಂತೆ ಎಲ್ಲವನ್ನೂ ಹೈಕಮಾಂಡ್ ನಿರ್ಧರಿಸುತ್ತದೆ ಎಂದಿದ್ದಾರೆ.



"ಮುಂಬರುವ ಚುನಾವಣೆ ಮತ್ತು ಪಕ್ಷದ ಸಿದ್ಧತೆ ಹಾಗೂ ಪಕ್ಷ ಕಟ್ಟುವ ದೃಷ್ಟಿಯಿಂದ ಎಲ್ಲವನ್ನೂ ವಿಚಾರ ಮಾಡಿ ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ಆಯ್ಕೆ ಮಾಡಬೇಕಾಗುತ್ತದೆ.

■ **ಮಲ್ಲಿಕಾರ್ಜುನ ಖರ್ಗೆ,** ಎಐಸಿಸಿ ಅಧ್ಯಕ್ಷ



"ಹೊಸ ಸಂಪುಟದಲ್ಲಿ ಯಾರು ಸಚಿವರಾಗಬೇಕು, ಉಪ ಮುಖ್ಯಮಂತ್ರಿ ಯಾರಾಗಬೇಕು ಎಂಬುದನ್ನು ಹೈಕಮಾಂಡ್ ನಿರ್ಧರಿಸಲಿದೆ. ಈಗ ಡಿ.ಕೆ.ಶಿವಕುಮಾರ್ ಅವರು ಜೂನ್ 3ರಂದು ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಲಿದ್ದಾರೆ. ಅದಕ್ಕೆ ತಯಾರಿ ನಡೆದಿದೆ.

■ **ಸಂತೋಷ್‌ಲಾಡ್,** ಮಾಜಿ ಸಚಿವ

ಡಿಕೆಶಿ ಸರ್ವಧರ್ಮ ಗುರುಗಳ ಸಮ್ಮುಖದಲ್ಲಿ ಪ್ರಮಾಣವಚನ

• **ಬೆಂಗಳೂರು:** ಕರ್ನಾಟಕದ ನೂತನ ಸಿಎಂ ಆಗಿ ಡಿ.ಕೆ. ಶಿವಕುಮಾರ್ ಆಯ್ಕೆಯಾಗಿದ್ದು, ಜೂ. 3ರಂದು ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ಅವರು ಸರ್ವ ಧರ್ಮದ ಧರ್ಮ ಗುರುಗಳ ಸಮ್ಮುಖದಲ್ಲಿ ಪ್ರಮಾಣ ವಚನ ಸ್ವೀಕರಿಸಲು ತೀರ್ಮಾನಿಸಿದ್ದಾರೆ.

ಲೋಕಭವನದ ಗಾಜಿನ ಮನೆಯಲ್ಲಿ ಡಿ.ಕೆ.ಶಿವಕುಮಾರ್ ಪ್ರಮಾಣವಚನ ಕಾರ್ಯಕ್ರಮ ಜೂ.3ರಂದು ಸಂಜೆ 4..05ಕ್ಕೆ ನಡೆಯಲಿದೆ. ರಾಜ್ಯದ 50ಕ್ಕೂ ಅಧಿಕ ಮಠಾಧೀಶರು, ಕ್ರೈಸ್ತ ಸಮು ದಾಯದ ಧರ್ಮ ಗುರುಗಳು, ಮುಸ್ಲಿಂ ಸಮುದಾಯದ ಮೌಲ್ವಿಗಳನ್ನು ಪ್ರಮಾಣವಚನ ಕಾರ್ಯಕ್ರಮಕ್ಕೆ ಆಹ್ವಾನ ನೀಡಲು ಸೂಚನೆ ನೀಡಲಾಗಿದೆ. ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಶ್ರೀ ನಿರ್ಮಲಾನಂದನಾಥ ಮಹಾಸ್ವಾಮಿ, ಸುತ್ತೂರುಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿ, ಶ್ರೀಸಿದ್ಧ ಗಂಗಾಮಠದಶ್ರೀಸಿದ್ಧಲಿಂಗಮಹಾಸ್ವಾಮಿ, ವಿಶ್ವ ಒಕ್ಕಲಿಗ ಮಹಾಸಂಸ್ಥಾನ ಮಠದ ಶ್ರೀ ನಿಶ್ಚಲಾನಂದನಾಥ ಮಹಾ ಸ್ವಾಮಿ, ಆರ್ಟ್ ಆಫ್ ಲಿವಿಂಗ್ ಆಶ್ರಮದ ಶ್ರೀ ರವಿಶಂಕರ ಗುರೂಜಿ, ಮಾದಾರ ಚನ್ನಯ್ಯ ಗುರುಪೀಠದ ಬಸವಮೂರ್ತಿ ಮಾದಾರ ಚನ್ನಯ್ಯಸ್ವಾಮೀಜಿ, ಪೇಜಾವರ ಶ್ರೀವಿಶ್ವ ಪ್ರಸನ್ನತೀರ್ಥ ಸ್ವಾಮೀಜಿ ಸಹಿತ 50ಕ್ಕೂ ಅಧಿಕ ಮಠಾಧೀ ಶರನ್ನು ಆಹ್ವಾನಿಸಲು ಯೋಜಿಸಲಾಗಿದೆ.

ಬೆಂಗಳೂರು ಕ್ಯಾಥೋಲಿಕ್ ಚರ್ಚ್‌ನ ಆರ್ಚ್ ಬಿಷಪ್ ಡಾ.ಪೀಟರ್ ಮಚಾಡೋ, ಕಲಬುರಗಿಯ ದರ್ಗಾ ಹಜರತ್ ಖ್ವಾಜಾ ಬಂದೇನವಾಜ್‌ನ ಹಜರತ್ ಹಫೀಜ್ ಡಾ. ಸೈಯದ್ ಮೊಹಮ್ಮದ್ ಅಲಿ ಅಲ್ ಹುಸೈನ್ ಆಹ್ವಾನಿಸಲಾಗುತ್ತದೆ.

ಸಿದ್ಧತೆ ಪರಿಶೀಲನೆ ಲೋಕಭವನದ ಗಾಜಿನ ಮನೆಯಲ್ಲಿ ಬುಧವಾರ ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಪ್ರಮಾಣವಚನ ಸ್ವೀಕರಿಸುತ್ತಿರುವ ಹಿನ್ನೆಲೆಯಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಕಾರ್ಯದರ್ಶಿ ಸೋಮವಾರ (ಜೂ.1) ಸಭೆ ನಡೆಸಲಿದ್ದಾರೆ. ಡಿಪಿಎಆರ್ ಕಾರ್ಯದರ್ಶಿಯಾಗಿರುವ ಜಗದೀಶ್ ಅವರು ಲೋಕಭವನದಲ್ಲಿ ಅಧಿಕಾರಿಗಳ ಸಭೆ ನಡೆಸಲಿದ್ದು, ಪ್ರಮಾಣವಚನ ಕಾರ್ಯಕ್ರಮದ ಸಿದ್ಧತೆಯನ್ನು ಪರಿಶೀಲಿಸಲಿದ್ದಾರೆ. ಪ್ರಮಾಣ ವಚನ ಕಾರ್ಯಕ್ರಮಕ್ಕೆ ಆಗಮಿಸುವ ಗಣ್ಯರ ವಾಹನ ನಿಲುಗಡೆ ವ್ಯವಸ್ಥೆ, ಕಾರ್ಯಕರ್ತರಿಗೆ ಪ್ರವೇಶ ಪಾಸ್ ವಿತರಣೆ, ಪ್ರಮಾಣ ವಚನ ಸ್ವೀಕರಿಸಲಿರುವ ಕುಟುಂಬಸ್ಥರಿಗೆ ಹಾಗೂ ಗಣ್ಯರಿಗೆ ಆಸನ ವ್ಯವಸ್ಥೆ ಬಗ್ಗೆ ಪರಿಶೀಲಿಸಿದ್ದಾರೆ.

ಚನ್ನರಾಯಪಟ್ಟಣದಲ್ಲಿ ಹಾಸನ-ಸೊಲ್ಲಾಪುರ ಎಕ್ಸ್‌ಪ್ರೆಸ್ ರೈಲು ನಿಲುಗಡೆ

ಅಭಿವೃದ್ಧಿಗಾಗಿ ಮೋದಿ ಶ್ರಮ: ಸೋಮಣ್ಣ

• **ಚನ್ನರಾಯಪಟ್ಟಣ:** ಪ್ರತಿಯೊಂದು ಹಳ್ಳಿಗಳು ಅಭಿವೃದ್ಧಿಯಾದಾಗ ಮಾತ್ರ, ದೇಶದ ಪ್ರಗತಿ ಸಾಧ್ಯ ಎಂಬ ಉದ್ದೇಶದೊಂದಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ಕೇಂದ್ರ ರೈಲ್ವೆ ಹಾಗೂ ಜಲಶಕ್ತಿ ರಾಜ್ಯ ಸಚಿವ ವಿ. ಸೋಮಣ್ಣ ತಿಳಿಸಿದ್ದಾರೆ.



ಚನ್ನರಾಯಪಟ್ಟಣ ರೈಲ್ವೆ ನಿಲ್ದಾಣದಲ್ಲಿ ಹಾಸನ-ಸೊಲ್ಲಾಪುರ ಎಕ್ಸ್‌ಪ್ರೆಸ್ ರೈಲಿನ ನಿಲುಗಡೆಗೆ ಚಾಲನೆ ನೀಡಿ ಅವರು ಮಾತನಾಡಿದರು.

ಈ ಭಾಗದ ಪ್ರಯಾಣಿಕರು, ಸ್ಥಳೀಯ ಶಾಸಕರು ಹಾಗೂ ಸಂಸದರ ಬಹುದಿನಗಳ ಬೇಡಿಕೆಯನ್ನು ಈಡೇರಿಸಿ, ಇಂದಿನಿಂದ ಚನ್ನರಾಯಪಟ್ಟಣ ನಿಲ್ದಾಣದಲ್ಲಿ ಈ ರೈಲಿನ ನಿಲುಗಡೆಗೆ ಅವಕಾಶ ಕಲ್ಪಿಸಲಾಗಿದೆ. ಈ ಮೊದಲು 17 ಭೋಗಿಗಳನ್ನು ಹೊಂದಿದ್ದ ಈ ರೈಲಿಗೆ ಈಗ 21 ಭೋಗಿಗಳನ್ನು ಜೋಡಿಸಲಾಗಿದ್ದು, ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲಾಗಿದೆ. ನಿಲ್ದಾಣದಲ್ಲಿ ಹೆಚ್ಚುವರಿ ಪ್ಲಾಟ್‌ಫಾರ್ಮ್ ನಿರ್ಮಾಣ ಕಾರ್ಯ ವಿಳಂಬವಾಗಿದ್ದರಿಂದ ನಿಲುಗಡೆ ತಡವಾಗಿತ್ತು, ಈಗ ಎಲ್ಲಾ ತಾಂತ್ರಿಕ ಕೆಲಸಗಳು ಮುಗಿದಿವೆ. ಮುಂದಿನ ದಿನಗಳಲ್ಲಿ ರೈತರ ಅನುಕೂಲಕ್ಕಾಗಿ ಇನ್ನು ಹತ್ತಾರು ರೈಲುಗಳನ್ನು ಬಿಡುವ ಯೋಜನೆಯಿದ್ದು, ಹಾಸನ-ತಿರುಪತಿ ಹಾಗೂ ಬೆಂಗಳೂರು-ಮುಂಬೈ ನಡುವೆ ಪ್ರತ್ಯೇಕ ರೈಲು ಸಂಚಾರ ಆರಂಭಿಸುವ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚಿಸಿ ಕ್ರಮ ಕೈಗೊಳ್ಳಲಾಗುವುದು ಎಂದರು.

"ಐದು ತಿಂಗಳ ಹಿಂದೆಯೇ ಈ ರೈಲು ನಿಲುಗಡೆಗೆ ಸರ್ಕಾರ ಆದೇಶ ನೀಡಿದ್ದರೂ ತಾಂತ್ರಿಕ ದೋಷಗಳಿಂದ ಜಾರಿಯಾಗಿರಲಿಲ್ಲ. ಈ ವಿಷಯ ಗಮನಕ್ಕೆ ಬಂದ ತಕ್ಷಣ ರೈಲ್ವೆ ಸಚಿವರು ಹಾಗೂ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಇಂದಿನಿಂದ ನಿಲುಗಡೆಗೆ ಅನುಕೂಲ ಮಾಡಿಕೊಡಲಾಗಿದೆ.

■ **ಶ್ರೇಯಸ್ ಪಟೇಲ್,** ಸಂಸದ

ಈಜಲು ತೆರಳಿದ್ದ ಐವರು ನೀರು ಪಾಲು

• **ರಾಯಚೂರು:** ಮಂತ್ರಾಲಯದ ತುಂಗಭದ್ರಾ ನದಿಯಲ್ಲಿ ಈಜಲು ತೆರಳಿದ್ದ ಐವರು ಮುಳುಗಿ ಮೃತಪಟ್ಟಿದ್ದಾರೆ. ನೀರು ಪಾಲಾದವರನ್ನು ಹೈದ್ರಾಬಾದ್ ಮೂಲದ ಯುವಕ ಚಂದ್ರ(5), ಸತೀಶ್ (35) ಮಂತ್ರಾಲಯ ಗ್ರಾಮದ ರಾಘವೇಂದ್ರ (25), ಧನುಷ್ (23), ಉರವಕೊಂಡದ ಸಂಧ್ಯಾ(22) ಎಂದು ಗುರುತಿಸಲಾಗಿದೆ.

ಮೃತರು ಭಾನುವಾರ ಮಂತ್ರಾಲಯದಲ್ಲಿನ ಸಂಬಂಧಿಕರ ಮನೆಯಲ್ಲಿ ಏರ್ಪಡಿಸಿದ್ದ ಸತ್ಯನಾರಾಯಣ ಪೂಜೆಗೆ ಆಗಮಿಸಿದ್ದರು. ಪೂಜೆಯ ಬಳಿಕ ನದಿಯಲ್ಲಿ ಈಜಲು ತೆರಳಿದ್ದರು. ಆದರೆ, ನದಿಯಲ್ಲಿನ ನೀರಿನ ಆಳ ತಿಳಿಯದೆ ನದಿಯಲ್ಲಿ ಸ್ವಲ್ಪ ದೂರ ತೆರಳಿದ್ದಾರೆ. ನೀರಿನ ಸೆಳವಿಗೆ ಸಿಲುಕಿ ಈ ಐವರು ನೀರು ಪಾಲಾಗಿದ್ದಾರೆ. ಇವರೊಂದಿಗೆ ತೆರಳಿದ್ದ ಯುವತಿ ಅಪರ್ಣಾ ಸಾವಿನ ದವಡೆಯಿಂದ ಪಾರಾಗಿದ್ದಾರೆ. ಧನುಷ್ ಮೃತದೇಹ ಪತ್ತೆಯಾಗಿದ್ದು ಉಳಿದವರ ಶವಕ್ಕಾಗಿ ಶೋಧಕಾರ್ಯ ನಡೆಯುತ್ತಿದೆ. ಪೊಲೀಸರು ಸ್ಥಳೀಯ ಮೀನುಗಾರರ ಸಹಾಯದೊಂದಿಗೆ ಶವಗಳ ಶೋಧ ಕಾರ್ಯ ನಡೆಸಿದ್ದಾರೆ. ಎಮ್ಮಿಗನೂರು ಡಿವೈಎಸ್‌ಪಿ ಭಾರ್ಗವಿ ಸ್ಥಳಕ್ಕೆ ಭೇಟಿ ಪರಿಶೀಲನೆ ನಡೆಸಿದರು.

ಇಂದು ಶಾಲೆ ಆರಂಭ

• **ಬೆಂಗಳೂರು:** ಸುಮಾರು ಎರಡು ತಿಂಗಳಿನಿಂದ ಬೇಸಿಗೆ ರಜೆ ಹಿನ್ನೆಲೆಯಲ್ಲಿ ಮೌನವಾಗಿದ್ದ ರಾಜ್ಯದ ಶಾಲೆಗಳು, ಇಂದಿನಿಂದ ಮಕ್ಕಳ ಕಲರವ ಆರಂಭವಾಗಲಿದ್ದು, ಶಾಲಾ ಅಂಗಳ ಕಳೆಕಟ್ಟಲಿದೆ.

ಶಿಕ್ಷಣ ಇಲಾಖೆಯು ಹೊಸ ಶೈಕ್ಷಣಿಕ ವರ್ಷದ ಅಂದರೆ 2026-27ನೇ ಶೈಕ್ಷಣಿಕ ಸಾಲಿನಲ್ಲಿ ಶಾಲೆಗಳನ್ನು ಜೂನ್ 1 ರಿಂದ ಪ್ರಾರಂಭಿಸಲು ಆದೇಶಿಸಿದ್ದು, ಮೇ 29 ರಂದು ಶಾಲಾ ಶಿಕ್ಷಕರು ಪೂರ್ವ ಸಿದ್ಧತೆ ಕೈಗೊಂಡಿದ್ದಾರೆ. ಇಂದಿನಿಂದ ಮಕ್ಕಳು ಆಗಮಿಸಲಿದ್ದು, ಪ್ರಾರಂಭೋತ್ಸವದ ಮೂಲಕ ವಿದ್ಯಾರ್ಥಿಗಳಿಗೆ ಸ್ವಾಗತ ನೀಡಲಾಗುತ್ತಿದೆ.

ಮೇ 29 ರಂದು ಪೂರ್ವ ಸಿದ್ಧತೆಗೋಸ್ಕರ ನಿಗದಿ ಮಾಡಲಾಗಿತ್ತು. ಶಾಲಾ ಆವರಣ, ಕೊಠಡಿ ಹಾಗೂ ಶೌಚಾಲಯಗಳ ಸ್ವಚ್ಛತೆ, ಕುಡಿಯುವ ನೀರಿನ ಟ್ಯಾಂಕ್ ಸ್ವಚ್ಛತೆ, ಅಡುಗೆ ಮನೆ, ಪಾತ್ರೆ, ಸ್ವಚ್ಛಗೊಳಿಸುವುದು, ಶಾಲಾ ವೇಳಾಪಟ್ಟಿ ಸಿದ್ಧತೆ, ಎಸ್‌ಡಿಪಿ ಕ್ರಿಯಾಯೋಜನೆ, ಶಿಕ್ಷಕರಿಗೆ ವಿಷಯಗಳ ಹಂಚಿಕೆ ಸೇರಿದಂತೆ ವಿದ್ಯಾರ್ಥಿಗಳು ಕಡ್ಡಾಯವಾಗಿ ಹಾಜರು ಇರುವಂತೆ ನೋಡಿಕೊಳ್ಳಲು ಇಲಾಖೆಯು ಆಯಾ ಶಾಲೆಯ ಮುಖ್ಯಶಿಕ್ಷಕರಿಗೆ ಸೂಚಿಸಿತ್ತು. ಅದರಂತೆ ಶಾಲಾ ಶಿಕ್ಷಕರು ಎಲ್ಲಾ ಸಿದ್ಧತೆಗಳನ್ನು ಮಾಡಿಕೊಂಡು ಶಾಲೆಗಳನ್ನು ಆರಂಭಿಸಿದ್ದಾರೆ. ಜೂ. 1ರಂದು ಉತ್ಸವದ ರೀತಿಯಲ್ಲಿ ಶಾಲೆಗಳನ್ನು ಪ್ರಾರಂಭಿಸಲು ಇಲಾಖೆ ಸೂಚಿಸಿದ್ದು, ಶಾಲೆಗೆ ತಳಿರು-ತೋರಣ ಕಟ್ಟಿ ಡೋಲು, ನಗಾರಿ ಮೂಲಕ ಮಕ್ಕಳನ್ನು ಕರೆ ತಂದು ಗುಲಾಬಿ ಹೂ ನೀಡಿ ಸ್ವಾಗತಿಸಲು ಸಿದ್ಧವಾಗಿದೆ. ಅಲ್ಲದೆ ಬಿಸಿಯೂಟ ಸಿಹಿಯೊಂದಿಗೆ ಪ್ರಾರಂಭಿಸುವುದು, ಶಾಲಾ ಸಮವಸ್ತ್ರ, ಪುಸ್ತಕಗಳ ಹಂಚಿಕೆಯೂ ನಡೆಯಲಿದೆ ಎಂದು ಶಿಕ್ಷಣ ಇಲಾಖೆ ತಿಳಿಸಿದೆ.

ಸುರಕ್ಷತೆಗೆ ಆದ್ಯತೆ

ಮಳೆಗಾಲದ ಹಿನ್ನೆಲೆಯಲ್ಲಿ ಶಾಲಾ ಕೊಠಡಿಗಳ ಸುರಕ್ಷತೆಗೆ ಆದ್ಯತೆ ನೀಡಲು ಶಿಕ್ಷಕರಿಗೆ ಸೂಚಿಸಿರುವ ಶಿಕ್ಷಣ ಇಲಾಖೆಯು, ಲಭ್ಯ ಇರುವ ಅನುದಾನ ಬಳಸಿಕೊಂಡು ಶಾಲಾ ಕೊಠಡಿಗಳ ದುರಸ್ತಿಗೆ ತಿಳಿಸಿದೆ. ಯಾವುದೇ ಕಾರಣಕ್ಕೂ ಅಸುರಕ್ಷಿತ ಕೊಠಡಿಗಳಲ್ಲಿ ಮಕ್ಕಳನ್ನು ಕೂರಿಸುವಂತಿಲ್ಲ, ವಿದ್ಯುತ್ ಶಾರ್ಟ್ ಸರ್ಕ್ಯೂಟ್ ತೊಂದರೆ ಇದ್ದಲ್ಲಿ ದೂರು ನೀಡುವುದು ಸೇರಿದಂತೆ ಮಕ್ಕಳ ವಿಷಯದಲ್ಲಿ ಅಲಕ್ಷ್ಯ ತೋರಿದಲ್ಲಿ ಅನಾಹುತ ಸಂಭವಿಸಿದರೆ ಶಿಕ್ಷಕರನ್ನೇ ಹೊಣೆಗಾರಿಕೆ ಮಾಡಲಾಗುವುದು ಎಂದು ಎಚ್ಚರಿಕೆ ನೀಡಲಾಗಿದೆ.



ರಾಜ್ಯಮಟ್ಟದ ಕಾರ್ಯಕ್ರಮ ರದ್ದು ಶಾಲಾ ಪ್ರಾರಂಭೋತ್ಸವದ ಸಂದರ್ಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಶಿವಮೊಗ್ಗದಲ್ಲಿ ಕರ್ನಾಟಕ ಪಬ್ಲಿಕ್ ಸ್ಕೂಲ್ (ಕೆಪಿಎಸ್) ನೂತನ ಕಟ್ಟಡ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಬೇಕಾಗಿತ್ತು. ಅಲ್ಲದೆ ಮುಖ್ಯಮಂತ್ರಿಗಳು ಸ್ವತಃ ವಿದ್ಯಾರ್ಥಿಗಳನ್ನು ಸರ್ಕಾರಿ ಶಾಲೆಗೆ ಸ್ವಾಗತಿಸಿ, ರಾಜ್ಯಾದ್ಯಂತ ಎಲ್ಲಾ ಶಾಲೆಗಳಲ್ಲಿ ಏಕಕಾಲದಲ್ಲಿ ನಡೆಯುವ ಮಹಾ ಪೋಷಕ-ಶಿಕ್ಷಕರ ಸಭೆಯನ್ನು ಉದ್ದೇಶಿಸಿ ವಿಡಿಯೋ ಕಾನ್ಫರೆನ್ಸ್ ಮೂಲಕ ವಿದ್ಯಾರ್ಥಿಗಳು ಹಾಗೂ ಪೋಷಕರೊಂದಿಗೆ ನೇರ ಸಂವಾದ ನಡೆಸಲು ಸಿದ್ಧತೆ ನಡೆಸಲಾಗಿತ್ತು. ಆದರೆ ಸದ್ಯ ರಾಜ್ಯದಲ್ಲಿ ನಡೆದ ರಾಜಕೀಯ ಬೆಳವಣಿಗೆಗಳಿಂದಾಗಿ ರಾಜ್ಯಮಟ್ಟದ ಪ್ರಾರಂಭೋತ್ಸವ ಮತ್ತು ಕೆಪಿಎಸ್ ನೂತನ ಕಟ್ಟಡ ನಿರ್ಮಾಣಕ್ಕೆ ಶಂಕುಸ್ಥಾಪನೆ ಕಾರ್ಯಕ್ರಮವನ್ನು ರದ್ದು ಪಡಿಸಲಾಗಿದೆ. ಒಟ್ಟಾರೆ ಎರಡು ತಿಂಗಳ ರಜೆಯಲ್ಲಿ ಮೋಜು, ಮಸ್ತಿಯಲ್ಲಿ ಕಾಲ ಕಳೆದ ಚಿಣ್ಣರು ಈಗ ಶಾಲೆಯತ್ತ ಮುಖ ಮಾಡಿದ್ದು, ಶಾಲೆಗಳಲ್ಲಿ ಚಟುವಟಿಕೆಗಳು ಆರಂಭವಾಗಲಿದೆ.

ಸಫಲತೆಗಾಗಿ ಸಂಕಲ್ಪ

▸ **ಮೇಘಾ ಪ್ರಮೋದ್**

ಕೇರಳದ ಎರ್ನಾಕುಲಂ ಜಿಲ್ಲೆಯ ಪುಥೆನ್‌ಕ್ರಾವು ಪಟ್ಟಣದಲ್ಲಿ ವಾಸಿಸುವ ಶಿಖಾ ಸುರೇಂದ್ರನ್‌ರ ಪುಟ್ಟ-ಪುಟ್ಟ ಕಣ್ಣುಗಳಲ್ಲಿ ದೊಡ್ಡ-ದೊಡ್ಡ ಕನಸುಗಳಿತ್ತು. ತಂದೆ ಹಾಸಿಗೆ ಹಿಡಿದಿದ್ದರು ಹಾಗು ತಾಯಿ ಅಸಹಾಯಕಳಾಗಿದ್ದಳು. ಹೇಗೊ ಸಂಬಂಧಿಕರ ಸಹಾಯದಿಂದ ಎಂಜಿನಿಯರಿಂಗ್ ಪದವಿಯನ್ನು ಮುಗಿಸಿದ ಈ ಪ್ರತಿಭಾಶಾಲಿ ಹುಡುಗಿ ಐಎಎಸ್ ಮುಗಿಸಿ ದೇಶದ ಸೇವೆ ಮಾಡಲು ಬಯಸಿದ್ದಳು, ಆದರೆ ಹಣವಿಲ್ಲದೆ ದೆಹಲಿಯಲ್ಲಿದ್ದು ಕೋಚಿಂಗ್ ಪಡೆಯುವುದು ಹೇಗೆ ಸಾಧ್ಯವಾದೀತು. ಆಗ ಶಿಖಾ ಸಂಕಲ್ಪದ ಸಂಪರ್ಕಕ್ಕೆ ಬಂದರು. ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಚಾರಕರಾದ ಸಂತೋಷ್ ತನೇಜಾಜೀಯವರ ಪ್ರಯತ್ನದಿಂದ 1986ರಲ್ಲಿ ಪ್ರಾರಂಭವಾದ ಈ ಸಂಸ್ಥೆ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ದೆಹಲಿಯಲ್ಲಿ ಸಿವಿಲ್ ಸರ್ವಿಸ್ ಗಾಗಿ ತರಬೇತಿಯನ್ನು ನೀಡುತ್ತಿದೆ. ಇಲ್ಲಿ ಅತಿ ಕಡಿಮೆ ಮೊತ್ತದ ಶುಲ್ಕವನ್ನು ನೀಡಿ ತರಬೇತಿಯ ಜೊತೆಗೆ ಹಾಸ್ಟೆಲ್ ಸೌಲಭ್ಯವನ್ನೂ ಪಡೆದ ಶಿಖಾ ದಾಖಲೆ ನಿರ್ಮಿಸಿದ್ದಳು.2017-18ರ ಬ್ಯಾಚಿನ ಶಿಖಾ ಸುರೇಂದ್ರನ್ ಐಎಎಸ್ ನಲ್ಲಿ ದೇಶದಲ್ಲೇ16ನೇ ಸ್ಥಾನವನ್ನು ಪಡೆದರು.



ಸೇವಾಗಾಥ
ಕಥೆ-8

ರಾಜಸ್ಥಾನದ ಅಲ್ವಾರ್ ಜಿಲ್ಲೆಯ ರೋನಿಜಾಜಾಟ್ ಹಳ್ಳಿಯ ರೈತ ಕುಟುಂಬದ ರಾಜೀವ್ ಕುಮಾರರದ್ದು ಇದೇ ರೀತಿಯ ಕಥೆ. ಅವರ ಕುಟುಂಬದಲ್ಲಿ ಯಾರೂ ಶಿಕ್ಷಿತರಿರಲಿಲ್ಲ, ಇಂದು ಇವರು ಸಿವಿಲ್ ಸೇವೆಗೆ ಆಯ್ಕೆಯಾಗಿ ಮಸ್ಸೂರಿಯಲ್ಲಿ ಐಎಎಸ್ ತರಬೇತಿ ಪಡೆಯುತ್ತಿದ್ದಾರೆ. ಹಾಗೆಯೆ ಅವರ ಈ ಯಶಸ್ಸಿಗೆ ಸಂಕಲ್ಪ ಪರಿವಾರವೆ ಕಾರಣ ಎನ್ನುತ್ತಾರೆ. ಹಣದ ಸಮಸ್ಯೆ ಯಾವ ವಿದ್ಯಾರ್ಥಿಗಳ ಪ್ರತಿಭೆಗೆ ತೊಡಕಾಗಿದೆಯೊ ಅಂತಹ 20ವಿದ್ಯಾರ್ಥಿಗಳಿಗೆ ಸಂಕಲ್ಪ ಪರಿವಾರವು ಪ್ರತಿ ವರ್ಷ ಉಚಿತ ತರಬೇತಿಯನ್ನು ನೀಡುತ್ತಿದೆ. ವಿಶೇಷವಾಗಿ ಜನಜಾತಿಸಮುದಾಯ ಹಾಗು ಈಶಾನ್ಯ ಭಾಗದ ಬಡ ವಿದ್ಯಾರ್ಥಿಗಳಿಗೆ ಸಂಕಲ್ಪವು ಪಾಲಕರ ಹಾಗು ಗುರುವಿನ ಪಾತ್ರವನ್ನು ನಿರ್ವಹಿಸುವ ಕುಟುಂಬದಂತಿದೆ.

ಬೆಳಗ್ಗಿನ ಯೋಗಾಭ್ಯಾಸ, ಸಂಜೆಯ ಶಾಖೆಯಿಂದ ಹಿಡಿದು ರಾತ್ರಿಯ ಪ್ರಾರ್ಥನೆಯ ತನಕ ನಿಯಮಬದ್ಧವಾದ ಹಾಗೂ ಸಂಸ್ಕಾರಗಳಿಂದ ಕೂಡಿದ ದಿನಚರಿಯು ಸಂಕಲ್ಪವನ್ನು ಬೇರೆ ತರಬೇತಿ ಕೇಂದ್ರಗಳಿಗಿಂತ ಭಿನ್ನವಾಗಿಸುತ್ತದೆ. ವಿಶೇಷವಾದ ಉಪನ್ಯಾಸ ಸರಣಿಗಳಲ್ಲಿ ಕಾಶ್ಮೀರಿ ವಿದ್ಯಾರ್ಥಿಗಳನ್ನು ಶಿಕ್ಷಣದೊಂದಿಗೆ ಜೋಡಿಸಿದಮೇಜರ್ ಜನರಲ್ ಪಿ.ಕೆ. ಸಹಗಲ್ ಹಾಗು ಶ್ರೀ ರವಿಶಂಕರ್ ಗುರೂಜಿ ಅವರಂತಹ ರಾಷ್ಟ್ರೀಯವಾದಿಗಳ ಅನುಭವ ವಿದ್ಯಾರ್ಥಿಗಳಲ್ಲಿ ದೇಶಕ್ಕಾಗಿ ಜವಾಬ್ದಾರಿಯುತರಾಗಿರಲು ಪ್ರೇರೇಪಿಸುತ್ತದೆ. ದೇಶಕ್ಕೆ ರಾಷ್ಟ್ರೀಯವಾದಿ ಆಡಳಿತಗಾರರನ್ನು ನೀಡುವ ಉದ್ದೇಶದಿಂದ 1986ರಲ್ಲಿ ಸಂಕಲ್ಪವನ್ನು ಸ್ಥಾಪಿಸಲಾಯಿತು ಎಂದು ಸಂಸ್ಥೆಯ ಸಂಸ್ಥಾಪಕರಾದ ಸಂತೋಷ್ ಜೀಯವರು ಹೇಳುತ್ತಾರೆ.2015ರಲ್ಲಿ ಸಿವಿಲ್ ಸೇವೆಯಲ್ಲಿ ಯಶಸ್ವಿಯಾದ ಒಟ್ಟು 1256 ವಿದ್ಯಾರ್ಥಿಗಳಲ್ಲಿ 670 ವಿದ್ಯಾರ್ಥಿಗಳು ಸಂಕಲ್ಪದವರೆ ಆಗುವುದರೊಂದಿಗೆ ಸಂಕಲ್ಪವು ಸಫಲತೆಯ ಇತಿಹಾಸವನ್ನು ನಿರ್ಮಿಸಿದೆ.

ಸಂಸ್ಥೆಯು ಪ್ರತಿ ವರ್ಷ ಆಯೋಜಿಸುವ ಗುರು ಸಮ್ಮಾನ್ ಕಾರ್ಯಕ್ರಮದಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳನ್ನೂ ಸಹ ಗುರುಗಳೊಂದಿಗೆ ಸನ್ಮಾನಿಸಲಾಗುತ್ತದೆ. ಇಷ್ಟೆ ಅಲ್ಲದೆ, ಪ್ರತಿ ವರ್ಷ ಜಂಜೋಲಿಯಲ್ಲಿ ನಡೆಯುವ 'ದಿಶಾಬೋಧ' ಶಿಬಿರದಲ್ಲಿ ದೇಶದ 200 ಪದವೀಧರರನ್ನು ಸಿವಿಲ್ ಸೇವೆಯ ಪರೀಕ್ಷೆಯ ತಯಾರಿಯ ಮೊದಲು ಅವರಿಗೆ ಓದುವ ವಿಧಾನವನ್ನು ಕಲಿಸಿ ದೇಶಕ್ಕಾಗಿ ತಮ್ಮ ಜವಾಬ್ದಾರಿಯನ್ನು ಮನವರಿಕೆ ಮಾಡಿಕೊಡಲಾಗುತ್ತಿದೆ.ಈ ಶಿಬಿರದಲ್ಲಿ ಭಾಗವಹಿಸಿದವರಿಗೆ ಸಂಘದ ಸಹ ಸರಕಾರ್ಯವಾಹರಾದ ಮಾನ್ಯ ಶ್ರೀ ಕೃಷ್ಣಗೋಪಾಲ್ ಜಿ ಸೇರಿದಂತೆ ಸಂಘದ ಹಿರಿಯ ಅಧಿಕಾರಿಗಳ ಮಾರ್ಗದರ್ಶನವೂ ದೊರೆಯುತ್ತಿದೆ.

ಸಂಕಲ್ಪದ ವೈಶಿಷ್ಟ್ಯವೆಂದರೆ ಇಲ್ಲಿನ ಆತ್ಮೀಯ ವಾತಾವರಣದಲ್ಲಿ ದೆಹಲಿಯಂತಹ ಮಹಾನಗರದಲ್ಲಿ ಕೌಟುಂಬಿಕ ವಾತಾವರಣದ ಕೊರತೆ ಕಾಣಿಸುವುದಿಲ್ಲ ಎಂದು ಕೇರಳದ ಶಿಖಾ ಸುರೇಂದ್ರನ್ ಹೇಳುತ್ತಾರೆ. ಆಡಳಿತಾಧಿಕಾರಿಗಳನ್ನು ರಾಷ್ಟ್ರೀಯವಾದಿ ಚಿಂತನೆಗಳಿಗೆ ಜೋಡಿಸಲು ಪ್ರತಿ ವರ್ಷ 3 ದಿನಗಳ ಉಪನ್ಯಾಸ ಸರಣಿಗಳನ್ನು ಆಯೋಜಿಸಲಾಗುತ್ತದೆ. ಇದರಲ್ಲಿ ಸಮಾಜದ ಪ್ರಬುದ್ಧ ಚಿಂತಕರು ವಿವಿಧ ರಾಷ್ಟ್ರೀಯ ವಿಷಯಗಳ ಬಗ್ಗೆ ತಮ್ಮ ಅಭಿಪ್ರಾಯವನ್ನು ಹಂಚಿಕೊಳ್ಳುತ್ತಾರೆ.

ಜಾರಕಿಹೊಳಿ ವಿರುದ್ಧ ನಕಲಿ ಪೋಸ್ಟ್: ದೂರು ದಾಖಲು

• **ಬೆಳಗಾವಿ:** 'ಕರುನಾಡ ಕುರುಬಗೌಡ್ರು, ಹಾಗೂ ಬಂಡಾಯ ಧ್ವನಿ' ಎಂಬ ನಕಲಿ ಫೇಸ್‌ಬುಕ್ ಖಾತೆಯಲ್ಲಿ ಸಚಿವ ಸತೀಶ ಜಾರಕಿಹೊಳಿ ವಿರುದ್ಧ ಅವಹೇಳನಕಾರಿ ಪೋಸ್ಟ್ ಹಾಕಿದ ಘಟನೆಯ ಕುರಿತು, ವಾಲ್ಮೀಕಿ ಸಮಾಜದ ಮುಖಂಡ ರಾಜಶೇಖರ ತಳವಾರ ಬೆಳಗಾವಿ ಸೈಬರ್ ಕ್ರೈಂ ಠಾಣೆಗೆ ದೂರು ದಾಖಲಿಸಿದ್ದಾರೆ.



ಕರುನಾಡ ಕುರುಬಗೌಡ್ರು, ಹಾಗೂ ಬಂಡಾಯ ಧ್ವನಿ ಎಂಬ ನಕಲಿ ಫೇಸ್‌ಬುಕ್ ಖಾತೆಯಲ್ಲಿ ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡಿರುವ ಸಿದ್ದರಾಮಯ್ಯ ಅವರ ವಿರುದ್ಧ 37 ಶಾಸಕರಿಂದ ಸಚಿವ ಸತೀಶ ಜಾರಕಿಹೊಳಿ ಅವರು ಸಹಿ ಸಂಗ್ರಹ ಮಾಡಲಾಗಿದೆ ಎಂಬ ಗಂಭೀರ ಆರೋಪ ಮಾಡಲಾಗಿದೆ. ಈ ಆರೋಪವನ್ನು ಸ್ವತಃ ಸಚಿವ ಸತೀಶ ಜಾರಕಿಹೊಳಿ ನಿರಾಕರಿಸಿದ್ದಾರೆ. ಹೀಗಾಗಿ ಸತೀಶ ಜಾರಕಿಹೊಳಿ ಅವರ ವಿರುದ್ಧ ಇಲ್ಲ ಸಲ್ಲದ ಅಪವಾದ ಹೊರಿಸಿ ಅವರ ಹೆಸರು ಹಾಳು ಮಾಡಲು ನಕಲಿ ಫೇಸ್‌ಬುಕ್ ಖಾತೆಯಲ್ಲಿ ಸಂಚು ರೂಪಿಸಲಾಗಿದೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ. ಸಾರ್ವಜನಿಕರಲ್ಲಿ ಶಾಂತಿ ಭಂಗ, ದೊಂಬಿ ಉಂಟು ಮಾಡುವಂತೆ ಮಾಡಲು ಸುಳ್ಳು ಸುದ್ದಿಗಳನ್ನು ಸಚಿವ ಸತೀಶ ಜಾರಕಿಹೊಳಿ ಅವರ ವಿರುದ್ಧ ಜಾಲತಾಣದಲ್ಲಿ ಪೋಸ್ಟ್ ಮಾಡಲಾಗಿದೆ. ಶೀಘ್ರವೇ ಸುಳ್ಳು ಸುದ್ದಿ ಹರಡಿಸುವವರ ಹಾಗೂ ಈ 2 ನಕಲಿ ಫೇಸ್‌ಬುಕ್ ಖಾತೆ ಮಾಡಿ ಅವಹೇಳನಕಾರಿ ಪೋಸ್ಟ್ ಹಾಕಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಆಗ್ರಹಿಸಲಾಗಿದೆ.

ರಜತ್ ಪಡೆಗೆ ದ್ವಿತೀಯ ದಿಗ್ವಿಜಯ | ಆರ್‌ಸಿಬಿ ಕಿರೀಟ ಅಚಲ | ಜಿಟಿ ವಿರುದ್ಧ 5 ವಿಕೆಟ್ ಜಯ

ಬೆಂಗ್ಳೂರು ರಾಯಲ್ಸ್ ಮತ್ತೆ ಕಿಂಗ್ಸ್

• **ಅಹಮದಾಬಾದ್:** ಮತ್ತೆ ಅದೇ ಕ್ರೀಡಾಂಗಣ, ಸಹಸ್ರಾರು ಸಂಖ್ಯೆಯಲ್ಲಿ ಬಂದ ಅಭಿಮಾನಿಗಳ ಸಂಭ್ರಮ. ಎಲ್ಲೆಲ್ಲೂ ಒಂದೇ ಧ್ವನಿ, ಒಂದೆ ಕಹಳೆ ಆರ್‌ಸಿಬಿ.. ಆರ್‌ಸಿಬಿ.. ಎಂಬ ಕೂಗಾಟ. ಐಪಿಎಲ್ ಫೈನಲ್ ಪಂದ್ಯದ ವೇಳೆ ಕಳೆದ ಬಾರಿಯ ಇತಿಹಾಸ ಮರುಕಳಿಸಿದಂತಿತ್ತು. ಆದರೆ ಈ ಬಾರಿ ಎದುರಾಳಿ ಗುಜರಾತ್ ಟೈಟಾನ್ಸ್, ಆದರೆ ಪ್ರಾಬಲ್ಯ ಕಳೆದ ಬಾರಿಗಿಂತ ಹೆಚ್ಚು.

ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯದಲ್ಲಿ ತನ್ನ ಚಾಂಪಿಯನ್ ಪಟ್ಟ ಉಳಿಸಿಕೊಂಡಿರುವ ಆರ್‌ಸಿಬಿ ಗುಜರಾತ್ ಟೈಟಾನ್ಸ್ ತಂಡವನ್ನು 5 ವಿಕೆಟ್‌ಗಳಿಂದ ಮಣಿಸಿದೆ. ಪಂದ್ಯದಲ್ಲಿ ಬ್ಯಾಟಿಂಗ್‌ಗಿಳಿದ ಗುಜರಾತ್ 20 ಓವರ್‌ಗಳಲ್ಲಿ 8 ವಿಕೆಟ್‌ಗೆ 155 ರನ್ ಮಾತ್ರ ಗಳಿಸಿತು. ವಾಷಿಂಗ್ಟನ್ ಸುಂದರ್ 50* ರನ್ ಗಳಿಸಿದರು. ಆರ್‌ಸಿಬಿ ಪರ ರಸಿಖ್ ಸಲಾಂ ಧಾರ್ 3 ವಿಕೆಟ್ ಪಡೆದರೆ, ಭುವನೇಶ್ವರ್ ಕುಮಾರ್, ಹ್ಯಾಜಲ್‌ವುಡ್ ತಲಾ 2 ವಿಕೆಟ್ ಪಡೆದರು. ಕೃನಾಲ್ 1 ವಿಕೆಟ್ ಕಿತ್ತರು. ಗುರಿ ಬೆನ್ನತ್ತಿದ ಆರ್‌ಸಿಬಿ 18 ಓವರ್ ಗಳಲ್ಲಿ 5 ವಿಕೆಟ್ ನಷ್ಟಕ್ಕೆ 161 ರನ್ ಗಳಿಸಿತು. ಕೊಹ್ಲಿ ಅಜೇಯ 75 ರನ್ ಗಳಿಸಿದರು.ರಸಿಖ್ ಸಲಾಂ ಧಾರ್ ಪಂದ್ಯಶ್ರೇಷ್ಠ ಗೆದ್ದುಕೊಂಡರೆ, ವಿರಾಟ್ ಕೊಹ್ಲಿ ಪಂದ್ಯ ಗೆಲ್ಲಿಸಿದ ರೂವಾರಿ ಎನಿಸಿಕೊಂಡರು. ಭುವನೇಶ್ವರ್ ಕುಮಾರ್, ಹ್ಯಾಜಲ್‌ವುಡ್ ಕೂಡ 2 ವಿಕೆಟ್ ಪಡೆದುಕೊಂಡರು. ಗುಜರಾತ್ ಪರ ಬ್ಯಾಟಿಂಗ್ ವೇಳೆ ವಾಷಿಂಗ್ಟನ್ ಆಸರೆಯಾದರೆ, ಬೌಲಿಂಗ್ ವೇಳೆ ರಶೀದ್ ಹೋರಾಡಿದರು.

ವೇಗಿಗಳ ಕೈಚಳಕ: ಬ್ಯಾಟಿಂಗ್‌ಗಿಳಿದ ಗುಜರಾತ್ ಟೈಟಾನ್ಸ್ ಆರಂಭಿಕ ಆಘಾತ ಎದುರಿಸಿತು. ವೇಗಿಗಳಾದ, ಹ್ಯಾಜಲ್‌ವುಡ್, ಭುವಿ ಮತ್ತು ರಸಿಖ್ ದಾಳಿಗೆ ತಂಡದ ಪ್ರಮುಖ ಬ್ಯಾಟರಾದ ಸಾಯಿ ಸುದರ್ಶನ್ ಮತ್ತು ಶುಭಮನ್ ಗಿಲ್ ಬೇಗನೇ ಪೆವಿಲಿಯನ್ ದಾರಿ ಹಿಡಿದರು. ಮೂರನೇ ಕ್ರಮಾಂಕದಲ್ಲಿ ಬಂದ ಜಾಸ್ ಬಟ್ಲರ್ ಅಲ್ಪ ಹೊತ್ತು ನಿಂತರೂ ರನ್ ಮಾಡಲಾಗಲಿಲ್ಲ. ಮಧ್ಯಮ ಕ್ರಮಾಂಕದಲ್ಲಿ ಸುಂದರ್ ಉತ್ತಮ ಬ್ಯಾಟಿಂಗ್ ಮಾಡಿದ ನಂತರ ಪವರ್‌ಪ್ಲೇನಲ್ಲಿ ಗುಜರಾತ್ 45 ರನ್ ಗಳಿಸಿತು. ತಂಡದ ಶಕ್ತಿಯಾಗಿದ್ದ ಗಿಲ್ ಮತ್ತು ಸಾಯಿ ಸುದರ್ಶನ್ ವಿಕೆಟ್ ಕಳೆದುಕೊಂಡಿತ್ತು. ಮಧ್ಯಮ ಓವರ್‌ಗಳಲ್ಲಿ ವಾಷಿಂಗ್ಟನ್ ಸುಂದರ್ ಮತ್ತು ಜಾಸ್ ಬಟ್ಲರ್ ಕೊಂಚ ಹೊತ್ತು ಕ್ರೀಜ್‌ಗೆ ಅಂಟಿಕೊಂಡು ನಿಂತರು. 23 ಬಾಲ್‌ಗಳಲ್ಲಿ 19 ರನ್ ಗಳಿಸಿದ ಬಟ್ಲರ್ ಕೃನಾಲ್ ಪಾಂಡ್ಯಗೆ ವಿಕೆಟ್ ಒಪ್ಪಿಸಿದರು. ಅಲ್ಲಿಂದ ಆರ್‌ಸಿಬಿ ಪಡೆ ಹಿಗ್ಗಿತು. ಬಲಿಷ್ಠ ಬ್ಯಾಟರು ವಿಕೆಟ್ ಒಪ್ಪಿಸಿದ ನಂತರ ಗುಜರಾತ್ ತತ್ತರಿಸಿತು. ಸುಂದರ್ ಒಂದು ಬದಿಯಲ್ಲಿ ನಿಧಾನವಾಗಿ ಅರ್ಧಶತಕದತ್ತ ಸಾಗಿದರು. ಮಧ್ಯಮ ಓವರ್ ಗಳಲ್ಲಿ ಗುಜರಾತ್ 70 ರನ್ ಗಳಿಸಿತು. ಅಲ್ಲಿ 3 ವಿಕೆಟ್ ಬಿದ್ದವು. ಡೆತ್ ಓವರ್‌ಗಳಲ್ಲಿ ತೇವಾಟಿಯ 7, ರಶೀದ್ ಖಾನ್ 7 ರನ್‌ಗೆ ವಿಕೆಟ್ ಒಪ್ಪಿಸಿದರು. ಏಕಾಂಗಿ ಹೋರಾಟ ನಡೆಸಿದ ವಾಷಿಂಗ್ಟನ್ ಸುಂದರ್ 37 ಬಾಲ್‌ಗಳಲ್ಲಿ ಔಟಾಗದೆ 50 ರನ್ ಗಳಿಸಿದರು.


ವಿರಾಟ ಆರ್ಭಟ

ಗುರಿ ಬೆನ್ನತ್ತುವಾಗಲೂ ಆರ್‌ಸಿಬಿ ಅದೇ ಜೋಶ್ ಅದೇ ಪ್ರಾಬಲ್ಯದೊಂದಿಗೆ ಮುನ್ನಡೆಯಿತು. ಕಾಲಿಗೆ ಗಾಯವಾದರೂ ವೆಂಕಟೇಶ್ ಅಯ್ಯರ್ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಅಬ್ಬರದ ಆರಂಭದ ಜತೆಗೆ ಗೆಲುವಿನ ಅಡಿಪಾಯ ಹಾಕಿದರು. ವಿರಾಟ್ ಕೊಹ್ಲಿ ಕೂಡ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಅಬ್ಬರಿಸಿದರು. 16 ಬಾಲ್‌ಗಳಲ್ಲಿ 32 ರನ್‌ಗಳಿಸಿ ವೆಂಕಟೇಶ್ ವಿಕೆಟ್ ಒಪ್ಪಿಸಿದರು. ಪಡಿಕ್ಕಲ್ ಕೂಡ ಬೇಗನೇ ವಿಕೆಟ್ ಒಪ್ಪಿಸಿದರು. ಪವರ್‌ಪ್ಲೇದಲ್ಲೇ ಆರ್‌ಸಿಬಿ 70 ರನ್ ಬಾರಿಸಿ ಗೆಲುವಿನ ಹಾದಿ ಹಿಡಿದಿತ್ತು. ಬಂದ ಬೌಲರ್‌ಗಳನ್ನೆಲ್ಲಾ ದಂಡಿಸಿದ ಕೊಹ್ಲಿ ಅರ್ಧಶತಕದತ್ತ ಸಾಗಿದರು. 9ನೇ ಓವರ್ ಬೌಲಿಂಗ್ ಮಾಡಲು ಬಂದ ರಶೀದ್ ಖಾನ್ ಸರಸರನೇ ಎರಡು ವಿಕೆಟ್ ಕಿತ್ತರು. ಬಳಿಕ ಡೇವಿಡ್ ಸೆಟ್ ಆಗುವ ಯಾವುದೇ ಮುಲಾಜಿಗೆ ಬೀಳದೆ ಸ್ಫೋಟಕ ಬ್ಯಾಟಿಂಗ್‌ಗೆ ಮುಂದಾದರು. ಆದರೆ 24 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ವಿರಾಟ್ ಕೊಹ್ಲಿ ಒತ್ತಡ ತಡೆದುಕೊಂಡರು. ಉಳಿದ ಪಂದ್ಯವನ್ನು ಮುಗಿಸಿಕೊಂಡೇ ಬಂದರು. ಕೊನೆಯಲ್ಲಿ ಕೊಹ್ಲಿ 75 ರನ್ ಗಳಿಸಿದರೆ ಜಿತೇಶ್ ಶರ್ಮ 11 ರನ್‌ಗಳಿಸಿದರು.



ಸಂಕ್ಷಿಪ್ತ ಸ್ಕೋರ್
ಗುಜರಾತ್ 20 ಓವರ್‌ಗಳಲ್ಲಿ 155/8: ಸುಂದರ್ 50*, ನಿಶಾಂತ್ 20; ರಸಿಖ್ 27/3
ಆರ್‌ಸಿಬಿ 18 ಓವರ್‌ಗಳಲ್ಲಿ 161/5: ಕೊಹ್ಲಿ 75*, ವೆಂಕಟೇಶ್ 32

ಕಮಾಲ್ ಕ್ಯಾಚ್ (ಟಾಪ್ 5)



1. ಮನೀಶ್ ಪಾಂಡೆ
ಕೆಕೆಆರ್-ಆರ್‌ಸಿಬಿ ಪಂದ್ಯದ ವೇಳೆ ಟಿಮ್ ಡೇವಿಡ್ ಬಾರಿಸಿದ ವೇಗದ ಶಾಟ್‌ಗೆ ಪಾಯಿಂಟ್ ನಲ್ಲಿದ್ದ ಮನೀಷ್ ಪಾಂಡೆ ಎಡಭಾಗಕ್ಕೆ ಹಾರುತ್ತಾ ಒಂದು ಕೈಯಲ್ಲಿ ಕ್ಯಾಚ್ ಮಾಡಿದರು.

2. ಶ್ರೇಯಸ್ ಅಯ್ಯರ್
ಮುಂಬೈ ಪಂಜಾಬ್ ಪಂದ್ಯದ ವೇಳೆ ಶ್ರೇಯಸ್ ಅಯ್ಯರ್ ಹಾರ್ದಿಕ್ ಲಾಂಗ್‌ಆನ್‌ನತ್ತ ಬಾರಿಸಿದ ಬಾಲನ್ನು ಗಾಳಿಯಲ್ಲಿ ತೇಲಿ ಬಾರ್ಟಲೆಟ್ ಕೈಗಿತ್ತರು. ಅದು ಕೂಡ ಬೆಸ್ಟ್ ಕ್ಯಾಚ್ ಎನಿಸಿಕೊಂಡಿತು.

3. ಫಿಲ್ ಸಾಲ್ಟ್
ಮೊದಲ ಪಂದ್ಯದಲ್ಲೇ ಬೆಂಗಳೂರಲ್ಲಿ ಫಿಲ್ ಸಾಲ್ಟ್ ಕಮಾಲ್ ಮಾಡಿದರು. ಇಶಾನ್ ಕಿಶನ್ ಬಾರಿಸಿದ ಬಾಲನ್ನು ಒಂದೇ ಕೈಯಲ್ಲಿ ಹಿಡಿದು ಮೆರೆದಾಡಿದರು.

4. ರಿಷಭ್ ಪಂತ್
ರಿಷಭ್ ಪಂತ್ ವಿಕೆಟ್ ಹಿಂದೆ ಮಿಲಿಸೆಕೆಂಡ್ ಗಳಲ್ಲಿ ಪ್ರತಿಕ್ರಿಯಿಸಿ ಹಿಡಿದ ಕ್ಯಾಚ್ ಹೈಲೈಟ್ ಗಳಲ್ಲಿ ಸ್ಥಾನ ಪಡೆದಿತು. ಜೈಸ್ವಾಲ್ ಬ್ಯಾಟ್‌ಗೆ ತಾಗಿ ಬಂದ ಬಾಲನ್ನು ನೋಡುತ್ತಾ ಪಂತ್ ಎಲ್‌ಬಿಗೆ ಮನವಿ ಮಾಡಿದರು. ಆದಾಗ್ಯೂ ನಿಂತಲೇ ದಿಕ್ಕು ಬದಲಾಯಿಸಿ ಕ್ಯಾಚ್ ಹಿಡಿದರು.

5. ಸರ್ಫರಾಜ್ ಖಾನ್
ಚೆನ್ನೈ ತಂಡದ ಸರ್ಫರಾಜ್ ಖಾನ್ ದಿಲ್ಲಿಯ ಅಕ್ಷರ್ ಪಟೇಲ್ ವಿರುದ್ಧ ನೆಲಕ್ಕೆ ತಾಕುವ ಮುನ್ನ ಹಿಡಿದ ಕ್ಯಾಚ್ ಅಭಿಮಾನಿಗಳನ್ನು ಅಚ್ಚರಿಗೊಳಿಸಿತು.

ಐಪಿಎಲ್ ವಿಜೇತರ ಪಟ್ಟಿ

ವರ್ಷ	ತಂಡ	ನಾಯಕ
2008	ರಾಜಸ್ಥಾನ ರಾಯಲ್ಸ್	ಶೇನ್ ವಾರ್ನ್
2009	ಡೆಕ್ಕನ್ ಚಾರ್ಜರ್ಸ್	ಆಡಮ್ ಗಿಲ್‌ಕ್ರಿಸ್ಟ್
2010	ಚೆನ್ನೈ ಸೂಪರ್ ಕಿಂಗ್ಸ್	ಎಂ.ಎಸ್. ಧೋನಿ
2011	ಚೆನ್ನೈ ಸೂಪರ್ ಕಿಂಗ್ಸ್	ಎಂ.ಎಸ್. ಧೋನಿ
2012	ಕೋಲ್ಕತ್ತಾ ನೈಟ್ ರೈಡರ್ಸ್	ಗೌತಂ ಗಂಭೀರ್
2013	ಮುಂಬೈ ಇಂಡಿಯನ್ಸ್	ರೋಹಿತ್ ಶರ್ಮ
2014	ಕೋಲ್ಕತ್ತಾ ನೈಟ್ ರೈಡರ್ಸ್	ಗೌತಂ ಗಂಭೀರ್
2015	ಮುಂಬೈ ಇಂಡಿಯನ್ಸ್	ರೋಹಿತ್ ಶರ್ಮ
2016	ಸನ್‌ರೈಸರ್ಸ್ ಹೈದ್ರಾಬಾದ್	ಡೇವಿಡ್ ವಾರ್ನರ್
2017	ಮುಂಬೈ ಇಂಡಿಯನ್ಸ್	ರೋಹಿತ್ ಶರ್ಮ
2018	ಚೆನ್ನೈ ಸೂಪರ್ ಕಿಂಗ್ಸ್	ಎಂ.ಎಸ್. ಧೋನಿ
2019	ಮುಂಬೈ ಇಂಡಿಯನ್ಸ್	ರೋಹಿತ್ ಶರ್ಮ
2020	ಮುಂಬೈ ಇಂಡಿಯನ್ಸ್	ರೋಹಿತ್ ಶರ್ಮ
2021	ಚೆನ್ನೈ ಸೂಪರ್ ಕಿಂಗ್ಸ್	ಎಂ.ಎಸ್. ಧೋನಿ
2022	ಗುಜರಾತ್ ಟೈಟಾನ್ಸ್	ಹಾರ್ದಿಕ್ ಪಾಂಡ್ಯ
2023	ಚೆನ್ನೈ ಸೂಪರ್ ಕಿಂಗ್ಸ್	ಎಂ.ಎಸ್. ಧೋನಿ
2024	ಕೋಲ್ಕತ್ತಾ ನೈಟ್ ರೈಡರ್ಸ್	ಶ್ರೇಯಸ್ ಅಯ್ಯರ್
2025	ಬೆಂಗಳೂರು	ರಜತ್ ಪಾಟಿದಾರ್
2026	ಬೆಂಗಳೂರು	ರಜತ್ ಪಾಟಿದಾರ್

ದಾಖಲೆಯ ನೋಟ

1.ವೈಭವ್ (ಆರ್‌ಆರ್)
- ಗೇಲ್ 58 ಸಿಕ್ಸರ್ ದಾಖಲೆ ಉಡೀಸ್
- ಅನ್‌ಕ್ಯಾಪ್ಡ್ ಆಟಗಾರರಾಗಿ 700 ರನ್ ದಾಟಿದ ಮೊದಲ ಕ್ರಿಕೆಟಿಗ

2. ವಿರಾಟ್ (ಆರ್‌ಸಿಬಿ)
- ಐಪಿಎಲ್‌ನಲ್ಲಿ 9 ಸಾವಿರ ರನ್ ಪೂರೈಸಿದ ವಿಶ್ವದ ಮೊದಲ ಆಟಗಾರ
- ಟಿ20ಯಲ್ಲಿ 12 ಸಾವಿರ ರನ್ ಪೂರೈಸಿದ ಆಟಗಾರ

3. ರಾಹುಲ್ (ದಿಲ್ಲಿ)
- 152* ರನ್ ಬಾರಿಸಿದ ರಾಹುಲ್ ಐಪಿಎಲ್‌ನಲ್ಲಿ ಭಾರತೀಯರ ಅತಿ ಹೆಚ್ಚು ವೈಯಕ್ತಿಕ ಸ್ಕೋರ್.

4. ಉರ್ವಿಲ್ (ಚೆನ್ನೈ)
- 13 ಬಾಲ್‌ಗಳಲ್ಲಿ ಅರ್ಧಶತಕ ಬಾರಿಸಿದ ಉರ್ವಿಲ್ ಐಪಿಎಲ್‌ನ ಅತಿ ವೇಗದ ಅರ್ಧ ಶತಕ ಬಾರಿಸಿದ ಜೈಸ್ವಾಲ್ ದಾಖಲೆ ಸರಿಗಟ್ಟಿದರು.

5. ಪಂಜಾಬ್ ಕಿಂಗ್ಸ್
- ದಿಲ್ಲಿ ವಿರುದ್ಧ 264 ರನ್ ಚೇಸ್ ಮಾಡಿದ ಪಂಜಾಬ್ ಐಪಿಎಲ್‌ನ ಅತಿ ಹೆಚ್ಚು ರನ್ ಗುರಿ ಮುಟ್ಟಿದೆ.

19ನೇ ಆವೃತ್ತಿ 19 ವಿಶೇಷ

1. ಪ್ರತಿ 11.6 ಎಸೆತಕ್ಕೊಮ್ಮೆ 1 ಸಿಕ್ಸರ್ ದಾಖಲಾಗಿದೆ.
2. ಪ್ಲೇಆಫ್‌ಗಳ ಮುನ್ನವೇ 1290ಕ್ಕೂ ಹೆಚ್ಚು ಸಿಕ್ಸರ್ ಗಳು ಸಿಡಿದವು.
3. ಇತಿಹಾಸದಲ್ಲಿ ಮೊದಲ ಬಾರಿಗೆ ಎಲ್ಲಾ 10 ಫ್ರಾಂಚೈಸಿಗಳ ಪರವೂ ಕನಿಷ್ಠ ಒಬ್ಬ ಬ್ಯಾಟರ್ ಶತಕ ಬಾರಿಸಿದರು.
4. ಒಟ್ಟು 61 ಬಾರಿ 200+ ಸ್ಕೋರ್ ದಾಖಲಾಗಿದೆ.
5. 220+ ಗುರಿಯನ್ನು 9 ಬಾರಿ ಯಶಸ್ವಿಯಾಗಿ ಬೆನ್ನಟ್ಟಲಾಗಿದೆ.
6. ಹಿಂದಿನ 18 ಸೀಸನ್‌ಗಳಲ್ಲಿ ಒಟ್ಟು 5 ಬಾರಿ ಮಾತ್ರ 220+ ಚೇಸ್ ಆಗಿತ್ತು!
7. ಒಟ್ಟು 26,700ಕ್ಕೂ ಹೆಚ್ಚು ರನ್‌ಗಳು ದಾಖಲಾಗಿವೆ.
8. ಟೂರ್ನಿಯ ಸರಾಸರಿ ರನ್‌ರೇಟ್ ಸುಮಾರು 10 ರನ್ ಪ್ರತಿ ಓವರ್.
9. ಕೆ.ಎಲ್. ರಾಹುಲ್ 67 ಎಸೆತಗಳಲ್ಲಿ 152 ರನ್ ಸಿಡಿಸಿ ಐಪಿಎಲ್‌ನಲ್ಲಿ ಭಾರತೀಯ ಬ್ಯಾಟರ್ ಗಳಿಸಿದ ಗರಿಷ್ಠ ವೈಯಕ್ತಿಕ ಸ್ಕೋರ್ ದಾಖಲಿಸಿದರು.
10. ವೈಭವ್ ಸೂರ್ಯವಂಶಿ ಪವರ್‌ಪ್ಲೇ ಓವರ್ ಗಳಲ್ಲೇ 37 ಸಿಕ್ಸರ್‌ಗಳು ಬಾರಿಸಿ ಮತ್ತೊಂದು ಸರ್ವಕಾಲಿಕ ದಾಖಲೆ ನಿರ್ಮಿಸಿದರು.
11. ಮೊದಲ ಬಾರಿಗೆ ಭಾರತೀಯ ಬ್ಯಾಟರ್‌ಗಳ ಒಟ್ಟಾರೆ ಸ್ಟ್ರೈಕ್‌ರೇಟ್ (156+) ವಿದೇಶಿ ಆಟಗಾರರ ಸ್ಟ್ರೈಕ್‌ರೇಟ್‌ಗಿಂತ (155) ಹೆಚ್ಚು ದಾಖಲಾಗಿದೆ
12. ಮೊದಲ 3 ಓವರ್‌ಗಳ ಒಟ್ಟಾರೆ ರನ್‌ರೇಟ್ 9.52: ಇತಿಹಾಸದಲ್ಲೇ ಗರಿಷ್ಠ
13. ಗೆಲ್ಲಲು ತಂಡಕ್ಕೆ ಬೇಕಾದದ್ದು ಸರಾಸರಿ 217+ ರನ್, ಇತಿಹಾಸದಲ್ಲೇ ಗರಿಷ್ಠ
14. ಕೈಚೆಲ್ಲಿದ 169 ಕ್ಯಾಚ್‌ಗಳು
15. ಟೂರ್ನಿಯ ಒಟ್ಟು ರನ್‌ಗಳಲ್ಲಿ 65.2% ರನ್‌ಗಳು ಬೌಂಡರಿಗಳಿಂದಲೇ ಬಂದಿವೆ.
16. ಗುಜರಾತ್ ತಂಡದ ಸಾಯಿ ಸುದರ್ಶನ್ ಇತಿಹಾಸದಲ್ಲೇ ಮೊದಲ ಬಾರಿಗೆ ಸಂಭವಿಸಿದ ಅಪರೂಪದ ರೀತಿಯ ಔಟ್‌ಗೆ ಬಲಿಯಾಗಿದ್ದಾರೆ.
17. ಟಾಪ್ ಬ್ಯಾಟರ್‌ಗಳ ಟಾಪ್ 3ರಲ್ಲಿ ಮೂವರೂ ಆರಂಭಿಕರೇ ಹೌದು.
18. ಟಾಪ್ 5 ಬೌಲರ್‌ಗಳಲ್ಲಿ ಸ್ಪಿನ್ನರ್‌ಗಳೇ ಇಲ್ಲ
19. ಕೆಕೆಆರ್-ಎಲ್ಎಸ್‌ಜಿ: ಒಂದೇ ಸೂಪರ್ ಓವರ್

ಸತತ ಎರಡನೇ ಟ್ರೋಫಿ

ಈ ಗೆಲುವಿನೊಂದಿಗೆ ರಾಯಲ್ ಚಾಲೆಂಜರ್ಸ್ ಬೆಂಗಳೂರು ಸತತ ಎರಡು ಟ್ರೋಫಿ ಗೆದ್ದ ಮೂರನೇ ತಂಡ ಅನಿಸಿಕೊಂಡಿದೆ. ಈ ಹಿಂದೆ ಈ ಸಾಧನೆಯನ್ನು ಚೆನ್ನೈ 2010-2011ರಲ್ಲಿ ಮಾಡಿತ್ತು. 2019-2020ರಲ್ಲಿ ಮುಂಬೈ ಇಂಡಿಯನ್ಸ್ ತಂಡ ಮಾಡಿತ್ತು.



ಎರಡನೇ ಟ್ರೋಫಿ ಗೆಲ್ಲಿಸಿದ 4ನೇ ನಾಯಕ ರಜತ್ ಪಾಟಿದಾರ್

ಐಪಿಎಲ್ ಇತಿಹಾಸದಲ್ಲಿ 2 ಟ್ರೋಫಿ ಗೆಲ್ಲಿಸಿದ 4ನೇ ನಾಯಕ ಎಂಬ ಪಟ್ಟವನ್ನು ರಜತ್ ಪಾಟಿದಾರ್ ಅಲಂಕರಿಸಿದರು. ಇದಕ್ಕೂ ಮುನ್ನ ಈ ದಾಖಲೆಯನ್ನು ಮಹೇಂದ್ರ ಸಿಂಗ್ ಧೋನಿ, ರೋಹಿತ್ ಶರ್ಮ ಮತ್ತು ಗೌತಂ ಗಂಭೀರ್ ಮಾಡಿದ್ದಾರೆ. ಈ ಪಟ್ಟಿಗೆ ಸೇರಿರುವ ರಜತ್ ಪಾಟಿದಾರ್ ಸತತ ಟ್ರೋಫಿ ಗೆಲ್ಲಿಸಿದ 3ನೇ ನಾಯಕ ಎಂಬ ಹೆಗ್ಗಳಿಕೆಗೂ ಪಾತ್ರರಾಗಿದ್ದಾರೆ.

ಬ್ಯಾಟಿಗರ ಭರಾಟೆ

ಎಂದಿನಂತೆ ಈ ಬಾರಿಯೂ ಐಪಿಎಲ್‌ನಲ್ಲಿ ಬ್ಯಾಟಿಗರದ್ದೇ ಭರಾಟೆ ನಡೆಯಿತು. ವೈಭವ್ ಸೂರ್ಯವಂಶಿ, ಶುಭಮನ್ ಗಿಲ್, ಸಾಯಿ ಸುದರ್ಶನ್ ವಿರಾಟ್ ಕೊಹ್ಲಿ ಸೇರಿದಂತೆ ವಿವಿಧ ಬ್ಯಾಟಿಗರು ರನ್ ಹೊಳೆ ಹರಿಸಿದ್ದಾರೆ. ಹತ್ತಾರು ದಾಖಲೆಗಳನ್ನು ಬರೆದಿದ್ದಾರೆ. ಹಾಗಿದ್ದರೆ ಟಾಪ್ 3 ಬ್ಯಾಟರ್‌ಗಳ್ಯಾರು ಮತ್ತು ಅವರ ಆಟವೇನು?

ವೈಭವ್ ಸೂರ್ಯವಂಶಿ



ಇನ್ನಿಂಗ್ಸ್: 16
ರನ್: 776
ಹೈಸ್ಕೋರ್: 103
ಶತಕ: 1
ಅರ್ಧಶತಕ: 5
ಸ್ಟ್ರೈಕ್‌ರೇಟ್: 237.30

ಈ ಬಾರಿಯ ಐಪಿಎಲ್‌ನಲ್ಲಿ ಸೂರ್ಯವಂಶಿಯದ್ದೇ ಹವಾ. ಲಕ್ಷಾಂತರ ಅಭಿಮಾನಿಗಳನ್ನು ಮೈದಾನಕ್ಕೆ ಸೆಳೆದ ಸೂರ್ಯವಂಶಿ ಮೊದಲನೇ ಪಂದ್ಯದಿಂದಲೂ ಗಮನಾರ್ಹ ಪ್ರದರ್ಶನ ನೀಡಿದ್ದಾರೆ. ಪ್ಲೇಆಫ್‌ಗಳಲ್ಲಿ ಎರಡು ಶತಕ ವಂಚಿತ ಇನ್ನಿಂಗ್ಸ್ ಹೊರತಾಗ್ಯೂ 1 ಶತಕ ಬಾರಿಸಿರುವ ಅವರು, 48.50 ಅವರೇಜ್ ಹೊಂದಿದ್ದಾರೆ.

ಶುಭಮನ್ ಗಿಲ್



ಇನ್ನಿಂಗ್ಸ್: 16
ರನ್: 732
ಹೈಸ್ಕೋರ್: 104
ಶತಕ: 1
ಅರ್ಧಶತಕ: 6
ಸ್ಟ್ರೈಕ್‌ರೇಟ್: 163.2

ಗುಜರಾತ್ ತಂಡದ ನಾಯಕ ಶುಭಮನ್ ಗಿಲ್ ಈ ಬಾರಿ ತಮ್ಮ ಬ್ಯಾಟಿಂಗ್ ಶೈಲಿಯನ್ನೇ ಬದಲಾಯಿಸಿದರು. ವಿಶ್ವಕಪ್ ತಂಡದಲ್ಲಿ ಆಡದೆ ಹಿಂದುಳಿದಿದ್ದ ಅವರು, ಒಂದು ಶತಕವನ್ನೂ ಬಾರಿಸಿದ್ದಾರೆ. 48.13 ಅವರೇಜ್‌ನಲ್ಲಿ ನಾಯಕನಾಟವಾಡಿದ್ದಾರೆ. ಇದಲ್ಲದೆ ವಿವಿಧ ಪಂದ್ಯಗಳಲ್ಲಿ ಪಂದ್ಯಶ್ರೇಷ್ಠವನ್ನೂ ಗೆದ್ದಿದ್ದಾರೆ.

ಸಾಯಿ ಸುದರ್ಶನ್



ಇನ್ನಿಂಗ್ಸ್: 17
ರನ್: 722
ಹೈಸ್ಕೋರ್: 100
ಶತಕ: 1
ಅರ್ಧಶತಕ: 8
ಸ್ಟ್ರೈಕ್‌ರೇಟ್: 157.98

ಎಡಗೈ ದಾಂಡಿಗರಾದ ಸಾಯಿ ಸುದರ್ಶನ್ ಕಳೆದ ಮೂರು ಆವೃತ್ತಿಗಳಲ್ಲಿ ಗಮನಾರ್ಹ ಪ್ರದರ್ಶನ ನೀಡುತ್ತಿದ್ದಾರೆ. ಗುಜರಾತ್ ತಂಡದ ಪ್ರಮುಖ ಬ್ಯಾಟರ್, ಬೌಲರ್‌ಗಳಿಗೆ ದುಸ್ವಪ್ನವಾಗಿ ಕಾಡುತ್ತಾ ಬಂದಿದ್ದಾರೆ. ಈ ಬಾರಿಯೂ 700ರ ಗಡಿ ದಾಟಿರುವ ಅವರು, 47.33 ಅವರೇಜ್ ಹೊಂದಿದ್ದಾರೆ.

ಬೌಲರ್‌ಗಳ ಅಟ್ಟಹಾಸ

ಬ್ಯಾಟಿಗರನ್ನು ಕಡಿವಾಣ ಹಾಕುವುದರಲ್ಲಿ ಬೌಲರ್‌ಗಳು ಕೂಡ ಅಷ್ಟೇ ಮೇಲುಗೈ ಸಾಧಿಸಿದ್ದಾರೆ. ಸ್ಪಿನ್ನರ್‌ಗಳು ಕಡಿಮೆ ಸಾಹಸ ಮಾಡಿದ್ದರೂ ಭುವನೇಶ್ವರ್ ಕುಮಾರ್ ಅಂಥ ಅಪ್ರತಿಮ ವೇಗಿಗಳು ಈ ಬಾರಿಯ ಲೀಗ್‌ನಲ್ಲಿ ಭರ್ಜರಿ ಪ್ರದರ್ಶನ ನೀಡಿದ್ದಾರೆ. ಹಾಗಿದ್ದರೆ ಯಾರು ಟಾಪ್ 3 ಬೌಲರ್ಸ್?

ಕಾಗಿಸೋ ರಬಾಡ



ಇನ್ನಿಂಗ್ಸ್: 17
ಓವರ್ಸ್: 64.4
ವಿಕೆಟ್: 29
ಅತ್ಯುತ್ತಮ: 25/3
ಎಕನಾಮಿ: 9.43

ವಿಶ್ವಕಪ್ ಪಂದ್ಯಾವಳಿಯಲ್ಲಿ ಭಾರೀ ಹಿನ್ನಡೆ ಅನುಭವಿಸಿದ್ದ ಕಾಗಿಸೋ ರಬಾಡ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯಲ್ಲಿ ಮಿಂಚಿದರು. ವೇಗದ ಬೌಲಿಂಗ್ ಜತೆಗೆ ವೇರಿಯೇಶನ್‌ಗಳನ್ನು ತಂದ ಅವರು, ಗೆಲುವಿನಲ್ಲಿ ಮಿಂಚಿದ್ದಾರೆ. ಗಮನಾರ್ಹ ಪ್ರದರ್ಶನ ನೀಡಿದ್ದಾರೆ.

ಭುವನೇಶ್ವರ್ ಕುಮಾರ್



ಇನ್ನಿಂಗ್ಸ್: 16
ಓವರ್ಸ್: 60
ವಿಕೆಟ್: 28
ಅತ್ಯುತ್ತಮ: 17/3
ಎಕನಾಮಿ: 9.31

ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಗೆಲುವಿನ ಗುಟ್ಟಾಗಿರುವ ಭುವನೇಶ್ವರ್ ಕುಮಾರ್ ಇಡೀ ಐಪಿಎಲ್ ನಲ್ಲೇ ಬೆಸ್ಟ್ ಬೌಲರ್ ಅನಿಸಿಕೊಂಡಿದ್ದಾರೆ. ದೊಡ್ಡ ದೊಡ್ಡ ಬ್ಯಾಟಿಗರಿಗೆ ದುಸ್ವಪ್ನವಾಗಿ ಕಾಡಿರುವ ಭುವಿ ಸ್ವಿಂಗ್ ಮೂಲಕವೇ ಮೈದಾನದಲ್ಲಿ ಮತ್ತೊಮ್ಮೆ ಮೆರೆದಾಡಿದ್ದಾರೆ.

ಜೋಫ್ರಾ ಆರ್ಚರ್



ಇನ್ನಿಂಗ್ಸ್: 16
ಓವರ್ಸ್: 61.4
ವಿಕೆಟ್: 28
ಅತ್ಯುತ್ತಮ: 25/3
ಎಕನಾಮಿ: 9.43

ರಾಜಸ್ಥಾನದ ಉತ್ತಮ ಅಭಿಯಾನದ ಪ್ರಮುಖ ಕಾರಣ ಎನಿಸಿರುವ ಜೋಫ್ರಾ ಆರ್ಚರ್ ಟಾಪ್ ಬೌಲರ್‌ಗಳಲ್ಲಿ ಒಬ್ಬರು. ಪ್ರತಿ ಪಂದ್ಯದಲ್ಲೂ ಅವರ ಅತ್ಯುತ್ತಮ ವೇಗದ ದಾಳಿಯೊಂದಿಗೆ ಸ್ವಿಂಗ್ ಮತ್ತು ವೇರಿಯೇಶನ್‌ಗಳೊಂದಿಗೆ ಮಿಂಚಿದ್ದಾರೆ. ಪ್ಲೇಆಫ್ ಹಂತದಲ್ಲೂ ಅವರು ಅತ್ಯುತ್ತಮ ಪ್ರದರ್ಶನವನ್ನೇ ನೀಡಿದ್ದಾರೆ.

ವೈಭವ್ ವಿಸ್ಮಯ

ವಿಶ್ವದ ಕ್ರಿಕೆಟ್ ಅಭಿಮಾನಿಗಳಿಗೆ ಈ ಬಾರಿ ಮನರಂಜಿಸಿ ರೋಮಾಂಚನಗೊಳಿಸಿದವರೆಂದರೆ ವೈಭವ್ ಸೂರ್ಯವಂಶಿ. 14 ವರ್ಷದವರಿದ್ದಾಗಲೇ ಐಪಿಎಲ್ ಮಹಾ ಕೂಟಕ್ಕೆ ಕಾಲಿಟ್ಟ ಅವರು, ಬಂದ ದಿನದಂದೆ ಐಪಿಎಲ್ ಆಡಿದ ಅತಿ ಕಿರಿಯ ಆಟಗಾರ ಎಂಬ ದಾಖಲೆ ಮಾಡಿದರು, ಮುಂದೆ ಮುಟ್ಟಿದ್ದೆಲ್ಲಾ ಚಿನ್ನ. 15 ವರ್ಷದವರಾಗಿರುವ ವೈಭವ್ ಸೂರ್ಯವಂಶಿ ಈ ವರ್ಷವೂ ತಮ್ಮ ವಯಸ್ಸಿಗೂ ಮಿಗಿಲಾದ ಆಟವಾಡಿದರು. ಅವರ ಇನ್ನಿಂಗ್ಸ್ ಗಳಲ್ಲಿ ಕೇವಲ ರನ್‌ಗಳಿರಲಿಲ್ಲ, ಸಮಸ್ತ ಭಾರತೀಯರ ಆಸೆ, ಹೆಮ್ಮೆಯಿತ್ತು. ವಿಶ್ವದ ಟಾಪ್ ಸ್ಟಾರ್‌ಗಳಾಡುವ ಈ ಕೂಟದಲ್ಲಿ 15 ವರ್ಷದ ಬಾಲಕ ರಾಜಸ್ಥಾನ ತಂಡವನ್ನು ಸೆಮಿಫೈನಲ್‌ಗೆ ತರುತ್ತಾರೆಂದರೆ ಅದು ವಿಸ್ಮಯ ಅಲ್ಲದೆ ಮತ್ತೇನು? ಪಂದ್ಯಾವಳಿಯುದ್ದಕ್ಕೂ ರನ್ ಮಳೆ, ಪಂದ್ಯಗಳುದ್ದಕ್ಕೂ ಸಿಕ್ಸರ್‌ಗಳ ಸುರಿಮಳೆಗೈದಿರುವ ವೈಭವ್ ಈ ಬಾರಿಯ ಪ್ರಮುಖ ಆಕರ್ಷಣೆಯಾದರು.



237.30
ಸ್ಟ್ರೈಕ್‌ರೇಟ್

776 ರನ್!

ಐಪಿಎಲ್ ಮಹಾ ಇತಿಹಾಸದಲ್ಲಿ ಯಾವುದೇ ಆಟಗಾರ ಕಿರಿಯ ವಯಸ್ಸಿನಲ್ಲಿ ಮಾಡಲಾಗದ ದಾಖಲೆ ಮಾಡಿದ ವೈಭವ್ ಕೂಟದಲ್ಲಿ ಒಟ್ಟು 776 ರನ್ ಗಳಿಸಿದ್ದಾರೆ. ಇದು ಯಾವುದೇ ಅನ್‌ಕ್ಯಾಪ್ಡ್ ಆಟಗಾರನೂ ಮಾಡದ ಸಾಧನೆ. ಇದರಲ್ಲಿ ಶತಕ, 5 ಅರ್ಧಶತಕಗಳು ಸೇರಿವೆ. ಪ್ಲೇಆಫ್‌ನಲ್ಲಿ ಆಡಿದ ಎರಡು ಪಂದ್ಯಗಳಲ್ಲಿ ವೈಭವ್ ಒಂದು ಸಲ 97, ಇನ್ನೊಂದು ಸಲ 96 ರನ್ ಗಳಿಸಿದ್ದರು.

ಅಭಿಮಾನಿಗಳನ್ನು ಮೈದಾನಕ್ಕೆ ತಂದ ಪ್ಲೇಯರ್

ಈ ಬಾರಿ ಬಹುತೇಕ ಅಭಿಮಾನಿಗಳು ವೈಭವ್ ಬ್ಯಾಟಿಂಗ್‌ನಿಂದಲೇ ಮೈದಾನಕ್ಕೆ ಬಂದರು. ಮನೆಯಲ್ಲಿದ್ದವರು ಟಿವಿಯಲ್ಲಿ ನೋಡಿದವರೂ ವೈಭವ್‌ಗಾಗಿಯೇ ನೋಡಿದವರಿದ್ದಾರೆ. ಹಿರಿಯ ಕ್ರಿಕೆಟ್ ಅಭಿಮಾನಿಗಳನ್ನು ಈ ಬಾರಿ ಐಪಿಎಲ್ ನೋಡುವಂತೆ ಮಾಡಿರುವುದರಲ್ಲಿ ವೈಭವ್ ಪಾತ್ರ ದೊಡ್ಡದಿದೆ ಎಂಬ ಮಾತುಗಳು ಕೇಳಿಬರುತ್ತಿವೆ.

ಒಂದೇ ಆವೃತ್ತಿಯಲ್ಲಿ 72 ಸಿಕ್ಸರ್

ವೈಭವ್ ಸೂರ್ಯವಂಶಿ ಮಾಡಿದ ಅದ್ಭುತ ದಾಖಲೆಯೆಂದರೆ ಅದು 72 ಸಿಕ್ಸರ್ ಬಾರಿಸಿದ ಮಹಾ ಸಾಧನೆ. ವಿಶ್ವ ಕ್ರಿಕೆಟ್ ಇತಿಹಾಸದಲ್ಲಿ ಒಂದೇ ಕೂಟದಲ್ಲಿ ಇಷ್ಟೊಂದು ಸಿಕ್ಸರ್ ಯಾರೊಬ್ಬರೂ ಗಳಿಸಿಲ್ಲ. ಕ್ರಿಸ್ ಗೇಲ್ 58 ಸಿಕ್ಸರ್ ಬಾರಿಸಿ ಅತಿ ಹೆಚ್ಚು ಸಿಕ್ಸರ್ ಬಾರಿಸಿದ ಆಟಗಾರ ಎಂಬ ದಾಖಲೆ ಮಾಡಿದ್ದರು. ಇದೆಲ್ಲವನ್ನೂ ಮುರಿದು ಹಾಕಿದ ವೈಭವ್ ಇತಿಹಾಸದ ಪುಟಗಳಲ್ಲಿ ಸೇರಿದರು.

ಪದಬಂಧ 6001

» ರಾಜಾ ಸಂಗಮೇಶ ಹಿರೇಮಠ



ಎಡದಿಂದ ಬಲಕ್ಕೆ
2.ತನಗೆ ತಾನೆ ವಂಚನೆ ಮಾಡಿಕೊಳ್ಳುವುದು (4)
4.ರೋಗದಿಂದ ಬೆಳೆಯುವ ಗಂಟು (2)
5.ಹಂತ-ಹಂತವಾಗಿ ಹೀಗೆ ತಿರುಗಿ ನಡೆದಿದೆ (3)
6.ಗಲಭೆ ಸಂದರ್ಭ ಪೊಲೀಸರು ನಡೆಸಿದ ಗುಂಡು ಹಾರಾಟ (4)
8.ನಡತೆಗೆಡು ಎಂಬರ್ಥದ ನುಡಿಗಟ್ಟು (4)
10.ಅತ್ತು ಇದರ ನಡುವೆ ನ್ಯಾಯಸ್ಥಾನವಿದೆ (4)
12.ಹಣ್ಣುಗಳ ಮಿಶ್ರಣವೂ ಹೌದು-ವಿಜ್ಞಾನದ ಒಂದು ಶಾಸ್ತ್ರವೂ ಹೌದು (4)
14.ಹೊರನೋಟದ ಅಬ್ಬರ-ಆಡಂಬರ (3)
16. ಕಾಣೆಯಾಗದ ಕೊಠಡಿ (2)
17.ರಾತ್ರಿ, ಕರು ತರಲು ಒಡ್ಡಿದ ಆಕ್ಷೇಪಣೆ (4)

ಮೇಲಿನಿಂದ ಕೆಳಕ್ಕೆ
1.ಎಮ್ಮೆ ಜಾತಿಯ ಗಂಡುಜೀವಿ (2)
2.ಬಲವಂತದಿಂದ ವಶಪಡಿಸಿಕೊಂಡದ್ದು (4)
3.ಹರುಷದಿಂದ ಎದ್ದು ಈ ದೋಣಿಯನ್ನು (4)
4.ಕ್ರಯಕ್ಕೆ ತೆಗೆದುಕೊಳ್ಳುವಿಕೆ ತಲೆಕೆಳಗಾಗಿದೆ (3)
7.ಅಕ್ರಮ ಪಾವತಿ-ಲಂಚವಿದು (4)
8.ದಾರದ ನಡುವೆ ಬೆಂಕಿಯಲ್ಲಿ ಸುಟ್ಟು ಶುದ್ಧವಾದದ್ದಿದೆ (4)
9.ಮತದಾನ ಮೂಲಕ ಮಂದಿಯ ಅಭಿಪ್ರಾಯ (4)
11.ಮಾರ್ಗದರ್ಶನ ಮಾಡು-ಉಪಾಯ ತಿಳಿಸು (4)
13.ಹಳ್ಳಿಗಳಲ್ಲಿ ನೆಲಕ್ಕೆ ನೀರು-ಸೆಗಣಿಯ ಲೇಪನಕ್ರಿಯೆ (3)
15.ಹಾಳಾಗು-ಹದಗೆಡುವಿಕೆ (2)

6000 ಉತ್ತರ

ಎಡದಿಂದ ಬಲಕ್ಕೆ:
2.ವಿದ್ಯಮಾನ 4.ಭಾಗ್ಯ
5.ಸಹಾರಾ 6.ಭರವಸೆ
6.ಮಂಗಡನ 10.ಶಿರಸ್ತ್ರಾಣ
12.ರಿಯಾಯಿತಿ 14.ಹರಟೆ
16.ರಾಸು 17.ಸಮರಸ

ಮೇಲಿನಿಂದ ಕೆಳಕ್ಕೆ :
1.ದಾಸ 2.ವಿರಾಜಿತ
3.ನರಭಯ 4.ಭಾರ್ಗವ
7.ಸೆಳೆಗುಣ 8.ಮಂಡೋದರಿ
9.ಇತಿಹಾಸ 11.ಸಹಕಾರ
13.ಯಾಚಿಸು 15.ಕೋಟೆ

ಕಿರುಸುದ್ದಿ

ನಾಯಕ ಸಮಾಜಕ್ಕೆ 3 ಸಚಿವ ಸ್ಥಾನ ನೀಡಲು ಆಗ್ರಹ

• **ಹರಪನಹಳ್ಳಿ:** ಸತೀಶ ಜಾರಕಿಹೊಳಿ ಸೇರಿದಂತೆ ವಾಲ್ಮೀಕಿ ನಾಯಕ ಸಮಾಜಕ್ಕೆ 3 ಸಚಿವ ಸ್ಥಾನ ನೀಡಬೇಕು ಎಂದು ವಾಲ್ಮೀಕಿ ನಾಯಕ ಸಮಾಜ ಆಗ್ರಹಿಸಿದೆ. ಸತೀಶ ಜಾರಕಿಹೊಳಿ 2006 ರಲ್ಲಿ ಹುಬ್ಬಳ್ಳಿಯಲ್ಲಿ ಅಹಿಂದ ಸಮಾವೇಶ ಆಯೋಜನೆಯಲ್ಲಿ ಮುಖ್ಯಪಾತ್ರ ವಹಿಸುವ ಮೂಲಕ ಸಿದ್ದರಾಮಯ್ಯ ಮತ್ತು ಕಾಂಗ್ರೆಸ್ ಪಕ್ಷದ ಬಲ ಹೆಚ್ಚಲು ಸಾಕಷ್ಟು ಕೊಡುಗೆಗಳನ್ನು ನೀಡಿದ್ದಾರೆ. ಅವರಿಗೆ ಉಸ್ತುವಾರಿ ನೀಡಿದ ಎಲ್ಲ ಕ್ಷೇತ್ರಗಳು ಮತ್ತು ರಾಜ್ಯದ ವಿವಿಧ ಉಪಚುನಾವಣೆಗಳಲ್ಲಿ ಪಕ್ಷ ಜಯಭೇರಿ ಬಾರಿಸಲು ಶ್ರಮಿಸಿದ್ದಾರೆ. 2020ರಲ್ಲಿ ಪಕ್ಷವು ಸಂಕಷ್ಟದಲ್ಲಿದ್ದಾಗ, ಕೇಂದ್ರ ರೈಲ್ವೆ ಸಚಿವ ಸುರೇಶ್ ಅಂಗಡಿ ಅವರ ನಿಧನದಿಂದ ತೆರವಾಗಿದ್ದ ಬೆಳಗಾವಿ ಲೋಕಸಭಾ ಕ್ಷೇತ್ರದಲ್ಲಿ ಪಕ್ಷದ ಸಂಘಟನೆಯನ್ನು ಸ್ಥಿರಗೊಳಿಸಿ ಪ್ರಬಲ ಪೈಪೋಟಿ ನೀಡಿದ್ದಾರೆ ಎಂದು ಸಮಾಜದ ಹಾಲೇಶ, ಕೆ.ಉಚ್ಚೆಂಗೆಪ್ಪ, ಕೋಡಿಹಳ್ಳಿ ಭೀಮಪ್ಪ, ಲಕ್ಕಳ್ಳಿ ಹನುಮಂತಪ್ಪ, ಯಡಿಹಳ್ಳಿ ಶೇಖರಪ್ಪ, ವೈ.ಬಸಪ್ಪ, ಕೆ.ಆನಂದ, ಮುತ್ತಿಗಿ ಜಂಬಣ್ಣ, ಯರಬಳ್ಳಿ ಉಮಾಪತಿ, ಹಲಗೇರಿ ಮಂಜಪ್ಪ ತಿಳಿಸಿದ್ದಾರೆ.

ನೌಕರರಿಗೆ ಸನ್ಮಾನ

• **ದಾವಣಗೆರೆ:** ನಗರದ ಗುರುಭವನದಲ್ಲಿ ದಾವಣಗೆರೆ ಜಿಲ್ಲಾ 3 ಮತ್ತು 4 ಚಕ್ರ ಗೂಡ್ಸ್ ವಾಹನ ಚಾಲಕರ ಮತ್ತು ಮಾಲೀಕರ ಸಂಘ, ಶ್ರೀಗಂಧ ಟ್ರಸ್ಟ್ ವತಿಯಿಂದ ಜಿಲ್ಲಾಸ್ಪತ್ರೆಯ ಡಿ ಗ್ರೂಪ್ ನೌಕರರಿಗೆ ಸನ್ಮಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮ ಉದ್ಘಾಟಿಸಿದ ಜಿಲ್ಲಾ ಯೋಗ ಒಕ್ಕೂಟದ ಅಧ್ಯಕ್ಷ ವಾಸುದೇವ ರಾಯ್ಕರ್ ಮಾತನಾಡಿ, ದೇಶದಲ್ಲಿ ಮಾತ್ರವಲ್ಲದೆ, ಜಗತ್ತಿನ ಯಾವುದೇ ಆಸ್ಪತ್ರೆಗಳಲ್ಲಿ ಕೆಲಸ ಮಾಡುವ ಡಿ ಗ್ರೂಪ್ ನೌಕರರೇ ಸಮಾಜದ ಆರೋಗ್ಯ ವ್ಯವಸ್ಥೆಯ ನಿಜವಾದ ಅದೃಶ್ಯ ದೇವತೆಗಳು. ಕನಿಷ್ಠ ವೇತನದಲ್ಲೂ ನಿಸ್ವಾರ್ಥ ಸೇವೆ ಸಲ್ಲಿಸುತ್ತಿದ್ದಾರೆ. ಸಾರ್ವಜನಿಕರು ಮತ್ತು ಆರೋಗ್ಯ ಇಲಾಖೆಯ ನಡುವಿನ ಸಂಪರ್ಕ ಸೇತುವೆಯಾಗಿ ಕೋವಿಡ್ ನಂತಹ ಕಠಿಣ ಸಮಯದಲ್ಲಿ ಮಾಡಿದ ಸೇವೆ ಅನನ್ಯವಾದದ್ದು ಎಂದು ಪ್ರಶಂಸಿಸಿದರು. ಸಂಘದ ಅಧ್ಯಕ್ಷ ವಳನಿಸ್ವಾಮಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಶಿಕ್ಷಕರಾದ ಎನ್.ಎಂ.ಕಬಿಸಪ್ಪ, ಎಂ.ಪಿ.ಶೋಭಾರಾಣಿ, ಹನುಮಂತ ನಾಯ್ಕ, ಕಬಿಸಪ್ಪ, ರಾಜೇಶ್ ಇತರರು ಕಾರ್ಯಕ್ರಮದಲ್ಲಿ ಹಾಜರಿದ್ದರು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

• **ಚಿತ್ರದುರ್ಗ:** ಹೊಸದುರ್ಗ ತಾಲೂಕು ವ್ಯಾಪ್ತಿಯಲ್ಲಿನ ಸಮಾಜ ಕಲ್ಯಾಣ ಇಲಾಖೆಯಡಿ ಬರುವ ಸರ್ಕಾರಿ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ಬಾಲಕ ಹಾಗೂ ಬಾಲಕಿಯರ ವಿದ್ಯಾರ್ಥಿ ನಿಲಯಗಳ 2026-27ನೇ ಸಾಲಿನ ಪ್ರವೇಶಾತಿ ಪ್ರಕ್ರಿಯೆ ಪ್ರಾರಂಭವಾಗಿದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಇತರ ಜನಾಂಗದ ಅರ್ಹ ವಿದ್ಯಾರ್ಥಿಗಳು ಪ್ರವೇಶಕ್ಕಾಗಿ ಸಮಾಜ ಕಲ್ಯಾಣ ಇಲಾಖೆಯ ಅಧಿಕೃತ ವೆಬ್‌ಸೈಟ್ https://www.sw.kar.nic.in ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಇದೇ ವೇಳೆ, 2026ನೇ ಸಾಲಿನಲ್ಲಿ ಪ್ರಥಮ ಪ್ರಯತ್ನದಲ್ಲೇ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾದ ಪರಿಶಿಷ್ಟ ಜಾತಿಯ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳಿಗೆ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ನೀಡಲಾಗುವ ಪ್ರತಿಭಾ ಪುರಸ್ಕಾರ ಪ್ರೋತ್ಸಾಹಧನಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಹೊಸದುರ್ಗದ ಸಮಾಜ ಕಲ್ಯಾಣ ಇಲಾಖೆ ಕಚೇರಿಗೆ ನೇರವಾಗಿ ಭೇಟಿ ನೀಡಬಹುದಾಗಿದೆ. ದೂರವಾಣಿ ಸಂಖ್ಯೆ 08199-230050 ಕರೆ ಮಾಡಬಹುದು ಎಂದು ಪ್ರಕಟಣೆ ತಿಳಿಸಿದೆ.

ಎನ್.ಶಾಂತಮ್ಮ ನಿಧನ

• **ದಾವಣಗೆರೆ:** ಎನ್.ಶಾಂತಮ್ಮ ನೀಲಕಂಠಪ್ಪ ಭಾನುವಾರ ರಾತ್ರಿ ನಿಧನರಾದರು. ಅವರಿಗೆ 70 ವರ್ಷ ವಯಸ್ಸಾಗಿತ್ತು.



ಇಲ್ಲಿನ ವಿನೋಬ ನಗರದ ಜೊಳ್ಳಿ ಕಾಂಪೌಂಡ್ ವಾಸಿಯಾಗಿದ್ದ ಮೃತರು ಶಾಂತಮ್ಮ ಪುತ್ರರಾದ ಪತ್ರಕರ್ತ ಎನ್.ನಿಂಗರಾಜು, ಮಂಜುನಾಥ, ಪುತ್ರಿ ಜ್ಯೋತಿ ಇವರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಜೂ.1ರಂದು ಸೋಮವಾರ ಮಧ್ಯಾಹ್ನ 3.30ಕ್ಕೆ ಗಾಂಧಿ ನಗರ ಸಮೀಪದ ಸಾರ್ವಜನಿಕ ರುದ್ರಭೂಮಿಯಲ್ಲಿ ನಡೆಯಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

---

14 ಜನರಲ್ಲಿ ಇಬ್ಬರು ಮಾತ್ರ ಪುರುಷ ಕೂಲಿ ಕಾರ್ಮಿಕರು | ಕಾಲುವೆಯ ಹೂಳು ತೆಗೆಯುತ್ತಿರುವ ಮಹಿಳಾ ಮಣಿಗಳು

ಉದ್ಯೋಗ ಖಾತ್ರಿ ಕೆಲಸದಲ್ಲಿ ಮಹಿಳೆಯರೇ ಮುಂದೆ

• **ಬಸವಾಪಟ್ಟಣ:** ಗ್ರಾಮೀಣ ಬಡ ಕುಟುಂಬಗಳಿಗೆ ಆರ್ಥಿಕ ಆಸರೆಯಾಗಿರುವ ಉದ್ಯೋಗ ಖಾತ್ರಿ ಯೋಜನೆ ಚಿರಡೋಣಿಯಲ್ಲಿ ಪರಿಣಾಮಕಾರಿಯಾಗಿ ಜಾರಿಯಾಗುತ್ತಿದ್ದು, ಸ್ಥಳೀಯ ಜಾಬ್ ಕಾರ್ಡ್ ಹೊಂದಿರುವ ಕಾರ್ಮಿಕರಿಗೆ ಉದ್ಯೋಗ ಕಲ್ಪಿಸುವ ಮೂಲಕ ಗ್ರಾಮ ಪಂಚಾಯಿತಿ ಗಮನ ಸೆಳೆದಿದೆ.

ಉದ್ಯೋಗಕ್ಕಾಗಿ ಗ್ರಾಮ ಪಂಚಾಯಿತಿಗೆ ಅರ್ಜಿ ಸಲ್ಲಿಸಿದ್ದ 30 ಮಂದಿ ಜಾಬ್ ಕಾರ್ಡ್ ಹೊಂದಿರುವ ಕಾರ್ಮಿಕರಿಗೆ ಉದ್ಯೋಗ ಖಾತ್ರಿ ಯೋಜನೆಯಡಿ ಒಂದು ವಾರದ ಎನ್‌ಎಂಆರ್ (ನಾಮಿನಲ್ ಮಸ್ಟರ್ ರೋಲ್) ತೆರೆದು ಕೆಲಸ ನೀಡಲಾಗಿದೆ. ಗ್ರಾಮದ ಹೊರವಲಯದ ಕಬ್ಬಳ ರಸ್ತೆಯಲ್ಲಿರುವ ಕಾಲುವೆಯ ಹೂಳು ತೆರವು ಹಾಗೂ ಗಿಡಗಂಟೆಗಳನ್ನು ಸ್ವಚ್ಛಗೊಳಿಸುವ ಕಾಮಗಾರಿಯನ್ನು ಕಾರ್ಮಿಕರಿಗೆ ವಹಿಸಲಾಗಿದೆ.

ಕಳೆದ ನಾಲ್ಕು ದಿನಗಳಿಂದ ಕಾಮಗಾರಿ ನಡೆಯುತ್ತಿದ್ದು, ಮೊದಲ ದಿನ 15 ಮಂದಿ, ಎರಡನೇ ದಿನ 14 ಮಂದಿ, ಮೂರನೇ ದಿನ 13 ಮಂದಿ ಹಾಗೂ ನಾಲ್ಕನೇ ದಿನ 14 ಮಂದಿ ಕೆಲಸಕ್ಕೆ ಹಾಜರಾಗಿದ್ದಾರೆ. ಹಾಜರಾಗಿರುವ ಕಾರ್ಮಿಕರಲ್ಲಿ ಬಹುತೇಕರು ಮಹಿಳೆಯರಾಗಿದ್ದು, ಕೇವಲ ಇಬ್ಬರು ಮಾತ್ರ ಪುರುಷ ಕಾರ್ಮಿಕರು ಎಂಬುದು ವಿಶೇಷ. ಮಹಿಳೆಯರ ಹೆಚ್ಚಿನ ಭಾಗವಹಿಸುವಿಕೆ ಗ್ರಾಮೀಣ ಮಹಿಳಾ ಸಬಲೀಕರಣಕ್ಕೆ ಸಾಕ್ಷಿಯಾಗಿದೆ.

ಒಂದು ದಿನದ ಕೂಲಿ 370 ರೂ. ನಿಗದಿಯಾಗಿದ್ದು, ಗ್ರಾಮದಲ್ಲಿಯೇ ಉದ್ಯೋಗ ದೊರೆಯುತ್ತಿರುವುದರಿಂದ ಕಾರ್ಮಿಕರು ಸಂತಸ ವ್ಯಕ್ತಪಡಿಸಿದ್ದಾರೆ. ಕುಟುಂಬ ನಿರ್ವಹಣೆಗೆ ನೆರವಾಗುವುದರ ಜೊತೆಗೆ ಸ್ಥಳೀಯ ಮಟ್ಟದಲ್ಲಿ ಉದ್ಯೋಗ ಸೃಷ್ಟಿಯಾಗುತ್ತಿರುವುದು ಯೋಜನೆಯ ಪ್ರಮುಖ ಸಾಧನೆಯಾಗಿದೆ.

ರೈತರಿಗೆ ನೆರವಾಗಲಿರುವ ಕಾಲುವೆ ಅಭಿವೃದ್ಧಿ: ಕಾಲುವೆಯಲ್ಲಿನ ಹೂಳು ಹಾಗೂ ಗಿಡಗಂಟೆಗಳನ್ನು ತೆರವುಗೊಳಿಸುವ ಕಾಮಗಾರಿಯಿಂದ ನೀರಿನ ಹರಿವು ಸುಗಮವಾಗಲಿದ್ದು, ರೈತರ ಜಮೀನುಗಳಿಗೆ ಅನುಕೂಲವಾಗಲಿದೆ. ಹಲವು ವರ್ಷಗಳಿಂದ ಹೂಳು ತುಂಬಿ ನೀರಿನ ಹರಿವಿಗೆ ಅಡ್ಡಿಯಾಗಿದ್ದ ಕಾಲುವೆ ಇದೀಗ ಪುನಶ್ಚೇತನಗೊಳ್ಳುತ್ತಿದ್ದು, ಕೃಷಿ ಚಟುವಟಿಕೆಗಳಿಗೆ ಹೊಸ ಚೈತನ್ಯ ನೀಡುವ ನಿರೀಕ್ಷೆ ಮೂಡಿದೆ. ಮಳೆಗಾಲದ ಸಂದರ್ಭದಲ್ಲಿ ನೀರಿನ ಹರಿವಿನ ಸಾಮರ್ಥ್ಯವೂ ಹೆಚ್ಚಲಿದ್ದು, ಕೃಷಿ ಭೂಮಿಗಳಿಗೆ ಇದರ ಲಾಭ ತಲುಪಲಿದೆ.

ಡಿಜಿಟಲ್ ವ್ಯವಸ್ಥೆಯಿಂದ ಪಾರದರ್ಶಕತೆ: ಉದ್ಯೋಗ ಖಾತ್ರಿ ಯೋಜನೆಯಡಿ ಕೆಲಸ



ನಿರ್ವಹಿಸಿದ ಕಾರ್ಮಿಕರ ಹಾಜರಾತಿ ಹಾಗೂ ಕಾಮಗಾರಿ ವಿವರಗಳನ್ನು ಅಧಿಕಾರಿಗಳು ಡಿಜಿಟಲ್ ವ್ಯವಸ್ಥೆಯಲ್ಲಿ ದಾಖಲಿಸಿ ಅನುಮೋದನೆ ಪಡೆಯುತ್ತಾರೆ. ಬಳಿಕ ದಿನಗೂಲಿ ಮೊತ್ತವನ್ನು ನೇರವಾಗಿ ಕಾರ್ಮಿಕರ ಬ್ಯಾಂಕ್ ಖಾತೆಗಳಿಗೆ ಜಮಾ ಮಾಡಲಾಗುತ್ತದೆ. ಇದರಿಂದ ಯೋಜನೆಯ ಅನುಷ್ಠಾನದಲ್ಲಿ ಪಾರದರ್ಶಕತೆ ಹೆಚ್ಚುವುದರ ಜೊತೆಗೆ ಮಧ್ಯವರ್ತಿಗಳ ಹಸ್ತಕ್ಷೇಪಕ್ಕೆ ಅವಕಾಶವೇ ಇರುವುದಿಲ್ಲ. ಕಾರ್ಮಿಕರಿಗೆ ಕೂಲಿ ನೇರವಾಗಿ ತಲುಪುತ್ತಿರುವುದು ಯೋಜನೆಯ ಮತ್ತೊಂದು ವಿಶೇಷತೆಯಾಗಿದೆ.

ಮತ್ತೊಂದು ತಂಡಕ್ಕೂ ಉದ್ಯೋಗದ ಭರವಸೆ : ಇದೀಗ ಮತ್ತೊಂದು 30 ಮಂದಿ ಜಾಬ್ ಕಾರ್ಡ್ ಹೊಂದಿರುವ ಕಾರ್ಮಿಕರ ತಂಡವೂ ಉದ್ಯೋಗಕ್ಕಾಗಿ ಗ್ರಾಮ ಪಂಚಾಯಿತಿಗೆ ಅರ್ಜಿ ಸಲ್ಲಿಸಿದ್ದು, ಅವರಿಗೆ ಸಹ ಶೀಘ್ರದಲ್ಲೇ ಉದ್ಯೋಗ ನೀಡಲು ಕ್ರಮ ಕೈಗೊಳ್ಳಲಾಗಿದೆ. ಇದರಿಂದ ಇನ್ನಷ್ಟು ಗ್ರಾಮೀಣ ಕುಟುಂಬಗಳಿಗೆ ಯೋಜನೆಯ ಲಾಭ ದೊರೆಯುವ ನಿರೀಕ್ಷೆ ಮೂಡಿದೆ.

ಗ್ರಾಮೀಣ ಪ್ರದೇಶಗಳಲ್ಲಿ ವಲಸೆ ತಡೆಗಟ್ಟುವುದು, ಸ್ಥಳೀಯ ಮಟ್ಟದಲ್ಲೇ ಉದ್ಯೋಗ ಸೃಷ್ಟಿಸುವುದು ಹಾಗೂ ಸಾರ್ವಜನಿಕ ಆಸ್ತಿಗಳ ಅಭಿವೃದ್ಧಿಗೆ ನೆರವಾಗುವುದು ಉದ್ಯೋಗ ಖಾತ್ರಿ ಯೋಜನೆಯ ಪ್ರಮುಖ ಉದ್ದೇಶವಾಗಿದೆ. ಚಿರಡೋಣಿಯಲ್ಲಿ ನಡೆಯುತ್ತಿರುವ ಕಾಮಗಾರಿ ಈ ಉದ್ದೇಶಗಳಿಗೆ ಪೂರಕವಾಗಿ ಸಾಗುತ್ತಿರುವುದು ಗಮನಾರ್ಹವಾಗಿದೆ.

> **ಉದ್ಯೋಗಕ್ಕಾಗಿ ಅರ್ಜಿ ಸಲ್ಲಿಸಿದ ಜಾಬ್ ಕಾರ್ಡ್ ಹೊಂದಿರುವ ಕಾರ್ಮಿಕರಿಗೆ ಆದ್ಯತೆ ಮೇರೆಗೆ ಕೆಲಸ ನೀಡಲಾಗಿದೆ. ಮತ್ತೊಂದು 30 ಮಂದಿಯ ತಂಡದಿಂದಲೂ ಅರ್ಜಿ ಬಂದಿದ್ದು, ಅವರಿಗೆ ಸಹ ಒಂದು ವಾರದೊಳಗೆ ಉದ್ಯೋಗ ಒದಗಿಸಲು ಕ್ರಮ ಕೈಗೊಳ್ಳಲಾಗುವುದು.**
> ■ **ಆರ್.ತಿಪ್ಪೇಸ್ವಾಮಿ,** ಪಂಚಾಯಿತಿ ಅಭಿವೃದ್ಧಿ ಅಧಿಕಾರಿ

> **ಉದ್ಯೋಗ ಖಾತ್ರಿ ಯೋಜನೆಯ ಸೌಲಭ್ಯ ಅರ್ಹ ಕಾರ್ಮಿಕರಿಗೆ ತಲುಪುವಂತೆ ನೋಡಿಕೊಳ್ಳಲಾಗುತ್ತಿದೆ. ಗ್ರಾಮೀಣ ಜನರಿಗೆ ಸ್ಥಳೀಯ ಮಟ್ಟದಲ್ಲೇ ಉದ್ಯೋಗ ದೊರೆಯುವುದು ಯೋಜನೆಯ ಪ್ರಮುಖ ಉದ್ದೇಶವಾಗಿದೆ.**
> ■ **ಆರ್.ನಿರ್ಮಲ,** ಗ್ರಾ.ಪಂ ಆಡಳಿತಾಧಿಕಾರಿ

> **ಗ್ರಾಮದಲ್ಲಿಯೇ ಕೆಲಸ ಸಿಕ್ಕಿರುವುದು ನಮಗೆ ತುಂಬಾ ಅನುಕೂಲವಾಗಿದೆ. ಉದ್ಯೋಗ ಖಾತ್ರಿ ಯೋಜನೆಯಿಂದ ಕುಟುಂಬದ ಖರ್ಚು ನಿರ್ವಹಿಸಲು ಸಹಾಯವಾಗುತ್ತಿದೆ. ಇಂತಹ ಕೆಲಸಗಳು ನಿರಂತರವಾಗಿ ದೊರೆತರೆ ಗ್ರಾಮೀಣ ಬಡ ಕುಟುಂಬಗಳಿಗೆ ಹೆಚ್ಚಿನ ನೆರವಾಗುತ್ತದೆ.**
> ■ **ರೂಪ,** ಕೂಲಿ ಕಾರ್ಮಿಕರು

ಎಲ್ಲರ ಅಭಿವೃದ್ಧಿಗಾಗಿ ಇದೆ ಸಹಕಾರ ಕ್ಷೇತ್ರ | ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ

ವೈಯಕ್ತಿಕ ಲಾಭ ಬದಿಗಿಡಬೇಕು

• **ಚಿಕ್ಕಮಗಳೂರು:** ಸಹಕಾರಿ ಕ್ಷೇತ್ರವು ರೈತರ ಮತ್ತು ಗ್ರಾಮೀಣ ಆರ್ಥಿಕತೆಯ ಜೀವನಾಡಿಯಾಗಿದ್ದು, ಈ ಕ್ಷೇತ್ರದಲ್ಲಿ ಯಾವುದೇ ರೀತಿಯ ಅನ್ಯಾಯ, ಸ್ವಜನಪಕ್ಷಪಾತ ಅಥವಾ ವೈಯಕ್ತಿಕ ಲಾಭಕ್ಕಾಗಿ ಸಂಸ್ಥೆಗಳ ದುರ್ಬಳಕೆ ನಡೆಯಲು ಅವಕಾಶ ನೀಡುವುದಿಲ್ಲ ಎಂದು ವಿಧಾನ ಪರಿಷತ್ ಸದಸ್ಯ ಹಾಗೂ ಡಿಸಿಸಿ ಬ್ಯಾಂಕ್ ಅಧ್ಯಕ್ಷ ಡಾ. ರವಿ ಸಿ.ಟಿ ಹೇಳಿದರು.

ಮೂಡಿಗೆರೆ ಮತ್ತು ಕಳಸ ತಾಲ್ಲೂಕಿನ ಎಲ್ಲಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, ಬ್ಯಾಂಕುಗಳ ಸಹಯೋಗದೊಂದಿಗೆ ಮೂಡಿಗೆರೆಯ ರೈತ ಭವನದಲ್ಲಿ ನಡೆದ ಎರಡೂ ತಾಲ್ಲೂಕುಗಳ ಸಹಕಾರ ಸಂಘಗಳ ಅಧ್ಯಕ್ಷರು, ಪದಾಧಿಕಾರಿಗಳು ಹಾಗೂ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳೊಂದಿಗೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಡಿಸಿಸಿ ಬ್ಯಾಂಕ್ ಅಧ್ಯಕ್ಷ ಸ್ಥಾನವನ್ನು ವೈಯಕ್ತಿಕ ಲಾಭಕ್ಕಾಗಿ ಸ್ವೀಕರಿಸಿಲ್ಲ. ಸಹಕಾರಿ ಕ್ಷೇತ್ರಕ್ಕೆ ನನ್ನ ಕಡೆಯಿಂದ ಯಾವುದೇ ಮೋಸ ಅಥವಾ ಅನ್ಯಾಯ ಆಗುವುದಿಲ್ಲ, ನಾನು ಎಲ್ಲಿಯವರೆಗೆ ಈ ಜವಾಬ್ದಾರಿಯಲ್ಲಿ ಇರುತ್ತೇನೋ, ಅಲ್ಲಿಯವರೆಗೆ ಕಾವಲು ನಾಯಿಯಂತೆ ಕೆಲಸ ಮಾಡುತ್ತೇನೆ. ಇತರರು ಕೂಡ ಅನ್ಯಾಯ ಮಾಡುವುದಕ್ಕೆ ಅವಕಾಶ ನೀಡುವುದಿಲ್ಲ ಎಂದು ಹೇಳಿದರು.

ಡಿಸಿಸಿ ಬ್ಯಾಂಕ್‌ನಲ್ಲಿ 83 ಸಿಬ್ಬಂದಿ ನೇಮಕಾತಿ ಪ್ರಕ್ರಿಯೆ ಕುರಿತು ಸ್ಪಷ್ಟನೆ ನೀಡಿದ ಅವರು, ಕೆಲವರು ನೇಮಕಾತಿಯನ್ನು ರಾಜಕೀಯ ಅಥವಾ ವೈಯಕ್ತಿಕ ಉದ್ದೇಶಗಳಿಗೆ ಬಳಸಿಕೊಳ್ಳುವ ಪ್ರಯತ್ನವಾಗಬಹುದು ಎಂದು ಭಾವಿಸಿದ್ದರು. ಆದರೆ ಸಂಸ್ಥೆಯ ಹಿತದೃಷ್ಟಿಯಿಂದ ನೇಮಕಾತಿ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಿ, ಅಗತ್ಯಕ್ಕೆ ಅನುಗುಣವಾಗಿ ಖಾಲಿ ಹುದ್ದೆಗಳನ್ನು ಹಂತ ಹಂತವಾಗಿ ಭರ್ತಿ ಮಾಡುವ ನಿರ್ಧಾರ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಸಹಕಾರಿ ಬೆಳೆಯಬೇಕು ಎಂಬ ಉದ್ದೇಶದಿಂದಲೇ ನಾವು ಈ ಜವಾಬ್ದಾರಿ ಹೊತ್ತಿದ್ದೇವೆ. ಬ್ಯಾಂಕ್‌ನ ವಾರ್ಷಿಕ ವಹಿವಾಟು ಸುಮಾರು 3,000 ಕೋಟಿ ರೂ ಆಗಿದ್ದು, 1,568 ಕೋಟಿ ರೂಪಾಯಿ ಠೇವಣಿ ಹೊಂದಿದೆ. ಇದು ಬ್ಯಾಂಕ್ ಇತಿಹಾಸದಲ್ಲೇ ಅತ್ಯಧಿಕ ಠೇವಣಿ ಮೊತ್ತವಾಗಿದೆ. ಬ್ಯಾಂಕ್ ಇದುವರೆಗೆ 830 ಕೋಟಿ ರೂ ಕೃಷಿಸಾಲ, 30 ಕೋಟಿ ರೂ ಮಧ್ಯಮಾವಧಿ ಸಾಲ ಹಾಗೂ 450 ಕೋಟಿ ರೂ ಕೃಷಿಯೇತರ ಸಾಲ



ವಿತರಿಸಿದೆ. ನಬಾರ್ಡ್ ಮಾರ್ಗಸೂಚಿಯ ಪ್ರಕಾರ ಶೇ.60 ಕೃಷಿ ಸಾಲ ಮತ್ತು ಶೇ.40 ಕೃಷಿಯೇತರ ಸಾಲ ವಿತರಣೆ ಇರಬೇಕು. ಬ್ಯಾಂಕ್ ಆರ್ಥಿಕವಾಗಿ ಸದೃಢವಾಗಿರಬೇಕಾದರೆ ಈ ಸಮತೋಲನ ಅತ್ಯಗತ್ಯ ಎಂದು ತಿಳಿಸಿದರು.

ಮೂಡಿಗೆರೆ ತಾಲೂಕಿನ ಸಹಕಾರಿ ಸಂಘಗಳು ಮಾತ್ರವೇ ಸುಮಾರು 78 ಕೋಟಿ ರೂಪಾಯಿ ಹೆಚ್ಚುವರಿ ಸಾಲವನ್ನು ಕೇಳಿವೆ. ಎಲ್ಲ ಬೇಡಿಕೆಗಳನ್ನು ಒಟ್ಟಿಗೆ ಮಂಜೂರು ಮಾಡಿದರೆ ನಬಾರ್ಡ್ ನಿಗದಿಪಡಿಸಿರುವ ಅನುಪಾತ ಮೀರಲಿದೆ. ಆದ್ದರಿಂದ ಆರ್ಥಿಕ ಶಿಸ್ತು ಮತ್ತು ಅಗತ್ಯ ಎರಡನ್ನೂ ಸಮತೋಲನಗೊಳಿಸಬೇಕಿದೆ ಎಂದು ಹೇಳಿದರು.

ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದ ಅವಧಿಯ ಸಾಲಮನ್ನಾ ಯೋಜನೆಯ ಬಾಕಿ ಪ್ರಕರಣಗಳ ಕುರಿತು ಮಾತನಾಡಿದ ಅವರು, ಅರ್ಹ ಫಲಾನುಭವಿಗಳಿಗೆ ಹಣ ತಲುಪದಿದ್ದಲ್ಲಿ ಸಂಬಂಧಿತ ದಾಖಲೆಗಳನ್ನು ಸಲ್ಲಿಸಿದರೆ ಸರ್ಕಾರದ ಗಮನಕ್ಕೆ ತರುವುದಾಗಿ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ವಿವಿಧ ಸೊಸೈಟಿಗಳ ಅಧ್ಯಕ್ಷರು ತಮ್ಮ ಸಲಹೆ, ಅಭಿಪ್ರಾಯಗಳನ್ನು ಈ ಸಂದರ್ಭದಲ್ಲಿ ಹಂಚಿಕೊಂಡರು.

> **ಕೆಲವರು ನೇಮಕಾತಿಯನ್ನು ರಾಜಕೀಯ ಅಥವಾ ವೈಯಕ್ತಿಕ ಉದ್ದೇಶಗಳಿಗೆ ಬಳಸಿಕೊಳ್ಳುವ ಪ್ರಯತ್ನವಾಗಬಹುದು ಎಂದು ಭಾವಿಸಿದ್ದರು. ಆದರೆ ಸಂಸ್ಥೆಯ ಹಿತದೃಷ್ಟಿಯಿಂದ ನೇಮಕಾತಿ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಿ, ಅಗತ್ಯಕ್ಕೆ ಅನುಗುಣವಾಗಿ ಖಾಲಿ ಹುದ್ದೆಗಳನ್ನು ಹಂತ ಹಂತವಾಗಿ ಭರ್ತಿ ಮಾಡುವ ನಿರ್ಧಾರ ಕೈಗೊಳ್ಳಲಾಗಿದೆ.**
> ■ **ಸಿ.ಟಿ.ರವಿ,** ಡಿಸಿಸಿ ಬ್ಯಾಂಕ್ ಅಧ್ಯಕ್ಷ

ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ತಿನ ಉಪಸಭಾಪತಿ ಎಂ.ಕೆ. ಪ್ರಾಣೇಶ್, ಸಿಡಿಸಿಸಿ ಬ್ಯಾಂಕ್ ನಿರ್ದೇಶಕರಾದ ಹಳಸೆ ಶಿವಣ್ಣ, ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷರಾದ ಜೆ.ಕೆ. ದಿವಾಕರ್, ಟಿಎಪಿಸಿಎಂಎಸ್ ಲಿಮಿಟೆಡ್ ಅಧ್ಯಕ್ಷರಾದ ಎಂ.ಎಲ್. ಕಲ್ಲೇಶ್, ಸಿಡಿಸಿಸಿ ಬ್ಯಾಂಕ್ ವ್ಯವಸ್ಥಾಪಕ ನಿರ್ದೇಶಕರಾದ ಪ್ರವೀಣ್ ಡಿ. ನಾಯಕ್, ಸಹಕಾರಿ ಕ್ಷೇತ್ರದ ಪ್ರಮುಖ ಮುಖಂಡರು ಇದ್ದರು.

ಪುರುಷೋತ್ತಮ ಮಾಸದ ಪೂಜೆ



• **ಹೊನ್ನಾಳಿ:** ಪಟ್ಟಣದಲ್ಲಿ ಮೇ 17 ರಿಂದ ಪುರುಷೋತ್ತಮ ಮಾಸ ಪ್ರಾರಂಭವಾಗಿದ್ದು ಜೂನ್ 15 ರವರೆಗೆ ಇರುತ್ತದೆ. ಹೊನ್ನಾಳಿ ಪಟ್ಟಣದ ಕೋಟೆಯ ಗಣಪತಿ ಪೆಂಡಾಲ್‌ನಲ್ಲಿ ಜ್ಞಾನ ಭಾರತಿ ಮಹಿಳಾ ಮಂಡಳಿಯವರು ನಿತ್ಯ ಸಂಜೆ 5.30 ರಿಂದ 7.30 ರವರೆಗೆ ವಿಷ್ಣು, ಶ್ರೀಕೃಷ್ಣ ಪೂಜೆ, ವಿಷ್ಣು ಹಾಗೂ ಲಕ್ಷ್ಮೀದೇವಿಗೆ ಸಂಬಂಧಿಸಿದಂತೆ ಏಕಾದಶಿ ಪೂಜೆ, ವಿಷ್ಣುಪೂಜೆ, ತುಳಸಿ ಪೂಜೆ ಹಾಗೂ 33 ಭಜನೆಯನ್ನು ಪಠಿಸಿ, ಪ್ರತಿನಿತ್ಯ ಒಬ್ಬರ ಮನೆಯಿಂದ ಪೂಜೆ ಹಾಗೂ ಪ್ರಸಾದ ವ್ಯವಸ್ಥೆ ಮಾಡುತ್ತಿದ್ದಾರೆ. ಲಕ್ಷ್ಮೀ ವೆಂಕಟೇಶ್ವರ ದೇವರುಗಳಿಗೆ ಪೂರ್ಣ ಪ್ರಮಾಣದ ಅಲಂಕಾರ ಮಾಡಿ ಪೂಜೆ ಮಾಡುತ್ತಾರೆ

ಜ್ಞಾನಭಾರತಿ ಮಹಿಳಾ ಮಂಡಳಿಯ ಉಪಾಧ್ಯಕ್ಷೆ ಲಲಿತಾ ಭಾರ್ಗವ ಮಾತನಾಡಿ, ಆಧ್ಯಾತ್ಮಿಕ ಸಾಧನೆ ಹಾಗೂ ದಾನ ಧರ್ಮಗಳಿಗೆ ಅತ್ಯಂತ ಶ್ರೇಷ್ಠ ಮಾಸ ಎಂದು ಪರಿಗಣಿಸಿ ಬಡವರಿಗೆ ಅನ್ನದಾನ ಹಾಗೂ ದೀಪ, ತಟ್ಟೆ, ವಸ್ತ್ರದಾನ, ಗೋಸೇವೆ, ಧಾರ್ಮಿಕ ಗ್ರಂಥ ವಿತರಣೆ ಸೇರಿದಂತೆ 33 ದಾನಗಳನ್ನು ತಮ್ಮ ಕೈಲಾದ ಮಟ್ಟಿಗೆ ಬಡವರಿಗೆ ಸಹಾಯವನ್ನು ಈ ಮಾಸದಲ್ಲಿ ಮಾಡುತ್ತಾರೆ, ಆ ದಾನಗಳನ್ನು ನಾವು ಮಾಡುತ್ತಿದ್ದೇವೆ ಎಂದು ತಿಳಿಸಿದರು.

ಈ ಮಾಸದಲ್ಲಿ ಪುಣ್ಯಕ್ಷೇತ್ರಗಳ ದರ್ಶನ ಮಾಡಿದರೆ ಹಿಂದಿನ ಜನ್ಮದಲ್ಲಿ ಮಾಡಿದ ಪಾಪ ಕರ್ಮಗಳು ಕಳೆಯುತ್ತದೆ ಹಾಗೂ ಮದುವೆ ಹಾಗೂ ಗೃಹ ಪ್ರವೇಶದಂತಹ ಶುಭ ಕಾರ್ಯಗಳನ್ನು ಮಾಡದೆ ದೈವಿಕ ಹಾಗೂ ಆಧ್ಯಾತ್ಮಿಕ ಚಿಂತನೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರೆ ಪುಣ್ಯ ಪ್ರಾಪ್ತಿಯಾಗುತ್ತದೆ. ಅಧಿಕ ಮಾಸದಲ್ಲಿ ಮಾಡುವ ಸತ್ಕಾರ್ಯಗಳು ಮತ್ತು ವ್ರತಗಳು ಮನಸ್ಸಿಗೆ ಶಾಂತಿ ಹಾಗೂ ಉತ್ತಮ್ಮ ಆರೋಗ್ಯವನ್ನು ನೀಡುತ್ತದೆ ಎಂದರು.

ಶಾಂತ, ಸುಮಾ, ಭಾರ್ಗವಿ ಸುಧೀಂದ್ರ, ಜ್ಯೋತಿ ಹತ್ವಾರ್, ಸುಷ್ಮಾ ಗಿರೀಶ್, ಲತಾ ರಾಜರಾವ್, ರೇಖಾ ಉಮಾಕಾಂತ್, ಕಾವ್ಯ ಮನೋಹರ್, ವಿನಿತಾ ಪ್ರಕಾಶ್ ಪಾಲ್ಗೊಂಡಿದ್ದರು.

ಎಸ್‌ಐಆರ್ ಯೋಜನೆ ಬೇಡ



• **ಶೃಂಗೇರಿ:** ಪ್ರಜಾಪ್ರಭುತ್ವ ವ್ಯವಸ್ಥೆ ಹೊಂದಿರುವ ಭಾರತದಲ್ಲಿ ಎಸ್‌ಐಆರ್ ಗಂಡಾಂತರಕಾರಿ ಯೋಜನೆಯಾಗಿದೆ ಎಂದು ಪ್ರಗತಿಪರ ಹೋರಾಟಗಾರ ಕಲ್ಕುಳಿ ವಿಠ್ಠಲಹೆಗ್ಡೆ ಆರೋಪಿಸಿದರು. ಪಟ್ಟಣದ ಸಂತೆ ಮಾರುಕಟ್ಟೆ ಸಮೀಪ ಶನಿವಾರ ಕರ್ನಾಟಕ ಪ್ರಗತಿಪರ ಸಂಘಟನೆ ಹಾಗೂ ಜಾತ್ಯತೀತ ಒಕ್ಕೂಟದಿಂದ ಹಮ್ಮಿಕೊಂಡಿದ್ದ ಎಸ್‌ಐಆರ್ ವಿರುದ್ಧ ನಡೆಸಿದ ಪ್ರತಿಭಟನೆ ಸಂದರ್ಭದಲ್ಲಿ ಮಾತನಾಡಿದರು. ವಿದ್ಯಾವಂತರಿಗೂ ಜ್ಞಾನವಿಲ್ಲ, ಇದನ್ನು ವಿರೋಧಿಸುವ ಮನಸ್ಥಿತಿ ಇಲ್ಲ, ಜ್ಞಾನಪೀಠ ಪ್ರಶಸ್ತಿ ವಿಜೇತ ಅಮಾರ್ತ್ಯಸೇನ್ ಹೆಸರನ್ನೇ ವಜಾಗೊಳಿಸಲಾಗಿದೆ. ಈಗಾಗಲೇ 6.5 ಕೋಟಿ ಮತದಾರರನ್ನು ದೇಶದಲ್ಲಿ ಬಿಡಲಾಗಿದ್ದು, ಇದರಿಂದ ಅಲ್ಪ ಸಂಖ್ಯಾತರು ತಮ್ಮ ಹಕ್ಕನ್ನು ಕಳೆದುಕೊಳ್ಳುವಂತಾಗಿದೆ ಎಂದರು. ಸುರೇಶ್ ನಾಯ್ಕ್ ಮಾತನಾಡಿ, ಒಂದು ದೇಶ ಒಂದು ಚುನಾವಣೆ, ಒಬ್ಬನೇ ನಾಯಕ ಅವರೇ ಮೋದಿ. ಪ್ರತಿ ಪಕ್ಷವನ್ನು ನಿರ್ಮೂಲ ಮಾಡುವ ಉದ್ದೇಶವಾಗಿದೆ ಹಾಗೂ ಏಕ ಧರ್ಮ ಅನುಸರಿಸುವ ಸಂಚು ಅಡಗಿದೆ ಎಂದರು. ಕಂದಾಯ ಇಲಾಖಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು. ಪ್ರತಿಭಟನೆಯಲ್ಲಿ ಹಾಗಲಗಂಚಿ ವೆಂಕಟೇಶ್, ಇಸ್ಮಾಯಿಲ್, ರಾಧಾ ಮುಂಡೋಡಿ, ಹೊರಳೆ ಸರೋಜಾ, ಸಂತೋಷ್ ಕಾಳ್ಕ, ಜಾಲ್ಗಾರ ಪ್ರಶಾಂತ್ ಇತರರು ಇದ್ದರು.

'ಕ್ಷಮೆಯಿರಲಿ' ಬಿಡುಗಡೆ 12ಕ್ಕೆ



• **ದಾವಣಗೆರೆ:** 50 ವರ್ಷಗಳ ರಂಗಭೂಮಿ, 30 ವರ್ಷಗಳ ಸಿನಿಮಾ ಒಡನಾಟ ಹೊಂದಿರುವ ತಾವು ಕಲೆಯ ಮೇಲಿನ ಪ್ರೀತಿಯಿಂದ ಕ್ಷಮೆಯಿರಲಿ ತಂದೆ ಎಂಬ ಸಿನಿಮಾವನ್ನು ನಿರ್ಮಿಸಿ, ನಿರ್ದೇಶಿಸಿದ್ದು, ಪ್ರೇಕ್ಷಕರು ಚಿತ್ರ ವೀಕ್ಷಿಸುವ ಮೂಲಕ ಪ್ರೋತ್ಸಾಹಿಸಬೇಕೆಂದು ಹಿರಿಯ ನಟ, ನಿರ್ದೇಶಕ ಕೆ.ಎನ್.ಸುರೇಶ್ ವಿನಂತಿಸಿದರು.

ನಗರದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚಿತ್ರವು ಜೂನ್ 12ರಂದು ಬೆಂಗಳೂರು ಸೇರಿದಂತೆ ರಾಜ್ಯದ 20ಕ್ಕೂ ಅಧಿಕ ಮಲ್ಟಿಪ್ಲೆಕ್ಸ್‌ಗಳಲ್ಲಿ ತೆರೆ ಕಾಣಲಿದೆ. ಕಲೆ ನನ್ನೊಂದಿಗೆ ಹಾಸುಹೊಕ್ಕಾಗಿ ಬೆಸೆದುಕೊಂಡಿರುವುದರಿಂದ ಚಿತ್ರ ನಿರ್ಮಾಣಕ್ಕೆ ಕೈಹಾಕಿದ್ದು, ಜನರ ಪ್ರೋತ್ಸಾಹ ಅಗತ್ಯವಾಗಿದೆ ಎಂದರು.

ಪ್ರಸ್ತುತ ಇಡೀ ಭಾರತೀಯ ಚಿತ್ರರಂಗದಲ್ಲೇ ಕನ್ನಡ ಚಿತ್ರರಂಗ ತೀವ್ರ ಸಂಕಷ್ಟದಲ್ಲಿದೆ. ಚಿತ್ರಮಂದಿರಗಳಿಗೆ ಜನರೇ ಬರುತ್ತಿಲ್ಲ. ಓಟಿಟಿ ಪ್ಲಾಟ್‌ಫಾರಂ ನವರೂ ಕನ್ನಡ ಚಿತ್ರಗಳನ್ನು ಪಡೆಯುತ್ತಿಲ್ಲ. ದೊಡ್ಡ ಬಜೆಟ್, ಸೂಪರ್ ಸ್ಟಾರ್ ಇದ್ದರೂ ಸಹ ಕಥಾವಸ್ತು ಚೆನ್ನಾಗಿಲ್ಲದಿದ್ದರೆ ಸಿನಿಮಾ ನಾಲ್ಕು ವಾರ ಓಡುವುದೇ ಕಷ್ಟವಾಗಿದೆ. ಚುನಾವಣೆಯ ರೀತಿಯಲ್ಲೇ ಸಿನಿಮಾಗಳ ಸೋಲು-ಗೆಲುವು ಅನಿಶ್ಚಿತತೆಯ ಹಾದಿಯಲ್ಲಿದೆ. ಜನರು ಉತ್ತಮ ಕಥೆಯನ್ನು ಮಾತ್ರ ಸದಾ ಆಯ್ಕೆ ಮಾಡಿಕೊಳ್ಳುತ್ತಾರೆ. ಆ ನಂಬಿಕೆಯಿಂದಲೇ ಇಡೀ ಕುಟುಂಬ ಒಟ್ಟಾಗಿ ಕುಳಿತು ನೋಡುವಂತಹ, ಸಮಾಜಕ್ಕೊಂದು ಉತ್ತಮ ಸಂದೇಶ ನೀಡುವ ಸಿನಿಮಾವನ್ನು ಸಿದ್ಧಪಡಿಸಿದ್ದೇವೆ. ಚಿತ್ರದಲ್ಲಿ ನಟಿಸಿರುವ ಮಂಜುನಾಥ್ ಹೆಗಡೆ, ರೇಣುಕಾ ಬಾಲಿ, ಶ್ರೀಮಂತ್, ವಿದ್ಯಾ ಶೆಟ್ಟಿ ಸೇರಿದಂತೆ ಎಲ್ಲ ಕಲಾವಿದರೂ ತಮ್ಮ ಪಾತ್ರಗಳಿಗೆ ನ್ಯಾಯ ಒದಗಿಸಿದ್ದಾರೆ. ಇವರ ಜೊತೆಗೆ ರಂಗಭೂಮಿಯ ಸುಮಾರು 25 ಕಲಾವಿದರು ಸಣ್ಣಪುಟ್ಟ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ ಎಂದು ಅವರು ತಿಳಿಸಿದರು.

ಮಲ್ಲಿಕಾರ್ಜುನ ಬಾವಿಕಟ್ಟೆ, ಮನೋಜ್ ಪೂಜಾರ್, ಡಾ.ಮಲ್ಲೇಶ್ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಕರ್ನಾಟಕ ಸರ್ಕಾರ

ಕಾರ್ಯದರ್ಶಿಗಳ ಕಾರ್ಯಾಲಯ

ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ

ಮಹದೇಶ್ವರ ಬೆಟ್ಟ, ಹನೂರು ತಾಲ್ಲೂಕು, ಚಾಮರಾಜನಗರ ಜಿಲ್ಲೆ.

ದೂರವಾಣಿ ಸಂಖ್ಯೆ: 08225-272128 Email: sec.mmtemple@gmail.com

ಸಂಖ್ಯೆ: ಶ್ರೀ ಮ.ಮ.ಕ್ಷೇ.ಅ.ಪ್ರಾ/3(ದಾಸೋಹ)/ಪಿಆರ್/05/2026-27 ದಿನಾಂಕ: 28-05-2026

ಅಲ್ಪಾವಧಿ ಇ-ಟೆಂಡರ್ ಕಂ ಬಹಿರಂಗ ಹರಾಜು ಪ್ರಕಟಣೆ 2ನೇ ಕರೆ
ಕರ್ನಾಟಕ ಸರ್ಕಾರದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ

ಕ್ರ ಸಂ	ಟೆಂಡರ್ ವಿವರ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ ಮೊತ್ತ (ರೂ. ಲಕ್ಷಗಳಲ್ಲಿ)
1	ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ನಿತ್ಯ ಅನ್ನ ದಾಸೋಹದಲ್ಲಿ ದಾಸ್ತಾನು ಇರುವ ಸುಮಾರು 200 ಟನ್ (2 ಲಕ್ಷ ಕೆ.ಜಿ.) ಹೆಚ್ಚುವರಿ ಅಕ್ಕಿಯನ್ನು ವಿಲೇ ಮಾಡುವ ಬಗ್ಗೆ	60.00	60,000.00

ವಿವರಗಳನ್ನು **https://kppp.karnataka.gov.in** ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ಹೆಚ್ಚಿನ ವಿವರಗಳಿಗೆ ಕಛೇರಿಯ ಅವಧಿಯಲ್ಲಿ ದಿನಾಂಕ 05.06.2026 ಸಂಜೆ 4.00 ಗಂಟೆ ಒಳಗಾಗಿ ಪ್ರಾಧಿಕಾರದ ಕಛೇರಿ ಮೊಬೈಲ್ ಸಂಖ್ಯೆ: +91 9739117671 ಶ್ರೀ ಮಲ್ಲಿಕಾರ್ಜುನ ದಾಸೋಹ ವ್ಯವಸ್ಥಾಪಕ ರವರನ್ನು ಸಂಪರ್ಕಿಸಬಹುದು.

ಇ-ಪ್ರೊಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಶೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿವೆ.

1.	ಇ-ಪೋರ್ಟಲ್‌ನಲ್ಲಿ ಇ-ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ ದಿನಾಂಕ	ದಿ. 28.05.2026 ರ ನಂತರ
2.	ಟೆಂಡರ್ ಸಲ್ಲಿಸಲು ಕೊನೆ ದಿನಾಂಕ ಮತ್ತು ಕಾಲ	ದಿನಾಂಕ 06.06.2026 ಸಂಜೆ 5.00 ಗಂಟೆವರೆಗೆ
3.	ಬಹಿರಂಗ ಹರಾಜು ನಡೆಯುವ ದಿನಾಂಕ ಮತ್ತು ಕಾಲ ಸ್ಥಳ: ದಾಸೋಹ ಭವನದ ಆವರಣ, ಶ್ರೀ ಮಲೈ ಮಹದೇಶ್ವರ ಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಮ.ಬೆಟ್ಟ	ದಿನಾಂಕ 08.06.2026 ಬೆಳಿಗ್ಗೆ 11.00 ಗಂಟೆಗೆ
4.	ಇ-ಟೆಂಡರ್ ತೆರೆಯುವ ದಿನಾಂಕ ಮತ್ತು ಕಾಲ	ದಿನಾಂಕ 08.06.2026 ಬೆಳಿಗ್ಗೆ 12.00 ನಂತರ

ಕಾರ್ಯದರ್ಶಿ, ಶ್ರೀ ಮಲೈ ಮಹದೇಶ್ವರ ಸ್ವಾಮಿ ಕ್ಷೇತ್ರ, ಅಭಿವೃದ್ಧಿ ಪ್ರಾಧಿಕಾರ, ಮಹದೇಶ್ವರ ಬೆಟ್ಟ

ಸಂ/ವಾವಾಸಂಇ/ಓಸನಿ/ಚಾ.ನಗರ/140/2026-27

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ

ಕಹಾಮ ಸಂಕೀರ್ಣ ಡಾ: ಎಂ. ಹೆಚ್. ಮರೀಗೌಡ ರಸ್ತೆ ಬೆಂಗಳೂರು-560 029
ಫೋನ್: 25536567/26096832/910/922 ಫ್ಯಾಕ್ಸ್: 080-25536105
ಇ-ಮೇಲ್: purchase@kmf.coop

ಸಂ. ಕಹಾಮ/ಖರೀದಿ/NPFP/ಇ-ಪ್ರೊಕ್./ಟೆಂಡರ್-930/2026 ದಿನಾಂಕ: 30.05.2026

ಟೆಂಡರ್ ಪ್ರಕಟಣೆ

ಕರ್ನಾಟಕ ಹಾಲು ಮಹಾ ಮಂಡಳಿ ಬೆಂಗಳೂರು ನಂದಿನಿ ಪ್ಯಾಕೇಜಿಂಗ್ ಫಿಲಂ ಘಟಕಕ್ಕೆ ಅವಶ್ಯವಿರುವ Master Batch (White Premium Master Batch), PPA (Polymer Processing Aid), Ethyl Acetate & IPA (Food Grade) ಅರೆವಾರ್ಷಿಕ ಅವಧಿಗೆ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://kppp.karnataka.gov.in ಮೂಲಕ ಟೆಂಡರ್ ಅನ್ನು ದಿನಾಂಕ 20.06.2026 ರಂದು 03.00 ಗಂಟೆಯ ಒಳಗೆ ಸಲ್ಲಿಸಬಹುದಾಗಿದೆ.

ಇಎಂಡಿ ಹಾಗೂ ಇನ್ನಿತರ ವಿವರಗಳನ್ನು ಟೆಂಡರ್ ದಾಖಲಾತಿಯಲ್ಲಿ ನೋಡಬಹುದು.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/- ನಿರ್ದೇಶಕರು (ಖರೀದಿ)

Hosadigantha kannada daily Printed & Published by P.S. Prakash on behalf of Jnanabharathi Prakashana Limited. Printed at Digantha Mudrana, New Thirthahalli Road, Shivamogga - 577201 and Published at 'Madhura Nilaya', 4th Cross, Durgigudi, Park Extension, Shivamogga 577202. Ph: (08182) 401752, 8861209076. Editor : P.S. Prakash, Group Editor : Vinayak S. Bhat.

ಕಿರುಸುದ್ದಿ

ಅಡಿಕೆ ಮರ ಬಿದ್ದು ಸಾವು

• **ತೀರ್ಥಹಳ್ಳಿ:** ಅಡಿಕೆ ಮರ ಬಿದ್ದು ಬೈಕ್ ಸವಾರ ಸ್ಥಳದಲ್ಲಿಯೇ ಮೃತಪಟ್ಟ ಘಟನೆ ಕುಡುಮಲ್ಲಿಗೆ ಬಳಿ ನಡೆದಿದೆ. ತೀರ್ಥಹಳ್ಳಿ ಗಾಂಧಿನಗರ ನಿವಾಸಿ ಮಾಯೋಗಿನ್ (50) ಮೃತರು. ತೋಟದಲ್ಲಿ ಒಣಗಿದ್ದ ಅಡಿಕೆ ಮರಗಳನ್ನು ಕಡಿಯುತ್ತಿದ್ದಾಗ, ಕತ್ತರಿಸಿದ ಮರ ರಸ್ತೆಗೆ ಬಿದ್ದಿದ್ದರಿಂದ ದುರಂತ ಸಂಭವಿಸಿದೆ. ತೀರ್ಥಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕುಲಪತಿ ಆಯ್ಕೆ ಶೋಧನಾ ಸಮಿತಿ ರಚನೆಗೆ ಆಕ್ಷೇಪ

• **ಶಿವಮೊಗ್ಗ:** ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಆಯ್ಕೆ ಶೋಧನಾ ಸಮಿತಿ (ಐಸಿಎಆರ್ ಇಟಿಆರ್ ಇಜಿಐಐಬಿಆರ್) ರಚನೆಗೆ ಕೃಷಿ ವಿಶ್ವವಿದ್ಯಾಲಯಗಳ ನಿವೃತ್ತ ಪ್ರಾಧ್ಯಾಪಕರು, ವಿಜ್ಞಾನಿಗಳು ಮತ್ತು ಹಳೆಯ ವಿದ್ಯಾರ್ಥಿಗಳು ಒಕ್ಕೊರಲ ಆಕ್ಷೇಪ ವ್ಯಕ್ತಪಡಿಸಿದೆ ಎಂದು ನಿವೃತ್ತ ಪ್ರಾಧ್ಯಾಪಕ ಡಾ. ಟಿ ಎನ್ ಪ್ರಕಾಶ್ ಕಮ್ಮರಡಿ ಕೃಷಿ ವಿಶ್ವವಿದ್ಯಾನಿಲಯಗಳ ಇತಿಹಾಸದಲ್ಲೇ ಪ್ರಥಮ ಎನ್ನಬಹುದಾದ ರೀತಿಯಲ್ಲಿ ಸರ್ಕಾರೇತರ ಸಂಸ್ಥೆಯ ಬೆಂಗಳೂರು ಕೃಷಿ ವಿವಿಯ ಕುಲಪತಿಯನ್ನು ಸಮಿತಿಯ ಅಧ್ಯಕ್ಷರನ್ನಾಗಿ ನೇಮಕ ಮಾಡಿರುವುದು ಸರಿಯಲ್ಲ, ಇತ್ತೀಚೆಗೆ ಬೀದರ್‌ನ ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕಾ ವಿಜ್ಞಾನಗಳ ವಿವಿಗೆ ಸಂಬಂಧಿಸಿದ ಪ್ರಕರಣದಲ್ಲಿ ವಿಶ್ರಾಂತ ಕುಲಪತಿ ಹಾಗೂ ನಿವೃತ್ತ ಹಣಕಾಸು ಅಧಿಕಾರಿಯನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದರು. ಆ ರೀತಿ ಘಟನೆ ಇಲ್ಲಿಯೂ ಆಗಬಾರದೆಂಬ ಕಾರಣಕ್ಕೆ ರಾಜ್ಯಪಾಲರು ಹಾಗೂ ಕೃಷಿ ಸಚಿವರಿಗೆ ಮನವಿ ಮಾಡಲಾಗಿದೆ ಎಂದು ತಿಳಿಸಿದ್ದಾರೆ.

ಹಿತಾಸಕ್ತಿ ಸಂಘರ್ಷ, ಸಂಸ್ಥಾತ್ಮಕ ನೈತಿಕತೆ, ಆಯ್ಕೆ ಪ್ರಕ್ರಿಯೆಯ ಸ್ವಾಯತ್ತತೆ ಹಾಗೂ ಸಾರ್ವಜನಿಕ ವಿಶ್ವಾಸಾರ್ಹತೆಯ ದೃಷ್ಟಿಯಿಂದ ಈ ನೇಮಕಾತಿಯನ್ನು ಮರುಪರಿಶೀಲಿಸಿ, ಶೋಧನಾ ಸಮಿತಿಯನ್ನು ಸಂಪೂರ್ಣ ಸ್ವತಂತ್ರ ಮತ್ತು ನಿಷ್ಪಕ್ಷಪಾತ ತಜ್ಞರನ್ನು ಒಳಗೊಂಡಂತೆ ಪುನರ್‌ರಚಿಸುವಂತೆ ಮನವಿಯಲ್ಲಿ ಒತ್ತಾಯಿಸಲಾಗಿದೆ ಎಂದು ತಿಳಿಸಿದ್ದಾರೆ.

ಬೈಕ್‌ನಿಂದ ಬಿದ್ದು ಗಾಯಗೊಂಡ ಯುವಕ ಸಾವು

• **ಸಬರಾಯಪಟ್ಟಣ:** ಬೈಕ್‌ನಿಂದ ಬಿದ್ದು ಗಾಯಗೊಂಡ ಯುವಕನೋರ್ವ ಮೃತಪಟ್ಟ ಘಟನೆ ನಗೇನಹಳ್ಳಿ ಸಮೀಪ ನಡೆದಿದೆ. ಶಿಕಾರಿಪುರ ತಾಲ್ಲೂಕು ಬಂಡಿಕೊಪ್ಪಲು ವಾಸಿ ನಟೇಶ ಎಂಬುವವರು ಮೃತ ವ್ಯಕ್ತಿಯಾಗಿದ್ದಾರೆ. ಕಂಚುಗಾರನಹಳ್ಳಿಗೆ ಬೈಕ್‌ನಲ್ಲಿ ಪ್ರಯಾಣಿಸುವಾಗ ಅಡ್ಡ ಬಂದ ನಾಯಿಯನ್ನು ತಪ್ಪಿಸಲು ಹೋಗಿ ಜೋರಾಗಿ ಬ್ರೇಕ್ ಹಾಕಿದಾಗ ಸ್ಕಿಡ್ ಆಗಿ ಬೈಕ್ ಸಮೇತ ಬಿದ್ದು ಗಾಯಗೊಂಡಿದ್ದ ನಟೇಶ ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಮಣಿಪಾಲಿನ ಆಸ್ಪತ್ರೆಗೆ ಕರದೊಯ್ಯಲಾಗಿತ್ತಾದರೂ ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾರೆ. ಸಬರಾಯಪಟ್ಟಣ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಗ್ಯಾರಂಟಿ ಯೋಜನೆಗಳಿಂದ ಆರ್ಥಿಕ ನೆರವು

• **ಚಿಕ್ಕಮಗಳೂರು:** ಪಂಚ ಗ್ಯಾರಂಟಿ ಯೋಜನೆಗಳು ನಾಡಿನ ಬಡ ಮತ್ತು ಮಧ್ಯಮ ವರ್ಗದ ಜನಸಾಮಾನ್ಯರಿಗೆ ಆರ್ಥಿಕ ನೆರವು ಕಲ್ಪಿಸಿದೆ. ಕುಟುಂಬದ ನಿರ್ವಹಣೆ ಜೊತೆಗೆ ಮಕ್ಕಳ ಶೈಕ್ಷಣಿಕ ಚಟುವಟಿಕೆಗೆ ಪೂರಕವಾಗಿದೆ ಎಂದು ಗ್ಯಾರಂಟಿ ಪ್ರಾಧಿಕಾರದ ತಾಲೂಕು ಅಧ್ಯಕ್ಷ ಎಂ.ಮಲ್ಲೇಶ್ ಹೇಳಿದರು.

ನಗರದ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ಶುಕ್ರವಾರ ತಾಲೂಕು ಮಟ್ಟದ ಗ್ಯಾರಂಟಿ ಯೋಜನೆಗಳ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮಹಿಳೆಯರ ಸ್ವಾವಲಂಬಿ ಬದುಕಿಗಾಗಿ ಗೃಹಲಕ್ಷ್ಮೀ, ಶಕ್ತಿ ಯೋಜನೆಯನ್ನು ರಾಜ್ಯಸರ್ಕಾರ ಜಾರಿಗೊಳಿಸಿದೆ. ಇದರಿಂದ ತಾಲೂಕಿನ ಬಹುತೇಕ ಮಹಿಳೆಯರು ಸದುಪಯೋಗ ಮಾಡಿಕೊಂಡಿದ್ದಾರೆ. ಅಲ್ಲದೇ ನಾಡಿನಾದ್ಯಂತ ಪುಣ್ಯಕ್ಷೇತ್ರಗಳ ದರ್ಶನ ಭಾಗ್ಯ ಪಡೆದುಕೊಳ್ಳಲು ಸಾಧ್ಯವಾಗಿದೆ ಎಂದರು.

ಗ್ಯಾರಂಟಿ ಯೋಜನೆ ಅನುಷ್ಠಾನಗೊಂಡ ಇಂದಿನವರೆಗೂ ಗೃಹಲಕ್ಷ್ಮೀ ಯೋಜನೆಯಡಿ 29 ಕಂತುಗಳಲ್ಲಿ ಕುಟುಂಬದ ಯಜಮಾನಿಗೆ 2 ಸಾವಿರದಂತೆ ಒಟ್ಟು ತಾಲ್ಲೂಕಿನಲ್ಲಿ 390.80 ಕೋಟಿ ಖಾತೆಗೆ ಜಮೆ ಮಾಡಿದೆ. ಗೃಹಜ್ಯೋತಿ ಯೋಜನೆಯಡಿ ಪ್ರತಿ ಕುಟುಂಬಕ್ಕೆ ಉಚಿತ ವಿದ್ಯುತ್ ಸಂಪರ್ಕ ಒದಗಿಸಿ, ಮೆಸ್ಕಾಂಗೆ 31 ಕೋಟಿ ರೂ. ಭರಿಸಿದೆ ಎಂದರು.

ಗ್ಯಾರಂಟಿ ಪ್ರಾಧಿಕಾರದ ತಾಲೂಕು ಉಪಾಧ್ಯಕ್ಷ ಅನ್ವರ್ ಅಲಿ, ತಾ.ಪಂ. ಕಾರ್ಯ ನಿರ್ವಹಣಾಧಿಕಾರಿ ವಿಜಯ್ ಕುಮಾರ್, ಗ್ಯಾರಂಟಿ ಪ್ರಾಧಿಕಾರದ ಸದಸ್ಯರಾದ ನಾಗೇಶ್ ರಾಜ್ ಅರಸ್, ನಾಗರಾಜ್, ನರೇಂದ್ರ, ಜಯಂತಿ, ನವರಾಜ್, ಗೌಸ್‌ಮೊಹಿಯುದ್ದೀನ್, ಕೃಷ್ಣ ಮತ್ತಿತರರು ಉಪಸ್ಥಿತರಿದ್ದರು.

ಶ್ರೀರಾಮ ಹಾಗೂ ಸೀತಾಮಾತೆಯ ವಿವಾಹದ ವೈಭವ ಅನಾವರಣ

• **ಚಿಕ್ಕಮಗಳೂರು:** ಅಧಿಕಮಾಸದ ಪ್ರಯುಕ್ತ ಲೋಕ ಕಲ್ಯಾಣಾರ್ಥವಾಗಿ ನಗರದಕೋಟೆ ಬಡಾವಣೆಯ ಶ್ರೀ ಗುರುರಾಘವೇಂದ್ರ ಯಜ್ಞ ಮಂಟಪದಲ್ಲಿ ಭಾನುವಾರ ನಡೆದ ಶ್ರೀಸೀತಾರಾಮ ಕಲ್ಯಾಣೋತ್ಸವ, ಪ್ರಭು ಶ್ರೀರಾಮ ಹಾಗೂ ಸೀತಾಮಾತೆಯ ವಿವಾಹದ ವೈಭವವನ್ನು ಅನಾವರಣಗೊಳಿಸಿತು.

ಅಧಿಕಮಾಸದ ಪ್ರಯುಕ್ತ ಬೆಳಗ್ಗೆ ಪುಣ್ಯಾಹವಾಚನ, ಮಹಾ ಸಂಕಲ್ಪ, ದೇವತಾ ಕಲಶ ಸ್ಥಾಪನೆ, ಸೇವಾಕರ್ತಗಳಿಂದ ಸಂಕಲ್ಪ, ಶ್ರೀರಾಮ ತಾರಕ ಹೋಮ, ಶ್ರೀನೃಸಿಂಹ ಹೋಮ, ನವಗ್ರಹ ಹೋಮ ಜರುಗಿದವು.

ಹೋಮಗಳ ಪೂರ್ಣಾಹುತಿ, ಮಹಾ ಮಂಗಳಾರತಿ ನಂತರ ಪ್ರಭು ಶ್ರೀರಾಮ ಹಾಗೂ ಸೀತಾಮಾತೆಯ ವಿಗ್ರಹಕ್ಕೆ ಅಭಿಷೇಕ ಸ್ನಾನ, ಶ್ರೀಸೀತಾರಾಮ ಕಲ್ಯಾಣೋತ್ಸವ ನೆರವೇರಿಸಲಾಯಿತು.

ವರನ ದಿಬ್ಬಣವನ್ನು ಎದುರು ಗೊಳ್ಳುವುದು, ವರಪೂಜೆ, ಕಾಶಿಯಾತ್ರೆ, ಕನ್ಯಾದಾನ, ಮಾಂಗಲ್ಯ ಧಾರಣೆ ಸೇರಿದಂತೆ ನಡೆದ ವಿವಾಹದ ವಿಧಿ ವಿಧಾನಗಳು ನೋಡುಗರ ಕಣ್ಮನ ಸೂರೆಗೊಂಡವು.

ಧರ್ಮಜ್ಞಾನ ವಾಹಿನಿಯ ಸಂಚಾಲಕ ಪುರಂದರಾಚಾರ್ಯ ಹಯಗ್ರೀವ, ನವೀನಾಚಾರ್ ಮತ್ತು ಅಶ್ವತ್ಥ ನಾರಾಯಣಾಚಾರ್ಯ ವಸಂತಾಚಾರ್ಯ ಜೋಶಿ ಅವರ ನೇತೃತ್ವದಲ್ಲಿ ಧಾರ್ಮಿಕ ವಿಧಿ ವಿಧಾನಗಳು ಜರುಗಿದವು.

ಈ ವೇಳೆ ರಾಮಾವತಾರದ ಕುರಿತು ಪ್ರವಚನವನ್ನು ಮಧುಸೂದನ್ ಆಚಾರ್ ನೀಡಿದರು. ಅಶ್ವತ್ಥ ನಾರಾಯಣಾಚಾರ್ಯ ವಸಂತಾಚಾರ್ಯ ಜೋಶಿ ಮಾತನಾಡಿದರು. ಕಾರ್ಯಕ್ರಮದ ನಡುವೆ ಭಕ್ತರಿಂದ ಭಜನೆ, ನಾಮ ಸಂಕೀರ್ತನೆ, ಸ್ತೋತ್ರ ಪಠಣ ಜರುಗಿತು.



ಸ್ಮರಣೆ ಕಾರ್ಯಕ್ರಮದಲ್ಲಿ ಶ್ರೀ ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿ

ಸರಳ ಸಜ್ಜನಿಕೆಯ ವ್ಯಕ್ತಿ ಕೆ.ಆರ್. ಶಿವಪ್ರಕಾಶ್

• **ಚಿತ್ರದುರ್ಗ:** ಇಂದಿನ ದಿನಗಳಲ್ಲಿ ಯಾರಾದರೂ ಶಾಸಕರು, ಮಂತ್ರಿಗಳಾದರೆ ಸಾಕು, ಸಂಬಂಧಿಕರು ಅವರ ಹೆಸರು ಹೇಳಿಕೊಂಡು ಅನುಕೂಲ ಮಾಡಿಕೊಳ್ಳುತ್ತಾರೆ. ತಮ್ಮ ಮಗ ಶಾಸಕರಾದರೂ ಶಿವಪ್ರಕಾಶ್ ರವರು ಮಗನ ಹೆಸರನ್ನು ಬಳಸಿಕೊಳ್ಳುವ ಕೆಲಸ ಮಾಡಲಿಲ್ಲ ಎಂದು ಮಾದಾರ ಚೆನ್ನಯ್ಯ ಗುರುಪೀಠದ ಶ್ರೀ ಬಸವಮೂರ್ತಿ ಮಾದಾರ ಚೆನ್ನಯ್ಯ ಮಹಾಸ್ವಾಮೀಜಿ ಹೇಳಿದರು.

ನಗರದ ಪಂಚಾಚಾರ್ಯ ಕಲ್ಯಾಣ ಮಂಟಪದಲ್ಲಿ ಭಾನುವಾರ ಆಯೋಜಿಸಿದ್ದ ಇತ್ತೀಚೆಗೆ ನಿಧನರಾದ ವೀರಶೈವ ಸಮಾಜದ ಮಾಜಿ ಅಧ್ಯಕ್ಷರು, ಜಯಪದ್ಮ ಮೋಟಾರ್ ಸರ್ವೀಸ್ ಮಾಲೀಕರಾದ ಕೆ.ಆರ್. ಶಿವಪ್ರಕಾಶ್ ರವರ ಸ್ಮರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಶಿವಪ್ರಕಾಶ್ ರವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದರು.

ಶಿವಪ್ರಕಾಶ್ ಅವರು ಸರಳ, ಸಜ್ಜನಿಕೆಯ ವ್ಯಕ್ತಿಯಾಗಿದ್ದರು. ಬೇರೆಯವರಿಗೆ ನೆರವು ನೀಡುವ ಗುಣ ಹೊಂದಿದ್ದರು. ಯಾರಿಗೂ ಕೆಟ್ಟದ್ದನ್ನು ಬಯಸದೆ ಸದಾ ಒಳಿತನ್ನು ಬಯಸುತ್ತಿದ್ದರು. ಪ್ರತಿಷ್ಠಿತ ಕುಟುಂಬದಿಂದ ಬಂದವರಾದರೂ ಅವರು ಎಂದೂ ಪ್ರತಿಷ್ಠೆ ತೋರಿದವರಲ್ಲ, ತಮ್ಮ ಕುಟುಂಬ ಹಾಗೂ ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡಿದ್ದಾರೆ. ಅವರ ಆದರ್ಶಗಳನ್ನು ಅವರ ಕುಟುಂಬ ಪಾಲಿಸುವ ಮೂಲಕ ಅವರ ಆತ್ಮಕ್ಕೆ ಶಾಂತಿ ನೀಡಬೇಕಿದೆ ಎಂದರು.



ಶ್ರೀಕಬೀರಾನಂದ ಆಶ್ರಮದ ಶ್ರೀ ಶಿವಲಿಂಗಾನಂದ ಮಹಾಸ್ವಾಮೀಜಿ ಮಾತನಾಡಿ, ಶಿವಪ್ರಕಾಶ್‌ರವರು ಮಗನನ್ನು ಎಂಎಲ್‌ಸಿ ಮಾಡುವ ಕನಸು ಕಂಡಿದ್ದರು. ಅದರಂತೆ ಛಲ ಬಿಡದೆ ಮಗನನ್ನು ಶಾಸಕನನ್ನಾಗಿ ಮಾಡಿದರು. ಇವರ ಶ್ರೀಮತಿ ಸಹಾ ಸಂಘ ಸಂಸ್ಥೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ಸಮಾಜ ಸೇವೆ ಮಾಡುತ್ತಿದ್ದಾರೆ. ತಂದೆಯ ರೀತಿಯಲ್ಲಿ ಮಗನು ಸಹಾ ನಡೆದುಕೊಳ್ಳುತ್ತಿದ್ದಾರೆ. ಶಿವಪ್ರಕಾಶ್ ರವರ ಸಮಾಜ ಮುಖಿಯಾದ ಕೆಲಸಗಳನ್ನು ಮಾಡುತ್ತಿದ್ದಾರು ಇದರಿಂದ ಯಾವುದೇ ಪ್ರಚಾರವನ್ನು ಬಯಸಿದವರಲ್ಲ ಎಂದು ಹೇಳಿದರು.

> ಶಿವಪ್ರಕಾಶ್‌ರವರು ಆಧ್ಯಾತ್ಮಿಕ ಚಿಂತನೆ, ಕಾಯಕ ನಿರ್ವಹಣೆ ಹಾಗೂ ಪರೋಪಕಾರದ ಗುಣ ಹೊಂದಿದ್ದರು. ಮುರುಘಾಮಠದ ಹಲವು ಕಾರ್ಯಕ್ರಮಗಳಲ್ಲಿ ಭಾಗಿಯಾಗಿದ್ದರು. ಇಂದಿನ ದಿನಗಳಲ್ಲಿ ಪ್ರತಿ ಮನೆಯಲ್ಲಿಯೂ ಉಪ್ಪು - ಕಾರ ಸಿಗುತ್ತದೆ. ಆದರೆ ಪರೋಪಕಾರ ಮಾಡುವವರ ಸಂಖ್ಯೆ ಕಡಿಮೆ. ಶಿವಪ್ರಕಾಶ್‌ರವರು ಸಮಾಜಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ.
> ■ ಡಾ. ಶ್ರೀ ಬಸವಪ್ರಭು ಮಹಾಸ್ವಾಮೀಜಿ, ದಾವಣಗೆರೆಯ ವಿರಕ್ತಮಠ

ಶ್ರೀಮುರುಘರಾಜೇಂದ್ರ ಬೃಹನ್ಮಠದ ಆಡಳಿತ ಮಂಡಳಿ ಸದಸ್ಯರಾದ ಶ್ರೀ ಡಾ. ಬಸವಕುಮಾರ ಮಹಾಸ್ವಾಮೀಜಿ ಮಾತನಾಡಿ, ಶಿವಪ್ರಕಾಶ್ ರವರು ಉತ್ತಮ ಮೌಲ್ಯಗಳನ್ನು ಬಿತ್ತಿದ್ದಾರೆ. ಅವುಗಳನ್ನು ಮುನ್ನಡೆಸುವ ಕಾರ್ಯವನ್ನು ಈಗ ಅವರ ಕುಟುಂಬದವರು ಮಾಡಬೇಕಿದೆ. ಶ್ರೀಮಠದ ಜೊತೆಯಲ್ಲಿ ಶಿವಪ್ರಕಾಶ್‌ರವರ ಉತ್ತಮ ಒಡನಾಟವಿತ್ತು. ನವೀನ್‌ರವರು ಯುವ ನಾಯಕರಾಗಿ ರಾಜಕೀಯದಲ್ಲಿ ಉತ್ತಮವಾಗಿ ಬೆಳೆಯುತ್ತಿದ್ದಾರೆ. ಜನತೆಯ ಸಮಸ್ಯೆಗಳಿಗೆ ಸ್ಪಂದಿಸುತ್ತಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಮಾಜಿ ಶಾಸಕ ಜಿ.ಹೆಚ್.ತಿಪ್ಪಾರೆಡ್ಡಿ ಮಾತನಾಡಿದರು. ಮಾಜಿ ಸಚಿವ ಹೆಚ್. ಏಕಾಂತಯ್ಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

> ಹುಟ್ಟಿದ ಮಾನವ ಸಾಯಲೇಬೇಕು. ಸಾಯುವುದರೊಳಗೆ ಉತ್ತಮ ಕೆಲಸ ಮಾಡಬೇಕು. ಶಿವಪ್ರಕಾಶ್‌ರವರು ಇಂತಹ ಕೆಲಸ ಮಾಡಿದ್ದಾರೆ. ಹಾಗಾಗಿ ಈ ಕಾರ್ಯಕ್ರಮದಲ್ಲಿ ಇಷ್ಟೊಂದು ಜನತೆ ಭಾಗವಹಿಸಿದ್ದಾರೆ. ನಾವೂ ಬದುಕಿದ್ದಾಗ ಮಾಡುವ ಕೆಲಸಗಳು ಯಾವಾಗಲೂ ಶಾಶ್ವತವಾಗಿ ಇರಬೇಕಿದೆ. ಸಮಾಜವನ್ನು ಒಗ್ಗೂಡಿಸುವಂತ ಕಾರ್ಯವಾಗಬೇಕಿದೆ.
> ■ ಗೋವಿಂದ ಎಂ. ಕಾರಜೋಳ, ಸಂಸದ

ಹಿರಿಯ ಪತ್ರಕರ್ತ ಜಿ.ಎಸ್.ಉಜ್ಜಿನಪ್ಪ ಸ್ಮರಣಾ ನುಡಿಗಳನ್ನಾಡಿದರು. ಡಾ. ಶಾಂತವೀರ ಸ್ವಾಮೀಜಿ, ಇಮ್ಮಡಿ ಶ್ರೀಸಿದ್ಧರಾಮೇಶ್ವರ ಸ್ವಾಮೀಜಿ, ವಾಲ್ಮೀಕಿ ಶ್ರೀಪ್ರಸನ್ನಾನಂದ ಸ್ವಾಮೀಜಿ, ಸರ್ದಾರ್ ಶ್ರೀಸೇವಾಲಾಲ್ ಸ್ವಾಮೀಜಿ, ಬಸವ ಇಮ್ಮಡಿ ಶ್ರೀಕೇತೇಶ್ವರ ಸ್ವಾಮೀಜಿ ಸಮ್ಮುಖ ವಹಿಸಿದ್ದರು. ಮಾಜಿ ಕೇಂದ್ರ ಸಚಿವ ಜಿ.ಎಂ.ಸಿದ್ದೇಶ್ವರ, ಮಾಜಿ ಶಾಸಕ ಎಸ್.ಕೆ.ಬಸವರಾಜನ್, ಮನೋಹರ ಮಸ್ಕಿ, ಸೊಗಡು ಶಿವಣ್ಣ, ವಿಧಾನ ಪರಿಷತ್ ಸದಸ್ಯ ಕೆ.ಎಸ್.ನವೀನ್ ಮತ್ತವರ ಕುಟುಂಬದ ಸದಸ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಕೇಂದ್ರೀಯ ಸಂಸ್ಕೃತ ವಿವಿ ಕುಲಪತಿ ಶ್ರೀನಿವಾಸ ವರಖೇಡಿ

ಮನೆ ಮನೆಗಳಲ್ಲಿಯೂ ಸಂಸ್ಕೃತ ವಾಣಿ ಮೊಳಗಲಿ

• **ಶಿವಮೊಗ್ಗ:** ಹಿಮಾಲಯದ ಶಿಖರದಿಂದ ಭಾರತದ ಪ್ರತಿ ಮನೆ ಮನೆ ಗಳಲ್ಲಿಯೂ ಸಂಸ್ಕೃತ ವಾಣಿ ಮೊಳಗಬೇಕು ಎಂದು ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿ ಶ್ರೀನಿವಾಸ ವರಖೇಡಿ ಹೇಳಿದರು.

ನವದೆಹಲಿಯ ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾಲಯ, ಸಂಸ್ಕೃತ ಭಾರತಿ, ತರುಣೋದಯ ಸಂಸ್ಕೃತ ಸೇವಾ ಸಂಸ್ಥೆ, ಯೂಥ್ ಹಾಸ್ಟೆಲ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ತರುಣೋದಯ ಘಟಕ ಶಿವಮೊಗ್ಗ, ಗಿರ್ವಾಣ ಭಾರತಿ ಘಟಕ ಆದಿಚುಂಚನಗಿರಿ ಕ್ಷೇತ್ರ ಇವರ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಹಿಮಾಲಯದ ಕುಲು ತಪ್ಪಲಿನಲ್ಲಿರುವ ರೋಲಿ ಖೋಲಿ ಹಿಮಾಲಯ ಪರ್ವತದಲ್ಲಿ ಭಾನುವಾರ ನಡೆದ ಸಂಸ್ಕೃತ ಧ್ವಜಾರೋಹಣದಲ್ಲಿ ಆಶಯ ನುಡಿಗಳನ್ನಾಡಿದರು.

ಕುಲುಮನಾಲಿ ನಗರದ ಸಮೀಪದಲ್ಲಿರುವ ಸುಂದರವಾದ ರೋಲಿ-ಖೋಲಿ ಹಿಮಾಲಯ ಪರ್ವತದಲ್ಲಿ ಆರನೇ ಬಾರಿಗೆ ಸಂಸ್ಕೃತ ಧ್ವಜಾರೋಹಣ ಕಾರ್ಯಕ್ರಮವನ್ನು ಯಶಸ್ವಿಯಾಗಿ ನೆರವೇರಿಸಿರುವುದು ಅತ್ಯಂತ ಸಂತೋಷದ ವಿಷಯವಾಗಿದೆ ಎಂದರು.

ಸಂಸ್ಕೃತದ ಅಮೂಲ್ಯ ಜ್ಞಾನಭಂಡಾರವನ್ನು ಸಮಾಜದ ಪ್ರತಿಯೊಬ್ಬ ವ್ಯಕ್ತಿಗೂ ತಲುಪಿಸುವ ಉದ್ದೇಶದಿಂದಲೇ ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾಲಯ ಸ್ಥಾಪಿತವಾಗಿದೆ. ವಿಶ್ವವಿದ್ಯಾಲಯವು ದೇಶದ ವಿವಿಧ ಆವರಣಗಳಲ್ಲಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುತ್ತಾ, ಸಂಸ್ಕೃತದ ಪ್ರಚಾರ ಮತ್ತು ಪ್ರಸಾರ ಕಾರ್ಯದಲ್ಲಿ ನಿರಂತರವಾಗಿ ತೊಡಗಿಸಿಕೊಂಡಿದೆ ಎಂದರು.

> ಸಂಸ್ಕೃತ ಭಾಷೆ ಕೇವಲ ಪ್ರಾಚೀನ ಭಾಷೆಯಲ್ಲ, ಅದು ಅತ್ಯಂತ ವೈಜ್ಞಾನಿಕವಾಗಿ ವ್ಯವಸ್ಥಿತಗೊಂಡ ಭಾಷೆಯಾಗಿದೆ. ಈ ಭಾಷೆಯ ಅಧ್ಯಯನವು ಬಾಲ್ಯಾವಸ್ಥೆಯಲ್ಲಿಯೇ ಆರಂಭವಾಗಬೇಕು. ಏಕೆಂದರೆ ಸಂಸ್ಕೃತ ಅಧ್ಯಯನದಿಂದ ಭಾಷಾ ಜ್ಞಾನ, ತಾರ್ಕಿಕ ಚಿಂತನೆ, ಸಾಂಸ್ಕೃತಿಕ ಅರಿವು ಹಾಗೂ ನೈತಿಕ ಮೌಲ್ಯಗಳು ವೃದ್ಧಿಯಾಗುತ್ತವೆ.
> ■ ಶ್ರೀನಿವಾಸ ವರಖೇಡಿ

ಈ ಹಿಮಾಲಯ ಚಾರಣದಲ್ಲಿ ವಿಶ್ವವಿದ್ಯಾಲಯದ ಹನ್ನೆರಡು-ಹದಿಮೂರು ಆವರಣಗಳಿಂದ 50 ವಿದ್ಯಾರ್ಥಿಗಳು ಭಾಗವಹಿಸಿದ್ದಾರೆ. ಇಂತಹ ಚಾರಣ ಕಾರ್ಯಕ್ರಮಗಳು ವಿದ್ಯಾರ್ಥಿಗಳ ದೈಹಿಕ ಆರೋಗ್ಯ ವೃದ್ಧಿಗೆ, ಸಾಹಸ ಮನೋಭಾವದ ಬೆಳವಣಿಗೆಗೆ, ಆತ್ಮವಿಶ್ವಾಸದ ವೃದ್ಧಿಗೆ ಹಾಗೂ ನಾಯಕತ್ವ ಗುಣಗಳ ಅಭಿವೃದ್ಧಿಗೆ ಅತ್ಯಂತ ಉಪಯುಕ್ತವಾಗಿವೆ ಎಂದರು.

ಹಿಮಾಲಯದ ದಿವ್ಯ ವಾತಾವರಣದಲ್ಲಿ ಸಂಸ್ಕೃತ ಧ್ವಜವನ್ನು ಹಾರಿಸುವುದು ಭಾರತೀಯ ಸಂಸ್ಕೃತಿಯ ವೈಭವ ಮತ್ತು ಗೌರವದ ಸಂಕೇತವಾಗಿದೆ. ಸಂಸ್ಕೃತ ಭಾಷೆಯನ್ನು ಕೇವಲ ಪಠ್ಯಕ್ರಮಗಳಿಗೆ ಮಾತ್ರ ಸೀಮಿತಗೊಳಿಸದೆ, ದೈನಂದಿನ ಜೀವನದಲ್ಲಿಯೂ ಬಳಸಬೇಕು. ಪ್ರತಿಯೊಂದು ಮನೆಯಲ್ಲಿ ಸಂಸ್ಕೃತ ಭಾಷೆಯ ಮಧುರ ಧ್ವನಿ ಮೊಳಗಬೇಕೆಂಬುದು ಆಶಯವಾಗಿದೆ ಎಂದರು.

ಸಂಸ್ಕೃತದ ಪ್ರಚಾರ, ಸಂಸ್ಕಾರಗಳ ಸಂರಕ್ಷಣೆ ಹಾಗೂ ರಾಷ್ಟ್ರದ ಸಾಂಸ್ಕೃತಿಕ ವೈಭವದ ಸಂವರ್ಧನೆ - ಇವು ನಮ್ಮೆಲ್ಲರ ಸಾಮೂಹಿಕ ಕರ್ತವ್ಯಗಳಾಗಿವೆ. ನಾವು ಎಲ್ಲರೂ ಒಗ್ಗಟ್ಟಿನಿಂದ ಸಂಸ್ಕೃತ ಭಾಷೆಯ ಉಜ್ವಲ ಭವಿಷ್ಯ ನಿರ್ಮಾಣಕ್ಕಾಗಿ ಶ್ರಮಿಸೋಣ ಎಂದರು.

ಈ ಸಂದರ್ಭದಲ್ಲಿ ಕೇಂದ್ರೀಯ ಸಂಸ್ಕೃತ ವಿಶ್ವ ವಿಶ್ವವಿದ್ಯಾಲಯದ ಜೈಪುರ ಪರಿಸರದ ಸಹಾಯಕ ನಿರ್ದೇಶಕ ಡಾ.ರಾಜೇಂದ್ರ ಕುಮಾರ ಶರ್ಮ, ಸಂಸ್ಕೃತ ಭಾರತಿ ಹಾಗೂ ತರುಣೋದಯ ಸಂಸ್ಕೃತ ಸೇವಾ ಸಂಸ್ಥೆಯ ಪ್ರಮುಖ ಹಾಗೂ ಚಾರಣದ ಸಂಯೋಜಕ ಅ.ನಾ.ವಿಜಯೇಂದ್ರ ರಾವ್, ಯೂತ್ ಹಾಸ್ಟೆಲ್ಸ್ ಅಸೋಸಿಯೇಷನ್ ಆಫ್ ಇಂಡಿಯಾದ ಚಾರಣದ ರೂವಾರಿ, ನವೀನ ಚಂದ್ರ ತಿವಾರಿ, ಹಾಗೂ ತಂಡದ ನಾಯಕಿ ವೈ.ಹೆಚ್.ಎ.ಐ. ಸಾಗರ ಘಟಕದ ಎಮ್.ಕೆ.ಜ್ಯೋತಿ, ರೋಲಿಖೋಲಿ ಶಿಬಿರ ನಾಯಕ ಆದಿತ್ಯ ಇದ್ದರು.





ಜನರ ನಾಡಿಮಿಡಿತ ಅರಿತವರು ನಾಯಕರು: ಸ್ವಾಮೀಜಿ

• **ಪರಶುರಾಂಪುರ:** ಪ್ರಚಾರಕ್ಕಿಂತ ಜನರ ನಾಡಿಮಿಡಿತ ಅರಿತವರು ಮಾತ್ರ ನಾಯಕರು. ಇಂತಹ ಜಯಂತಿಗಳು ಸಮಾಜಕ್ಕೆ ಸ್ಫೂರ್ತಿ ಆಗಲಿ ಎಂದು ಕೋಡಿಹಳ್ಳಿ ಬೃಹನ್ಮಠದ ಶ್ರೀಷಡಾಕ್ಷರಿಮುನಿ ದೇಶಿಕೇಂದ್ರ ಸ್ವಾಮೀಜಿ ತಿಳಿಸಿದರು.

ಭಾನುವಾರ ಗ್ರಾಮದ ಪ್ರೌಢಶಾಲಾ ಆವರಣದಲ್ಲಿ ಹೋಬಳಿ ಮಟ್ಟದಲ್ಲಿ ಡಾ.ಬಿ.ಆರ್. ಅಂಬೇಡ್ಕರ ವಿಚಾರ ವೇದಿಕೆ ಹಾಗೂ ಮಾದಿಗ ನೌಕರರ ಸಂಘ ಇವರ ಸಂಯುಕ್ತಾಶ್ರಯದಲ್ಲಿ 135ನೇ ಡಾ. ಅಂಬೇಡ್ಕರ್ ಹಾಗೂ 119ನೇ ಡಾ. ಬಾಬು ಜಗಜೀವನರಾಂ ಜಯಂತಿ ಆಚರಣೆ ಅಂಗವಾಗಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಾನಿಧ್ಯ ವಹಿಸಿ ಮಾತನಾಡಿದರು.

ಸಂಸದ ಗೋವಿಂದ ಎಂ. ಕಾರಜೋಳ ಮಾತನಾಡಿ, ಸಮುದಾಯದ ನ್ಯಾಯಕ್ಕಾಗಿ ಯಾರು ಪಾಲನ್ನು ಕಿತ್ತುಕೊಳ್ಳುವುದಿಲ್ಲ, ನಮ್ಮ ಜನಸಂಖ್ಯೆಗೆ ಅನುಗುಣವಾಗಿ ಸಾಂವಿಧಾನಿಕವಾಗಿ ಒಳಮೀಸಲಾತಿ ನೀಡಬೇಕು ಹಾಗೂ ಎಲ್ಲರೂ ಪಕ್ಷಾತೀತವಾಗಿ ಒಗ್ಗಟ್ಟಾಗಿ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಿ ಎಂದು ತಿಳಿಸಿದರು.

ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗೆ ನಿಗಮದ ಅಧ್ಯಕ್ಷ ಹಾಗೂ ಶಾಸಕ ಟಿ. ರಘುಮೂರ್ತಿ ಮಾತನಾಡಿ, ಜಾತಿ, ಜನಾಂಗ ವಿಷಯ ಬಂದಾಗ ಎಲ್ಲರೂ ಒಗ್ಗಟ್ಟಾಗಿ ಸಮುದಾಯದ ಏಳ್ಗೆಗಾಗಿ ಶ್ರಮಿಸಿ ಎಂದರು.

ಮಾಜಿ ಸಚಿವ ಎಚ್. ಆಂಜನೇಯ, ಆದಿಜಾಂಬವ ಅಭಿವೃದ್ಧಿ ನಿಗಮದ ಅಧ್ಯಕ್ಷ ಮಂಜುನಾಥ, ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಸೂರನಹಳ್ಳಿ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಜಿಲ್ಲಾ ಸದಸ್ಯ ಪ್ರಕಾಶ್, ಉಪನ್ಯಾಸಕ ಲಿಂಗಣ್ಣ ಜಂಗಮರಹಳ್ಳಿ ಮಾತನಾಡಿದರು.

ಇದೇ ವೇಳೆಯಲ್ಲಿ ಮಾದಿಗ ಸಮುದಾಯ ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು.

ಸಮಾಜದ ಹಿರಿಯ ಚೆನ್ನಮಲ್ಲಪ್ಪ ಅಧ್ಯಕ್ಷತೆ ವಹಿಸಿದ್ದರು. ಲಿಂಗಣ್ಣ ಜಂಗಮರಹಳ್ಳಿ, ಕರ್ನಾಟಕ ಚಲನಚಿತ್ರ ಅಕಾಡೆಮಿ ಅಧ್ಯಕ್ಷ, ಚಲನಚಿತ್ರ ನಟ ಸಾಧು ಕೋಕಿಲ, ಬಿಜೆಪಿ ಜಿಲ್ಲಾಧ್ಯಕ್ಷ ಕೆ.ಟಿ. ಕುಮಾರಸ್ವಾಮಿ, ನಿಗಮದ ಅಧ್ಯಕ್ಷ ಜಿ.ಎಸ್. ಮಂಜುನಾಥ್, ಪಿ.ರಘು, ಟಿ.ಡಿ. ರಾಜಗಿರಿ, ಓ. ಶಂಕರ, ರಾಮದಾಸ್, ವಸಂತ ಕುಮಾರ್, ನಾಗರಾಜ್, ತಿಪ್ಪೇಸ್ವಾಮಿ, ಕೆ ಸಿ.ಜೆ ಜಯಕುಮಾರ್, ಆಂಜನೇಯ, ಎಚ್. ಪ್ರಕಾಶ್, ಟಿ. ಪ್ರಕಾಶ್, ಎಸ್. ವೆಂಕಟೇಶ್, ಹನುಮಂತರಾಯ, ಜಯಣ್ಣ, ಚೆನ್ನಕೇಶವ, ಪಿ.ಓ. ಪ್ರಕಾಶ್, ಮಂಜುನಾಥ್, ಬಾಬು, ಓಬಳೇಶ್, ವೀರಭದ್ರಪ್ಪ, ನಾಗರಾಜ, ಪಾಲಾಕ್ಷ ಇನ್ನಿತರರಿದ್ದರು.

ಪುನಶ್ಚೇತನ ಕಾರ್ಯಾಗಾರದಲ್ಲಿ ಉಪವಿಭಾಗಾಧಿಕಾರಿ ಡಾ.ಕೆ.ಜೆ. ಕಾಂತರಾಜ್ ಕರೆ

ನೈತಿಕತೆ ಬೆಳೆಸಿಕೊಂಡು ಕರ್ತವ್ಯ ನಿರ್ವಹಿಸಿ

• **ಚಿತ್ರದುರ್ಗ:** ವಿದ್ಯಾರ್ಥಿ ನಿಲಯಗಳಲ್ಲಿ ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗಾಗಿ ನಿರಂತರವಾಗಿ ಶ್ರಮಿಸುತ್ತಿರುವ ಅಡುಗೆಯವರು, ಸಹಾಯಕರು ಮತ್ತು ಕಾವಲುಗಾರರು ಮೊದಲು ತಮ್ಮ ಕರ್ತವ್ಯದಲ್ಲಿ ನೈತಿಕತೆಯನ್ನು ರೂಢಿಸಿಕೊಂಡು ಪ್ರಾಮಾಣಿಕವಾಗಿ ಕೆಲಸ ಮಾಡಬೇಕು ಎಂದು ಉಪವಿಭಾಗಾಧಿಕಾರಿ ಡಾ.ಕೆ.ಜೆ.ಕಾಂತರಾಜ್ ಅವರು ಕರೆ ನೀಡಿದರು.

ನಗರದ ಸರ್ಕಾರಿ ಕಲಾ ಕಾಲೇಜು ಪಕ್ಕದ ಡಾ.ಬಿ.ಆರ್.ಅಂಬೇಡ್ಕರ್ ಸರ್ಕಾರಿ ಮೆಟ್ರಿಕ್ ನಂತರದ ಪಿಯುಸಿ ಬಾಲಕಿಯರ ಬಿ ವಿದ್ಯಾರ್ಥಿ ನಿಲಯದಲ್ಲಿ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಹಾಸ್ಟೆಲ್ ಅಡುಗೆಯವರಿಗೆ, ಸಹಾಯಕರಿಗೆ ಹಾಗೂ ರಾತ್ರಿ ಕಾವಲುಗಾರರಿಗೆ ಆಯೋಜಿಸಲಾದ ಒಂದು ದಿನದ ಪುನಶ್ಚೇತನ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿ ನಿಲಯಗಳಲ್ಲಿ ಮಕ್ಕಳ ಭವಿಷ್ಯ ರೂಪಿಸುವಲ್ಲಿ ಅಡುಗೆ ಸಿಬ್ಬಂದಿಯ ಪಾತ್ರ ಹಿರಿದಾದುದು. ಅವರಲ್ಲಿ ಆತ್ಮಸ್ಥೈರ್ಯ ತುಂಬಲು, ಆರೋಗ್ಯ ಕಾಪಾಡಲು ಹಾಗೂ ವಿವಿಧ ಕಾನೂನು ಅಡಿಯಲ್ಲಿ ರಕ್ಷಣೆ ಮತ್ತು ಸುರಕ್ಷತೆಯ ಬಗ್ಗೆ ಜಾಗೃತಿ ಮೂಡಿಸಲು ಈ ರೀತಿಯ ಕಾರ್ಯಕ್ರಮಗಳನ್ನು ಆಯೋಜಿಸಿರುವುದು ಉತ್ತಮ ಬೆಳವಣಿಗೆ. ಈ ಕಾರ್ಯಕ್ರಮ ಕೇವಲ ಜಿಲ್ಲೆಯಷ್ಟೇ ಅಲ್ಲದೆ, ರಾಜ್ಯವ್ಯಾಪಿಯಾಗಿ ಇಲಾಖೆಯಿಂದ ನಡೆಯಬೇಕು ಎಂದು ಆಶಿಸಿದರು.

ತಮ್ಮ ವಿದ್ಯಾರ್ಥಿ ಜೀವನದ ದಿನಗಳನ್ನು ಸ್ಮರಿಸಿದ ಉಪವಿಭಾಗಾಧಿಕಾರಿ ಡಾ.ಕೆ.ಜೆ. ಕಾಂತರಾಜ್, ನಾನು ಕೂಡ ಆರನೇ ತರಗತಿಯಿಂದ ಮಾಸ್ಟರ್ ಡಿಗ್ರಿವರೆಗೆ ಬಿಸಿಎಂ ಹಾಸ್ಟೆಲ್‌ನಲ್ಲೇ ಇದ್ದು ವಿದ್ಯಾಭ್ಯಾಸ ಮುಗಿಸಿದೆ. ಅಂದು ಬೆಳಗ್ಗೆ 4 ಗಂಟೆಗೆ ನಮ್ಮನ್ನು ಎಬ್ಬಿಸಿ ಓದಲು ಪ್ರೇರೇಪಿಸುತ್ತಿದ್ದ ಅಡುಗೆಯವರಾದ ನಾರಾಯಣಪ್ಪ ಹಾಗೂ ಗಂಗಾಧರ ಅವರನ್ನು ಇಂದಿಗೂ ನೆನೆಯುತ್ತೇನೆ. ಇಂದು ನಾನು ಈ ಹಂತಕ್ಕೆ ಬರಲು ಅಂದಿನ ಹಾಸ್ಟೆಲ್ ಜೀವನವೇ ಕಾರಣ ಎಂದು ಭಾವುಕರಾಗಿ ನುಡಿದರು.



ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಓ. ಪರಮೇಶ್ವರಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಾಗಾರದಲ್ಲಿ ಅಗ್ನಿಶಾಮಕದಳ ಠಾಣಾಧಿಕಾರಿ ನರೇಂದ್ರ ಅಡುಗೆ ಮನೆಯ ಅಗ್ನಿ ಸುರಕ್ಷತಾ ಸಾಧನಗಳ ಬಳಕೆ ಹಾಗೂ ಗ್ಯಾಸ್ ಸಿಲಿಂಡರ್ ಸೋರಿಕೆ ಕುರಿತು ಸಿಬ್ಬಂದಿಗೆ ಮಾಹಿತಿ ನೀಡಿದರು.

ಆರೋಗ್ಯಾಧಿಕಾರಿ ಜಾನಕಿ, ಕಾರ್ಮಿಕ ಅಧಿಕಾರಿ ಭೀಮೇಶ್, ರಾಜ್ಯ ಸರ್ಕಾರಿ ಹಾಸ್ಟೆಲ್ ಮತ್ತು ವಸತಿ ಶಾಲಾ ಹೊರಗುತ್ತಿಗೆ ನೌಕರರ ಸಂಘ ಜಿಲ್ಲಾಧ್ಯಕ್ಷ ಯಶವಂತ್ ಕುಮಾರ್ ಓಂಸಾಯಿ ಸೆಕ್ಯೂರಿಟಿ ಸರ್ವಿಸಸ್ ಪ್ರದೀಪ್ ಸೇರಿದಂತೆ ನಿಲಯ ಪಾಲಕರು, ಕಚೇರಿ ಸಿಬ್ಬಂದಿ ಉಪಸ್ಥಿತರಿದ್ದರು.

